ಮೈಸೂರು ವಿದ್ಯಾಭ್ಯಾಸದ ಇಲಾಖೆ

೧೯೫೦ನೆಯ ಇಸವಿಯ
ಮಿಡಲ್ ಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ
ಪರೀಕ್ಷೆಗಳಿಗೆ ಗೊತ್ತಾದ ಕನ್ನಡ ಗ್ರಂಥಗಳು

ಬೆಂಗಳೂರು ಸಿಟಿ:
ಮೋದಿ ಪವರ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿತು
೧೯೪೯

ಕ್ರಯ 0-12-0

ಗ್ರಂಥದಲ್ಲಿಯ ವಿಷಯುಗಳು

ಗದ್ಯಭಾಗ

ಪೀಠಿಕೆ

ಶ್ರೀಮದ್ರಾಮಾಯಣ

ಬಾಲಕಾಂಡ

ಕೋಸಲ ದೇಶದಲ್ಲಿ ಸೂರ್ಯವಂಶದಲ್ಲಿ ಹುಟ್ಟಿದ ಇಕ್ಷ್ವಾಕು ಮಹಾರಾಜನ ಪರಂಪರೆಯಿಂದ ಆಳಿದ ಚಕ್ರವರ್ತಿಗಳಲ್ಲಿ ದಶರಥಚಕ್ರವರ್ತಿಯು ಪ್ರಸಿದ್ಧನಾದವನು. ಈತನ ಕುಲಪುರೋಹಿತರಾದ ವಸಿಷ್ಠರ ಧರ್ಮೋಪದೇಶದಿಂದಲೂ ರಾಜನೀತಿಜ್ಞನಾದ ಸುಮಂತ್ರನೆಂಬ ಮುಖ್ಯ ಮಂತ್ರಿಯ ಸಹಾಯದಿಂದಲೂ ಧರ್ಮವನ್ನತಿಕ್ರಮಿಸದಂತೆ ಬಹುಕಾಲ ರಾಜ್ಯವಾಳುತ್ತಿದ್ದನು.

ಈ ರಾಜ್ಯೈಶ್ವರ್ಯಕ್ಕೆ ತಕ್ಕಂತೆ ಮಕ್ಕಳ ಸಂಪತ್ತು ಇಲ್ಲದೆ ಕೊರಗುತ್ತಿದ್ದ ಈತನು ವಸಿಷ್ಠರ ಅಪ್ಪಣೆಯಂತೆ ವಿಭಾಂಡಕ ಪುತ್ರನಾದ ಋಷ್ಯಶೃಂಗನು ಪುರೋಹಿತನಾಗಿ ನಿಲ್ಲಲು ಒಂದು ಮಹಾಯಾಗವನ್ನು ನೆರವೇರಿಸಿ ಆ ಯಾಗದ ಕಡೆಯಲ್ಲಿ ಪುತ್ರಕಾಮೇಷ್ಟಿಯನ್ನು ಮಾಡಿ ಸುರಲೋಕದ ದೇವತೆಗಳನ್ನೂ ಭೂಲೋಕದ ಸಮಸ್ತಪ್ರಾಣಿಗಳನ್ನೂ ತೃಪ್ತಿಪಡಿಸಿದನು.

ಈ ಯಾಗದ ಫಲವಾಗಿ ಪ್ರಾಜಾಪತ್ಯ ದೇವತೆಯ ಅನುಗ್ರಹದಿಂದ ರಾಮ, ಲಕ್ಷ್ಮಣ, ಭರತ, ಶತ್ರುಘ್ನರೆಂಬ ನಾಲ್ಕುಮಂದಿ ಪುತ್ರರನ್ನು ಪಡೆದು ಸಂತೋಷದಿಂದಿದ್ದನು. ಈ ನಾಲ್ಕು ಮಂದಿ ಮಕ್ಕಳೂ ವಯಸ್ಸಿಗನುಗುಣವಾಗಿ ವಿದ್ಯಾ, ವಿನಯ, ವಿವೇಕಗಳಿಂದ ದಿನೇ ದಿನೇ ಅಭಿವೃದ್ಧಿ ಹೊಂದಿ ತಂದೆತಾಯಿಗಳಿಗೂ, ಬಂಧುವರ್ಗಕ್ಕೂ, ಪ್ರಜಾವರ್ಗಕ್ಕೂ ಅತ್ಯಂತಾನಂದದಾಯಕರಾಗಿ ಬೆಳೆಯುತ್ತಿದ್ದರು. ವಯಸ್ಕರಾದಂತೆಲ್ಲ ಧನುರ್ವಿದ್ಯಾದಿ ರಾಜಧರ್ಮಗಳ ಶಿಕ್ಷಣವೂ ದೊರೆತು ದುಷ್ಟಶಿಕ್ಷಣ ಶಿಷ್ಟರಕ್ಷಣ ಚತುರರಾದರು.

ಹೀಗಿರಲು ಒಂದು ದಿನ ವಿಶ್ವಾಮಿತ್ರಮಹರ್ಷಿಯು ದಶರಥರಾಜನಲ್ಲಿಗೆ ಬಂದು ತಾನು ಮಾಡಲಿರುವ ಯಜ್ಞರಕ್ಷಣೆಗಾಗಿ ರಾಮಲಕ್ಷ್ಮಣರನ್ನು ತಮ್ಮ ಸಿದ್ಧಾಶ್ರಮಕ್ಕೆ ಕಳುಹಿಸಿಕೊಡಬೇಕೆಂದು ಕೇಳಿದನು.

ದಶರಥನು ಪುತ್ರಪ್ರೇಮದಿಂದ ಬಾಲಕರೆಂದು ಕಳುಹಿಸಲಾರದೆ ಮನಸ್ಸಿನಲ್ಲಿ ಆತಂಕಗೊಂಡರೂ ವಸಿಷ್ಠರ ಅಪ್ಪಣೆಯಂತೆ ಕಳುಹಿಸಿಕೊಟ್ಟನು. ಈ ವಿಶ್ವಾಮಿತ್ರಋಷಿಯು ರಾಮಲಕ್ಷ್ಮಣರಿಗೆ ಬಲಾ, ಅತಿಬಲಾ ಎಂಬ ವಿದ್ಯೆಗಳನ್ನು ಅನುಗ್ರಹಿಸಿದನು. ಈ ವಿದ್ಯಾಶಕ್ತಿಯಿಂದ ರಾಮನು ತಾಟಕಾ, ಸುಬಾಹು, ಮಾರೀಚರನ್ನು ನಿಗ್ರಹಿಸಿ ಆ ಸಿದ್ಧಾಶ್ರಮವನ್ನು ನಿಷ್ಕಂಟಕವನ್ನಾಗಿ ಮಾಡಿದನು. ವಿಶ್ವಾಮಿತ್ರಮಹರ್ಷಿಯ ಯಜ್ಞವು ಸಾಂಗವಾಗಿ ನೆರವೇರಿತು. ಆಮೇಲೆ ವಿಶ್ವಾಮಿತ್ರಋಷಿಯು ಮಿಥಿಲಾಪಟ್ಟಣದಲ್ಲಿ ಜನಕಮಹಾರಾಜನು ಸೀತಾ ಸ್ವಯಂವರವನ್ನು ಏರ್ಪಡಿಸಿದ್ದುದರಿಂದ ರಾಮಲಕ್ಷ್ಮಣರನ್ನು ಅಲ್ಲಿಗೆ ಕರೆದುಕೊಂಡು ಹೋಗುವನು. ಮುಂದಿನ ಕಥೆಯು ಗ್ರಂಥದಲ್ಲಿ ನಿರೂಪಿತವಾಗಿದೆ.

೧೯೫೦ನೆಯ ಇಸವಿಯ

ಮಿಡಲ್ ಸ್ಕೂಲ್ ಮತ್ತು ಅಪ್ಪರ್ ಪ್ರೈಮರಿ ಪರೀಕ್ಷೆಗಳಿಗೆ

ಗೊತ್ತಾದ ಕನ್ನಡ ಗ್ರಂಥಗಳು

ಶ್ರೀಮದ್ರಾಮಾಯಣ

ಬಾಲಕಾಂಡ

ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆ ಮಿಥಿಲಾ ಪಟ್ಟಣಕ್ಕೆ ಹೋದುದು.

ರಾಮಲಕ್ಷ್ಮಣರಿಬ್ಬರೂ ವಿಶ್ವಾಮಿತ್ರನ ಕಾರ್ಯವನ್ನು ನಡೆಸಿಕೊಟ್ಟುದರಿಂದ ಕೃತಾರ್ಥರಾಗಿ, ಬಹಳ ಸಂತೋಷದಿಂದ ಆ ರಾತ್ರಿಯನ್ನು ಅಲ್ಲಿಯೇ ಕಳೆದರು. ಬೆಳಗಾದಮೇಲೆ ಪ್ರಾತಃಕಾಲದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ತೀರಿಸಿಕೊಂಡು ಇತರ ಋಷಿಗಳೊಡನೆ ಸೇರಿ ಅಗ್ನಿಯಂತೆ ಮಹಾತೇಜಸ್ಸಿನಿಂದ ಜ್ವಲಿಸುತ್ತಿರುವ ವಿಶ್ವಾಮಿತ್ರನಿಗೆ ನಮಸ್ಕರಿಸಿ ಗಂಭೀರವಾದ ಧ್ವನಿಯಿಂದ ಆ ಋಷಿಯನ್ನು ಕುರಿತು "ಎಲೈ ಋಷಿ ಶ್ರೇಷ್ಠನೆ! ನಾವಿಬ್ಬರೂ ನಿನ್ನ ಕಿಂಕರರಾಗಿರುವೆವು. ಮುಂದೆ ನಾವು ಮಾಡಬೇಕಾದ ಕೆಲಸವನ್ನು ಆಜ್ಞಾಪಿಸಬೇಕು" ಎಂದರು. ಆಗ ಅಲ್ಲಿದ್ದ ಋಷಿಗಳೆಲ್ಲರೂ ವಿಶ್ವಾಮಿತ್ರನ ಅನುಮತಿಯನ್ನು ಪಡೆದು ರಾಮನನ್ನು ನೋಡಿ "ಎಲೈ ನರಶ್ರೇಷ್ಠನೆ! ಮಿಥಿಲಾ ಪಟ್ಟಣಕ್ಕೆ ಅಧಿಪತಿಯಾದ ಜನಕಮಹಾರಾಜನು ಅತಿ ಧರ್ಮಿಷ್ಠವಾದ ಒಂದು ಯಾಗವನ್ನಾರಂಭಿಸಿರುವನು. ಅಲ್ಲಿಗೆ ನಾವು ಹೋಗುವೆವು. ನೀನೂ ನಮ್ಮೊಡನೆ ಬರಬಹುದು. ಅಲ್ಲಿ ಅದ್ಭುತವಾದ ಒಂದು ಮಹಾಧನುಸ್ಸಿರುವುದು. ಅದನ್ನು ನೋಡಬಹುದು. ಅದನ್ನು ಪೂರ್ವದಲ್ಲಿ ದೇವತೆಗಳು ಒಂದಾನೊಂದು ಯಾಗಕಾಲದಲ್ಲಿ ಈ ವಂಶಸ್ಥರಿಗೆ ಕೊಟ್ಟಿರುವರು. ಅದು ಮಿತಿಯಿಲ್ಲದ ಶಕ್ತಿ

ಯುಳ್ಳುದಾಗಿಯೂ, ಬಹಳ ತೇಜಸ್ಸುಳ್ಳುದಾಗಿಯೂ ಇರುವುದು. ದೇವತೆಗಳಾಗಲಿ, ಗಂಧರ್ವರಾಗಲಿ, ರಾಕ್ಷಸರಾಗಲಿ ಅದಕ್ಕೆ ನಾಣನ್ನು ಏರಿಸಿ ಕಟ್ಟಲಾರರು. ಅದು ಮನುಷ್ಯರಿಗೆ ಸಾಧ್ಯವಾದ ಕೆಲಸವೇ ಅಲ್ಲ. ಮಹಾಬಲಶಾಲಿಗಳಾದ ಅನೇಕ ರಾಜರು ಅದರ ಶಕ್ತಿಯನ್ನು ತಿಳಿಯಬೇಕೆಂದು ಎಷ್ಟೋ ಪ್ರಯತ್ನಪಟ್ಟರು. ಯಾರಿಂದಲೂ ಏರಿಸುವುದಕ್ಕಾಗಲಿಲ್ಲ. ಎಲೈ ರಾಜನೆ! ನೀನು ಅಲ್ಲಿಗೆ ಬಂದರೆ ಆ ಧನುಸ್ಸನ್ನೂ ಅದ್ಭುತವಾದ ಯಜ್ಞವನ್ನೂ ನೋಡಬಹುದು. ಆ ಜನಕನು ತನ್ನ ಯಜ್ಞದಿಂದ ಪ್ರಸನ್ನರಾದ ದೇವತೆಗಳನ್ನು ಕೇಳಿಕೊಂಡುದರ ಮೇಲೆ ದೇವತೆಗಳು ಆತನಿಗೆ ಆ ಧನುಸ್ಸನ್ನು ಅನುಗ್ರಹಿಸಿ ಕೊಟ್ಟರು. ಅದಕ್ಕೆ 'ಸುನಾಭ'ವೆಂದು ಹೆಸರು. ಈ ಸುನಾಭವೆಂಬ ಧನುಸ್ಸನ್ನು ಜನಕಮಹಾರಾಜನು ತನ್ನ ಮನೆಯಲ್ಲಿಟ್ಟು ಪ್ರತಿದಿನವೂ ನಾನಾ ವಿಧವಾದ ಧೂಪದೀಪಗಳಿಂದ ಪೂಜಿಸುತ್ತಿರುವನು" ಎಂದರು. ಆಮೇಲೆ ವಿಶ್ವಾಮಿತ್ರನು ರಾಮಲಕ್ಷ್ಮಣರನ್ನೂ ಋಷಿ ಸಮೂಹವನ್ನೂ ಸಂಗಡ ಕರೆದುಕೊಂಡು, ಪ್ರಯಾಣಸನ್ನದ್ಧನಾಗಿ ತನ್ನ ಆಶ್ರಮದಲ್ಲಿದ್ದ ವನದೇವತೆಗಳನ್ನು ಕುರಿತು "ನಿಮ್ಮೆಲ್ಲರಿಗೂ ಮಂಗಳವುಂಟಾಗಲಿ. ಇಲ್ಲಿ ನನ್ನ ಕಾರ್ಯಸಿದ್ಧಿಯಾಯಿತು. ಆದುದರಿಂದ ಇನ್ನು ಈ ಸಿದ್ಧಾಶ್ರಮವನ್ನು ಬಿಟ್ಟು ಗಂಗಾನದಿಯ ಉತ್ತರ ತೀರದಲ್ಲಿರುವ ಹಿಮವತ್ಪರ್ವತಕ್ಕೆ ಹೋಗುವೆನು" ಎಂದು ಪ್ರಾರ್ಥಿಸಿ ಅವರ ಅನುಮತಿಯನ್ನು ಪಡೆದು ಈ ಸಿದ್ಧಾಶ್ರಮವನ್ನು ಪ್ರದಕ್ಷಿಣೆ ಮಾಡಿ ಉತ್ತರ ದಿಕ್ಕಿಗೆ ಹೊರಟನು. ಹೀಗೆ ಹೋಗುತ್ತಿರುವ ಆ ಋಷಿಯ ಹಿಂದೆ ಇವನ ಅನುಚರರಾದ ಬ್ರಹ್ಮವಾದಿಗಳೆಲ್ಲರೂ ತಮ್ಮ ತಮ್ಮ ಅಗ್ನಿ ಹೋತ್ರಕ್ಕೆ ಸಾಮಗ್ರಿಗಳನ್ನು ನೂರು ಬಂಡಿಗಳ ಮೇಲೆ ಏರಿಸಿಕೊಂಡು ಹೊರಟರು. ಆ ಸಿದ್ಧಾಶ್ರಮದಲ್ಲಿದ್ದ ಮೃಗಪಕ್ಷಿಗಳೇ ಮೊದಲಾದ ಪ್ರಾಣಿಗಳೂ ಕೂಡ ಮಹಾತ್ಮನಾದ ಆ ವಿಶ್ವಾಮಿತ್ರ ಮುನಿಯನ್ನು ಬಿಟ್ಟಿರಲಾರದೆ ಆತನ ಹಿಂದೆ ಹೊರಡಲು, ಆತನು ಅವುಗಳನ್ನು ಸಮಾಧಾನಪಡಿಸಿ ಹಿಂದಿರುಗಿಸಿದನು. ಹೀಗೆ ಋಷಿಗಳೆಲ್ಲರೂ ಬಹುದೂರ ಪ್ರಯಾಣಮಾಡಿ ಸಾಯಂಕಾಲವಾದ ಮೇಲೆ ಆ ರಾತ್ರಿಯನ್ನು ಶೋಣಾನದಿಯ ತೀರದಲ್ಲಿ ಕಳೆಯುವುದಾಗಿ ನಿಶ್ಚಯಿಸಿ ಸೂರ್ಯನು ಅಸ್ತಂಗತನಾದ ಮೇಲೆ ಸ್ನಾನಮಾಡಿ ಅಗ್ನಿ ಹೋತ್ರಗಳನ್ನು ತೀರಿಸಿಕೊಂಡು ವಿಶ್ವಾಮಿತ್ರನ ಮುಂದೆ ಕುಳಿತರು.

ಆಗ ರಾಮನು ವಿಶ್ವಾಮಿತ್ರನನ್ನು ನೋಡಿ ಬಹಳ ಕುತೂಹಲದಿಂದ ಕೂಡಿದವನಾಗಿ ಅನೇಕ ವನಗಳಿಂದ ತುಂಬಿದ ಈ ದೇಶವಾವುದೆಂದು ಕೇಳಲು ವಿಶ್ವಾಮಿತ್ರನು ಆ ದೇಶದ ವೃತ್ತಾಂತವೆಲ್ಲವನ್ನೂ ಹೇಳಲಾರಂಭಿಸಿದನು.

ಸರ್ಗ ೩೨

ಕುಶ ಕುಶನಾಭರ ವೃತ್ತಾಂತವು.

ಬ್ರಹ್ಮಪುತ್ರರಲ್ಲಿ ಪ್ರಖ್ಯಾತನಾದ 'ಕುಶ' ನೆಂಬ ಮಹಾತಪಸ್ವಿಯೊಬ್ಬನಿದ್ದನು. ಈತನು ಯಾವಾಗಲೂ ವ್ರತನಿಷ್ಠನಾಗಿ, ಧರ್ಮಗಳೆಲ್ಲವನ್ನೂ ತಿಳಿದು, ಸತ್ಪುರುಷರನ್ನು ಪೂಜಿಸುತ್ತಿದ್ದನು. ಈ ಮಹಾತ್ಮನು ಸತ್ಕುಲದಲ್ಲಿ ಹುಟ್ಟಿದವನಾಗಿ ತನಗೆ ಅನುರೂಪಳಾಗಿದ್ದ ವೈದರ್ಭಿಯೆಂಬ ಪತ್ನಿಯಲ್ಲಿ ಗುಣಶಾಲಿಗಳಾದ ನಾಲ್ಕು ಮಕ್ಕಳನ್ನು ಪಡೆದನು. ಈ ನಾಲ್ವರಿಗೂ ಕ್ರಮವಾಗಿ ಕುಶಾಂಬ, ಕುಶನಾಭ, ಅಧೂರ್ತರಜಸ್ಸು, ವಸು ಎಂದು ಹೆಸರು. ಈ ನಾಲ್ವರೂ ಮಹಾ ತೇಜಸ್ವಿಗಳಾಗಿಯೂ, ವೀರ್ಯವುಳ್ಳವರಾಗಿಯೂ, ಧರ್ಮಿಷ್ಠರಾಗಿಯೂ, ಸತ್ಯವಾದಿಗಳಾಗಿಯೂ ಇರುತ್ತಿದ್ದರು. ಒಂದಾನೊಂದು ದಿವಸದಲ್ಲಿ ಈ ಕುಶನು ತನ್ನ ನಾಲ್ವರು ಪುತ್ರರನ್ನು ನೋಡಿ ಕ್ಷತ್ರಧರ್ಮವನ್ನನುಸರಿಸಿ "ಎಲೈ ಪುತ್ರರೆ! ಇನ್ನು ನೀವು ಪ್ರಜೆಗಳನ್ನು ಪಾಲಿಸುತ್ತ ಕ್ಷತ್ರಧರ್ಮವನ್ನು ನಡೆಸಿರಿ" ಎಂದನು. ಈ ಮಾತನ್ನು ಕೇಳಿ ನಾಲ್ಕು ಮಕ್ಕಳೂ ನಾಲ್ಕು ಪಟ್ಟಣಗಳನ್ನು ಕಟ್ಟಿಕೊಂಡರು. ಕುಶಾಂಬನು ಕೌಶಾಂಬಿಯೆಂಬ ಪಟ್ಟಣವನ್ನೂ, ಕುಶನಾಭನು ಮಹೋದಯವೆಂಬ ಪಟ್ಟಣವನ್ನೂ, ಅಧೂರ್ತರಜಸ್ಸು ಧರ್ಮಾರಣ್ಯವೆಂಬುದನ್ನೂ, ನಾಲ್ಕನೆಯ ಮಗನಾದ ವಸುವು ಗಿರಿವ್ರಜವೆಂಬ ಪಟ್ಟಣವನ್ನೂ ಕಲ್ಪಿಸಿದರು. ಎಲೈ ರಾಜನೆ! ಇದೋ! ಈ ಶೋಣಾನದಿಯ ತೀರದಲ್ಲಿರುವ ಭೂಮಿಯೆಲ್ಲವೂ ಆ ಮಹಾತ್ಮನಾದ ವಸುರಾಜನಿಗೆ ಸೇರಿರುವುದು ಇದರ ಸುತ್ತಲೂ ಐದು ಪರ್ವತಗಳಿರುವುವು. "ಮಾಗಧಿ" ಎಂಬ ಪ್ರಸಿದ್ಧವಾದ ನದಿಯು ಮಗಧ ದೇಶದಲ್ಲಿ ಪ್ರವಹಿಸಿ ಈ ಐದು ಪರ್ವತಗಳ ನಡುವೆ ಪುಷ್ಪಮಾಲಿಕೆಯಂತೆ ಪ್ರಕಾಶಿಸುತ್ತಿರುವುದು. ಎಲೈ ರಾಮನೆ! ಈ ಶೋಣಾನದಿಯೂ ಕೂಡ ಮಹಾತ್ಮನಾದ ಆ ವಸುರಾಜನಿಗೇ ಸೇರಿರುವುದು.

ಇದು ಪೂರ್ವದಿಂದ ಪಶ್ಚಿಮಕ್ಕೆ ಹರಿಯುತ್ತಿರುವುದು. ಇದರ ಎರಡು ಪಕ್ಕಗಳಲ್ಲಿಯೂ ಪೈರುಗಳಿಂದ ತುಂಬಿದ ಅನೇಕವಾದ ಗದ್ದೆಗಳು ಕಾಣು ತ್ತಿರುವುವು. ಕುಶನ ಎರಡನೆಯ ಮಗನಾದ ಕುಶನಾಭನೆಂಬುವನು ಬಹಳ ಧಾರ್ಮಿಕನಾಗಿ ರಾಜಋಷಿಯೆನಿಸಿಕೊಂಡನು. ಈತನಿಗೆ "ಘೃತಾಚಿ" ಎಂಬ ಅಪ್ಸರ ಸ್ತ್ರೀಯಲ್ಲಿ ನೂರು ಮಂದಿ ಹೆಣ್ಣು ಮಕ್ಕಳು ಹುಟ್ಟಿದರು. ಇವರೆಲ್ಲರೂ ಅತಿಶಯವಾದ ರೂಪಯೌವನಗಳಿಂದ ಪ್ರಕಾಶಿಸುತ್ತ ವಸ್ತ್ರಾಭರಣಗಳಿಂದಲೂ ಗಂಧಪುಷ್ಪಾದಿಗಳಿಂದಲೂ ಅಲಂಕೃತರಾಗಿ, ಒಂದಾನೊಂದು ದಿನ ಉದ್ಯಾನವನಕ್ಕೆ ಬಂದು, ಹಾಡುತ್ತಲೂ ಕುಣಿಯು ತ್ತಲೂ ವಾದ್ಯಗಳನ್ನು ನುಡಿಸುತ್ತಲೂ ಬಹಳ ವಿನೋದದಿಂದಿರುತ್ತಿದ್ದರು. ಹೀಗೆ ಅವರು ಅಂದವಾದ ರೂಪವುಳ್ಳವರಾಗಿ ಉದ್ಯಾನವನದಲ್ಲಿ ಶರತ್ಕಾ ಲದ ನಕ್ಷತ್ರಗಳಂತೆ ಪ್ರಕಾಶಿಸುತ್ತಿರಲು, ವಾಯುದೇವನು ಇವರನ್ನು ನೋಡಿ ಮೋಹಿಸಿ "ಎಲೈ ಕನ್ನಿಕೆಯರೆ! ನೀವೆಲ್ಲರೂ ನನ್ನನ್ನು ವರಿಸಿರಿ. ಅಲ್ಪಾಯುಸ್ಸುಳ್ಳ ಮನುಷ್ಯ ಸ್ವಭಾವವನ್ನು ಬಿಟ್ಟುಬಿಡಿರಿ. ನೀವು ದೀರ್ಘಾ ಯುಷ್ಯವುಳ್ಳವರಾಗುವಿರಿ. ಯೌವನವೆಂಬುದು ಬಹುಕಾಲ ನಿಲ್ಲತಕ್ಕುದಲ್ಲ. ಅದರಲ್ಲಿಯೂ ಮನುಷ್ಯ ಜಾತಿಗೆ ಆ ಯೌವನ ಕಾಲವೆಂಬುದು ಬಹು ಸ್ವಲ್ಪ ವಾಗಿರುವುದು. ನನ್ನನ್ನು ಕೈಹಿಡಿದು ದೇವಸ್ವರೂಪವನ್ನು ಹೊಂದಿ ನಿರಂತರವಾದ ಸುಖವನ್ನನುಭವಿಸಿರಿ" ಎಂದನು. ವಾಯುದೇವನ ಈ ಮಾತನ್ನು ಕೇಳಿ ಆ ನೂರು ಕನ್ನಿಕೆಯರೂ ಹಾಸ್ಯಮಾಡಿ ನಗುತ್ತಾ "ಎಲೈ ದೇವಶ್ರೇಷ್ಠನೆ! ನೀನು ಸಮಸ್ತ ಪ್ರಾಣಿಗಳ ದೇಹದಲ್ಲಿಯೂ ಸಂಚರಿಸತಕ್ಕವನು. ನಾವೆಲ್ಲರೂ ನಿನ್ನ ಮಹಿಮೆಯನ್ನು ಬಲ್ಲೆವು. ಏಕೆ ನಮ್ಮನ್ನು ಅವಮಾನ ಪಡಿಸುವೆ? ನಾವೆಲ್ಲರೂ ಕುಶನಾಭನ ಮಕ್ಕಳು. ಆದುದರಿಂದ ನಿನ್ನನ್ನೂ ನಿನ್ನ ಪ್ರಭುವಾದ ಇಂದ್ರನನ್ನೂ ಕೂಡ, ನಿಮ್ಮ ಅಧಿಕಾರಿಗಳಿಂದ ತಪ್ಪಿಸತಕ್ಕ ತಪಶ್ಶಕ್ತಿಯು ನಮ್ಮಲ್ಲಿರುವುದು. ಆದರೆ ಆ ತಪಸ್ಸನ್ನು ಕೆಡಿಸಿಕೊಳ್ಳಬಾರದೆಂಬುದಕ್ಕಾಗಿ ಈಗ ನಿನ್ನನ್ನು ಶಪಿಸದೆ ಬಿಟ್ಟುಬಿಟ್ಟೆವು. ನನ್ನ ತಂದೆಗೆ ಈ ನಿನ್ನ ದುರ್ಬುದ್ಧಿಯು ತಿಳಿದ ಪಕ್ಷದಲ್ಲಿ ನಿನಗೆ ಮೃತ್ಯುವೇ ನಿಶ್ಚಯವು. ಸತ್ಯವಾದಿಯಾದ ಆತನನ್ನು ಅವಮಾನ ಪಡಿಸಬೇಡ ನಾವು ನಮ್ಮ ತಂದೆಯ ಆಜ್ಞೆಗೆ ಅಧೀನರಾಗಿ ನಡೆಯ ಬೇಕಲ್ಲವೆ? ಅವನು ಯಾರಿಗೆ ನಮ್ಮನ್ನು ಕೊಡುವನೋ ಅವರನ್ನೇ ನಾವು

ವರಿಸಬೇಕು. ಈಗ ನಮಗೆ ತಂದೆಯೇ ದೈವವು! ತಂದೆಯೇ ಪ್ರಭುವು! ಅವನ ಅನುಮತಿ ಇಲ್ಲದೆ ನೀನು ನಮ್ಮನ್ನು ಮಾತಾಡಿಸಬಹುದೆ?" ಎಂದರು. ಈ ಮಾತನ್ನು ಕೇಳಿದೊಡನೆ ವಾಯುವು ಕೋಪಗೊಂಡು, ಅವರ ಅಂಗಾಂಗಗಳೊಳಗೆಲ್ಲಾ ಪ್ರವೇಶಿಸಿ, ಅವರ ದೇಹವೆಲ್ಲವನ್ನೂ ಸೆಳೆದು ಬಿಟ್ಟನು. ಆಗ ಆ ಕನ್ನಿಕೆಯರೆಲ್ಲರೂ ಕೊಬ್ಬಡಗಿ, ಗೇಣುದ್ದದ ಆಕಾರ ಗಳನ್ನು ಹೊಂದಿ ನಡುಗುತ್ತಾ ತಂದೆಯ ಮನೆಗೆ ಹೋಗಿ, ನಾಚಿಕೆಯಿಂದ ಕಣ್ಣೀರು ಬಿಡುತ್ತಾ ಆತನ ಮುಂದೆ ಬಿದ್ದು ಹೊರಳಾಡಿದರು. ಆಗ ರಾಜನು ಹೀಗೆ ಮೈಯ್ಯುಡುಗಿ ವಿಕಾರ ರೂಪವನ್ನು ಹೊಂದಿದ ತನ್ನ ಕನ್ನಿಕೆಯರನ್ನು ನೋಡಿ ಬೆಚ್ಚಿಬಿದ್ದು "ಆಹಾ ಇದೇನು? ಎಲೈ ಕನ್ನಿಕೆ ಯರೇ? ಯಾರು ನಿಮ್ಮನ್ನು ಹೀಗೆ ಅವಮಾನ ಪಡಿಸಿದವರು? ನಿಮ್ಮ ಧರ್ಮವನ್ನು ನಿರಾಕರಿಸಿದವರಾರು? ನಿಮಗೆ ಈ ವಿಕಾರ ರೂಪವು ಯಾರಿಂದ ಉಂಟಾಯಿತು? ಇದೇನು! ನೀವು ಮಾತಾಡದಿರುವಿರಿ! ನಿಮ್ಮ ವೃತ್ತಾಂತವೆಲ್ಲವನ್ನೂ ನನಗೆ ವಿವರವಾಗಿ ತಿಳಿಸಿರಿ" ಎಂದು ಕೇಳಿ ನಿಟ್ಟು ಸಿರು ಬಿಡುತ್ತಾ ಬಹಳ ಆತುರದಿಂದ ನಿರೀಕ್ಷಿಸುತ್ತಿದ್ದನು.

ಸರ್ಗ ೩೩

ಬ್ರಹ್ಮದತ್ತನ ವೃತ್ತಾಂತವು. ಆತನು ಕುಶನಾಭನ ಕನ್ನಿಕೆಯರನ್ನು ವಿವಾಹ ಮಾಡಿಕೊಂಡುದು.

ಕುಶನಾಭನ ಮಾತನ್ನು ಕೇಳಿ ಆ ನೂರು ಹೆಣ್ಣು ಮಕ್ಕಳೂ ಆತನ ಕಾಲಿನ ಮೇಲೆ ಬಿದ್ದು, "ಎಲೈ ತಂದೆಯೇ! ಸರ್ವವ್ಯಾಪಿಯಾದ ವಾಯುವು ಧರ್ಮಮಾರ್ಗವನ್ನು ಬಿಟ್ಟು ದುರ್ಮಾರ್ಗದಿಂದ ನಮ್ಮನ್ನು ಅವಮಾನ ಪಡಿಸುವುದಕ್ಕೆ ಪ್ರಯತ್ನಿಸಿದನು. ಆಗ ನಾವು ಅವನನ್ನು ಕುರಿತು "ನಾವು ತಂದೆಯ ಅಧೀನದಲ್ಲಿರುವವರಾದುದರಿಂದ ನಾವೇ ನಿನ್ನನ್ನು ವರಿಸುವುದಕ್ಕೆ ಸ್ವತಂತ್ರರಲ್ಲ. ಆದುದರಿಂದ ನೀನು ಹೋಗಿ ನಮ್ಮ ತಂದೆಯನ್ನೇ ಕೇಳು. ಅವನು ಅನುಮತಿ ಕೊಟ್ಟರೆ ನಾವು ನಿನ್ನ ಅಧೀನ ರಾಗುವೆವು" ಎಂದು ಅನೇಕ ವಿಧದಲ್ಲಿ ಹೇಳಿದರೂ, ಆ ವಾಯುವು ಪಾಪಬುದ್ಧಿಯಿಂದ ನಮ್ಮ ಮಾತನ್ನು ಕೇಳದೆಯೇ ನಮ್ಮ ಅವಯವಗಳಲ್ಲಿ ಪ್ರವೇಶಿಸಿ ನಮಗೆ ಈ ಅವಸ್ಥೆಯನ್ನುಂಟುಮಾಡಿರುವನು" ಎಂದರು.

ಈ ಮಾತನ್ನು ಕೇಳಿ ಆ ರಾಜನು ಮಹಾವೀರ್ಯವುಳ್ಳವನಾದರೂ ಧರ್ಮ ಬುದ್ಧಿಯುಳ್ಳವನಾದುದರಿಂದ, ಆ ಕನ್ನಿಕೆಯರನ್ನು ನೋಡಿ "ಎಲೈ ಪುತ್ರಿಯರೇ! ಕ್ಷಮಾಗುಣವುಳ್ಳವರಿಗೆ ತಮಗೆ ಯಾರೇನು ಅಪರಾಧವನ್ನು ಮಾಡಿದರೂ, ಅವರನ್ನು ಮನ್ನಿಸುವುದೇ ಧರ್ಮವು. ನೀವು ಸರ್ವೋತ್ತಮ ವಾದ ಕೆಲಸವನ್ನು ಮಾಡಿದಿರಿ. ಸಾಕ್ಷಾದ್ವಾಯುದೇವನೇ ಬಂದು ನಿಮ್ಮನ್ನು ಪ್ರಾರ್ಥಿಸಿದರೂ ಮನಸ್ಸು ಕರಗದೆಯೂ ಆತನು ಬಂದು ನಿಮ್ಮನ್ನು ಭಂಗಪಡಿಸಿದರೂ ಕೋಪಿಸದೆಯೂ ಇದ್ದುದೇ ದೊಡ್ಡ ಕಾರ್ಯ ವಲ್ಲವೆ? ಇಷ್ಟು ಮಾತ್ರವೇ ಅಲ್ಲ. ನೀವೆಲ್ಲರೂ ಐಕಮತ್ಯದಿಂದ ನಮ್ಮ ಕುಲಕ್ಕೆ ತಕ್ಕ ಕೆಲಸವನ್ನು ಮಾಡಿದಿರಿ. ಸ್ತ್ರೀಯರಿಗಾಗಲಿ, ಪುರುಷರಿ ಗಾಗಲಿ, ತಾಳ್ಮೆಯೆಂಬುದೇ ದೊಡ್ಡ ಭೂಷಣವು. ಕ್ಷಮಾಗುಣವೆಂಬುದು ಎಲ್ಲರಲ್ಲಿಯೂ ಇರುವುದು ಕಷ್ಟವು. ಅದರಲ್ಲಿಯೂ ರೂಪೈಶ್ವರ್ಯಾದಿ ಗಳಿಂದ ಕೂಡಿದ ದೇವತೆಗಳೇ ಬಂದು ನಿಮ್ಮನ್ನು ಪೀಡಿಸಿದಾಗ ನೀವು ತಾಳ್ಮೆಯಿಂದಿದ್ದುದು ಬಹಳ ಆಶ್ಚರ್ಯವು. ಅದರಲ್ಲಿಯೂ ನೀವೆಲ್ಲರೂ ಒಂದೇ ವಿಧವಾಗಿ ಈ ಗುಣವನ್ನು ತೋರಿಸಿದುದು ಇನ್ನೂ ಆಶ್ಚರ್ಯವಲ್ಲವೆ? ದಾನ ದಿಂದಲೂ, ಯಜ್ಞದಿಂದಲೂ, ಸತ್ಯದಿಂದಲೂ, ಯಶಸ್ಸಿನಿಂದಲೂ, ಧರ್ಮ ದಿಂದಲೂ ಉಂಟಾಗತಕ್ಕ ಫಲಗಳೆಲ್ಲವೂ ಈ ಕ್ಷಮೆಯೊಂದರಿಂದಲೇ ಉಂಟಾಗುವುವು. ಆದುದರಿಂದ ಕ್ಷಮೆಯೇ ದಾನವು. ಇದೇ ಯಜ್ಞವು. ಸಮಸ್ತ ಧರ್ಮವೂ ಈ ಕ್ಷಮೆಯೇ ಆಗಿರುವುದು! ಭೂದೇವಿಗೆ ಅಸಾಧಾರಣ ವಾದ ಕ್ಷಮೆಯಿರುವುದರಿಂದಲೇ ಈ ಸಮಸ್ತ ಪ್ರಪಂಚವೂ ನಿಂತಿರುವುದ ಲ್ಲವೆ?" ಎಂದನು. ದೇವತೆಗಳಂತೆ ಪರಾಕ್ರಮವುಳ್ಳ ಆ ಕುಶನಾಭನು ಹೀಗೆ ಹೇಳಿ, ಆ ಕನ್ನಿಕೆಯರೆಲ್ಲರನ್ನೂ ಕಳುಹಿಸಿಬಿಟ್ಟು, ಆಮೇಲೆ ಅವರನ್ನು ತಕ್ಕ ವರನಿಗೆ ಕೊಟ್ಟು ವಿವಾಹ ಮಾಡಬೇಕೆಂಬ ಉದ್ದೇಶದಿಂದ, ಮಂತ್ರಿ ಗಳನ್ನು ಕರೆದು ಅವರೊಡನೆ ಕಲೆತು ವಿವಾಹಕ್ಕೆ ಉಚಿತವಾದ ಕಾಲದೇಶ ಗಳನ್ನೂ, ಅನುರೂಪನಾದ ವರನನ್ನೂ ಹುಡುಕಬೇಕೆಂದು ಆಲೋಚಿಸು ತ್ತಿದ್ದನು. ಈ ಕಾಲಕ್ಕೆ ಸರಿಯಾಗಿ, ಹುಟ್ಟಿದುದು ಮೊದಲು ಬ್ರಹ್ಮಚಾರಿ ಯಾಗಿಯೂ, ಒಳ್ಳೆಯ ನಡತೆಯುಳ್ಳವನಾಗಿಯೂ ಇದ್ದ ಚೂಳಿಯೆಂಬ ಋಷಿಯೊಬ್ಬನು ವೇದೋಕ್ತವಾದ ಒಂದು ತಪಸ್ಸನ್ನು ಮಾಡುತ್ತಿದ್ದನು. ಆಗ ಅಲ್ಲಿ ಊರ್ಮಿಳೆಯೆಂಬವಳ ಪುತ್ರಿಯಾದ ಸೋಮದೆಯೆಂಬ ಗಂಧರ್ವ

ಕನ್ನಿಕೆಯೊಬ್ಬಳು ಈ ಋಷಿಯ ಶುಶ್ರೂಷೆ ಮಾಡುತ್ತಿದ್ದಳು. ಹೀಗೆ ಇವಳು ಬಹಳ ವಿನಯದಿಂದಲೂ, ಭಕ್ತಿಯಿಂದಲೂ, ಶುಶ್ರೂಷೆ ಮಾಡುತ್ತಿರುವುದನ್ನು ನೋಡಿ ಆ ಋಷಿಗೆ ಬಹಳ ಸಂತೋಷವುಂಟಾಯಿತು. ಆಗ ಆ ಮಹರ್ಷಿಯು ಅವಳನ್ನು ನೋಡಿ, "ನಿನ್ನ ಶುಶ್ರೂಷೆಗಾಗಿ ನಾನು ಬಹಳ ಸಂತೋಷಪಟ್ಟೆನು. ನಿನಗೆ ಮಂಗಳವಾಗಲಿ. ನಿನಗೆ ಬೇಕಾದುದನ್ನು ಕೇಳು. ಅದನ್ನು ನಾನು ನಡೆಸಿಕೊಡುವೆನು" ಎಂದನು. ಹೀಗೆ ಋಷಿಯು ತನಗೆ ಅನುಗ್ರಹಿಸಿದುದನ್ನು ನೋಡಿ ಆಕೆಯು ಬಹಳ ಸಂತೋಷಪಟ್ಟು, ಇಂಪಾದ ಧ್ವನಿಯಿಂದ ಋಷಿಯನ್ನು ಕುರಿತು "ಎಲೈ ಮಹರ್ಷಿಯೆ ! ನೀನು ಬ್ರಹ್ಮತೇಜಸ್ಸಿನಿಂದ ಎಲ್ಲರನ್ನೂ ಮೀರಿಸಿರುವೆ ಮತ್ತು ನೀನು ಬ್ರಹ್ಮಸಮಾನನೂ ಮಹಾತಪಸ್ವಿಯೂ ಆದುದರಿಂದ ನಿನ್ನಂತೆಯೇ ಬ್ರಹ್ಮತೇಜಸ್ಸುಳ್ಳ ಮಹಾ ತಪಸ್ವಿಯಾದ ಪುತ್ರನನ್ನು ನನಗೆ ಕೊಡಬೇಕು. ಎಲೈ, ಧಾರ್ಮಿಕನೇ ! ನಾನು ಪತಿಯಿಲ್ಲದವಳು. ಆದರೆ ಏತಂತುವಲ್ಲ. ಇದುವರೆಗೂ ನಾನು ಯಾರನ್ನೂ ವರಿಸಿದವಳಲ್ಲ. ಮುಂದೆಯೂ ನಾನು ಮದುವೆ ಮಾಡಿಕೊಳ್ಳತಕ್ಕವಳಲ್ಲ. ನಾನು ಹೀಗೆ ನೈಷ್ಠಿಕ ಬ್ರಹ್ಮಚಾರಿಣಿಯಾಗಿಯೇ ಪುತ್ರನನ್ನು ಪಡೆಯುವಂತೆ ಅನುಗ್ರಹಿಸಬೇಕು" ಎಂದಳು. ಆಗ ಮಹರ್ಷಿಯು ಪ್ರಸನ್ನನಾಗಿ ತನ್ನ ಮನಸ್ಸಂಕಲ್ಪದಿಂದಲೇ ಬ್ರಹ್ಮದತ್ತನೆಂಬ ಒಬ್ಬ ಪುತ್ರನನ್ನು ಆಕೆಗೆ ಅನುಗ್ರಹಿಸಿದನು. ಆ ಬ್ರಹ್ಮದತ್ತನಾದರೋ ಕ್ಷತ್ರಿಯಸ್ತ್ರೀಯ ಪುತ್ರನಾದುದರಿಂದ ರಾಜನಾದನು. ಇತ್ತಲಾಗಿ ಕುಶನಾಭನು ಕನ್ಯಾಪ್ರದಾನವನ್ನು ಕುರಿತು ಆಲೋಚಿಸುತ್ತಿರುವಾಗ ಸೋಮದೆಯ ಮಗನಾದ ಈ ಬ್ರಹ್ಮದತ್ತನು ಕಾಂಪಿಲ್ಯೆಯೆಂಬ ಪಟ್ಟಣವನ್ನು ಆಳುತ್ತಾ ಸ್ವರ್ಗಾಧಿಪತಿಯಾದ ಇಂದ್ರನಂತೆ ಬಹಳ ವೈಭವದಿಂದಿದ್ದನು. ಆಗ ಧಾರ್ಮಿಕನಾದ ಕುಶನಾಭನು ಆ ಬ್ರಹ್ಮದತ್ತನಿಗೆ ತನ್ನ ನೂರು ಕನ್ನಿಕೆಯರನ್ನೂ ಕೊಡಬೇಕೆಂದು ನಿಶ್ಚಯಿಸಿ, ಅವನನ್ನು ತನ್ನ ಪಟ್ಟಣಕ್ಕೆ ಕರೆಯಿಸಿ ತನ್ನ ಕನ್ನಿಕೆಯರೆಲ್ಲರನ್ನೂ ಆತನಿಗೆ ಕೊಟ್ಟು ವಿವಾಹ ಮಾಡಿದನು. ಆ ಬ್ರಹ್ಮದತ್ತನೂ ಕೂಡ ಕ್ರಮವಾಗಿ ಆ ಕನ್ನಿಕೆಯರಲ್ಲಿ ಒಬ್ಬೊಬ್ಬರ ಕೈಯನ್ನೂ ಹಿಡಿದು ಪಾಣಿಗ್ರಹಣ ಮಾಡಿಕೊಳ್ಳುತ್ತಿರುವಾಗ ಅವನ ಕೈ ಮುಟ್ಟಿದಮಾತ್ರದಿಂದಲೇ ಅವರ ವಿಕಾರ ರೂಪಗಳೂ ದೇಹದಲ್ಲಿದ್ದ ವ್ಯಾಧಿಯೂ ಹೋಯಿತು. ಮೊದಲಿನಂತೆ ಸೌಂದರ್ಯವತಿಯರಾಗಿ

ಪ್ರಕಾಶಿಸಿದರು. ಹೀಗೆ ವಾಯುವ್ಯಾಧಿಯಿಂದ ಮುಕ್ತರಾಗಿ ರೂಪ ಯೌವನ ಸಂಪತ್ತುಗಳಿಂದ ಕೂಡಿದ ಆ ಕನ್ನಿಕೆಯರನ್ನು ನೋಡಿ ಕುಶ ನಾಭನಿಗೆ ಪರಮಾನಂದವುಂಟಾಯಿತು. ಈ ವಿವಾಹವಾದ ಮೇಲೆ ಆ ರಾಜನು ಬ್ರಹ್ಮದತ್ತನನ್ನು ಹೆಣ್ಣುಮಕ್ಕಳೊಡನೆಯೂ ಋತ್ವಿಕ್ಪುರೋಹಿತ ರೊಡನೆಯೂ ವೈಭವದಿಂದ ಆತನ ಪಟ್ಟಣಕ್ಕೆ ಕಳುಹಿಸಿಕೊಟ್ಟನು. ಆ ಬ್ರಹ್ಮದತ್ತನ ತಾಯಿಯಾದ ಸೋಮದೆಯೂ ವಿವಾಹಿತನಾದ ಮಗನನ್ನು ನೋಡಿ ಬಹಳ ಸಂತೋಷಪಟ್ಟು ಒಬ್ಬೊಬ್ಬ ಸೊಸೆಯನ್ನೂ ಕರೆದು ಮುದ್ದಾಡುತ್ತಾ ಬಹಳ ಆನಂದದಿಂದ ಕುಶನಾಭನನ್ನು ಬಹಳವಾಗಿ ಕೊಂಡಾಡಿದಳು.

ಸರ್ಗ ೩೪

ವಿಶ್ವಾಮಿತ್ರ ಕೌಶಿಕೀ ನದಿಗಳ ವೃತ್ತಾಂತವು.

ಎಲೈ ರಾಮನೇ ! ಹೀಗೆ ಬ್ರಹ್ಮದತ್ತನು ವಿವಾಹ ಮಾಡಿಕೊಂಡು ಹೊರಟು ಹೋದಮೇಲೆ, ಇತ್ತ ಕುಶನಾಭನು ಬಹುದಿನಗಳವರೆಗೂ ಮಕ್ಕಳಿಲ್ಲದೆ ಪುತ್ರಕಾಮೇಷ್ಟಿಯಾಗವನ್ನು ಮಾಡಿದನು. ಈ ಯಜ್ಞವು ನಡೆಯುತ್ತಿರುವಾಗ ದೀಕ್ಷಿತನಾದ ಕುಶನಾಭನನ್ನು ಕುರಿತು ಈತನ ತಂದೆ ಯಾದ ಕುಶನು ಒಂದಾನೊಂದು ಮಾತನ್ನು ಹೇಳಿದನು. “ ಎಲೈ ಪುತ್ರನೆ! ಮಹಾಧಾರ್ಮಿಕನಾಗಿ ನಿನ್ನ ಸಮಾನವಾದ ಗುಣವುಳ್ಳ ಪುತ್ರನೊಬ್ಬನು ನಿನಗೆ ಉಂಟಾಗುವನು. ಅವನೇ ಗಾಧಿಯೆನಿಸುವನು. ಅವನಿಂದ ನಿನಗೆ ಶಾಶ್ವತವಾದ ಕೀರ್ತಿಯುಂಟಾಗುವುದು. ಹೀಗೆಂದು ಹೇಳಿ ಆಕಾಶಕ್ಕೆ ಹಾರಿ ಹಾಗೆಯೇ ಕಣ್ಮರೆಯಾಗಿ ಬ್ರಹ್ಮಲೋಕವನ್ನು ಸೇರಿದನು. ಕೆಲವು ಕಾಲದಮೇಲೆ ಈ ಕುಶನಾಭನಿಗೆ ಪರಮ ಧರ್ಮಿಷ್ಠನಾದ ಒಬ್ಬ ಮಗನು ಹುಟ್ಟಿದನು. ಆತನು ಗಾಧಿಯೆಂಬ ಹೆಸರಿನಿಂದ ಪ್ರಸಿದ್ಧನಾದನು. ಎಲೈ ರಾಜನೆ ! ಆತನೇ ನನ್ನ ತಂದೆಯು, ಆ ಕುಶ ಮಹಾರಾಜನ ವಂಶ ದಲ್ಲಿ ಹುಟ್ಟಿದುದರಿಂದಲೇ ನನಗೂ ಕೌಶಿಕನೆಂದು ಹೆಸರುಂಟಾಯಿತು. ಮಹಾವ್ರತನಿಷ್ಠಳಾದ ಸತ್ಯವತಿಯೆಂಬ ನನ್ನ ಅಕ್ಕನು ಋಚೀಕನನ್ನು ಮದುವೆಯಾದಳು. ಆಕೆಯು ಮಹಾ ಪತಿವ್ರತೆಯಾಗಿ ತನ್ನ ಪತಿಯ ಅನುಗ್ರಹವನ್ನು ಪಡೆದಿದ್ದುದರಿಂದ ಈ ಮನುಷ್ಯ ದೇಹದೊಡನೆಯೇ

ಸ್ವರ್ಗವನ್ನೇರಿದಳು. ಇಷ್ಟು ಮಾತ್ರವೇ ಅಲ್ಲ. ಆಕೆಯೇ ಈಗ ಕೌಶಿಕಿಯೆಂಬ ಮಹಾ ಪುಣ್ಯನದಿಯಾಗಿಯೂ ಭೂಲೋಕದಲ್ಲಿ ಪ್ರವಹಿಸುತ್ತಿರುವಳು. ಏಕೆಂದರೆ ಈ ಭೂಲೋಕದ ಜನಗಳಿಗೆ ಐಹಿಕಾಮುಷ್ಮಿಕ ಫಲಗಳನ್ನು ಕೊಡಬೇಕೆಂಬ ಉದ್ದೇಶದಿಂದಲೇ ನನ್ನ ಒಡಹುಟ್ಟಿದವಳಾದ ಆಕೆಯು, ಹೀಗೆ ಪುಣ್ಯನದಿಯ ರೂಪವನ್ನು ಹೊಂದಿ ಸ್ವರ್ಗದಿಂದಿಳಿದು ಹಿಮವತ್ಪರ್ವತವನ್ನಾಶ್ರಯಿಸಿದಳು. ಅವಳು ಹಿಮವತ್ಪರ್ವತಕ್ಕೆ ಹೋದೊಡನೆಯೇ ಒಡಹುಟ್ಟಿದ ಸ್ನೇಹದಿಂದ ನಾನೂ ಆ ಹಿಮವತ್ಪರ್ವತದ ಪಾರ್ಶ್ವದಲ್ಲಿಯೇ ಸುಖವಾಗಿ ವಾಸಮಾಡುತ್ತಿದ್ದೆನು. ಆ ಸತ್ಯವತಿಯು ಮಹಾ ಪರಿಶುದ್ಧೆಯಾದವಳು. ಹೆಸರಿಗೆ ತಕ್ಕಂತೆ ಆಕೆಯಲ್ಲಿ ಸತ್ಯವೂ ಧರ್ಮವೂ ಸ್ಥಿರವಾಗಿದ್ದುವು. ಆಕೆಯು ಮಹಾ ಪತಿವ್ರತೆಯು. ಮಹಾ ಮಹಿಮೆಯುಳ್ಳವಳು. ಆಮೇಲೆ ನಾನು ಒಂದು ನಿಯಮವನ್ನು ಹಿಡಿದು ಈ ಸಿದ್ಧಾಶ್ರಮಕ್ಕೆ ಬಂದೆನು. ಎಲೈ ರಾಮನೆ! ನಿನ್ನ ಪ್ರಭಾವದಿಂದಲೇ ಆ ಸಿದ್ಧಿಯು ನನಗೆ ಕೈಗೂಡಿತು. ಇದೇ ನನ್ನ ಜನ್ಮದ ಮತ್ತು ವಂಶದ ವೃತ್ತಾಂತವು. ಅವೆಲ್ಲವೂ ಹಾಗಿರಲಿ. ನೀನು ನನ್ನನ್ನು ಕೇಳಿದ ಈ ದೇಶದ ವೃತ್ತಾಂತವನ್ನು ಹೇಳಿದೆನಲ್ಲವೇ? ಹೀಗೆ ನಾವು ಕಥೆಗಳನ್ನು ಹೇಳುತ್ತಿರುವುದರಲ್ಲಿಯೇ ರಾತ್ರಿಯಾಗುತ್ತಾ ಬಂದಿದೆ. ಇನ್ನು ನೀನು ಮಲಗು. ನಿನಗೆ ಮಂಗಳವುಂಟಾಗಲಿ. ಹಾಗಿಲ್ಲದಿದ್ದರೆ ಮುಂದಿನ ಪ್ರಯಾಣವು ಕಷ್ಟವಾಗುವುದು. ಇಲ್ಲಿ ನೋಡು. ಗಿಡಗಳೆಲ್ಲವೂ ಅಲುಗದೆ ಸ್ತಬ್ಧವಾಗಿರುವುವು. ಮೃಗಪಕ್ಷಿಗಳೆಲ್ಲವೂ ಗೂಡುಗಳೊಳಗೆ ನಿದ್ರಿಸುತ್ತಿರುವುವು. ಸುತ್ತಲೂ ಕತ್ತಲೆಯು ಕವಿದಿರುವುದು. ಸಂಧ್ಯಾಕಾಲದ ಗುರುತುಗಳೆಲ್ಲವೂ ಬಿಟ್ಟು ಹೋಗುತ್ತಿರುವುವು. ಆಕಾಶವು ಕಣ್ಣುಗಳನ್ನು ತೆರೆದು ನೋಡುತ್ತಿದೆಯೋ ಎಂಬಂತೆ ನಕ್ಷತ್ರಗಳೂ ಗ್ರಹಗಳೂ ಮಿನುಗುತ್ತಿರುವುವು. ಸಮಸ್ತ ಪ್ರಾಣಿಗಳ ಮನಸ್ಸಿಗೂ, ಕಣ್ಣುಗಳಿಗೂ, ಆನಂದವನ್ನುಂಟುಮಾಡತಕ್ಕ ಚಂದ್ರನು ಸ್ವಲ್ಪಸ್ವಲ್ಪವಾಗಿ ಉದಯಿಸುತ್ತಿರುವನು. ರಾತ್ರಿಯಲ್ಲಿ ಸಂಚರಿಸತಕ್ಕ ಭೂತಗಳೆಲ್ಲವೂ ಈಚೆಗೆ ಹೊರಟು ಅಲ್ಲಲ್ಲಿ ಸಂಚರಿಸುತ್ತಿರುವುವು. ಯಕ್ಷರು, ರಾಕ್ಷಸರು, ಪಿಶಾಚಿಗಳು ಮುಂತಾದ ಕ್ರೂರ ದೇವತೆಗಳೆಲ್ಲವೂ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿರುವುವು. ಆದುದರಿಂದ ಎಲೈ ವತ್ಸನೇ! ಇನ್ನು ನೀನು ನಿದ್ರಿಸು" ಎಂದನು. ಈ ಮಾತನ್ನು ಕೇಳಿ

ಅಲ್ಲಿದ್ದ ಋಷಿಗಳೆಲ್ಲರೂ ಅನುಮೋದಿಸಿ ಆ ವಿಶ್ವಾಮಿತ್ರನ ಮಹಿಮೆಯನ್ನು ಕೊಂಡಾಡುತ್ತಾ "ಕುಶಿಕವಂಶವಾದರೋ ಬಹಳ ದೊಡ್ಡದು. ಆ ವಂಶೀಯರೆಲ್ಲರೂ ಬಹಳ ಧಾರ್ಮಿಕರಾಗಿಯೂ ಮಹಾತ್ಮರಾಗಿಯೂ ಬ್ರಹ್ಮನಿಗೆ ಸಮಾನರಾಗಿಯೂ ಇರುವರು. ಅದರಲ್ಲಿಯೂ ಈತನ ಮಹಿಮೆಯು ಬಹಳ ಅತಿಶಯವಾದುದು. ನದಿಯ ರೂಪವಾಗಿ ಪ್ರವಹಿಸಿದ ಕೌಶಿಕಿಯು ಈ ವಂಶಕ್ಕೆ ತಿಲಕಪ್ರಾಯಳಾಗಿರುವಳು" ಎಂದು ಆತನನ್ನು ಶ್ಲಾಘಿಸುತ್ತಿರುವಾಗಲೇ ವಿಶ್ವಾಮಿತ್ರನಿಗೆ ನಿದ್ರೆಯು ಪ್ರಾಪ್ತವಾಯಿತು. ಹೀಗೆ ಅಸ್ತಂಗತನಾದ ಸೂರ್ಯನಂತೆ ವಿಶ್ವಾಮಿತ್ರನು ನಿದ್ರೆ ಮಾಡುತ್ತಿರುವುದನ್ನು ನೋಡಿ ರಾಮಲಕ್ಷ್ಮಣರಿಬ್ಬರೂ ಈ ಕಥೆಗಳಿಂದ ಆಶ್ಚರ್ಯಪಡುತ್ತಾ ವಿಶ್ವಾಮಿತ್ರನನ್ನು ಬಹಳವಾಗಿ ಕೊಂಡಾಡುತ್ತ ಹಾಗೆಯೇ ನಿದ್ರೆಯನ್ನು ಹೊಂದಿದರು.

ಸರ್ಗ ೩೫

ಗಂಗಾಪಾರ್ವತಿಯರ ಜನ್ಮವೃತ್ತಾಂತವು.

ವಿಶ್ವಾಮಿತ್ರನು ಆ ಉಳಿದ ರಾತ್ರಿಯನ್ನು ಮಹರ್ಷಿಗಳೊಡಗೂಡಿ ಆ ಶೋಣಾನದಿಯ ತೀರದಲ್ಲಿಯೇ ಕಳೆದು ಬೆಳಗಾದಕೂಡಲೇ ರಾಮನನ್ನು ಕುರಿತು "ಎಲೈ ರಾಮನೆ! ಸುಪ್ರಭಾತವಾಯಿತು. ಪ್ರಾತಸ್ಸಂಧ್ಯೆಯು ನಡೆಯುತ್ತಿರುವುದು. ಏಳು! ಏಳು! ಮುಂದಿನ ಪ್ರಯಾಣಕ್ಕೆ ಸಿದ್ಧನಾಗು" ಎಂದನು. ಕೂಡಲೇ ರಾಮನು ಪ್ರಾತಃಕಾಲದಲ್ಲಿ ಮಾಡಬೇಕಾದ ಆಹ್ನಿಕಗಳೆಲ್ಲವನ್ನೂ ತೀರಿಸಿಕೊಂಡು ಪ್ರಯಾಣಸನ್ನದ್ಧನಾಗಿ ನಿಂತು ವಿಶ್ವಾಮಿತ್ರನನ್ನು ನೋಡಿ "ಎಲೈ ಮಹರ್ಷಿಯೆ! ಪರಿಶುದ್ಧವಾದ ನೀರುಳ್ಳ ಈ ಶೋಣಾನದಿಯಲ್ಲಿ ಅಲ್ಲಲ್ಲಿ ವಿಶೇಷವಾಗಿ ಮಳಲುಗಳೇ ಕಾಣುತ್ತಿರುವುದರಿಂದ, ಬಹಳ ಆಳವಿರುವಂತೆ ತೋರುವುದಿಲ್ಲ. ನಾವು ದೋಣಿಯಿಲ್ಲದೆ ಇದನ್ನು ಹಾದು ಹೋಗುವುದಕ್ಕೆ ದಾರಿಯೆಲ್ಲಿ?" ಎಂದು ಕೇಳಿದನು. ಅದಕ್ಕೆ ಮಹರ್ಷಿಯು "ಎಲೈ ರಾಮನೆ! ಅದೋ ನೋಡು! ಆ ಮಹರ್ಷಿಗಳು ಹೋಗುತ್ತಿರುವರು. ನಾನು ಉದ್ದೇಶಿಸಿದ್ದುದೂ ಅದೇ ದಾರಿಯು" ಎಂದನು. ಹಾಗೆಯೇ ಅವರೆಲ್ಲರೂ ಋಷಿಗಳೊಡನೆ ಒಂದಾಗಿ ಕಲೆತು, ಆ ಹೊಳೆಯನ್ನು ದಾಟಿ, ಅನೇಕ ತಪೋವನಗಳನ್ನೂ ಕಾಡುಗಳನ್ನೂ ನೋಡುತ್ತಾ, ದಾರಿ ನಡೆದು ಪ್ರಯಾಣ ಮಾಡಿದರು.

ಹೀಗೆ ಬಹುದೂರ ಹೋದ ಮೇಲೆ, ಮಧ್ಯಾಹ್ನ ಕಾಲವು ಪ್ರಾಪ್ತವಾಗಲು ಮುಂದೆ ಅನೇಕ ಮಹರ್ಷಿಗಳಿಂದ ಸೇವಿಸಲ್ಪಡುತ್ತಿರುವ ಗಂಗಾನದಿಯು ಇವರಿಗೆ ಕಾಣಿಸಿತು. ನದಿಗಳೊಳಗೆಲ್ಲಾ ಅತಿ ಶ್ರೇಷ್ಠವೆನಿಸಿ, ಪರಿಶುದ್ಧವಾದ ನೀರಿನಿಂದ ತುಂಬಿ, ಹಂಸ ಸಾರಸಾದಿ ಜಲಚರಗಳಿಂದ ಮನೋಹರವಾದ ಗಂಗಾನದಿಯನ್ನು ನೋಡಿ, ಋಷಿಗಳೆಲ್ಲರೂ ಬಹಳ ಸಂತೋಷವುಳ್ಳವರಾಗಿ, ರಾಮಲಕ್ಷ್ಮಣರೊಡಗೂಡಿ ಅಲ್ಲಿಯೇ ಇಳಿದರು. ಆ ಮೇಲೆ ಋಷಿಗಳೆಲ್ಲರೂ ಮಾಧ್ಯಾಹ್ನಿಕ ಸ್ನಾನವನ್ನು ಮಾಡಿ, ಪಿತೃತರ್ಪಣಗಳನ್ನೂ, ಅಗ್ನಿಹೋತ್ರವನ್ನೂ ತೀರಿಸಿಕೊಂಡ ಮೇಲೆ, ಅಲ್ಲಿ ಅಮೃತದಂತೆ ರುಚಿಕರವಾದ ಹೋಮಶೇಷವನ್ನೇ ಎಲ್ಲರೂ ಭುಜಿಸಿ, ಸಂತೋಷದಿಂದ ಆ ಗಂಗಾತೀರದಲ್ಲಿಯೇ ವಿಶ್ವಾಮಿತ್ರನ ಸುತ್ತಲೂ ಕುಳಿತುಕೊಂಡರು. ಆಗ ರಾಮನು ವಿಶ್ವಾಮಿತ್ರನನ್ನು ನೋಡಿ, "ಎಲೈ ಮಹಾತ್ಮನೆ! ಈ ಗಂಗಾನದಿಗೆ 'ತ್ರಿಪಥಗೆ' ಯೆಂಬ ಹೆಸರು ಬರುವುದಕ್ಕೆ ಕಾರಣವೇನು? ಈ ನದಿಯು ಮೂರು ದಾರಿಗಳಲ್ಲಿ ಪ್ರವಹಿಸಿದುದು ಹೇಗೆ? ಈ ವೃತ್ತಾಂತವನ್ನು ನಮಗೆ ತಿಳಿಸಬೇಕು" ಎಂದು ಕೇಳಿದನು. ಈ ಮಾತನ್ನು ಕೇಳಿದ ವಿಶ್ವಾಮಿತ್ರನು ಆ ಗಂಗೆಯು ಹುಟ್ಟಿಬೆಳೆದ ವೃತ್ತಾಂತವೆಲ್ಲವನ್ನೂ ಹೇಳಲಾರಂಭಿಸಿ, "ಎಲೈ ರಾಮನೇ ಕೇಳು! ಹಿಮವಂತವೆಂಬ ಒಂದು ಪರ್ವತಶ್ರೇಷ್ಠವುಂಟು. ಅದು ಅನೇಕ ಗೈರಿಕಾದಿ ಧಾತುಗಳಿಗೆಲ್ಲಾ ಆಶ್ರಯವಾದುದು. ಅದಕ್ಕೆ ಎಣೆಯಿಲ್ಲದ ಸೌಂದರ್ಯವುಳ್ಳ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದರು. ಆ ಕನ್ನಿಕೆಯರಿಬ್ಬರೂ ಮೇರುಪರ್ವತದ ಮಗಳಾದ ಮನೋರಮೆಯೆಂಬವಳಲ್ಲಿ ಜನಿಸಿದರು. ಅವರಲ್ಲಿ ಗಂಗೆಯೆಂಬವಳೇ ಹಿರಿಯಳು. ಕಿರಿಯವಳಿಗೆ ಉಮೆಯೆಂದು ಹೆಸರು. ದೇವತೆಗಳು ತಮ್ಮ ಕಾರ್ಯಾರ್ಥವಾಗಿ ಈ ಗಂಗೆಯನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋಗುವುದಾಗಿ ಹಿಮವಂತನನ್ನು ಪ್ರಾರ್ಥಿಸಲು, ಹಿಮವಂತನು ಮೂರು ಲೋಕಕ್ಕೂ ಕ್ಷೇಮವನ್ನುಂಟುಮಾಡಬೇಕೆಂಬ ಧರ್ಮಬುದ್ಧಿಯಿಂದ ಲೋಕಪಾವನೆಯಾಗಿಯೂ, ಇಷ್ಟ ಬಂದ ಕಡೆಗೆ ಹೋಗುವ ಶಕ್ತಿಯುಳ್ಳವಳಾಗಿಯೂ ಇರುವ ತನ್ನ ಮಗಳಾದ ಗಂಗೆಯನ್ನು ದೇವತೆಗಳ ವಶಕ್ಕೆ ಒಪ್ಪಿಸಿಬಿಟ್ಟನು. ಆಗ ದೇವತೆಗಳೆಲ್ಲರೂ ಪರಮ ಸಂತೋಷದಿಂದ ಆ ಗಂಗೆಯನ್ನು ಸ್ವರ್ಗಲೋಕಕ್ಕೆ ಕರೆದುಕೊಂಡು ಹೋದರು. ಮತ್ತೊಬ್ಬ ಕನ್ಯೆ

ಯಾದ ಉಮೆಯೆಂಬುವಳು ಶಿವನನ್ನು ಕುರಿತು ಬಹಳ ಉಗ್ರವಾದ ಒಂದು ತಪಸ್ಸನ್ನು ಮಾಡಲು, ಆಕೆಯ ತಂದೆಯು ಅವಳನ್ನು ಆ ಮಹೇಶ್ವರನಿಗೇ ಕೊಟ್ಟು ಮದುವೆ ಮಾಡಿದನು. ಎಲೈ ರಾಮನೆ! ಹಿಮವಂತನ ಮಕ್ಕಳಾದ ಗಂಗೆ, ಉಮೆ ಎಂಬೀಕನ್ನೆಯರ ಚರಿತ್ರವೆಲ್ಲವನ್ನೂ ನಿಮಗೆ ತಿಳಿಸಿದೆನು. ಆ ಗಂಗೆಗೆ ಮೊದಲು ಸ್ವರ್ಗಲೋಕ ಸಂಚಾರವು ಹೇಗಾಯಿತೆಂಬುದು ಇದರಿಂದ ಸ್ಪಷ್ಟವಾಯಿತಲ್ಲವೆ? ಹೀಗೆ ಪಾಪವಿನಾಶಿನಿಯಾಗಿಯೂ ಯಾವಾಗಲೂ ಜಲಸಮೃದ್ಧವಾಗಿಯೂ ಇರುವ ಪರ್ವತಪುತ್ರಿಯಾದ ಆ ಗಂಗಾನದಿಯು ಆಗಿನಿಂದ ದೇವನದಿಯೆಂಬ ಪ್ರಸಿದ್ಧಿಯನ್ನು ಹೊಂದಿ ಸ್ವರ್ಗಲೋಕದಲ್ಲಿ ಪ್ರವಹಿಸುತ್ತಿದ್ದಳು" ಎಂದನು.

ಸರ್ಗ ೩೬

ಪಾರ್ವತೀ ವೃತ್ತಾಂತವು.

ವಿಶ್ವಾಮಿತ್ರನು ಹೀಗೆ ಹೇಳಿದ ಕಥೆಯನ್ನು ಆ ರಾಮಲಕ್ಷ್ಮಣರಿಬ್ಬರೂ ಬಹಳವಾಗಿ ಕೊಂಡಾಡಿ, ಪುನಃ ಆತನನ್ನು ಕುರಿತು, "ಎಲೈ ಮಹಾತ್ಮನೆ! ಪರ್ವತರಾಜನ ಜ್ಯೇಷ್ಠಪುತ್ರಿಯಾದ ಗಂಗಾದೇವಿಯ ವೃತ್ತಾಂತವು ಬಹಳ ಶ್ರೇಷ್ಠವಾಗಿಯೂ ಧರ್ಮಯುಕ್ತವಾಗಿಯೂ ಇರುವುದು. ಆಕೆಯು ಸ್ವರ್ಗಲೋಕದಲ್ಲಿ ಸೇರಿದುದನ್ನು ಮಾತ್ರ ಹೇಳಿದೆಯಲ್ಲವೆ? ನೀನು ಆ ವೃತ್ತಾಂತವನ್ನೆಲ್ಲಾ ವಿವರವಾಗಿ ತಿಳಿದವನಾದುದರಿಂದ ಆ ಗಂಗಾನದಿಗೆ ಈ ಲೋಕದಲ್ಲಿಯೂ ಸ್ವರ್ಗಲೋಕದಲ್ಲಿಯೂ ನಡೆದ ಇತರ ವೃತ್ತಾಂತಗಳನ್ನೂ ನಮಗೆ ವಿವರವಾಗಿ ತಿಳಿಸಬೇಕು. ಮತ್ತು ಆಕೆಯು ಈ ಮೂರು ಲೋಕಗಳಲ್ಲಿಯೂ ಪ್ರವಹಿಸಿದುದಕ್ಕೆ ಕಾರಣವೇನು? ಲೋಕಪಾವನೆಯಾದ ಆ ನದಿಯು ಅಲ್ಲಲ್ಲಿ ಮಾಡಿದ ಕೆಲಸಗಳೇನು? ಮತ್ತು ಗಂಗೆಯು ಸಮಸ್ತ ನದಿಗಳಲ್ಲಿಯೂ ಮೇಲೆನಿಸಿಕೊಂಡುದಕ್ಕೆ ಕಾರಣವೇನು?" ಎಂದರು. ಹೀಗೆ ಕೇಳಿದ ರಾಮನನ್ನು ನೋಡಿ ವಿಶ್ವಾಮಿತ್ರನು ಆ ಋಷಿಗಳ ಮಧ್ಯದಲ್ಲಿ ಆ ಕಥೆಯೆಲ್ಲವನ್ನೂ ವಿವರವಾಗಿ ತಿಳಿಸಲುಪಕ್ರಮಿಸಿದನು. "ಎಲೈ ರಾಮನೆ! ಕೇಳು. ಪೂರ್ವದಲ್ಲಿ ಮಹಾ ತಪಸ್ವಿಯಾದ ರುದ್ರನು ಪಾರ್ವತಿಯನ್ನು ಮದುವೆ ಮಾಡಿಕೊಂಡು ಸುಖವಾಗಿರಲು ಅನೇಕ ವರ್ಷಗಳವರೆಗೆ ಮಕ್ಕಳಾಗ

ಲಿಲ್ಲ. ಆಗ ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ರುದ್ರನ ಬಳಿಗೆ ಬಂದು ನಮಸ್ಕರಿಸಿ, "ಎಲೈ ದೇವದೇವನಾದ ಮಹೇಶ್ವರನೆ! ನೀನು ಸಮಸ್ತ ಲೋಕಗಳನ್ನೂ ರಕ್ಷಿಸತಕ್ಕವನಾದುದರಿಂದ ನಾವೆಲ್ಲರೂ ನಿನ್ನಲ್ಲಿಯೇ ಮರೆಹೊಕ್ಕಿರುವೆವು. ನಮ್ಮಲ್ಲಿ ಪ್ರಸನ್ನನಾಗಿ ಅನುಗ್ರಹಿಸ ಬೇಕು. ನಿನ್ನ ಪುತ್ರನ ಪ್ರತಾಪವನ್ನು ಈ ಭೂಮಿಯು ತಡೆಯ ಲಾರದು. ಆದುದರಿಂದ ನೀನು ಸಂತಾನ ಪ್ರಯತ್ನವನ್ನು ಬಿಟ್ಟು, ವೇದೋಕ್ತವಾದ ಯೋಗವನ್ನೇ ಕೈಕೊಂಡು ಪಾರ್ವತಿಯೊಡನೆ ತಪಸ್ಸಿಗೆ ಹೋಗಬೇಕು. ನೀನು ಲೋಕ ಕ್ಷೇಮವನ್ನು ಬಯಸತಕ್ಕವನಾದರೆ, ನಿನ್ನ ಶಕ್ತಿಯನ್ನು ತೇಜೋಮಯವಾದ ನಿನ್ನ ದೇಹದಲ್ಲಿಯೇ ಅಡಗಿಸಿಕೊಳ್ಳ ಬೇಕೇ ಹೊರತು ಹೊರಕ್ಕೆ ಬಿಟ್ಟರೆ ಈ ಮೂರು ಲೋಕಗಳೂ ನಾಶ ಹೊಂದುವುವು. ಆದುದರಿಂದ ಈ ಸಮಸ್ತ ಲೋಕಗಳನ್ನೂ ದಯೆಯಿಂದ ರಕ್ಷಿಸು" ಎಂದು ಪ್ರಾರ್ಥಿಸಿದರು. ಹೀಗೆ ದೇವತೆಗಳು ಹೇಳಿದುದನ್ನು ಸರ್ವಲೋಕೇಶ್ವರನಾದ ರುದ್ರನು ಕೇಳಿ "ಎಲೈ ದೇವತೆಗಳೇ! ಹಾಗೆಯೇ ಆಗಲಿ! ಸಮಸ್ತ ಲೋಕಗಳೂ ಕ್ಷೇಮದಿಂದಿರಲಿ! ಆದರೆ ಇಷ್ಟ ರೊಳಗಾಗಿಯೇ ನನ್ನ ಶಕ್ತಿಯ ಕಣವೊಂದು ಮಾತ್ರ ಹೊರಕ್ಕೆ ಬಿದ್ದಿರುವುದ ರಿಂದ, ಅದನ್ನು ಪುನಃ ನನ್ನ ದೇಹದಲ್ಲಿ ಸೇರಿಸಿಕೊಳ್ಳುವುದಸಾಧ್ಯವು. ಆ ಶಕ್ತಿಯ ಪ್ರತಾಪವನ್ನು ತಡೆಯಬಲ್ಲವರಾರು? ಅದನ್ನು ನೀವೇ ನಿರ್ಧರಿಸ ಬೇಕು" ಎಂದನು. ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ರುದ್ರನನ್ನು ಕುರಿತು "ಎಲೈ ವೃಷಭಧ್ವಜನೆ! ಆ ಶಕ್ತಿಯನ್ನು ಭೂಮಿಯೇ ಧರಿಸುವಳು" ಎನಲು, ರುದ್ರನು ಆ ಶಕ್ತಿಯನ್ನು ಭೂಮಿಯ ಮೇಲೆ ಬಿಟ್ಟುಕೊಡಲು, ಅದು ಸಮಸ್ತ ಪರ್ವತಗಳನ್ನೂ ಕಾಡುಗಳನ್ನೂ ವ್ಯಾಪಿಸಿ ದಹಿಸಲಾರಂಭಿಸಿತು. ಆಗ ದೇವತೆಗಳೆಲ್ಲರೂ ಭಯಪಟ್ಟು ಅಗ್ನಿಯನ್ನು ಕುರಿತು; "ಎಲೈ ಅಗ್ನಿಯೆ! ನೀನು ವಾಯುವಿನೊಡಗೂಡಿ ಈ ಶಿವನ ಶಕ್ತಿಯನ್ನು ಪ್ರವೇಶಿಸು" ಎಂದು ಹೇಳಿದರು. ಒಡನೆಯೇ ಅಗ್ನಿಯು ಅದನ್ನು ವ್ಯಾಪಿಸಲು, ಅದು ಒಂದು ಶ್ವೇತಪರ್ವತವಾಗಿ ನಿಂತಿತು. ಆ ಮೇಲೆ ಆ ಶಕ್ತಿಯೇ ಕಾಲವಶದಿಂದ ಸೂರ್ಯಾಗ್ನಿಗಳಿಗೆ ಸಮಾನವಾದ ಕಾಂತಿಯುಳ್ಳ ಮತ್ತು ದಿವ್ಯವಾದ ಒಂದು ಸೊದೇ ಹುಲ್ಲಿನ ಕಾಡಾಗಿ ಪರಿ ಣಮಿಸಿತು. ಆಗಲೇ ಕೃತ್ತಿಕಾಪುತ್ರನಾಗಿಯೂ, ಅಗ್ನಿಸಂಭವನಾಗಿಯೂ

ಇರುವ ಷಣ್ಮುಖನು ಹುಟ್ಟಿದನು. ದೇವತೆಗಳೆಲ್ಲರೂ ಪಾರ್ವತೀ ಪರಮೇಶ್ವರರ ಕೋಪ ಶಮನಾರ್ಥವಾಗಿ ಸ್ತೋತ್ರ ಮಾಡಿದರು. ಆದರೂ ಪಾರ್ವತಿಯು ಕೋಪದಿಂದ ದೇವತೆಗಳನ್ನು ನೋಡಿ, "ಎಲೈ ದೇವತೆಗಳೆ! ನಮ್ಮ ಸೌಖ್ಯಕ್ಕೆ ನೀವು ಭಂಗವುಂಟುಮಾಡಿದುದರಿಂದ ಈ ನಿಮ್ಮ ಅಪರಾಧಕ್ಕೆ ತಕ್ಕ ಫಲವನ್ನು ಅನುಭವಿಸಿರಿ" ಎಂದು ಕೈಯಲ್ಲಿ ಶಾಪ ಜಲವನ್ನು ಹಿಡಿದು, ಕೆಂಪಾದ ಕಣ್ಣುಳ್ಳವಳಾಗಿ, ಪುನಃ ಆ ದೇವತೆಗಳನ್ನು ಕುರಿತು "ನಾವು ಪುತ್ರಾಪೇಕ್ಷೆಯಿಂದ ಅನುಭವಿಸುತ್ತಿದ್ದ ದಾಂಪತ್ಯಸೌಖ್ಯವನ್ನು ನೀವು ತಪ್ಪಿಸಿದುದರಿಂದ, ನಿಮ್ಮ ನಿಮ್ಮ ಪತ್ನಿಯರಲ್ಲಿಯೂ ನಿಮಗೆ ಪುತ್ರರುಂಟಾಗದಿರಲಿ! ಇದು ಮೊದಲುಗೊಂಡು ನಿಮ್ಮ ಪತ್ನಿಯರೆಲ್ಲರೂ ಬಂಜೆಯರಾಗಿರಲಿ!" ಎಂದು ಶಪಿಸಿದಳು. ಆ ಮೇಲೆ ಭೂಮಿಯನ್ನು ನೋಡಿ; "ಎಲೈ ಭೂಮಿಯೆ! ನೀನೂ ನನ್ನ ಪುತ್ರೋತ್ಪತ್ತಿಗೆ ಭಂಗವನ್ನು ಬಯಸಿದೆಯಾದುದರಿಂದ, ಒಂದೇ ರೂಪದಲ್ಲಿಲ್ಲದೆ, ಚೌಳು ಮುಂತಾದ ರೂಪಗಳನ್ನು ಹೊಂದಿ, ಅನೇಕ ರಾಜರಿಗೆ ಹೆಂಡತಿಯಾಗಿರು! ನಿನಗೂ ಪುತ್ರಸಂತೋಷವಿಲ್ಲದಿರಲಿ!" ಎಂದು ಶಪಿಸಿದಳು. ಹೀಗೆ ಶಾಪಹೊಂದಿದ ದೇವತೆಗಳೆಲ್ಲರೂ ನಾಚಿಕೆಗೊಂಡು ದುಃಖಿತರಾಗಿರುವುದನ್ನು ನೋಡಿ, ರುದ್ರನು ತನ್ನಲ್ಲಿ ತಾನು "ಪತ್ನಿಯಾದ ಪಾರ್ವತಿಯು ಕೊಟ್ಟ ಶಾಪವನ್ನು ತಪ್ಪಿಸುವುದಕ್ಕೂ ಇಲ್ಲ; ದೇವತೆಗಳ ದುಃಖವನ್ನು ನೋಡುವುದಕ್ಕೂ ಕಷ್ಟವಾಗಿರುವುದು" ಎಂದು ಯೋಚಿಸಿ, ವರುಣನಿಂದ ರಕ್ಷಿಸಲ್ಪಟ್ಟ ಪಶ್ಚಿಮದಿಕ್ಕಿಗೆ ಹೋಗಿ, ಅಲ್ಲಿ ಹಿಮವತ್ಪರ್ವತದ ಉತ್ತರ ಶಿಖರದಲ್ಲಿ ಪಾರ್ವತಿಯೊಡಗೂಡಿ ತಪಸ್ಸನ್ನು ಮಾಡುತ್ತಿರುವುದಾಗಿ ನಿಶ್ಚಯಿಸಿಕೊಂಡನು. "ಎಲೈ ರಾಮನೆ! ಪಾರ್ವತೀ ವೃತ್ತಾಂತವೆಲ್ಲವನ್ನೂ ಈಗ ವಿಸ್ತಾರವಾಗಿ ನಿನಗೆ ತಿಳಿಸಿರುವೆನು. ಇನ್ನು ಗಂಗಾನದಿಯ ಪ್ರಭಾವವನ್ನೂ, ಗಂಗೆಯಲ್ಲಿ ಕುಮಾರಸ್ವಾಮಿಯು ಹುಟ್ಟಿದುದನ್ನೂ ಹೇಳುವೆನು ಕೇಳು," ಎಂದನು.

ಸರ್ಗ ೩೭

ಕುಮಾರೋತ್ಪತ್ತಿ ವೃತ್ತಾಂತವು.

ಶಿವನು ಹೀಗೆ ತಪಸ್ಸು ಮಾಡುತ್ತಿರುವಾಗ ಇಂದ್ರಾಗ್ನಿಗಳೇ ಮೊದಲಾದ ದೇವತೆಗಳೂ, ಋಷಿಗಳೂ ಒಟ್ಟುಗೂಡಿ ತಮಗೆ ಒಬ್ಬ ಸೇನಾ

ಪತಿಯು ಬೇಕೆಂಬ ಉದ್ದೇಶದಿಂದ ಮಹಾತ್ಮನಾದ ಬ್ರಹ್ಮನ ಸಮೀಪಕ್ಕೆ ಹೋದರು. ಆತನಿಗೆ ನಮಸ್ಕರಿಸಿ "ಎಲೈ ದೇವನೆ! ಪೂರ್ವದಲ್ಲಿ ನೀನು ನಮಗೆ ಸೇನಾಪತಿಯಾಗಿ ಅನುಗ್ರಹಿಸಿದ ಆ ರುದ್ರನು ಇನ್ನೂ ಹಿಮವತ್ಪರ್ವತದ ಶಿಖರದಲ್ಲಿ ಪಾರ್ವತಿಯೊಡನೆ ಕೂಡಿ ದೊಡ್ಡ ತಪಸ್ಸನ್ನು ಮಾಡುತ್ತಿರುವನು. ಆದುದರಿಂದ ಲೋಕ ಕ್ಷೇಮಕ್ಕಾಗಿ ಈಗ ಮಾಡಬೇಕಾದುದೇನೆಂಬುದನ್ನು ನೀನೇ ಯೋಚಿಸಬೇಕಾಗಿರುವುದು. ನೀನಲ್ಲದೆ ನಮಗೆ ಬೇರೆ ಗತಿಯಾರು?" ಎಂದರು. ಆಗ ಬ್ರಹ್ಮನು ದೇವತೆಗಳನ್ನು ಮೃದುವಾದ ಮಾತುಗಳಿಂದ ಸಮಾಧಾನಪಡಿಸುತ್ತಾ "ಎಲೈ ದೇವತೆಗಳಿರಾ! ಶಿವನು ಉಗ್ರವಾದ ತಪಸ್ಸನ್ನು ಮಾಡುತ್ತಿರುವುದರಿಂದ ಅದನ್ನು ತಪ್ಪಿಸುವುದು ನಮ್ಮಿಂದ ಸಾಧ್ಯವಲ್ಲ. ಇದೂ ಅಲ್ಲದೆ ದೇವತೆಗಳಲ್ಲಿ ಮಕ್ಕಳು ಹುಟ್ಟದಿರಲೆಂದು ಪಾರ್ವತಿಯು ಕೊಟ್ಟ ಶಾಪವೂ ಕೂಡ ತಪ್ಪತಕ್ಕದಲ್ಲ. ಹೀಗಿದ್ದರೂ ನೀವು ಚಿಂತಿಸಬೇಡಿರಿ. ಅಗ್ನಿಯು ಆಕಾಶ ಗಂಗೆಯಲ್ಲಿ ಒಬ್ಬ ಪುತ್ರನು ಜನಿಸುವಂತೆ ಮಾಡುವನು. ಅವನೇ ನಿಮಗೆ ಸೇನಾಪತಿಯಾಗುವನು. ಇದರಲ್ಲಿ ಯಾವ ಸಂದೇಹವೂ ಇಲ್ಲ. ಗಂಗೆಯು ಪರ್ವತರಾಜನಿಗೆ ಹಿರಿಯ ಮಗಳಾದುದರಿಂದ ಅವಳು ಬಹಳ ಪ್ರೀತಿಯಿಂದ ಆ ಮಗನನ್ನು ಪೋಷಿಸಿ ವೃದ್ಧಿಗೆ ತರುವಳು. ಪಾರ್ವತಿಗೂ ಇದು ಇಷ್ಟವಾಗಿರುವುದರಲ್ಲಿ ಸಂದೇಹವೇನೂ ಇರದು" ಎಂದನು. ಈ ಮಾತನ್ನು ಕೇಳಿ ದೇವತೆಗಳೆಲ್ಲರೂ ಇನ್ನು ತಮ್ಮ ಕೆಲಸವು ಕೈಗೂಡಿತೆಂದು ಬಹಳ ಸಂತೋಷದಿಂದ ಬ್ರಹ್ಮನಿಗೆ ನಮಸ್ಕರಿಸಿ ಅಲ್ಲಿಂದ ಹೊರಟು ಅನೇಕ ಗೈರಿಕಾದಿಗಳಿಂದ ಪ್ರಕಾಶಿಸುತ್ತಿರುವ ಕೈಲಾಸಪರ್ವತಕ್ಕೆ ಹೋಗಿ ಪುತ್ರನನ್ನು ಪಡೆಯುವುದಕ್ಕಾಗಿ ಪರಮೇಶ್ವರ ತೇಜಸ್ಸಿನಲ್ಲಿ ರೂಪಾಂತರದಿಂದ ಅಡಗಿರುವ ಅಗ್ನಿಯನ್ನು ಕುರಿತು "ಎಲೈ ಅಗ್ನಿಯೆ! ನಿನ್ನಿಂದ ದೇವತೆಗಳಿಗೆ ಒಂದು ದೊಡ್ಡ ಕೆಲಸವಾಗಬೇಕಾಗಿರುವುದು. ಅದೇನೆಂದರೆ ರುದ್ರಾಂಶದಿಂದ ಹುಟ್ಟಿ ನಿನ್ನಲ್ಲಡಗಿರುವ ತೇಜಸ್ಸನ್ನು ಪರ್ವತರಾಜನ ಹಿರಿಯ ಮಗಳಾದ ಗಂಗಾನದಿಯಲ್ಲಿ ಬಿಟ್ಟುಬಿಡು" ಎಂದು ಕೇಳಿಕೊಳ್ಳಲು ಅಗ್ನಿಯು ಹಾಗೆಯೇ ಆಗಲೆಂದು ದೇವತೆಗಳಿಗೆ ಅಭಯವನ್ನು ಕೊಟ್ಟನು. ಆಮೇಲೆ ಗಂಗೆಯ ಬಳಿಗೆ ಬಂದು "ಎಲೆ ದೇವಿ! ನಾನು ನಿನ್ನಲ್ಲಿ ಒಂದು ತೇಜಸ್ಸನ್ನು ಬಿಡುವೆನು. ಅದನ್ನು ಗರ್ಭದಲ್ಲಿ ಧರಿಸು. ಇದರಿಂದ ದೇವತೆಗಳಿಗೆ ಬಹಳ ಕ್ಷೇಮವುಂಟು"

ಎಂದನು. ಅದನ್ನು ಕೇಳಿ ಗಂಗೆಯು ದಿವ್ಯವಾದ ಒಂದು ಸ್ತ್ರೀ ರೂಪ ವನ್ನು ಧರಿಸಲು ಅಗ್ನಿಯು ಅವಳ ಎಲ್ಲಾ ಅವಯುವಗಳಿಗೂ ವ್ಯಾಪಿಸು ವಂತೆ ತನ್ನಲ್ಲಿದ್ದ ರುದ್ರ ತೇಜಸ್ಸನ್ನು ಬಿಟ್ಟನು. ಹಾಗೆಯೇ ಗಂಗಾ ನದಿಯ ಅಂಗಾಂಗಗಳೊಳಗೆಲ್ಲಾ ಅದು ವ್ಯಾಪಿಸಿತು. ಆಗ ಗಂಗೆಯು ದೇವತೆಗಳಿಗೆ ಪುರೋಹಿತನಾದ ಆ ಅಗ್ನಿಯನ್ನು ನೋಡಿ, 'ಎಲೈ ಅಗ್ನಿಯೇ ಈ ತೇಜಸ್ಸನ್ನು ನಾನು ತಡೆಯಲಾರೆನು. ಇದು ನನ್ನ ದೇಹವನ್ನೆಲ್ಲಾ ಸುಡುತ್ತಿರುವುದು' ಎಂದು ಬಹಳ ಸಂಕಟದಿಂದ ಹೇಳಿದಳು. ಆಗ ಅಗ್ನಿಯು ಆ ಗಂಗೆಯನ್ನು ಕುರಿತು "ಎಲೈ ಗಂಗೆ! ಇದೋ ಹಿಮವತ್ಪರ್ವತದ ಪಾದದಲ್ಲಿಯೇ ಆ ಗರ್ಭವನ್ನು ಬಿಟ್ಟು ಬಿಡು," ಎನಲು ಒಡನೆಯೇ ಆ ಗಂಗೆಯು ಮಹಾ ತೇಜಸ್ಸುಳ್ಳ ಆ ಗರ್ಭವನ್ನು ಅಲ್ಲಿಯೇ ಬಿಟ್ಟುಬಿಟ್ಟಳು. ಆ ಗರ್ಭವನ್ನು ಬಿಡುವಾಗ ಅವಳ ದೇಹದಿಂದ ಬಿದ್ದ ರಕ್ತ ಮುಂತಾದುವುಗಳು ಉತ್ಕೃಷ್ಟವಾದ ಸುವರ್ಣ ರೂಪವನ್ನು ಹೊಂದಿ ಭೂಮಿಯಲ್ಲಿ ಸೇರಿತು. ಈ ತೇಜಸ್ಸಿನ ಕಾವಿ ನಿಂದಲೇ ತಾಮ್ರ ಕಬ್ಬಿಣ ಮುಂತಾದುವುಗಳೆಲ್ಲವೂ ಹುಟ್ಟಿದುವು. ಅದ ರಿಂದ ಉಂಟಾದ ಮಲವೇ ತವರವಾಗಿಯೂ ಸೀಸವಾಗಿಯೂ ಪರಿಣಮಿ ಸಿತು. ಇದರಿಂದಲೇ ಇನ್ನೂ ಅನೇಕ ಗೈರಿಕಾದಿ ಧಾತುಗಳೂ ಹುಟ್ಟಿ ದುವು. ಈ ಗರ್ಭವನ್ನಿಟ್ಟಕೂಡಲೆ ಆ ಶ್ವೇತಪರ್ವತದಲ್ಲಿದ್ದ ವನವೆಲ್ಲವೂ ಸುವರ್ಣಮಯುವಾಯಿತು. ಎಲೈ ಪುರುಷಶ್ರೇಷ್ಠನೆ! ಅದು ಹೀಗೆ ಸುವರ್ಣವೆಂಬ ರೂಪಾಂತರವನ್ನು ಹೊಂದಿದುದರಿಂದಲೇ ಅದು ಮೊದಲು ಗೊಂಡು ಅದಕ್ಕೆ ಜಾತರೂಪವೆಂಬ ಹೆಸರುಂಟಾಯಿತು. ಈ ಕಾರಣ ದಿಂದಲೇ ಆ ಸುವರ್ಣಕ್ಕೆ ಅಗ್ನಿಯ ಹಾಗಿರುವ ಕಾಂತಿಯೂ ಉಂಟಾ ಯಿತು. ಆ ಶ್ವೇತಪರ್ವತದಲ್ಲಿದ್ದ ತೃಣ, ವೃಕ್ಷ, ಲತಾ, ಗುಲ್ಮಾದಿಗಳೆಲ್ಲವೂ ಸುವರ್ಣಮಯುವಾದುವು. ಅದರಲ್ಲಿ ಹುಟ್ಟಿದ ಕುಮಾರಸ್ವಾಮಿಗೆ ಸ್ತನ್ಯ ವನ್ನು ಕೊಡುವುದಕ್ಕಾಗಿ ಇಂದ್ರನೇ ಮೊದಲಾದ ದೇವತೆಗಳೆಲ್ಲರೂ ಸೇರಿ ಕೃತ್ತಿಕೆಗಳೆಂಬ ನಕ್ಷತ್ರದೇವತೆಗಳನ್ನು ನಿಯಮಿಸಿದರು. ಆ ಕೃತ್ತಿಕೆ ಯರೂ ಕೂಡ ಮಹಾ ತೇಜಸ್ವಿಯಾದ ಈ ಶಿಶುವು ತಮಗೆ ಪುತ್ರನಾಗಿರ ಬೇಕೆಂದು ಕೇಳಿಕೊಳ್ಳಲು, ದೇವತೆಗಳು ಹಾಗೆಯೇ ಆಗಲೆಂದೊಪ್ಪಿದ ಮೇಲೆ, ಅವರು ಹಾಲನ್ನು ಕೊಡುತ್ತಾ ಬರಲು, ದೇವತೆಗಳೆಲ್ಲರೂ ಆ

ಶಿಶುವು ಕಾರ್ತಿಕೇಯನೆಂದೇ ಲೋಕದಲ್ಲಿ ಪ್ರಸಿದ್ಧನಾಗಲೆಂದು ಅನುಗ್ರಹಿಸಿದರು. ಮಹಾ ಕಾಂತಿಯುಕ್ತವಾದ ಆ ಶಿಶುವು ಗರ್ಭಸ್ರಾವದಿಂದ ಹುಟ್ಟಿ ಬೆಳೆದುದರಿಂದ ದೇವತೆಗಳೆಲ್ಲರೂ ಅವನನ್ನು ಸ್ಕಂದನೆಂದೂ (ಗರ್ಭದಿಂದ ಜಾರಿ ಬಿದ್ದವನು) ಕರೆಯಲಾರಂಭಿಸಿದರು. ಹೀಗೆ ಗರ್ಭಸ್ರಾವದಿಂದುಂಟಾದ ಆತನ ದೇಹದ ಮೇಲಿನ ಕೊಳೆಯೆಲ್ಲವನ್ನೂ ಹೋಗಲಾಡಿಸುವುದಕ್ಕಾಗಿ ಆ ಕೃತ್ತಿಕೆಯರು ಆತನ ಮೈಯನ್ನು ಚೆನ್ನಾಗಿ ತೊಳೆದು ಹಾಲು ಕೊಡುವುದಕ್ಕಾರಂಭಿಸಿದಾಗ, ಆ ಕೃತ್ತಿಕಾದೇವತೆಯರು ಆರು ಮಂದಿಯಿದ್ದುದರಿಂದ, ಆ ಆರು ಸ್ತ್ರೀಯರ ಸ್ತನ್ಯವನ್ನೂ ಆರು ಮುಖಗಳಿಂದ ಈತನು ಕುಡಿಯಲಾರಂಭಿಸಲು ಈತನಿಗೆ ಅಗಿನಿಂದ ಷಣ್ಮುಖನೆಂದು ಹೆಸರುಂಟಾಯಿತು. ಮಹಾ ತೇಜಸ್ವಿಯಾದ ಈ ಬಾಲಕನು ಸ್ತನ್ಯಪಾನವನ್ನು ಮಾಡಿ ಬಹಳ ಕೋಮಲವಾದ ಶರೀರವುಳ್ಳವನಾಗಿದ್ದರೂ ಶಿವಶಕ್ತಿಯಿಂದ ಹುಟ್ಟಿದವನಾದುದರಿಂದ ಬಾಲ್ಯದಲ್ಲಿಯೇ ಮಹಾ ಶಕ್ತಿಯುಳ್ಳವನಾಗಿ ಒಂದಾನೊಂದು ದಿವಸದಲ್ಲಿ ರಾಕ್ಷಸ ಸೈನ್ಯಗಳನ್ನೆಲ್ಲಾ ಗೆದ್ದನು. ಆಗ ಅಗ್ನಿಯೇ ಮೊದಲಾದ ದೇವತೆಗಳೆಲ್ಲರೂ ಸೇರಿ ಎಣೆಯಿಲ್ಲದ ಕಾಂತಿಯಿಂದ ಜ್ವಲಿಸುತ್ತಿರುವ ಈ ಕುಮಾರನನ್ನು ತಮ್ಮ ಸೈನ್ಯಕ್ಕೆ ಅಧಿಪತಿಯನ್ನಾಗಿ ಮಾಡಿದರು. ಎಲೈ ರಾಮನೆ! ಇದೀಗ ಗಂಗೆಯ ಮತ್ತು ಆಕೆಯಲ್ಲಿ ಹುಟ್ಟಿದ ಕುಮಾರಸ್ವಾಮಿಯ ವೃತ್ತಾಂತವು. ಇದೆಲ್ಲವನ್ನೂ ನಿನಗೆ ವಿಸ್ತಾರವಾಗಿ ಹೇಳಿರುವೆನು. ಈ ಕಥೆಯು ಬಹಳ ಪವಿತ್ರವಾದುದು. ಎಲೈ ಕಾಕುತ್ಸ್ಥನೆ! ಯಾವ ಮನುಷ್ಯನು ಈ ಮಹಾತ್ಮನಾದ ಕುಮಾರಸ್ವಾಮಿಯಲ್ಲಿ ಭಕ್ತಿಯನ್ನಿಟ್ಟು ಈ ಚರಿತ್ರಗಳನ್ನು ಕೇಳುವನೋ ಆತನು ಬಹುಕಾಲ ಪುತ್ರಪೌತ್ರ ಸಮೇತನಾಗಿ ಸಮಸ್ತ ಸುಖಗಳನ್ನೂ ಅನುಭವಿಸಿ ಕಡೆಗೆ ಆ ಷಣ್ಮುಖನ ಸಾಲೋಕ್ಯವನ್ನು ಹೊಂದುವನು.

ಸರ್ಗ ೩೮

ಸಗರ ವೃತ್ತಾಂತವು

ವಿಶ್ವಾಮಿತ್ರನು ರಾಮನಿಗೆ ಈ ಕಥೆಯನ್ನು ಹೇಳಿದ ಮೇಲೆ ಪುನಃ ಜ್ಞಾಪಿಸಿಕೊಂಡು ಮತ್ತೊಂದು ವಿಚಾರವನ್ನು ಹೇಳಲಾರಂಭಿಸಿ "ಎಲೈ ರಾಮನೆ! ಪೂರ್ವದಲ್ಲಿ ಮಹಾ ಧಾರ್ಮಿಕನಾದ ಸಗರನೆಂಬ ರಾಜನು

ಅಯೋಧ್ಯೆಯನ್ನಾಳುತ್ತಿದ್ದನು. ಆತನಿಗೆ ಬಹಳ ಕಾಲದವರೆಗೆ ಸಂತಾನವಾಗದುದರಿಂದ ಮಕ್ಕಳನ್ನು ಪಡೆಯಬೇಕೆಂಬ ಆಶೆಯು ಹುಟ್ಟಿತು. ಆತನಿಗೆ ವಿದರ್ಭರಾಜನ ಮಗಳಾದ ಕೇಶಿನಿಯೆಂಬುವಳೇ ಜ್ಯೇಷ್ಠಪತ್ನಿಯು. ಆಕೆಯು ಮಹಾ ಧರ್ಮಿಷ್ಠಳಾಗಿಯೂ ಸತ್ಯವಾದಿನಿಯಾಗಿಯೂ ಇದ್ದಳು. ಮತ್ತು ಅರಿಷ್ಟನೇಮಿಯೆಂಬವನ ಮಗಳಾದ ಸುಮತಿಯೆಂಬವಳು ಆತನಿಗೆ ಎರಡನೆಯ ಹೆಂಡತಿಯು. ಇವಳು ಎಣೆಯಿಲ್ಲದ ರೂಪದಿಂದ ಶೋಭಿಸುತ್ತಿದ್ದಳು. ಸಗರನು ಈ ಇಬ್ಬರು ಹೆಂಡತಿಯರೊಡಗೂಡಿ ಹಿಮವತ್ಪರ್ವತಕ್ಕೆ ಹೋಗಿ ಭೃಗುಪ್ರಸ್ರವಣವೆಂಬ ಆ ಪರ್ವತದ ಒಂದು ಪ್ರದೇಶದಲ್ಲಿ ಪುತ್ರಾರ್ಥಿಯಾಗಿ ದೊಡ್ಡ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ನೂರು ವರುಷಗಳು ಕಳೆಯಲು ಸತ್ಯವಂತನಾದ ಭೃಗುಮಹರ್ಷಿಯು ಇವನ ತಪಸ್ಸಿಗೆ ಮೆಚ್ಚಿ ಇವನ ಬಳಿಗೆ ಬಂದು ಸಗರನನ್ನು ನೋಡಿ "ಎಲೈ, ನಿರ್ದೋಷಿಯಾದ ಪುರುಷಶ್ರೇಷ್ಠನೆ! ನಿನಗೆ ಎಣೆಯಿಲ್ಲದ ಕೀರ್ತಿಯನ್ನುಂಟುಮಾಡತಕ್ಕ ಪುತ್ರಸಂತಾನವುಂಟಾಗುವುದು. ಆದರೆ ನಿನ್ನ ಇಬ್ಬರು ಹೆಂಡತಿಯರಲ್ಲಿ ಒಬ್ಬಳು ವಂಶೋದ್ಧಾರಕನಾದ ಒಬ್ಬ ಪುತ್ರನನ್ನೇ ಪಡೆಯುವಳು. ಮತ್ತೊಬ್ಬಳಲ್ಲಿ ಅರವತ್ತುಸಾವಿರ ಮಕ್ಕಳು ಹುಟ್ಟುವರು" ಎಂದು ವರಗಳನ್ನು ಕೊಟ್ಟನು. ಆಗ ಆ ರಾಜಪತ್ನಿಯರಿಬ್ಬರೂ ಕುತೂಹಲದಿಂದ ಭೃಗುವನ್ನು ನೋಡಿ, "ಎಲೈ, ಬ್ರಾಹ್ಮಣೋತ್ತಮನೆ! ನಮ್ಮಲ್ಲಿ ಯಾರಿಗೆ ಒಬ್ಬ ಮಗನು ಹುಟ್ಟುವನು? ಅರವತ್ತುಸಾವಿರ ಮಕ್ಕಳನ್ನು ಪಡೆಯುತಕ್ಕವಳಾವಳು? ಇದನ್ನು ವಿವರವಾಗಿ ನಮಗೆ ತಿಳಿಸಬೇಕು. ಮಹಾತ್ಮನಾದ ನಿನ್ನ ವಾಕ್ಯವು ಎಂದಿಗೂ ತಪ್ಪತಕ್ಕುದಲ್ಲ. ಆದುದರಿಂದ ಇದನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ನಮಗಿರುವುದು ಎಂದು ಕೈಮುಗಿದು ಪ್ರಾರ್ಥಿಸಿದರು. ಅದಕ್ಕಾ ಭೃಗುವು ಅವರನ್ನು ನೋಡಿ "ಎಲೈ! ಮಂಗಳಾಂಗಿಯರೆ! ನಿಮ್ಮ ನಿಮ್ಮ ಇಷ್ಟವನ್ನೇ ತಿಳಿಸಿರಿ. ವಂಶೋದ್ಧಾರಕನಾದ ಒಬ್ಬ ಮಗನನ್ನೇ ಅಪೇಕ್ಷಿಸಿದವರಿಗೆ ದೀರ್ಘಾಯುಷ್ಮಂತನಾದ ಆ ಒಬ್ಬ ಮಗನೇ ಹುಟ್ಟುವನು. ಹಾಗಿಲ್ಲದೆ ಮಹಾಬಲವುಳ್ಳವರಾಗಿಯೂ ಕೀರ್ತಿಯನ್ನು ಪಡೆಯತಕ್ಕವರಾಗಿಯೂ ಇರತಕ್ಕ ಮಕ್ಕಳನ್ನು ಅಪೇಕ್ಷಿಸಿದವರಿಗೆ ಅಂತಹ ಶೂರರಾದ ಮಕ್ಕಳೇ ಹುಟ್ಟುವರು

ರ ಹಿರಿಯ ಹೆಂಡತಿಯಾದ ಕೇಶಿನಿಯು ತನಗೆ ವಂಶೋದ್ಧಾರಕನಾದ
ಬ್ಬ ಪುತ್ರನೇ ಸಾಕೆಂದಳು. ಗರುಡನಿಗೆ ಒಡಹುಟ್ಟಿದವಳಾದ ಸುಮತಿ
ಂಬ ಕಿರಿಯ ಹೆಂಡತಿಯು ತನಗೆ ವೀರರಾದ ಅನೇಕ ಪುತ್ರರು ಹುಟ್ಟ
ಕೆಂದು ಬಯಸಿದಳು. ಹೀಗೆ ಪ್ರಾರ್ಥಿಸಿ ಋಷಿಗೆ ಪ್ರದಕ್ಷಿಣ ನಮಸ್ಕಾರ
ನ್ನು ಮಾಡಿ ಆತನ ಅನುಗ್ರಹವನ್ನು ಪಡೆದು ಸಗರ ಚಕ್ರವರ್ತಿಯು
ತ್ನಿಯರೊಡಗೂಡಿ ತನ್ನ ಪಟ್ಟಣಕ್ಕೆ ಹಿಂತಿರುಗಿದನು. ಕೆಲವು
ಲದ ಮೇಲೆ ಹಿರಿಯ ಹೆಂಡತಿಯಾದ ಕೇಶಿನಿಯು ಅಸಮಂಜಸನೆಂಬ
ಬ್ಬ ಮಗನನ್ನು ಪಡೆದಳು. ಸುಮತಿಗಾದರೋ ಸೋರೆಕಾಯಿಯಂತೆ
ಡಗೆ ದಪ್ಪನಾದ ಒಂದು ಪಿಂಡವು ಮಾತ್ರ ಗರ್ಭದಲ್ಲಿ ಬೆಳೆಯಲಾರಂಭಿ
. ಆ ಪಿಂಡವು ಬೆಳೆಯುತ್ತಿರುವಾಗಲೇ ಅವನ್ನು ಬಲಾತ್ಕಾರದಿಂದ
ೆದುಬಿಡಲು ಅದು ಅರವತ್ತುಸಾವಿರ ಭಾಗಗಳಾಗಿ ಒಡೆದು, ಅರು
ತ್ತು ಸಾವಿರ ಪುತ್ರರುಂಟಾದರು. ದಾದಿಯರು ಆ ಸಣ್ಣಮಕ್ಕಳೆಲ್ಲವನ್ನೂ
ಪ್ಪದ ಕೊಡಗಳಲ್ಲಿಟ್ಟು ಬೆಳೆಸಲು, ಬಹು ಕಾಲದ ಮೇಲೆ ಅವರೆಲ್ಲರೂ
ಾವನವನ್ನು ಹೊಂದಿದರು. ಎಲೈ ರಾಮನೆ! ಈ ಸಗರ ಪುತ್ರರಲ್ಲಿ
ಯುವನಾದ ಅಸಮಂಜನೆಂಬವನು ಪ್ರತಿದಿನವೂ ಬೀದಿಯಲ್ಲಿ ತಿರುಗು
ುವ ಸಣ್ಣಸಣ್ಣ ಮಕ್ಕಳನ್ನು ಎತ್ತಿಕೊಂಡು ಹೋಗಿ ಸರಯೂ ನದಿ
ಲ್ಲಿ ಹಾಕುತ್ತಿದ್ದು, ಆ ಮಕ್ಕಳು ಸಂಕಟಪಟ್ಟು ಮುಳುಗಿ ಪ್ರಾಣಬಿಡುವು
ು ನೋಡಿ ಕೈತಟ್ಟಿ ನಗುತ್ತಿರುವನು. ಹೀಗೆ ಪಾಪಕಾರ್ಯವನ್ನೇ
ಡುತ್ತ, ಲೋಕಕಂಟಕನಾಗಿರುವುದನ್ನು ನೋಡಿ ಸಗರನು ಆ ಮಗ
ು ತನ್ನ ದೇಶದಿಂದ ಹೊರಡಿಸಿಬಿಟ್ಟನು. ಈ ಅಸಮಂಜಸಿಗೆ ಅಂಶು
ನೆಂಬ ಪುತ್ರನೊಬ್ಬನು ಹುಟ್ಟಿದನು. ಅವನು ಸಮಸ್ತ ಜನಗಳಿಗೂ
ನಾಗಿ ಬಹಳ ಗುಣಶಾಲಿಯಾಗಿದ್ದನು. ಬಹು ಕಾಲದ ಮೇಲೆ ಈ
ನಿಗೆ ಯಜ್ಞ ಮಾಡಬೇಕೆಂಬ ಬುದ್ಧಿಯು ಹುಟ್ಟಲು ಅನೇಕ ಋತ್ವಿಕ್ಪ
ೋತರುಗಳನ್ನು ಕರೆಸಿ ಅಶ್ವಮೇಧಯಾಗವನ್ನು ಮಾಡುವುದಕ್ಕಾರಂಭಿ
ು ” ಎಂದರು.

ಸರ್ಗ ೩೯

ಸಗರಯಾಗದಲ್ಲಿ ಇಂದ್ರನು ಯಜ್ಞಾಶ್ವವನ್ನು ಕದ್ದುದು.

ಹೀಗೆ ವಿಶ್ವಾಮಿತ್ರನು ಸಗರ ಚಕ್ರವರ್ತಿಯ ಯಜ್ಞವೃತ್ತಾಂತವನ್ನು ಸೂಚಿಸಿದ ಮಾತ್ರಕ್ಕೆ ರಾಮನು ಬಹಳ ಸಂತೋಷಪಟ್ಟು ಆ ವಿಶ್ವಾಮಿತ್ರನನ್ನು ಕುರಿತು, "ಎಲೈ, ಬ್ರಾಹ್ಮಣೋತ್ತಮನೆ! ನಿನಗೆ ಮಂಗಳವುಂಟಾಗಲಿ! ಈ ಯಜ್ಞವನ್ನು ಮುಗಿಸಿದುದು ಹೇಗೆ?" ಎನಲು, ವಿಶ್ವಾಮಿತ್ರನು ಮನಸ್ಸಿನಲ್ಲಿ "ಆಹಾ! ಈತನು ಸರ್ವಜ್ಞನಾಗಿದ್ದರೂ, ಏನೂ ತಿಳಿಯದವನಂತೆ ಮನುಷ್ಯ ಸ್ವಭಾವವನ್ನು ನಟಿಸುತ್ತಿರುವನು," ಎಂದು ನಸುನಗುತ್ತ, ರಾಮನಿಗೆ ಅದನ್ನು ವಿಸ್ತಾರವಾಗಿ ಹೇಳಲಾರಂಭಿಸಿದನು. "ಎಲೈ ರಾಮನೆ! ಆ ಸಗರ ಚಕ್ರವರ್ತಿಯ ಯಜ್ಞ ವೃತ್ತಾಂತವನ್ನು ವಿಸ್ತಾರವಾಗಿ ಹೇಳುವೆನು ಕೇಳು. ರುದ್ರನಿಗೆ ಮಾವನಾದ ಹಿಮವತ್ಪರ್ವತವು ವಿಂಧ್ಯಪರ್ವತಕ್ಕೆ ಇದಿರಾಗಿ ಅತ್ಯುನ್ನತವಾಗಿ ನಿಂತಿರುವುದರಿಂದ, ಅವು ಒಂದನ್ನೊಂದು ತಲೆಯೆತ್ತಿ ನೋಡುತ್ತಿರುವಂತೆ ಕಾಣುವುವು. ಈ ಎರಡು ಪರ್ವತಗಳ ನಡುವೆ ಆ ಯಜ್ಞವು ಆರಂಭಿಸಲ್ಪಟ್ಟಿತು. ಆ ಪ್ರದೇಶವು 'ಆರ್ಯಾವರ್ತ' ವೆಂಬ ಪ್ರಸಿದ್ಧವಾದ ಹೆಸರಿನಿಂದ, ಯಜ್ಞಕರ್ಮಗಳನ್ನು ಮಾಡುವುದಕ್ಕೆ ಬಹಳ ಪ್ರಶಸ್ತವಾದ ಕ್ಷೇತ್ರವೆನಿಸಿಕೊಂಡಿರುವುದು. ಇಲ್ಲಿ ಯಜ್ಞವನ್ನು ಮಾಡಲಾರಂಭಿಸಿದ ಆ ಸಗರನು, ತನ್ನ ಯಜ್ಞದ ಕುದುರೆಯನ್ನು ದೇಶಸಂಚಾರಕ್ಕೆ ಕಳುಹಿಸಿದಾಗ, ಅಂಶುಮಂತನೆಂಬ ಮಹಾರಥನು ಆತನ ಅಪ್ಪಣೆಯ ಮೇಲೆ ಆ ಕುದುರೆಯ ಬೆಂಗಾವಲಿಗಾಗಿ ಪ್ರಶಸ್ತವಾದ ಧನುಸ್ಸನ್ನು ಹಿಡಿದು ಅದರ ಹಿಂದೆ ಹೊರಟನು. ಈ ಯಜ್ಞವು ನಡೆಯುತ್ತಿರುವಾಗಲೇ, ಇಂದ್ರನು ಮಾಯೆಯಿಂದ ರಾಕ್ಷಸರೂಪವನ್ನು ಧರಿಸಿ ಯುಕ್ತ್ಯವೆಂಬ ಕರ್ಮವನ್ನು ನಡೆಸುವ ದಿನಕ್ಕೆ ಸರಿಯಾಗಿ ಆ ಕುದುರೆಯನ್ನಪಹರಿಸಿಕೊಂಡು ಹೋದನು. ಹೀಗೆ ಕುದುರೆಯನ್ನೆತ್ತಿಕೊಂಡು ಹೋಗುತ್ತಿರುವಾಗ, ಅಲ್ಲಿದ್ದ ಬ್ರಾಹ್ಮಣರೆಲ್ಲರೂ ಯಜ್ಞದೀಕ್ಷೆಯನ್ನು ವಹಿಸಿದ್ದ ಸಗರನನ್ನು ಕುರಿತು, "ಈ ಸಮಯದಲ್ಲಿ ಈ ಕುದುರೆಯನ್ನು ಯಾರೋ ಬಹು ವೇಗದಿಂದ ಎತ್ತಿಕೊಂಡು ಹೋಗುತ್ತಿರುವರು. ಎಲೈ ರಾಜನೆ! ಅವಕಾಶ ಮಾಡಬೇಡ! ಆತನನ್ನು ಕೊಂದು ಈಗಲೇ ಕುದುರೆಯನ್ನು ಹಿಂದಕ್ಕೆ ತರಿಸು. ಯಜ್ಞಕ್ಕೆ ವಿಘ್ನವುಂಟಾದರೆ, ನಮ್ಮೆಲ್ಲ

ರಿಗೂ ಇದು ಬಹಳ ಅಮಂಗಳಕರವು. ಆದುದರಿಂದ ಈ ಯಜ್ಞಕ್ಕೆ ವಿಘ್ನ ಬಾರದಂತೆ ಮಾಡು" ಎಂದು ಕೂಗಿಕೊಂಡರು. ಹೀಗೆ ಸಭೆಯಲ್ಲಿ ಕೂಗುತ್ತಿರುವ ಬ್ರಾಹ್ಮಣರ ಮೊರೆಯನ್ನು ಕೇಳಿದೊಡನೆ, ಸಗರ ಚಕ್ರವರ್ತಿಯು ತನ್ನ ಅರುವತ್ತುಸಾವಿರ ಮಕ್ಕಳನ್ನೂ ಕರೆದು, "ಎಲೈ ಮಕ್ಕಳಿರಾ! ಈ ನಮ್ಮ ಮಹಾಯಜ್ಞವು ಬಹಳ ಪರಿಶುದ್ಧವಾಗಿ ಪೂಜ್ಯರಾದ ಋತ್ವಿಕ್ಕುಗಳಿಂದಲೇ ನಡೆಸಲ್ಪಡುತ್ತಿರುವುದು. ಆದುದರಿಂದ ಇದರಲ್ಲಿ ಮಂತ್ರಲೋಪವೇ ಮೊದಲಾದ ಯಾವ ದೋಷಗಳಿಗೂ ಅವಕಾಶವಿಲ್ಲ. ಇಂತಹ ಯಜ್ಞಕಾಲದಲ್ಲಿ ರಾಕ್ಷಸರು ಮಾಯೆಯಿಂದಾಗಲೀ ಪ್ರತ್ಯಕ್ಷವಾಗಿಯಾಗಲೀ ಈ ಸ್ಥಳಕ್ಕೆ ಪ್ರವೇಶಿಸಲಾರರು. ಹೀಗಿದ್ದರೂ, ಕುದುರೆಯನ್ನು ಯಾರೋ ಎತ್ತಿಕೊಂಡು ಹೋಗಿರುವರಲ್ಲವೇ? ಅದನ್ನು ಹುಡುಕಿ ಹಿಂತಿರುಗಿ ತರಬೇಕಾಗಿದೆ. ಈ ಕಾರ್ಯದಲ್ಲಿ ನೀವೇ ಸಮರ್ಥರು. ನಿಮ್ಮೆಲ್ಲರಿಗೂ ಮಂಗಳವುಂಟಾಗಲಿ. ಸಮುದ್ರದಿಂದ ಸುತ್ತಲ್ಪಟ್ಟ ಸಮಸ್ತ ಭೂಭಾಗವನ್ನೂ ಹುಡುಕಿ ಬನ್ನಿರಿ. ಎಲೈ ಮಕ್ಕಳಿರಾ! ಈ ಭೂಮಂಡಲವಾದರೋ ಬಹಳ ವಿಸ್ತಾರವಾದುದು. ಆದುದರಿಂದ ನಿಮ್ಮಲ್ಲಿ ಒಬ್ಬೊಬ್ಬರೂ ಒಂದೊಂದು ಗಾವುದ ದೂರವನ್ನು ನಿಮ್ಮೊಳಗೆ ಹಂಚಿಕೊಂಡು ಹುಡುಕತಕ್ಕದು. ಕುದುರೆಯನ್ನು ಕದ್ದವನು ಈ ಭೂಮಿಯ ಮೇಲೆ ಒಂದುವೇಳೆ ನಿಮಗೆ ಸಿಕ್ಕದಿದ್ದರೂ, ಈ ನೆಲವನ್ನು ಪಾತಾಳಪರ್ಯಂತರವಾದರೂ ಕೊರೆದು, ಅತನನ್ನು ಕಂಡುಹಿಡಿಯಬೇಕು. ನಾನು ಯಜ್ಞದೀಕ್ಷೆಯಲ್ಲಿರುವುದರಿಂದ ಈ ಪುರೋಹಿತರೊಡನೆಯೂ, ಮೊಮ್ಮಕ್ಕಳೊಡನೆಯೂ ಕೂಡಿ ನಾನು ಇಲ್ಲಿಯೇ ಇರಬೇಕಾಗಿರುವುದು. ನನ್ನ ಆಜ್ಞೆಯ ಮೇಲೆ ನೀವೇ ಹೋಗಿ ಕುದುರೆಯನ್ನು ಹುಡುಕಿ ತನ್ನಿರಿ. ನಿಮಗೆ ದಾರಿಯಲ್ಲಿ ಮಂಗಳವಾಗಲಿ" ಎಂದನು. ಈ ಮಾತನ್ನು ಕೇಳಿದೊಡನೆ ಮಹಾಬಲಶಾಲಿಗಳಾದ ಆ ಮಕ್ಕಳೆಲ್ಲರೂ ಅತ್ಯುತ್ಸಾಹವುಳ್ಳವರಾಗಿ ಆ ತಂದೆಯ ಮಾತಿನ ಮೇಲೆ ನಾನಾ ದಿಕ್ಕುಗಳಿಗೂ ಹೊರಟರು. ಆ ಮಕ್ಕಳಲ್ಲಿ ಒಬ್ಬೊಬ್ಬರೂ ಒಂದೊಂದು ಗಾವುದದ ದೂರವನ್ನು ಹಂಚಿಕೊಂಡು, ಸುತ್ತಲೂ ಹುಡುಕುತ್ತ, ಭೂಮಿಯ ಮೇಲೆ ಎಲ್ಲಿಯೂ ಆ ಕುದುರೆಯು ಕಾಣಿಸದಿದ್ದುದರಿಂದ, ವಜ್ರಸಮಾನವಾದ ತಮ್ಮ ಉಗುರುಗಳಿಂದಲೂ, ಶೂಲಗಳಿಂದಲೂ ಭಯಂಕರವಾದ ನೇಗಿಲು ಮುಂತಾದ ಸಾಮಗ್ರಿಗಳಿಂದಲೂ ಪಾತಾಳದ

ಗಳೂ ಕೂಡ ಅಪಾಯಕ್ಕೆ ಸಿಕ್ಕಿ ಸಾಯುತ್ತಿರುವಾಗ, ಅವುಗಳ ಗೋಳ
ಟದ ಧ್ವನಿಯು ಸಮಸ್ತ ಭೂಮಂಡಲವನ್ನೂ ವ್ಯಾಪಿಸಿತು. ಹೀಗೆ ಅರವತ್ತು
ಸಾವಿರ ಗಾವುದಗಳ ವಿಸ್ತಾರವುಳ್ಳ ಈ ಭೂಮಿಯನ್ನು ಪಾತಾಳದವರೆಗೂ
ತೋಡಿಬಿಟ್ಟರು. ಅನೇಕ ಪರ್ವತಗಳಿಂದ ತುಂಬಿದ ಜಂಬೂದ್ವೀಪವೆ
ವನ್ನೂ ಅಗೆದು ಕೆಡಿಸುತ್ತಿರುವ ಈ ರಾಜಪುತ್ರರ ಹಾವಳಿಯನ್ನು ತಡೆಯ
ಲಾರದೆ ದೇವತೆಗಳೂ ಗಂಧರ್ವರೂ ದೈತ್ಯರೂ ನಾಗರೂ ಬೆಜ್ಜ
ಬಿದ್ದು, ಬ್ರಹ್ಮನ ಬಳಿಗೆ ಹೋಗಿ ಬಹಳ ದುಃಖದಿಂದಲೂ, ಭಯದಿಂದಲೂ
ಮೊರೆಯಿಡುತ್ತಾ ಆತನನ್ನು ಕುರಿತು, "ಎಲೈ ಪೂಜ್ಯನೇ! ಸಗರ ಪುತ್ರರ
ಈ ಸಮಸ್ತ ಭೂಮಂಡಲವನ್ನೂ ಅಗೆದು ಕೆಡಿಸುತ್ತಿರುವರು. ಪಾತಾ
ವಾಸಿಗಳಾದ ಅನೇಕ ಮಹಾತ್ಮರು ಕೊಲ್ಲಲ್ಪಡುತ್ತಿರುವರು. ತಮ
ಕಣ್ಣಿಗೆ ಬಿದ್ದವರನ್ನೆಲ್ಲಾ "ಈತನೇ ನಮ್ಮ ಯಜ್ಞದ ಕುದುರೆಯನು
ಕದ್ದುಕೊಂಡು ಹೋಗಿರುವ"ನೆಂದು ಕಂಡಕಡೆಯಲ್ಲಿ ಕೊಲ್ಲುತ್ತಿರುವರು
ಆದುದರಿಂದ ಈ ಅತ್ಯಾಹಿತವನ್ನು ತಪ್ಪಿಸತಕ್ಕ ಭಾರವು ನಿನ್ನದಾಗಿದೆ"
ಎಂದು ಪ್ರಾರ್ಥಿಸಿದರು.

ಸರ್ಗ ೪೦

ಸಗರ ಪುತ್ರರು ಕಪಿಲನಿಂದ ಸುಡಲ್ಪಟ್ಟುದು.

ಹೀಗೆ ದೇವತೆಗಳು ಮರಣ ಭಯದಿಂದ ಮೊರೆಯಿಡುತ್ತಿರುವುದನ್ನು
ಕೇಳಿ ಬ್ರಹ್ಮನು "ಎಲೈ ದೇವತೆಗಳೇ! ಸಮಸ್ತವಾದ ಪ್ರಪಂಚವೂ ಮಹಾ
ತ್ಮನಾದ ವಿಷ್ಣುವಿಗೆ ಸೇರಿದುದು. ಆ ಶ್ರೀಮನ್ನಾರಾಯಣನು ಕಪಿಲನೆಂಬ
ಮಹರ್ಷಿಯ ರೂಪವನ್ನು ಧರಿಸಿ ಈ ಭೂಮಂಡಲವನ್ನು ಧರಿಸಿರುವ
ನಾದುದರಿಂದ ಆ ಕಪಿಲನ ಕ್ರೋಧಾಗ್ನಿಯಿಂದ ಈ ಸಗರ ಪುತ್ರರು
ಇನ್ನು ಸ್ವಲ್ಪ ಕಾಲದೊಳಗಾಗಿಯೇ ದಗ್ಧರಾಗುವರು. ಪ್ರತಿಯೊಂದು
ಕಲ್ಪದಲ್ಲಿಯೂ ಹೀಗೆ ಅವಶ್ಯವಾಗಿ ಭೂಮಿಯು ಭೇದಿಸಲ್ಪಡಬೇಕೆಂದು
ಮೊದಲೇ ನಿರ್ಣಯಿಸಲ್ಪಟ್ಟಿರುವುದು. ಇಷ್ಟು ಮಾತ್ರವೇ ಅಲ್ಲ. ಈ
ಸಗರಪುತ್ರರೂ ಕೂಡ ಬಹುಕಾಲದವರೆಗೆ ಜೀವಿಸಬಾರದೆಂದೂ ಮೊದಲೇ
ನಿರ್ಣಯಿಸಲ್ಪಟ್ಟಿರುವುದು" ಎಂದನು. ಇದನ್ನು ಕೇಳಿ ಆ ಮೂವತ್ತು

ಯೋಣವು. ಇತ್ತಲಾಗಿ ಸಗರ ಪುತ್ರರು ಭೂಮಿಯನ್ನು ಭೇದಿಸುತ್ತಿರುವಾಗ ಅವರಿಂದ ಉಂಟಾದ ಧ್ವನಿಯು ಸಿಡಿಲಿನಂತೆ ಭಯಂಕರವಾಗಿ ಈ ಪ್ರಪಂಚವೆಲ್ಲವನ್ನೂ ವ್ಯಾಪಿಸಿತು. ಹೀಗೆ ಅವರೆಲ್ಲರೂ ಎಲ್ಲಾ ಕಡೆಗಳಲ್ಲಿ ತಿರುಗಿದರೂ ಕುದುರೆಯು ಸಿಕ್ಕದಿರಲು ಎಲ್ಲರೂ ಹಿಂತಿರುಗಿ ಬಂದು ತಂದೆಯನ್ನು ಕುರಿತು, "ಎಲೈ ತಂದೆಯೇ! ಎಲ್ಲಾ ಕಡೆಗಳಲ್ಲಿಯೂ ಹುಡುಕಿದೆವು. ಮಹಾ ಬಲಶಾಲಿಗಳಾದ ದೇವ ಗಂಧರ್ವ ರಾಕ್ಷಸ ಪಿಶಾಚಾದಿಗಳೆಲ್ಲರನ್ನೂ ಕಂಡಕಂಡ ಕಡೆಯಲ್ಲಿ ಕೊಂದುಹಾಕಿದೆವು. ಆ ಕುದುರೆಯಾಗಲಿ ಅದನ್ನು ಕದ್ದವನಾಗಲಿ ನಮ್ಮ ಕಣ್ಣಿಗೆ ಸಿಕ್ಕಲಿಲ್ಲ. ಇನ್ನು ಮಾಡಬೇಕಾದುದೇನು? ಮುಂದಿನ ಉಪಾಯವನ್ನು ನೀನು ಹೇಳಬೇಕು" ಎಂದರು. ಸಗರನು ಈ ಮಾತನ್ನು ಕೇಳಿದೊಡನೆ ಕುದುರೆಯು ಸಿಕ್ಕದುದಕ್ಕಾಗಿ ಬಹಳ ದುಃಖವನ್ನೂ ಕೋಪವನ್ನೂ ಹೊಂದಿ "ಎಲೈ ಮಕ್ಕಳಿರಾ! ನೀವು ಇನ್ನೂ ಒಂದಾವರ್ತಿ ಈ ಭೂಮಿಯನ್ನು ಭೇದಿಸಿ ಕುದುರೆಯನ್ನು ಹುಡುಕಿ ಬನ್ನಿರಿ ನಿಮಗೆ ಮಂಗಳವಾಗಲಿ! ಈಗ ಆ ಕುದುರೆಯೂ ಅದನ್ನು ಕದ್ದವನೂ ನಿಮಗೆ ಸಿಕ್ಕದಿರಲಾರನು. ನಿಮ್ಮ ಕೆಲಸವು ಕೈಗೂಡುವುದರಲ್ಲಿ ಸಂದೇಹವಿಲ್ಲ. ನೀವೆಲ್ಲರೂ ಹೋಗಿ ಬನ್ನಿರಿ" ಎಂದು ಆಜ್ಞಾಪಿಸಿದನು. ಹೀಗೆ ಮಹಾತ್ಮನಾದ ಸಗರನು ಹೇಳಿದ ಮಾತನ್ನು ಕೇಳಿ, ಆ ಮಕ್ಕಳೆಲ್ಲರೂ ಪುನಃ ಭೂಮಿಯನ್ನು ಭೇದಿಸಲಿಕ್ಕಾರಂಭಿಸಿದರು. ಒಂದಾನೊಂದು ಸ್ಥಳದಲ್ಲಿ ಒಂದು ದೊಡ್ಡ ಪರ್ವತವನ್ನು ಕಂಡರು. ಅದರ ನಡುವೆ ಈ ಸಮಸ್ತ ಭೂಮಿಯನ್ನೂ ತಲೆಯಮೇಲೆ ಹೊತ್ತು ನಿಂತಿರುವ ವಿರೂಪಾಕ್ಷವೆಂಬ ದಿಗ್ಗಜವನ್ನು ಕಂಡರು. ಎಲೈ ರಾಮನೆ! ಸಮಸ್ತ ಪ್ರಪಂಚವನ್ನೂ ಹೊತ್ತಿರುವ ಈ ಆನೆಯು ತನ್ನ ಶ್ರಮಪರಿಹಾರಕ್ಕಾಗಿ ಯಾವಾಗ ತಲೆಯನ್ನಾಡಿಸುವುದೋ ಆಗ ಭೂಮಿಯು ನಡುಗುವುದರಿಂದ, ಅದನ್ನೇ ಭೂಕಂಪವೆಂದು ಹೇಳುವರು. ಸಗರ ಪುತ್ರರು ಪ್ರದಕ್ಷಿಣ ನಮಸ್ಕಾರಾದಿಗಳಿಂದ ಆ ಮಹಾಗಜವನ್ನು ಪೂಜಿಸಿ ಪಾತಾಳವನ್ನು ಭೇದಿಸಿದರು. ಹೀಗೆ ಪೂರ್ವದಿಕ್ಕನ್ನು ಭೇದಿಸಿದ ಮೇಲೆ ದಕ್ಷಿಣ ದಿಕ್ಕನ್ನು ಭೇದಿಸುತ್ತಿರುವಾಗ ಅಲ್ಲಿಯೂ ದೊಡ್ಡ ಪರ್ವತದಂತಿರುವ ಮಹಾ ಪದ್ಮವೆಂಬ ಆನೆಯನ್ನು ಕಂಡರು. ಅದೂ ಕೂಡ ಈ ಭೂಮಂಡಲವನ್ನು ಹೊತ್ತಿರುವ ರೀತಿಯನ್ನು

ನೋಡಿ, ಅತ್ಯಾಶ್ಚರ್ಯಪಟ್ಟರು. ಅದಕ್ಕೂ ಪ್ರದಕ್ಷಿಣ ಮಾಡಿ ಪಶ್ಚಿಮ ದಿಕ್ಕನ್ನು ಭೇದಿಸಲು, ಅಲ್ಲಿ ಮಹಾಬಲವುಳ್ಳ ಸೌಮನಸವೆಂಬ ದೊಡ್ಡ ದಿಗ್ಗಜವು ಕಾಣಿಸಿತು. ಅದಕ್ಕೂ ಪ್ರದಕ್ಷಿಣ ಮಾಡಿ ಅದರ ಕ್ಷೇಮವನ್ನು ವಿಚಾರಿಸಿ, ಹಿಮವತ್ಪರ್ವತದಿಂದ ಶೋಭಿಸುತ್ತಿರುವ ಉತ್ತರ ದಿಕ್ಕನ್ನು ಅಗೆದರು. ಆ ದಿಕ್ಕಿನಲ್ಲಿ ಈ ಭೂಮಿಯನ್ನು ಹೊತ್ತು ಮಂಜಿನಂತೆ ಬಿಳುಪಾಗಿ ಶುಭ ಲಕ್ಷಣಗಳಿಂದ ಕೂಡಿದ ಭದ್ರವೆಂಬ ದಿಗ್ಗಜವನ್ನು ಕಂಡರು. ಅದನ್ನೂ ಬಹಳ ಪ್ರೀತಿಯಿಂದ ಸವರಿ, ಪ್ರದಕ್ಷಿಣ ಮಾಡಿ, ಈ ಸಗರನ ಪುತ್ರರೆಲ್ಲರೂ ಇನ್ನೂ ಕೆಳಗೆ ನೆಲವನ್ನು ತೋಡಲಾರಂಭಿಸಿದರು. ಮಹಾ ಬಲಶಾಲಿಗಳಾಗಿಯೂ, ವೇಗವುಳ್ಳವರಾಗಿಯೂ ಇರುವ ಈ ವೀರರೆಲ್ಲರೂ ಹೀಗೆ ಕೆಳಕೆಳಗೆ ತೋಡುತ್ತಾ ಈಶಾನ್ಯ ದಿಕ್ಕಿಗೆ ಹೋಗಿ ಬಹು ಕೋಪದಿಂದ ಪಾತಾಳವನ್ನು ಭೇದಿಸುತ್ತಿರುವಾಗ ಅಲ್ಲಿ ಕಪಿಲರೂಪದಿಂದಿರುವ ಮಹಾವಿಷ್ಣುವನ್ನೂ, ಆತನ ಸಮೀಪದಲ್ಲಿ ಮೇಯುತ್ತಿರುವ ತಮ್ಮ ಯಜ್ಞದ ಕುದುರೆಯನ್ನೂ ಕಂಡರು. ಆಗ ಅವರೆಲ್ಲರಿಗೂ ಬಹಳ ಸಂತೋಷವುಂಟಾಯಿತು. ಈತನೇ ತಮ್ಮ ಕುದುರೆಯನ್ನು ಅಪಹರಿಸಿದವನೆಂದೆಣಿಸಿ, ಮಿತಿಮೀರಿದ ಕೋಪಾವೇಶದಿಂದ ಕೆಂಪಾದ ಕಣ್ಣುಳ್ಳವರಾಗಿ, ತಮ್ಮಲ್ಲಿ ಇಟ್ಟುಕೊಂಡಿದ್ದ ಗುದ್ದಲಿ ನೇಗಿಲು ಮುಂತಾದ ಆಯುಧಗಳನ್ನೂ, ಕಲ್ಲು ಮರ ಮುಂತಾದ ಸಾಮಗ್ರಿಗಳನ್ನೂ ಬೀಸಿ "ಛೀ ನೀಚನೆ! ನಿಲ್ಲು ನಿಲ್ಲು" ಎಂದು ಆರ್ಭಟಿಸುತ್ತಾ, ಪುನಃ ಆ ಕಪಿಲನನ್ನು ಕುರಿತು "ಎಲೈ ದುರ್ಬುದ್ಧಿಯೆ! ನಮ್ಮ ಯಜ್ಞಾಶ್ವವನ್ನು ಇಲ್ಲಿಗೆ ಕದ್ದು ತಂದೆಯಾ? ನಾವು ಸಗರ ಪುತ್ರರೆಂದು ನೀನು ತಿಳಿಯಲಿಲ್ಲವೇ? ಛೀ ನಿಲ್ಲು" ಎಂದು ಧಿಕ್ಕರಿಸಿದರು. ಈ ಮಾತನ್ನು ಕೇಳಿದೊಡನೆ ಕಪಿಲನು ಬಹು ಕೋಪಗೊಂಡು ಹುಂಕರಿಸಿ ನೋಡಲು ಎಣೆಯಿಲ್ಲದ ಮಹಿಮೆಯುಳ್ಳ ಆ ಮಹಾತ್ಮನ ಕೋಪಾಗ್ನಿಯಿಂದ ಆ ಅರವತ್ತು ಸಾವಿರ ಮಂದಿ ಮಕ್ಕಳೂ ಅಲ್ಲಿಯೇ ದಗ್ಧರಾಗಿ ಭಸ್ಮರೂಪವನ್ನು ಹೊಂದಿದರು.

ಸರ್ಗ ೪೦

ಅಂಶುಮಂತನು ಯಜ್ಞಾಶ್ವವನ್ನು ತಂದುದು.

ಎಲೈ ರಾಮನೆ! ಸಗರನು ತನ್ನ ಅರುವತ್ತು ಸಾವಿರ ಮಂದಿ ಮಕ್ಕಳೂ ಹೋಗಿ ಬಹುಕಾಲವಾದರೂ ಹಿಂತಿರುಗಿ ಬಾರದುದನ್ನು ನೋಡಿ,

ತೇಜಸ್ವಿಯಾದ ಅಂಶುಮಂತನೆಂಬ ತನ್ನ ಮೊಮ್ಮಗನನ್ನು ಕರೆದು "ಎಲೈ ವತ್ಸನೆ! ನೀನು ಮಹಾ ಶೂರನು. ಶಸ್ತ್ರಾಸ್ತ್ರವಿದ್ಯೆಗಳನ್ನೆಲ್ಲಾ ತಿಳಿದವನು. ನೀನು ತೇಜಸ್ಸಿನಿಂದ ನಮ್ಮ ಹಿರಿಯರನ್ನು ಹೋಲುತ್ತಿರುವೆ. ನಿನ್ನ ಚಿಕ್ಕಪ್ಪಂದಿರು ಕುದುರೆಯನ್ನು ಹುಡುಕುವುದಕ್ಕಾಗಿ ಹೋಗಿ ಬಹಳ ದಿನಗಳಾದುವು. ಅವರನ್ನೂ ಕುದುರೆಯನ್ನೂ ಹುಡುಕಿಕೊಂಡು ಬಾ. ಈ ಭೂಮಿಯ ಕೆಳಗಿರುವ ಪ್ರಾಣಿಗಳೆಲ್ಲವೂ ಬಹಳ ವೀರ್ಯವುಳ್ಳವುಗಳು. ಆಕಾರದಲ್ಲಿಯೂ ಬಹಳ ದೊಡ್ಡವುಗಳು. ಅವುಗಳನ್ನು ನಿಗ್ರಹಿಸುವುದಕ್ಕಾಗಿ ಉತ್ತಮವಾದ ಖಡ್ಗವನ್ನೂ ಧನುಸ್ಸನ್ನೂ ತೆಗೆದುಕೊಂಡು ಹೋಗು. ನಿನಗೆ ತಡೆ ಮಾಡುವವರನ್ನು ನಿಗ್ರಹಿಸು. ಪೂಜ್ಯರಾದವರನ್ನು ನಮಸ್ಕರಿಸು. ಕುದುರೆಯನ್ನು ಕದ್ದವನು ನಿನ್ನ ಕಣ್ಣಿಗೆ ಗೋಚರಿಸಿದರೆ ಒಡನೆಯೇ ಆತನನ್ನು ಸಂಹರಿಸಿ ಯಜ್ಞಾಶ್ವವನ್ನು ತೆಗೆದುಕೊಂಡು ಬಾ. ಎಲೈ ವತ್ಸನೆ! ಹೇಗಾದರೂ ಕಾರ್ಯಸಾಧನೆಯನ್ನು ಮಾಡಿಕೊಂಡು ಬಂದು ನಮ್ಮ ಯಜ್ಞವನ್ನು ಕೊನೆಗಾಣಿಸುವ ಭಾರವು ನಿನ್ನದಾಗಿದೆ" ಎಂದನು. ಮಹಾತ್ಮನಾದ ಸಗರನು ಹೀಗೆ ಒತ್ತಿ ಹೇಳುತ್ತಿರುವುದನ್ನು ಕೇಳಿ, ಅಂಶುಮಂತನು ಧನುಸ್ಸನ್ನೂ ಖಡ್ಗವನ್ನೂ ತೆಗೆದುಕೊಂಡು ವೇಗದಿಂದ ಹೊರಟು, ತನ್ನ ಚಿಕ್ಕಪ್ಪಂದಿರು ತೋಡಿರುವ ದಾರಿಯಿಂದಲೇ ಪಾತಾಳವನ್ನು ಪ್ರವೇಶಿಸಿ, ದೈತ್ಯದಾನವ ರಾಕ್ಷಸಾದಿಗಳಿಂದಲೂ, ಪಿಶಾಚಿಗಳಿಂದಲೂ, ನಾಗರಿಂದಲೂ, ಗರುಡರಿಂದಲೂ ಪೂಜಿಸಲ್ಪಡುತ್ತಿರುವ ದಿಗ್ಗಜವನ್ನು ಕಂಡು, ಅದಕ್ಕೆ ಪ್ರದಕ್ಷಿಣೆ ಮಾಡಿ, ಅದರ ಕ್ಷೇಮಲಾಭಗಳನ್ನು ವಿಚಾರಿಸಿದ ಮೇಲೆ, ಆ ಆನೆಯನ್ನು ಕುರಿತು, "ಎಲೈ ಮಹಾಗಜವೆ! ನಮ್ಮ ಚಿಕ್ಕಪ್ಪಂದಿರ ಮತ್ತು ನಮ್ಮ ಯಜ್ಞಾಶ್ವವನ್ನು ಕದ್ದುಕೊಂಡು ಹೋದ ಕಳ್ಳನ ವೃತ್ತಾಂತವನ್ನು ನೀನು ಬಲ್ಲೆಯಾ?" ಎಂದನು. ಅದಕ್ಕಾದಿಗ್ಗಜವು "ಎಲೈ ಅಸಮಂಜ ಪುತ್ರನೇ! ಮುಂದೆ ಹೋದರೆ ನಿನ್ನ ಕೆಲಸವು ಕೈಗೂಡುವುದು. ಶೀಘ್ರದಲ್ಲಿಯೇ ಯಜ್ಞಾಶ್ವವನ್ನು ತೆಗೆದುಕೊಂಡು ಹಿಂತಿರುಗಿ ಬರುವೆ. ಸಂದೇಹ ಪಡಬೇಡ" ಎಂದಿತು. ಆಮೇಲೆ ಅಂಶುಮಂತನು ಅದೇ ದಾರಿಯನ್ನು ಹಿಡಿದುಹೋಗುತ್ತಾ, ಅಲ್ಲಲ್ಲಿದ್ದ ದಿಗ್ಗಜಗಳಲ್ಲಿ ಒಂದೊಂದನ್ನೂ ಕ್ರಮವಾಗಿ ವಿಚಾರಿಸಿಕೊಂಡು ಬರುತ್ತಿರಲು ಆ ದಿಗ್ಗಜಗಳೆಲ್ಲವೂ ಈ ಅಂಶುಮಂತನನ್ನು ನೋಡಿ, "ನಿನಗೆ ಕುದುರೆಯು ಸಿಕ್ಕುವುದರಲ್ಲಿ ಸಂದೇಹವಿಲ್ಲ"

ಹೋಗುತ್ತಿರುವಾಗ, ಅಲ್ಲಿ ಒಂದಾನೊಂದು ಕಡೆಯಲ್ಲಿ ಬಿದ್ದಿದ್ದ ದೊಡ್ಡ ಭಸ್ಮರಾಶಿಯನ್ನು ಕಂಡನು. ಹೀಗೆ ಆ ದೊಡ್ಡ ಭಸ್ಮರಾಶಿಯನ್ನೂ ಮುಂದೆ ದಾರಿಯಿಲ್ಲದಿರುವುದನ್ನೂ ನೋಡಿದೊಡನೆ, ತನ್ನ ಚಿಕ್ಕಪ್ಪಂದಿರೇ ಈ ಅವಸ್ಥೆಯನ್ನು ಹೊಂದಿರುವರೆಂದು ನಿಶ್ಚಯಿಸಿ, ಬಹಳ ದುಃಖವುಳ್ಳವನಾಗಿ ಪ್ರಲಾಪಿಸುತ್ತಿದ್ದನು. ಮತ್ತು ಸ್ವಲ್ಪ ದೂರದಲ್ಲಿ ತನ್ನ ಯಜ್ಞದ ಕುದುರೆಯು ಮೇಯುತ್ತಿರುವುದನ್ನೂ ಕಂಡನು. ಆಗ ಬಹು ದುಃಖದಿಂದಲೂ, ಸಂಕಟದಿಂದಲೂ ಕೂಡಿದವನಾಗಿ, ಈ ಪಿತೃಗಳಿಗೆ ಸಂಚಯನವೇ ಮೊದಲಾದ ಜಲಕ್ರಿಯೆಗಳನ್ನು ಮಾಡಬೇಕೆಂದು ನೀರನ್ನು ಹುಡುಕಲು ಅಲ್ಲಿ ಒಂದು ಸರಸ್ಸಾದರೂ ಕಾಣಿಸಲಿಲ್ಲ. ಆಗ ಆತನು ಬಹಳ ಚಿಂತೆಯಿಂದ ಮುಂದುತೋರದೆ ಕ್ಷಣಕಾಲವಿದ್ದು, ಆಮೇಲೆ ತಲೆಯೆತ್ತಿ ಮೇಲೆ ನೋಡಲು, ಅಲ್ಲಿ ತನ್ನ ಚಿಕ್ಕಪ್ಪಂದಿರಿಗೆ ಸೋದರಮಾವನಾಗಿಯೂ, ಪಕ್ಷಿರಾಜನಾಗಿಯೂ, ವಾಯುವಿಗೆ ಸಮಾನವಾದ ವೇಗವುಳ್ಳವನಾಗಿಯೂ ಇರುವ ಗರುಡನನ್ನು ಕಂಡನು. ಆಗ ಆ ಗರುಡನು, ಈ ಅಂಶುಮಂತನು ಹೀಗೆ ಚಿಂತಿಸುತ್ತಾ ತನ್ನನ್ನೇ ನೋಡುತ್ತಿರುವುದನ್ನು ಕಂಡು, "ಎಲೈ ಪುರುಷಶ್ರೇಷ್ಠನೆ! ದುಃಖಿಸಬೇಡ. ಈ ನಿನ್ನ ಚಿಕ್ಕಪ್ಪಂದಿರು ಹೀಗೆ ಸತ್ತುದು ಲೋಕಕ್ಷೇಮಕ್ಕಾಗಿಯೇ ಅಲ್ಲದೆ ಬೇರೆಯಲ್ಲ. ಎಣೆಯಿಲ್ಲದ ಮಹಿಮೆಯುಳ್ಳ ಈ ಕಪಿಲ ಮಹಾಮುನಿಯಿಂದಲೇ ಇವರು ಹೀಗೆ ದಗ್ಧರಾಗಿರುವರು. ಇವರೆಲ್ಲರಿಗೂ ಆ ಬ್ರಾಹ್ಮಣನಿಂದ ಮರಣವುಂಟಾಗಿರುವುದರಿಂದ, ಇವರಿಗೆ ಈ ಲೋಕದಲ್ಲಿರುವ ನೀರಿನಿಂದ ಜಲಕ್ರಿಯೆಯನ್ನು ಮಾಡುವುದುಚಿತವಲ್ಲ. ನೀನು ಸ್ವತಃ ಪ್ರಾಜ್ಞನಾದುದರಿಂದ ನಿನಗೂ ತಿಳಿದೇ ಇರುವುದು. ಎಲೈ ವತ್ಸನೆ! ಇವರಿಗೆ ಸದ್ಗತಿಯನ್ನು ಹೊಂದಿಸಬೇಕಾದರೆ ಹಿಮವತ್ಪರ್ವತದ ಜ್ಯೇಷ್ಠಪುತ್ರಿಯಾಗಿ ಲೋಕಪಾವನಿಯೆಂದು ಖ್ಯಾತಿ ಹೊಂದಿದ ಗಂಗಾನದಿಯನ್ನು ಕರೆತಂದು ಈ ಬೂದಿಯ ರಾಶಿಯನ್ನು ತೇಲಿಸು. ಅದರಿಂದ ಅವರೆಲ್ಲರಿಗೂ ಸ್ವರ್ಗಪ್ರಾಪ್ತಿಯಾಗುವುದು. ಮತ್ತು ಎಲೈ ಆಯುಷ್ಮಂತನೆ! ಅದು ಹಾಗಿರಲಿ! ಮೊದಲು ಈ ಯಜ್ಞದ ಕುದುರೆಯನ್ನು ತೆಗೆದುಕೊಂಡು ಹೋಗಿ ನಿನ್ನ ತಾತನಾದ ಸಗರ ಚಕ್ರ

ರುಗಿ ಬಂದು, ದೀಕ್ಷೆಯನ್ನು ವಹಿಸಿದ್ದ ಆ ಸಗರನಿಗೆ ಕುದುರೆಯನ್ನೊಪ್ಪಿಸಿ, ನಡೆದ ವೃತ್ತಾಂತವನ್ನೂ, ಗರುಡನು ಹೇಳಿದ ವಿಷಯವನ್ನೂ ತಿಳಿಸಿದನು. ಇದನ್ನು ಕೇಳಿ ಸಗರನು ಬಹಳ ದುಃಖಿತನಾಗಿದ್ದು ಕೊನೆಗೆ ಶಾಸ್ತ್ರೋಕ್ತವಾಗಿ ಯಜ್ಞವನ್ನು ಪೂರ್ತಿಮಾಡಿಕೊಂಡು ತನ್ನ ಪಟ್ಟಣಕ್ಕೆ ಬಂದು ಸೇರಿದನು. ಆದರೆ ತನ್ನ ಮಕ್ಕಳ ಜಲಕ್ರಿಯೆಗಾಗಿ ಗಂಗೆಯನ್ನು ತರುವುದಕ್ಕೆ ಉಪಾಯವೇನೆಂದು ಈತನಿಗೆ ಬಹು ಕಾಲದವರೆಗೆ ತೋರಲೇ ಇಲ್ಲ. ಹಾಗೆಯೇ ಮೂವತ್ತುಸಾವಿರ ವರುಷಗಳವರೆಗೂ ರಾಜ್ಯವನ್ನು ಪಾಲಿಸುತ್ತಿದ್ದು ಸ್ವರ್ಗಸ್ಥನಾದನು.

ಸರ್ಗ ೪೨

ಭಗೀರಥನು ಗಂಗೆಯನ್ನು ತರುವುದಕ್ಕಾಗಿ ತಪಸ್ಸು ಮಾಡುವುದು.

ಸಗರನು ಕಾಲಾಧೀನನಾದ ಮೇಲೆ ಆ ದೇಶದ ಪ್ರಜೆಗಳೆಲ್ಲರೂ ಆತನ ಮೊಮ್ಮಗನಾದ ಅಂಶುಮಂತನಿಗೆ ಪಟ್ಟವನ್ನು ಕಟ್ಟಿದರು. ಈತನು ಬಹಳ ಧಾರ್ಮಿಕನಾದ ರಾಜನೆನಿಸಿಕೊಂಡಿದ್ದು ಕೊನೆಗಾಲದಲ್ಲಿ ತನ್ನ ಮಗನಾದ ದಿಲೀಪನಿಗೆ ರಾಜ್ಯವನ್ನೊಪ್ಪಿಸಿ ಹಿಮವತ್ಪರ್ವತದ ಶಿಖರದಲ್ಲಿ ಕ್ರೂರವಾದ ತಪಸ್ಸನ್ನು ಮಾಡುತ್ತಿದ್ದು, ಮೂವತ್ತೆರಡು ಸಾವಿರ ವರುಷಗಳವರೆಗೆ ಆ ತಪಸ್ಸಿನಲ್ಲಿಯೇ ಇದ್ದು, ಕೊನೆಗೆ ಸ್ವರ್ಗವನ್ನೈದಿದನು. ಆ ಮೇಲೆ ಮಹಾ ತೇಜಸ್ವಿಯಾದ ಆ ದಿಲೀಪನೂ ಕೂಡ ತನ್ನ ತಾತಂದಿರ ಮರಣವಾರ್ತೆಯನ್ನು ಕೇಳಿ ದುಃಖಿತನಾಗಿ ಮುಂದಿನ ಉಪಾಯವೇನೂ ತೋರದೆ ಇದ್ದನು. ಹೀಗೆ ಆ ದಿಲೀಪನು ಯಾವಾಗಲೂ "ಗಂಗೆಯನ್ನು ತರುವುದು ಹೇಗೆ? ಅವರಿಗೆ ಕ್ರಿಯೆಯನ್ನು ಮಾಡುವುದು ಹೇಗೆ? ಅವರಿಗೆ ಸದ್ಗತಿಯನ್ನು ಹೊಂದಿಸುವುದಕ್ಕೆ ಉಪಾಯವೇನು?" ಎಂಬ ಚಿಂತೆಯಲ್ಲಿಯೇ ಕೊರಗುತ್ತಿದ್ದನು. ಹೀಗೆ ಚಿಂತಿಸುವ ಧಾರ್ಮಿಕನಾದ ಆ ದಿಲೀಪನಿಗೆ ಭಗೀರಥನೆಂಬ ಪುತ್ರನೊಬ್ಬನು ಜನಿಸಿದನು. ಆಮೇಲೆ ದಿಲೀಪನು ಅನೇಕ ಯಜ್ಞಗಳನ್ನು ಮಾಡಿ, ಮೂವತ್ತು ಸಾವಿರ ವರುಷಗಳವರೆಗೂ ರಾಜ್ಯವನ್ನು ಧರ್ಮದಿಂದ ಆಳುತ್ತಿದ್ದು, ತನ್ನ ತಾತಂದಿರನ್ನು

ಸದ್ಗತಿ ಹೊಂದಿಸುವುದಕ್ಕೆ ಉಪಾಯವಾವುದೆಂಬ ಚಿಂತೆಯಿಂದಲೇ ವ್ಯಾಧಿ ಪೀಡಿತನಾಗಿ ಕಾಲಧರ್ಮವನ್ನು ಹೊಂದಿದನು. ಆಮೇಲೆ ರಾಜ್ಯಕ್ಕೆ ಬಂದ ಪರಮ ಧಾರ್ಮಿಕನಾದ ಭಗೀರಥನು ಮಹಾತೇಜಸ್ವಿಯಾಗಿ, ರಾಜರ್ಷಿಯೆನಿಸಿಕೊಂಡು, ಬಹು ಕಾಲದವರೆಗೆ ಸಂತಾನವಿಲ್ಲದೆ, ಮಕ್ಕಳನ್ನು ಪಡೆಯಬೇಕೆಂಬ ಉದ್ದೇಶದಿಂದ ರಾಜ್ಯವನ್ನು ಮಂತ್ರಿಗಳ ವಶಕ್ಕೆ ಬಿಟ್ಟು ಗೋಕರ್ಣಕ್ಕೆ ಹೋಗಿ ಗಂಗೆಯನ್ನು ತರಬೇಕೆಂಬ ಸಂಕಲ್ಪದಿಂದ ಘೋರವಾದ ತಪಸ್ಸನ್ನು ಮಾಡಲಾರಂಭಿಸಿದನು. ಹೀಗೆ ಭಗೀರಥನು, ಪಂಚಾಗ್ನಿಗಳ ನಡುವೆ ಕುಳಿತು ಇಂದ್ರಿಯಗಳನ್ನು ನಿಗ್ರಹಿಸಿ, ತೋಳುಗಳನ್ನು ಮೇಲಕ್ಕೆತ್ತಿ ತಿಂಗಳಿಗೆ ಒಂದಾವರ್ತಿ ಆಹಾರವನ್ನು ತೆಗೆದುಕೊಳ್ಳುತ್ತ, ಅನೇಕ ಸಹಸ್ರ ವರ್ಷಗಳವರೆಗೆ ಆ ತಪಸ್ಸಿನಲ್ಲಿಯೇ ಇದ್ದುಬಿಟ್ಟನು. ಕೊನೆಗೆ ಬ್ರಹ್ಮನು ಇವನ ತಪಸ್ಸಿಗೆ ಮೆಚ್ಚಿ, ಈತನು ತಪಸ್ಸು ಮಾಡುತ್ತಿದ್ದ ಸ್ಥಳಕ್ಕೆ ಅನೇಕ ದೇವತೆಗಳೊಡಗೂಡಿ ಬಂದು "ಎಲೈ ಮಹಾತ್ಮನೆ! ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ಬೇಕಾದ ವರವನ್ನು ಕೇಳು" ಎನಲು, ಭಗೀರಥನು ಕೈಮುಗಿದು ನಿಂತು "ನೀನು ನನ್ನ ತಪಸ್ಸಿಗೆ ಮೆಚ್ಚಿ ತಕ್ಕ ಫಲವನ್ನು ಕೊಡುವುದೇ ನಿಜವಾಗಿದ್ದರೆ, ನನ್ನ ಮುತ್ತಾತಂದಿರಾದ ಸಗರಪುತ್ರರಿಗೆಲ್ಲರಿಗೂ ನನ್ನಿಂದಲೇ ಜಲಕ್ರಿಯೆಯು ನಡೆಯುವ ಹಾಗೆ ಅನುಗ್ರಹಿಸಬೇಕು. ಇವರ ಭಸ್ಮರಾಶಿಯನ್ನು ದೇವ ಗಂಗೆಯಿಂದ ತೇಲಿಸಿದ ಹೊರತು ಅವರಿಗೆ ಸದ್ಗತಿಯುಂಟಾಗದು ಮತ್ತು ನನಗೆ ಸಂತತಿಯಿಲ್ಲದುದರಿಂದ ನಮ್ಮ ವಂಶವು ಇಷ್ಟಕ್ಕೇ ನಿಂತು ಹೋಗಿ ರುವುದು. ಆದುದರಿಂದ ನನಗೆ ಸತ್ಪುತ್ರ ಸಂತಾನವನ್ನು ಕೊಟ್ಟು ಇಕ್ಷ್ವಾಕು ವಂಶವು ವೃದ್ಧಿಹೊಂದುವಂತೆಯೂ ಮಾಡಬೇಕು. ಇವೇ ನನಗೆ ಕೊಡಬೇಕಾದ ವರಗಳು" ಎಂದನು. ಈ ಮಾತನ್ನು ಕೇಳಿ ಪಿತಾಮಹನು "ಭಗೀರಥನೆ! ನಿನ್ನ ಈ ಉದ್ದೇಶಗಳೆಲ್ಲವೂ ಸರ್ವೋತ್ತಮ ವಾದುವು. ನೀನು ಕೇಳಿದಂತೆಯೇ ಆಗಲಿ. ಇಕ್ಷ್ವಾಕುವಂಶವು ನಿನ್ನಿಂದಲೇ ವೃದ್ಧಿ ಹೊಂದಲಿ. ಇದೋ ಹಿಮವತ್ಪರ್ವತನ ಜ್ಯೇಷ್ಠ ಪುತ್ರಿಯಾದ ಗಂಗಾದೇವಿಯು ಇಲ್ಲಿರುವಳು. ಇವಳು ಸ್ವರ್ಗ ಲೋಕದಿಂದ ನಿನ್ನೊಡನೆ ಬರುವುದರಲ್ಲಿ ಸಂದೇಹವಿಲ್ಲ. ಆದರೆ ಇವಳು ನೆಲಕ್ಕೆ ಧುಮ್ಮಿಕ್ಕುವಾಗ ಭೂಮಿಯು ತಡೆಯಲಾರಳಾದುದರಿಂದ, ಈ

ಕೆಲಸಕ್ಕಾಗಿ ರುದ್ರನನ್ನು ಪ್ರಾರ್ಥಿಸು. ಅವನಲ್ಲದೆ ಬೇರೆ ಯಾರೂ ಶಕ್ತರಲ್ಲ” ಎಂದು ಹೇಳಿ, ಆಮೇಲೆ ಗಂಗೆಯನ್ನು ನೋಡಿ ಆಕೆಗೂ ಈ ಅಂಶವನ್ನು ಸೂಚಿಸಿ ಇತರ ದೇವತೆಗಳೊಡನೆ ತನ್ನ ಸ್ಥಾನಕ್ಕೆ ಹೊರಟು ಹೋದನು.

ಸರ್ಗ ೪೩

ಭಗೀರಥನು ಗಂಗೆಯನ್ನು ತಂದದು.

ದೇವದೇವನಾದ ಬ್ರಹ್ಮನು ಹೊರಟುಹೋದಮೇಲೆ ಭಗೀರಥನು ತನ್ನ ಕಾಲಿನ ಹೆಬ್ಬೆರಳನ್ನು ಮಾತ್ರ ನೆಲದಮೇಲೆ ಊರಿ ಎರಡು ತೋಳುಗಳನ್ನೂ ಮೇಲಕ್ಕೆ ನೀಡಿ ವಾಯುವನ್ನೇ ಆಹಾರವಾಗಿ ತೆಗೆದು ಕೊಳ್ಳುತ್ತಾ ನಿರಾಧಾರನಾಗಿ ಒಂದು ಮರದ ತುಂಡಿನಂತೆ ಅಲ್ಲಾಡದೆ ನಿಂತು ಒಂದು ಸಂವತ್ಸರ ಕಾಲದವರೆಗೆ ಹಗಲೂ ರಾತ್ರಿಯೂ ಬಿಡದೆ ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಒಂದು ವರ್ಷ ಕಾಲವು ತುಂಬಿದೊಡನೆಯೇ ಲೋಕಪೂಜ್ಯನಾದ ರುದ್ರನು ಪ್ರತ್ಯಕ್ಷನಾಗಿ ಬಂದು, ಭಗೀರಥನನ್ನು ನೋಡಿ “ ಎಲೈ ರಾಜನೆ! ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ನಿನ್ನ ಉದ್ದೇಶವೂ ನನಗೆ ತಿಳಿಯಿತು. ನಿನ್ನ ಕೋರಿಕೆಯಂತೆಯೇ ದೇವಗಂಗೆಯನ್ನು ಶಿರಸ್ಸಿನಲ್ಲಿ ಧರಿಸುವೆನು ” ಎಂದನು. ಹೀಗೆ ಶಿವನು ಸಿದ್ಧನಾಗಿರುವುದನ್ನು ನೋಡಿ ಗಂಗೆಯು ತನ್ನ ಮನಸ್ಸಿನಲ್ಲಿ “ಆಹಾ! ಈ ಶಿವನು ನನ್ನ ವೇಗವನ್ನು ಧರಿಸಬಲ್ಲನಂತೆ! ನನ್ನ ಪ್ರವಾಹ ವೇಗದಿಂದ ಈ ಶಿವನನ್ನೂ ಸಂಗಡಲೇ ಪಾತಾಳಕ್ಕೆ ಸೆಳೆದ ಕೊಂಡು ಹೋಗದಿರುವೆನೆ! “ ಎಂದೆಣಿಸಿ ದೊಡ್ಡ ಪ್ರವಾಹವನ್ನು ತಾಳಿ, ದುಸ್ಸಹವಾದ ವೇಗದೊಡನೆ ಆರ್ಭಟಿಸುತ್ತ ಆಕಾಶದಿಂದ ಹೊರಟು ಪರಿಶುದ್ಧವಾದ ಆ ಶಿವನ ತಲೆಯ ಮೇಲೆ ಬಿದ್ದಳು. ಆಗ ರುದ್ರನು ಇವಳ ಗರ್ವವನ್ನು ನೋಡಿ ಕೋಪಗೊಂಡವನಾಗಿ ಆ ಗಂಗೆಯನ್ನು ತನ್ನ ಜಟೆಯಲ್ಲಿಯೇ ಸೆರೆಸಿಕ್ಕಿಸುವೆನೆಂದು ನಿಶ್ಚಯಿಸಿದನು. ಹಾಗೆಯೇ ಆ ಗಂಗೆಯು ಹಿಮವತ್ಪರ್ವತದಂತೆ ಶುಭ್ರವಾದ ಆ ಶಂಕರನ ಜಟಾಜೂಟದಲ್ಲಿ ಬಿದ್ದೊಡನೆ ಎಷ್ಟೆಷ್ಟು ಪ್ರಯತ್ನಮಾಡಿದರೂ ಆ ಜಟೆಯಿಂದ ತಪ್ಪಿಸಿಕೊಂಡು ಬರುವುದಕ್ಕೆ ಸಮರ್ಥಳಾಗಲಿಲ್ಲ. ಹೀಗೆ ಅನೇಕ

ಸಂವತ್ಸರಗಳವರೆಗೆ ಅದರಲ್ಲಿ ಕಟ್ಟುಬಿದ್ದು ನರಳುತ್ತಿದ್ದಳು. ಇದನ್ನು ನೋಡಿ ಭಗೀರಥನು ತನ್ನ ಪ್ರಯತ್ನವು ವಿಫಲವಾಗುವುದೆಂಬ ಶಂಕೆಯಿಂದ ಪುನಃ ಆ ಪರಮೇಶ್ವರನನ್ನು ಕುರಿತು ತಪಸ್ಸುಮಾಡಿ ಆತನನ್ನು ಮೆಚ್ಚಿಸಲು ಒಡನೆಯೇ ಆ ಮಹಾದೇವನು ಬಿಂದು ಸರಸ್ಸಿನಲ್ಲಿಯೇ ಬಿಟ್ಟುಬಿಟ್ಟನು. ಗಂಗಾ ಪ್ರವಾಹವು ಹೀಗೆ ಶಿವನ ತಲೆಯಿಂದ ಕೆಳಗೆ ಬಿದ್ದೊಡನೆ ಏಳು ಪ್ರವಾಹಗಳಾಗಿ ಒಡೆಯಿತು. ಅವುಗಳಲ್ಲಿ ಹ್ಲಾದಿನಿ, ಪಾವನಿ, ನಳಿನಿ ಎಂಬ ಮೂರು ಪ್ರವಾಹಗಳು ಪೂರ್ವಾಭಿಮುಖವಾಗಿ ಹರಿದುಹೋದುವು. ಸುಚಕ್ಷು, ಸೀತೆ, ಸಿಂಧುವೆಂಬ ಬೇರೆ ಮೂರು ಪ್ರವಾಹಗಳು ಪಶ್ಚಿಮಾಭಿ ಮುಖವಾಗಿ ಹೊರಟವು. ಏಳನೆಯದಾದ ಮತ್ತೊಂದು ಮಾತ್ರವೇ ಭಗೀರಥನನ್ನು ಹಿಂಬಾಲಿಸಿತು. ಈ ಭಗೀರಥನು ರಥದಮೇಲೆ ಕುಳಿತು ಮುಂದೆ ಹೋಗುತ್ತಿದ್ದ ಹಾಗೆಲ್ಲಾ ಈ ಪ್ರವಾಹವೂ ಕೂಡ ಆತನನ್ನು ಹಿಂಬಾಲಿಸಿಯೇ ಹೋಗುತ್ತಿತ್ತು. ಹೀಗೆ ದೇವಗಂಗೆಯು ಆಕಾಶ ದಿಂದ ರುದ್ರನ ತಲೆಯ ಮೇಲೆ ಬಿದ್ದು ಅಲ್ಲಿಂದ ಭೂಮಿಗೆ ಇಳಿದಾಗ, ಆ ಪ್ರವಾಹವು ಬಿದ್ದ ವೇಗಕ್ಕೆ ಭಯಂಕರವಾದ ಒಂದು ಶಬ್ದವುಂಟಾದುದ ಲ್ಲದೆ ಆ ನೀರು ಸಮಸ್ತ ಪ್ರಪಂಚವನ್ನೂ ವ್ಯಾಪಿಸಿತು. ಆ ಪ್ರವಾಹದೊಡನೆ ಗುಂಪುಗುಂಪಾಗಿ ನೆಲಕ್ಕೆ ಬೀಳುತ್ತಿದ್ದ ಮೀನು, ಆಮೆ, ಮೊಸಳೆ, ಏಡಿ, ನೀರುಹಾವು ಮುಂತಾದ ಅನೇಕ ಜಲಜಂತುಗಳಿಂದ ಭೂಭಾಗವೆಲ್ಲವೂ ತುಂಬಿಹೋಯಿತು. ಆಮೇಲೆ ದೇವತೆಗಳು, ಗಂಧರ್ವರು, ಯಕ್ಷರು, ನಾಗರು, ಕಿನ್ನರರು ಮುಂತಾದವರೆಲ್ಲರೂ ದೊಡ್ಡ ದೊಡ್ಡ ಅರಮನೆ ಗಳಂತಿರುವ ವಿಮಾನಗಳನ್ನೂ, ಆನೆ, ಕುದುರೆ ಮುಂತಾದ ವಾಹನ ಗಳನ್ನೂ ಏರಿಬಂದು ಗಂಗೆಯು ಭೂಮಿಗೆ ಬೀಳುವ ರೀತಿಯನ್ನು ಅತಿ ಸಂಭ್ರಮದಿಂದ ನೋಡುತ್ತಿದ್ದು ಅದು ಬಿದ್ದ ಸ್ಥಳಕ್ಕೂ ಅತಿವೇಗದಿಂದ ಬಂದು ಸೇರಿದರು. ಈ ಆಶ್ಚರ್ಯವನ್ನು ನೋಡಬೇಕೆಂಬ ಕುತೂಹಲ ದಿಂದ ಹೀಗೆ ಸಮಸ್ತ ದೇವತೆಗಳೂ ಬಂದು ಸೇರಿರಲು, ಆ ದೇವತೆಗಳ ದಿವ್ಯ ತೇಜಸ್ಸಿನಿಂದಲೂ, ಅವರ ಆಭರಣಗಳ ಕಾಂತಿಯಿಂದಲೂ, ಆಕಾಶ ವೆಲ್ಲವೂ ನೂರಾರು ಸೂರ್ಯಬಿಂಬಗಳನ್ನೊಳಗೊಂಡಂತೆ ಶೋಭಿಸುತ್ತಿತ್ತು.

ುತ್ತಿದ್ದಿತು. ಪ್ರವಾಹವೇಗದಿಂದ ಹಾರಿದ ಹನಿಗಳಿಂದುಂಟಾದ ುಂಜಿನಿಂದಲೂ ಹಾರಾಡುತ್ತಲಿರುವ ಹಂಸ ಸಮೂಹಗಳಿಂದಲೂ ಕಾಶವು ಶರತ್ಕಾಲದ ಮೇಘಗಳಿಂದಲೇ ಸಂಪೂರ್ಣವಾಗಿ ತುಂಬಿರುವಂತೆ ೋರುತ್ತಿತ್ತು. ಆ ಪ್ರವಾಹದ ವಿಚಿತ್ರಗತಿಯನ್ನು ಕೇಳಬೇಕೆ? ಕೆಲವು ಡೆಗಳಲ್ಲಿ ಬಹು ವೇಗದಿಂದ ಓಡುವುದು, ಮತ್ತೆ ಕೆಲವು ಕಡೆಗಳಲ್ಲಿ ಮೆಲ್ಲಗೆ ೋಗುತ್ತಿರುವುದು, ಸ್ವಲ್ಪ ದೂರದವರೆಗೆ ಋಜುಗತಿ, ಕೆಲವು ಕಡೆಗಳಲ್ಲಿ ಕ್ರಗತಿ, ಕೆಲವು ಕಡೆಗಳಲ್ಲಿ ಬಹಳ ಅಗಲವಾಗುವುದು, ಕೆಲವು ಕಡೆ ಳಲ್ಲಿ ಚಿಕ್ಕದಾಗಿ ಹೋಗುವುದು. ಸ್ವಲ್ಪ ದೂರದವರೆಗೆ ತಗ್ಗಿ ಹರಿಯು ುವುದು. ಇನ್ನು ಕೆಲವು ಸ್ಥಳಗಳಲ್ಲಿ ಉಬ್ಬಿ ಬರುತ್ತಿರುವುದು. ಇದ ದೆ ಅಲ್ಲಲ್ಲಿ ಇದಿರಿದಿರಾಗಿ ಬಂದ ಅಲೆಯು ಒಂದನ್ನೊಂದಪ್ಪಳಿಸಿದ ೇಗದಿಂದ ಹನಿಗಳು ಮೇಲೆ ಹಾರಿ ಬೀಳುತ್ತಿರುವುವು. ಹೀಗೆ ಆಕಾಶ ಂದ ರುದ್ರನ ತಲೆಗೂ ಅಲ್ಲಿಂದ ಭೂಮಿಗೂ ಬಿದ್ದ ಗಂಗಾಪ್ರವಾಹವು ಷ್ಕಲ್ಮಷವಾದ ಮತ್ತು ಶುದ್ಧವಾದ ನೀರಿನಿಂದ ಬಹಳ ಮನೋಹರ ಾಗಿ ಕಾಣಿಸಿತು. ಅಲ್ಲಿದ್ದ ದೇವತೆಗಳೂ ಋಷಿಗಳೂ ಗಂಧರ್ವರೂ ೂಲೋಕವಾಸಿಗಳೂ ಪರಮೇಶ್ವರನ ಮೈಯನ್ನು ಮುಟ್ಟಿಬಿದ್ದ ಆ ೀರನ್ನು ಬಹು ಭಕ್ತಿಯಿಂದ ಸ್ಪರ್ಶಮಾಡಿದರು. ಋಷಿಶಾಪದಿಂದ ನುಷ್ಯಜನ್ಮವನ್ನು ಹೊಂದಿ ಭೂಲೋಕದಲ್ಲಿ ನರಳುತ್ತಿದ್ದ ಅನೇಕ ೇವತೆಗಳು ಅದರಲ್ಲಿ ಸ್ನಾನಮಾಡಿ ಶಾಪವಿಮೋಚನೆಯನ್ನು ಹೊಂದಿ ಮ್ಮ ತಮ್ಮ ಲೋಕಗಳನ್ನು ಸೇರಿದರು. ಈ ಭೂಲೋಕವೆಲ್ಲವೂ ಂತಹ ಪುಣ್ಯನದಿಯು ತನಗೆ ಲಭಿಸಿದುದಕ್ಕಾಗಿ ಬಹಳ ಸಂತೋಷ ೊಂದಿತು. ಮಾರ್ಗಶ್ರಮದಿಂದ ಬಳಲಿದ್ದ ಭಗೀರಥನು ಕೂಡ ರಥ ಂದಿಳಿದು, ಆ ನೀರಿನಲ್ಲಿ ಸ್ನಾನಮಾಡಿ ಶ್ರಮಪರಿಹಾರ ಮಾಡಿಕೊಂಡು ನಃ ರಥವನ್ನೇರಿ ಮುಂದೆ ಹೋಗುತ್ತಿದ್ದನು. ಆ ಗಂಗೆಯೂ ಅವನನ್ನೇ ಂಬಾಲಿಸಿ ಹೊರಟಿತು. ದೇವ, ದಾನವ, ಯಕ್ಷ, ಕಿನ್ನರ, ಧರ್ವರೇ ಮೊದಲಾದವರೆಲ್ಲರೂ ಅವರ ಹಿಂದೆಯೇ ಹೋಗುತ್ತಿದ್ದರು. ೀರಥನು ಎಲ್ಲಿ ನಿಂತರೆ ಗಂಗೆಯೂ ಅಲ್ಲಿ ನಿಲ್ಲುವಳು. ಆತನು ತಿರು

ರಥನು ಯಜ್ಞಮಾಡುತ್ತಿದ್ದ ಜಹ್ನು ಮಹರ್ಷಿಯ ಆಶ್ರಮದಲ್ಲಿ ಪ್ರವೇಶಿಸಲು ಗಂಗೆಯೂ ಆತನ ಹಿಂದೆ ಹೋಗುತ್ತಾ ಆ ಪ್ರದೇಶವನ್ನೆಲ್ಲಾ ತೇಲಿಸಿತು. ಆಗ ಜಹ್ನು ಮಹರ್ಷಿಯು ಬಹಳ ಕೋಪಗೊಂಡು ಗಂಗೆಯ ಕೊಬ್ಬನ್ನು ಮುರಿಯಬೇಕೆಂದೆಣಿಸಿ, ಆ ಪ್ರವಾಹದ ನೀರೆಲ್ಲವನ್ನೂ ಒಂದೇ ಆಪೋಶನವಾಗಿ ಕುಡಿದುಬಿಟ್ಟನು. ಆಗ ದೇವತೆಗಳೂ, ಗಂಧರ್ವರೂ, ಋಷಿಗಳೂ, ಈತನ ಮಹಿಮೆಗೆ ಆಶ್ಚರ್ಯಗೊಂಡು ಆತನನ್ನು ಪೂಜಿಸಿ ಈ ಗಂಗೆಯು ಆತನಿಗೆ ಪುತ್ರಿಯಾಗಿರಲೆಂದು ಅಭಯಕೊಡಲು ಆ ಜಹ್ನುವು ಸಂತೋಷಪಟ್ಟು ತನ್ನ ಕಿವಿಯ ಮಾರ್ಗವಾಗಿ ಪುನಃ ಆ ಪ್ರವಾಹವನ್ನು ಹೊರಕ್ಕೆ ಬಿಟ್ಟನು. ಎಲೈ ರಾಮನೆ! ಈ ಕಾರಣದಿಂದಲೇ ಈಗಲೂ ಗಂಗೆಯನ್ನು “ಜಾಹ್ನವಿ”ಯೆಂದು ಕರೆಯುತ್ತಿರುವರು. ಆಮೇಲೆ ಗಂಗೆಯು ಮೊದಲಿನಂತೆಯೇ ಭಗೀರಥನ ರಥವನ್ನು ಹಿಂಬಾಲಿಸುತ್ತಾ ಹೋಗಿ ಸಾಗರದಲ್ಲಿ ಪ್ರವೇಶಿಸಿ ಪಾತಾಳವನ್ನೂ ಸೇರಿತು. ಅಲ್ಲಿ ಆ ಭಗೀರಥನು ಭಸ್ಮರಾಶಿಯಾಗಿ ಬಿದ್ದಿದ್ದ ತನ್ನ ತಾತಂದಿರನ್ನು ನೋಡಿ ದುಃಖಿತನಾಗಿ ಕೊನೆಗೆ ತಾನು ಮಹಾ ಪ್ರಯತ್ನದಿಂದ ತಂದ ಆ ಗಂಗೆಯನ್ನು ಆ ಭಸ್ಮರಾಶಿಯ ಮೇಲೆ ಪ್ರವಹಿಸಬೇಕೆಂದು ಪ್ರಾರ್ಥಿಸಲು ಅದರಂತೆ ಗಂಗೆಯು ಆ ಬೂದಿಯನ್ನು ತನ್ನ ಪ್ರವಾಹದಿಂದ ಕೊಚ್ಚಿಸಿದಳು. ಆ ಅರವತ್ತು ಸಾವಿರ ಮಂದಿ ಮಕ್ಕಳೂ ಪಾಪದಿಂದ ಬಿಡಲ್ಪಟ್ಟು ಸ್ವರ್ಗವನ್ನು ಸೇರಿದರು.

ಸರ್ಗ ೪೪

ಬ್ರಹ್ಮನು ಭಗೀರಥನೊಡನೆ ಸಂಭಾಷಿಸಿದುದು

ಹೀಗೆ ಭಗೀರಥನು ಗಂಗೆಯನ್ನು ಕರೆತಂದು ಪಾತಾಳದಲ್ಲಿದ್ದ ತನ್ನ ತಾತಂದಿರ ಭಸ್ಮರಾಶಿಯನ್ನು ಕೊಚ್ಚಿಸಿದ ಮೇಲೆ ಲೋಕನಾಯಕನಾದ ಬ್ರಹ್ಮನು ಅಲ್ಲಿಗೆ ಬಂದು ಭಗೀರಥನನ್ನು ನೋಡಿ “ಎಲೈ ಪುರುಷಶ್ರೇಷ್ಠನೆ! ನಿನ್ನ ಮುತ್ತಾತಂದಿರಾದ ಅರವತ್ತು ಸಾವಿರ ಮಂದಿ ಸಗರಪುತ್ರರೂ ನಿನ್ನಿಂದ ಉದ್ಧರಿಸಲ್ಪಟ್ಟು ಸ್ವರ್ಗಲೋಕವನ್ನು ಸೇರಿ ದೇವತ್ವವನ್ನು ಹೊಂದಿರುವರು. ಎಲೈ ರಾಜನೆ! ಎಷ್ಟರವರೆಗೆ ಈ ಸಾಗರಗಳು ಸ್ಥಿರವಾಗಿರುವುವೋ ಅದುವರೆಗೂ ಆ ಸಗರಪುತ್ರರೂ ದೇವಸ್ವರೂಪದಿಂದಿರುವರು. ಮತ್ತು ಈ ಗಂಗೆಯು ನಿನಗೆ ಹಿರಿಯ ಮಗಳೆಂದು

ಲೋಕದಲ್ಲಿ ಪ್ರಸಿದ್ಧಿ ಹೊಂದುವಳು. ನಿನ್ನಿಂದಲೇ ಈಕೆಗೆ ಸ್ವರ್ಗ ಮರ್ತ್ಯ ಪಾತಾಳಗಳೆಂಬ ಮೂರು ಲೋಕಗಳಲ್ಲಿಯೂ ಸಂಚಾರವುಂಟಾದುದರಿಂದ ಈಕೆಗೆ 'ತ್ರಿಪಥಗೆ' ಎಂಬ ಹೆಸರೂ ಪ್ರಖ್ಯಾತವಾಗುವುದು. ಈಕೆಗೈ 'ಭಾಗೀರಥಿ, ತ್ರಿಪಥಗೆ, ಜಾಹ್ನವಿ' ಎಂಬ ಈ ಹೆಸರುಗಳೆಲ್ಲವೂ ಬರುವುದಕ್ಕೆ ನೀನೇ ಕಾರಣವು. ಎಲೆ ಭಗೀರಥನೆ! ನಿನ್ನ ತಾತಂದಿರೆಲ್ಲರಿಗೂ ಇದರಲ್ಲಿಯೇ ತರ್ಪಣವನ್ನು ಬಿಟ್ಟು ನಿನ್ನ ಪ್ರತಿಜ್ಞೆಯನ್ನು ನೆರವೇರಿಸು! ಮಹಾ ಯಶಸ್ವಿಯೆಂದು ಖ್ಯಾತಿಹೊಂದಿ, ನಿನ್ನ ವಂಶದಲ್ಲಿ ಹಿರಿಯನಾಗಿ ಧಾರ್ಮಿಕನಾಗಿದ್ದ ಸಗರಚಕ್ರವರ್ತಿಗೆ ಕೂಡ ಈ ಉದ್ದೇಶವು ನೆರವೇರಲಿಲ್ಲ. ಎಣೆಯಿಲ್ಲದ ತೇಜಸ್ಸುಳ್ಳ ಅಂಶುಮಂತನು ಬಹುಕಾಲದವರೆಗೆ ಗಂಗೆಯನ್ನು ಕುರಿತು ತಪಸ್ಸುಮಾಡಿದರೂ ಇದು ಸಾಧ್ಯವಾಗಲಿಲ್ಲ. ಇದೂ ಅಲ್ಲದೆ ಮಹರ್ಷಿಗಳಿಗೆ ಸಮಾನವಾದ ತೇಜಸ್ಸುಳ್ಳವನಾಗಿಯೂ ಇದ್ದು ರಾಜರ್ಷಿಯೆಂದು ಪ್ರಸಿದ್ಧಿಹೊಂದಿದ ನಿನ್ನ ತಂದೆಯಾದ ದಿಲೀಪನಿಗೂ ಈ ಗಂಗೆಯನ್ನು ತರುವುದು ಸಾಧ್ಯವಿಲ್ಲದೇ ಹೋಯಿತು. "ಎಲೈ ಪುರುಷಶ್ರೇಷ್ಠನೆ! ಅಂತಹ ಮಹಾ ಪ್ರತಿಜ್ಞೆಯನ್ನು ಈಗ ನೀನು ಪೂರ್ತಿಮಾಡಿದೆ. ಇದರಿಂದ ನಿನಗೆ ಲೋಕದಲ್ಲಿ ಬಹಳ ಕೀರ್ತಿಯುಂಟಾಯಿತು. ನೀನು ಈ ಗಂಗೆಯನ್ನು ಇಳಿಸಿದುದರಿಂದ ಧರ್ಮಗಳೆಲ್ಲಕ್ಕೂ ನೀನೇ ಮೂಲಸ್ಥಾನನೆನಿಸಿಕೊಂಡೆ. ಎಲೈ ರಾಜೇಂದ್ರನೇ! ಈ ಗಂಗೆಯು ಸಾಮಾನ್ಯವಾದ ಇತರ ನದಿಗಳಂತಲ್ಲ. ಯಾವಾಗಲೂ ಪವಿತ್ರವಾದುದು. ಇದರಲ್ಲಿ ಸ್ನಾನಮಾಡಿ ನೀನೂ ಶುದ್ಧನಾಗು. ಇದರಿಂದ ಅನೇಕ ಪುಣ್ಯಫಲಗಳುಂಟು. ಇದರಲ್ಲಿಯೇ ನಿನ್ನ ಮುತ್ತಾತಂದಿರಿಗೆ ಜಲಕ್ರಿಯೆಗಳನ್ನು ನಡೆಸು. ನಿನಗೆ ಮಂಗಳವಾಗಲಿ. ಇನ್ನು ನಾನು ನನ್ನ ಲೋಕಕ್ಕೆ ಹೋಗುವೆನು" ಎಂದು ಆಶೀರ್ವದಿಸಿ ಕಣ್ಮರೆಯಾದನು. ಆಮೇಲೆ ಭಗೀರಥನು ಶಾಸ್ತ್ರೋಕ್ತವಾಗಿ ತನ್ನ ತಾತಂದಿರಿಗೆ ಮಾಡಬೇಕಾದ ಜಲಕ್ರಿಯೆಗಳನ್ನು ಮಾಡಿ ತಾನೂ ಸ್ನಾನಮಾಡಿ ಈಗಲೀಗ ಕೃತಕೃತ್ಯನಾದೆನೆಂದು ಸಂತೋಷದಿಂದ ತನ್ನ ಪಟ್ಟಣಕ್ಕೆ ಬಂದು ರಾಜ್ಯವನ್ನಾಳುತ್ತಿದ್ದನು. ಆಗ ಆ ದೇಶದ ಪ್ರಜೆಗಳೆಲ್ಲರೂ ಆತನ ರಾಜ್ಯದಲ್ಲಿ ನಿಶ್ಚಿಂತರಾಗಿ ಸಕಲ ಸಂಪತ್ಸಮೃದ್ಧಿಯಿಂದ ಕೂಡಿ ಸಂತೋಷಪಡುತ್ತಿದ್ದರು. ಎಲೈ ರಾಮನೆ! ಇದೀಗ ಗಂಗಾ

ವೃತ್ತಾಂತವು. ಇದನ್ನು ವಿವರವಾಗಿ ನಿನಗೆ ತಿಳಿಸಿರುವೆನು. ಸಂಧ್ಯಾ ಕಾಲವು ಮೀರಿಹೋಗುತ್ತಿರುವುದು. ಮುಂದಿನ ಪ್ರಸಂಗವು ಹಾಗಿರಲಿ. ಸಂಪತ್ತನ್ನೂ ಯಶಸ್ಸನ್ನೂ ಆಯುಸ್ಸನ್ನೂ ಪುತ್ರಸಂತಾನವನ್ನೂ ಪುಣ್ಯಲೋಕಗಳನ್ನೂ ಕೊಡತಕ್ಕ ಗಂಗಾವತರಣದ ಕಥೆಯನ್ನು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣದವರಲ್ಲಿ ಯಾರು ಭಕ್ತಿಯಿಂದ ಕೇಳುವರೋ ಅಥವಾ ಹೇಳುವರೋ ಅವರಿಗೆ ಪಿತೃದೇವತೆಗಳೂ ದೇವತೆಗಳೂ ಪ್ರಸನ್ನರಾಗುವರು. ಸರ್ವಾಭೀಷ್ಟಗಳೂ ಸಿದ್ಧಿಸುವುವು. ಅವರು ಸಮಸ್ತ ಪಾಪಗಳಿಂದಲೂ ಬಿಡಲ್ಪಡುವರು. ಅವರಿಗೆ ಆಯುಸ್ಸೂ ಹೆಚ್ಚುವುದು" ಎಂದನು.

ಸರ್ಗ ೪೫

ವಿಶಾಲಪುರ ವೃತ್ತಾಂತವೂ ಸಮುದ್ರಮಥನವೂ.

ರಾಮ ಲಕ್ಷ್ಮಣರಿಬ್ಬರೂ ಈ ಕಥೆಯನ್ನು ಕೇಳಿ ಆಶ್ಚರ್ಯಗೊಂಡು ವಿಶ್ವಾಮಿತ್ರನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೆ! ಪರಿಶುದ್ಧವಾದ ಗಂಗಾವತರಣದ ಕಥೆಯೂ ಸಾಗರವನ್ನು ತುಂಬಿದ ಕಥೆಯೂ ಅತ್ಯಾಶ್ಚರ್ಯಕರವಾಗಿರುವುವು" ಎಂದು ಆತನನ್ನು ಬಹಳವಾಗಿ ಕೊಂಡಾಡಿ ಆ ಕಥೆಯೆಲ್ಲವನ್ನೂ ಮನಸ್ಸಿನಲ್ಲಿಯೇ ಚಿಂತಿಸುತ್ತ ಆ ರಾತ್ರಿಯನ್ನು ಕಳೆದರು. ಬೆಳಗಾದ ಮೇಲೆ ಪ್ರಾತರಾಹ್ನಿಕಗಳನ್ನು ಮುಗಿಸಿದ ವಿಶ್ವಾಮಿತ್ರನನ್ನು ನೋಡಿ ರಾಮನು "ಎಲೈ ಪೂಜ್ಯನೆ! ಈ ರಾತ್ರಿಯು ಅತಿ ಪೂಜ್ಯವಾದುದೆಂದೆಣಿಸುವೆನು. ನೀನು ಹೇಳಿದ ಮನೋಹರವಾದ ಈ ಪುಣ್ಯಚರಿತ್ರವನ್ನೇ ಮನಸ್ಸಿನಲ್ಲಿ ಚಿಂತಿಸುತ್ತಿರುವ ನನಗೆ ರಾತ್ರಿಯೆಲ್ಲವೂ ನಿಮಿಷಮಾತ್ರದಲ್ಲಿ ಕಳೆದುಹೋಯಿತು. ಇನ್ನು ಈ ಗಂಗಾನದಿಯನ್ನು ದಾಟಬೇಕಲ್ಲವೆ? ಪುಣ್ಯಕರ್ಮಪರಾಯಣರಾದ ಋಷಿಗಳಿಗೆ ಯೋಗ್ಯವಾದ ಈ ದೋಣಿಯು ನಮಗಾಗಿಯೇ ಇಲ್ಲಿ ಸಿದ್ಧಪಡಿಸಲ್ಪಟ್ಟಹಾಗಿದೆ" ಎಂದನು. ಇದನ್ನು ಕೇಳಿ ವಿಶ್ವಾಮಿತ್ರನು ರಾಮಲಕ್ಷ್ಮಣರೊಡನೆಯೂ, ಋಷಿಗಳೊಡನೆಯೂ ಆ ಗಂಗಾನದಿಯನ್ನು ದಾಟಿ, ಉತ್ತರ ತೀರಕ್ಕೆ ಹೋಗಿ, ಅಲ್ಲಿದ್ದ ಋಷಿಗಳೆಲ್ಲರನ್ನೂ ಪೂಜಿಸಿ, ಅಲ್ಲಿಯೇ ಸ್ವಲ್ಪ ಕಾಲದವರೆಗೂ ಇದ್ದು, ಮುಂದೆ ಕಾಣುತ್ತಿದ್ದ "ವಿಶಾಲೆ"

ಯೆಂಬ ಪಟ್ಟಣವನ್ನು ನೋಡಿ, ಆ ಪಟ್ಟಣಕ್ಕೆ ಹೋಗಲು ಆಗ ರಾಮನು ವಿಶ್ವಾಮಿತ್ರನಿಗೆ ಕೈಮುಗಿದು, "ಎಲೈ ಮಹರ್ಷಿಯೇ! ಯಾವ ವಂಶದ ರಾಜರು ಇದನ್ನಾಳುತ್ತಿರುವರು? ಇದನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವುಂಟು" ಎಂದನು. ಅದಕ್ಕೆ ಆ ವಿಶ್ವಾಮಿತ್ರನು ಅದರ ಚರಿತ್ರೆಲ್ಲವನ್ನೂ ವಿಸ್ತಾರವಾಗಿ ಹೇಳಲಾರಂಭಿಸಿ, ರಾಮನನ್ನು ಕುರಿತು "ಎಲೈ ವತ್ಸನೆ! ಕೇಳು. ಈ ದೇಶದಲ್ಲಿ ನಡೆದ ಚರಿತ್ರವೆಲ್ಲವನ್ನೂ ತಿಳಿಸುವೆನು. ಇಂದ್ರನ ವೃತ್ತಾಂತವೂ ಇದಕ್ಕೆ ಸಂಬಂಧಿಸಿರುವುದು. ಮೊದಲು ಕೃತಯುಗದಲ್ಲಿ ಕಶ್ಯಪನ ಪತ್ನಿಯರಾದ ದಿತಿ, ಅದಿತಿ ಎಂಬಿವರಿಗೆ ಬಹಳ ಮಕ್ಕಳು ಹುಟ್ಟಿದರು. ದಿತಿಯ ಮಕ್ಕಳು ಬಲದಲ್ಲಿ ಮಾತ್ರ ಬಹಳ ಮೇಲೆನಿಸಿಕೊಂಡಿದ್ದರು. ಅದಿತಿಯ ಮಕ್ಕಳಾದರೋ ಬಲಾಢ್ಯರಾಗಿಯೂ, ಧರ್ಮಬುದ್ಧಿಯುಳ್ಳವರಾಗಿಯೂ ಇದ್ದರು. ಇವರೆಲ್ಲರಿಗೂ ತಾವು ಮುಪ್ಪನ್ನಾಗಲೀ ಸಾವನ್ನಾಗಲೀ ಹೊಂದದಿರಬೇಕೆಂಬ ಬುದ್ಧಿಯು ಹುಟ್ಟಿತು. ಅದಕ್ಕೆ ಉಪಾಯವೇನೆಂದು ಚಿಂತಿಸುತ್ತಿರುವಾಗ ಕ್ಷೀರಸಮುದ್ರವನ್ನು ಕಡೆದು ಅಮೃತವನ್ನು ಸಂಪಾದಿಸುವುದೇ ಇದಕ್ಕೆ ತಕ್ಕ ಉಪಾಯವೆಂದು ತೋರಿತು. ಆಗ ಎಲ್ಲರೂ ಹಾಗೆಯೇ ಮಾಡಬೇಕೆಂದು ನಿಶ್ಚಯಿಸಿಕೊಂಡು ಮಂದರಪರ್ವತವನ್ನೇ ಕಡೆಗೋಲನ್ನಾಗಿಯೂ ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ ಮಾಡಿ ಸಮುದ್ರವನ್ನು ಕಡೆಯಲಾರಂಭಿಸಿದರು. ಹೀಗೆ ಅನೇಕ ವರುಷಗಳವರೆಗೆ ಕಡೆಯುತ್ತಿರಲು, ಹಗ್ಗವಾಗಿದ್ದ ವಾಸುಕಿಯ ಸಾವಿರ ಬಾಯಿಗಳೂ ಅತಿ ಕ್ರೂರವಾದ ವಿಷವನ್ನು ಕಕ್ಕುತ್ತಾ, ಆ ಬೆಟ್ಟದ ಕಲ್ಲುಗಳೆಲ್ಲವನ್ನೂ ಹಲ್ಲುಗಳಿಂದ ಕಡಿಯುವುದಕ್ಕೆ ಆರಂಭಿಸಿದುವು. ಆಗ ಬೆಂಕಿಯಂತೆ ಉರಿಯುತ್ತಿರುವ 'ಹಾಲಾಹಲ' ವೆಂಬ ಮಹಾವಿಷವು ಹೊರಟು ಲೋಕವೆಲ್ಲವನ್ನೂ ಸುಡುವುದಕ್ಕೆ ತೊಡಗಿತು. ಆಗ ದೇವತೆಗಳೆಲ್ಲರೂ ರುದ್ರನನ್ನು ಮರೆಹೊಕ್ಕು "ರಕ್ಷಿಸು! ರಕ್ಷಿಸು!! ಎಂದು ಮೊರೆಯಿಟ್ಟರು." ದೇವದೇವನಾದ ರುದ್ರನು ಅಲ್ಲಿಗೆ ಬರಲು, ಆತನನ್ನು ನೋಡಿ ಶಂಖಚಕ್ರಧಾರಿಯಾದ ಮಹಾವಿಷ್ಣುವು ಮಂದಹಾಸದೊಡನೆ ಕೂಡಿ "ಎಲೈ ರುದ್ರನೆ! ಸಮುದ್ರವನ್ನು ಕಡೆಯುತ್ತಿರುವಾಗ ಈ ವಿಷವೇ ಮೊದಲು ಹುಟ್ಟಿರುವುದು; ಈ ಸಮಸ್ತ ದೇವತೆಗಳಿಗೂ ನೀನೇ ಮೊದಲು ಹುಟ್ಟಿದವ

ನಾದದರಿಂದ ನಿನಗೆ ಅಗ್ರ ಮರ್ಯಾದೆಯು ನಡೆಯಬೇಕಲ್ಲವೆ? ಆದುದರಿಂದ ಇದನ್ನೇ ಮೊದಲು ಮರ್ಯಾದೆಯೆಂದೆಣಿಸಿ ಈ ವಿಷವನ್ನು ಸ್ವೀಕರಿಸು" ಎಂದು ಹೇಳಿ, ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ಆಗ ರುದ್ರನು ದೇವತೆಗಳಿಗುಂಟಾಗಿರುವ ಈ ಮಹಾಭಯವನ್ನು ನೋಡಿ ಮರುಕದಿಂದಲೂ, ವಿಷ್ಣುವಿನ ಪ್ರಾರ್ಥನೆಯಲ್ಲಿ ಗೌರವಭಾವದಿಂದಲೂ ಆ ಕಾಲಕೂಟವನ್ನು ಅಮೃತದಂತೆ ಸುಲಭವಾಗಿ ಆ ಕ್ಷಣವೇ ಕುಡಿದು ತನ್ನ ಸ್ಥಾನಕ್ಕೆ ಹೊರಟುಹೋದನು. ಆಮೇಲೆ ದೇವಾಸುರರು ಪುನಃ ಆ ಸಮುದ್ರವನ್ನು ಬಹು ವೇಗದಿಂದ ಕಡೆಯುತ್ತಿರುವಾಗ, ಆ ಮಂದರ ಪರ್ವತವು ಸಮುದ್ರದಲ್ಲಿ ಮುಳುಗಿ ಪಾತಾಳದವರೆಗೂ ಜಾರಿಟು ಹೋಯಿತು. ಆಗ ದೇವತೆಗಳೆಲ್ಲರೂ ಚಿಂತಾಕ್ರಾಂತರಾಗಿ ವಿಷ್ಣುವಿನಲ್ಲಿ ಮರೆಹೊಕ್ಕು "ಎಲೈ ಶ್ರೀಮನ್ನಾರಾಯಣನೆ! ನೀನಲ್ಲದೆ ನಮಗೆ ಬೇರೆ ಗತಿಯಾರು? ನಮ್ಮನ್ನು ರಕ್ಷಿಸು. ಮುಳುಗಿಹೋಗಿರುವ ಬೆಟ್ಟವನ್ನು ನೀನೇ ಎತ್ತಬೇಕಾಗಿರುವುದು" ಎಂದು ಪ್ರಾರ್ಥಿಸಿದರು. ಆಗ ವಿಷ್ಣುವು ಆಮೆಯ ರೂಪದಿಂದ ಸಮುದ್ರದಲ್ಲಿ ಹೊಕ್ಕು, ಆ ಬೆಟ್ಟವನ್ನು ಬೆನ್ನಿನ ಮೇಲೆ ಹೊತ್ತು ನಿಂತುದಲ್ಲದೆ ತಾನು ಸರ್ವಾಂತರ್ಯಾಮಿಯಾದುದರಿಂದ ಆ ಪರ್ವತದ ಶಿಖರದ ಮೇಲೆ ಕೈಯನ್ನೂರಿ, ದೇವತೆಗಳಿಗೂ ರಾಕ್ಷಸರಿಗೂ ನಡುವೆ ನಿಂತು ತಾನೂ ಕಡೆಯಲಾರಂಭಿಸಿದನು. ಹೀಗೆ ಒಂದು ಸಾವಿರ ವರ್ಷಗಳು ಕಳೆದಮೇಲೆ ದಂಡ ಕಮಂಡಲಗಳನ್ನು ಧರಿಸಿದ ಧನ್ವಂತರಿಯೆಂಬ ಮಹಾಪುರುಷನೊಬ್ಬನು ಹುಟ್ಟಿದನು. ಆಮೇಲೆ ಮಹಾ ವರ್ಚಸ್ಸುಳ್ಳ ಅಪ್ಸರಸ್ತ್ರೀಯರು ಹುಟ್ಟಿದರು. ಹೀಗೆ ಹಾಲನ್ನು ಕಡೆಯುತ್ತಿರುವಾಗ ಅದರಿಂದುಂಟಾದ ರಸದಲ್ಲಿ ಆ ಸ್ತ್ರೀಯರುಗಳು ಹುಟ್ಟಿದುದರಿಂದಲೇ ಅವರಿಗೆ ಅಪ್ಸರಸ್ಸುಗಳೆಂಬ ಹೆಸರುಂಟಾಯಿತು. ಹೀಗೆ ಹುಟ್ಟಿದ ಸ್ತ್ರೀಯರ ಸಂಖ್ಯೆಯು ಅರುವತ್ತು ಕೋಟಿಗಳವರೆಗೂ ಇದ್ದುದಲ್ಲದೆ, ಇವರ ಪರಿಚಾರಿಕೆಯರೂ ಅಸಂಖ್ಯಾತರಾಗಿದ್ದರು. ಆ ಸ್ತ್ರೀಯರನ್ನು ದೇವತೆಗಳಲ್ಲಿಯಾಗಲಿ, ದಾನವರಲ್ಲಿಯಾಗಲಿ, ಯಾರೂ ಕೈಹಿಡಿದು ಮದುವೆ ಮಾಡಿಕೊಳ್ಳದುದರಿಂದ ಅವರು ವೇಶ್ಯಾಸ್ತ್ರೀಯರೆನಿಸಿಕೊಂಡರು. ಆಮೇಲೆ ವರುಣನ ಮಗಳಾದ ವಾರುಣಿಯೆಂಬುವಳು ಉದ್ಭವಿಸಿ ತನ್ನನ್ನು ಪರಿಗ್ರಹಿಸತಕ್ಕವರಾರೆಂದು ಹುಡುಕುತ್ತಿದ್ದಳು.

ಆಕೆಯನ್ನೂ ದಿತಿಯ ಮಕ್ಕಳೊಬ್ಬರೂ ಪರಿಗ್ರಹಿಸದಿರಲು, ಆಗ ಅದಿತಿಯ ಮಕ್ಕಳು ಅವಳನ್ನು ಪರಿಗ್ರಹಿಸಿದರು. ಹೀಗೆ ವಾರುಣಿಯನ್ನು ಪರಿಗ್ರಹಿಸಿದುದರಿಂದಲೇ ಅದಿತಿಯ ಮಕ್ಕಳಿಗೆ ಸುರರೆಂದೂ, ದಿತಿಯ ಪುತ್ರರಿಗೆ ಅಸುರರೆಂದೂ ಹೆಸರುಂಟಾಯಿತು. ಆಮೇಲೆ ಉಚ್ಚೈಶ್ರವಸ್ಸೆಂಬ ಕುದುರೆಯೂ "ಕೌಸ್ತುಭ" ವೆಂಬ ಮಹಾರತ್ನವೂ ಹುಟ್ಟಿದುವು. ಕೊನೆಗೆ ಉತ್ತಮವಾದ ಅಮೃತವೂ ಉದ್ಭವಿಸಿತು. ಎಲೈ ರಾಮನೆ! ಈ ಅಮೃತಕ್ಕಾಗಿಯೇ ದೇವದಾನವರಲ್ಲಿ ದೊಡ್ಡ ಕಲಹವುಂಟಾಗಿ ಅನೇಕ ವಂಶ ಕ್ಷಯವಾಯಿತು. ಅದಿತಿಯ ಮಕ್ಕಳೆಲ್ಲರೂ ಒಂದಾಗಿ ಸೇರಿ ದಿತಿ ಪುತ್ರರನ್ನು ಕೊಲ್ಲುತ್ತಿದ್ದರು. ಆಗ ದೈತ್ಯರೂ ರಾಕ್ಷಸರೂ ಐಕಮತ್ಯದಿಂದ ಕೂಡಿ ದೇವತೆಗಳನ್ನು ಇದಿರಿಸಲಾರಂಭಿಸಿದರು. ಭಯಂಕರವಾದ ಯುದ್ಧವು ನಡೆಯುತ್ತಿತ್ತು. ಹೀಗೆ ಈ ಎರಡು ಪಕ್ಷದವರೂ ಹೊಡೆದಾಡಿ ಸಾಯುತ್ತಿರುವುದನ್ನು ನೋಡಿ, ಲೋಕರಕ್ಷಕನಾದ ಶ್ರೀಮನ್ನಾರಾಯಣನು ತನ್ನ ಮಾಯೆಯಿಂದ ತ್ರೈಲೋಕ್ಯವನ್ನೂ ಮರುಳು ಮಾಡುವಂತಿರುವ ಒಂದು ಸ್ತ್ರೀರೂಪವನ್ನು ಧರಿಸಿ, ದಿತಿಯ ಮಕ್ಕಳನ್ನು ವಂಚಿಸಿ, ಅಮೃತ ಕಲಶವನ್ನು ವೇಗದಿಂದ ಎತ್ತಿಕೊಂಡು ಹೋದನು. ಹೀಗೆ ಹೋಗುತ್ತಿರುವಾಗ ಆತನನ್ನು ಮರೆಹೊಕ್ಕು ನಿಂತ ದೇವತೆಗಳೆಲ್ಲರೂ ಅವನ ಅನುಗ್ರಹಕ್ಕೊಳಪಟ್ಟರು. ಆ ದೇವತೆಗಳೆಲ್ಲರೂ ವಿಷ್ಣುವಿನ ಅನುಗ್ರಹದಿಂದಲೂ, ಆತನ ಅಂಶದಿಂದಲೂ ಮಹಾಬಲವುಳ್ಳವರಾಗಿ ದೈತ್ಯರನ್ನು ಕೊಂದು ಜಯವನ್ನು ಪಡೆದರು. ಕೊನೆಗೆ ಇಂದ್ರನೂ ಜಯ ಹೊಂದಿ ಸ್ವರ್ಗಲೋಕ ಸಾಮ್ರಾಜ್ಯವನ್ನು ಪಡೆದು ಸುಖದಿಂದ ಅದನ್ನು ಪರಿಪಾಲಿಸುತ್ತಿದ್ದನು.

ಸರ್ಗ ೪೬

ದಿತಿಯು ತಪಸ್ಸನ್ನು ಮಾಡಿದುದು

ಹೀಗೆ ತನ್ನ ಮಕ್ಕಳಿಗುಂಟಾದ ಸಾವನ್ನು ಕೇಳಿ ದಿತಿಯು ತನ್ನ ಗಂಡನಾದ ಕಾಶ್ಯಪನನ್ನು ಕುರಿತು "ಎಲೈ ಪ್ರಿಯನೆ! ಬಲಾಢ್ಯರಾದ ನಿನ್ನ ಮಕ್ಕಳು ನನ್ನ ಹೊಟ್ಟೆಯಲ್ಲಿ ಹುಟ್ಟಿದವರೆಲ್ಲರನ್ನೂ ಕೊಂದುಬಿಟ್ಟರು. ಆ ದೇವತೆಗಳಲ್ಲಿ ಪ್ರಮುಖನಾದ ಇಂದ್ರನನ್ನು ಕೊಲ್ಲುವುದಕ್ಕೆ ತಕ್ಕ

ಸಾಮರ್ಥ್ಯವುಳ್ಳ ಒಬ್ಬ ಮಗನನ್ನು ಪಡೆಯುವುದಕ್ಕಾಗಿ ಒಂದು ಘೋರವಾದ ತಪಸ್ಸನ್ನು ಮಾಡಬೇಕೆಂದಿರುವೆನು. ಇನ್ನು ನಾನು ತಪಸ್ಸಿಗೆ ಹೊರಡುವೆನು. ಎಲೈ ನಾಯಕನೆ! ನನಗೆ ಅಂತಹ ಗರ್ಭವನ್ನನು ಗ್ರಹಿಸು. ಆ ಗರ್ಭದಿಂದ ಮಹಾ ಧನುರ್ಧಾರಿಯಾಗಿ ಬಲವಂತನಾಗಿ ನಮ್ಮ ಸ್ಥಿತಿಯನ್ನು ಚೆನ್ನಾಗಿ ತಿಳಿದವನಾಗಿ ಸಮದರ್ಶಿಯಾಗಿ, ಲೋಕನಾಯಕನೆಂದು ಪ್ರಸಿದ್ಧಿ ಹೊಂದಿ ಇಂದ್ರನನ್ನು ಕೊಲ್ಲತಕ್ಕ ಶಕ್ತಿಯುಳ್ಳ ಪುತ್ರನುಂಟಾಗುವಂತೆ ನೀನು ಅನುಗ್ರಹಿಸಬೇಕು. ನನಗೆ ಈಗ ತಪಸ್ಸಿಗೆ ಆಜ್ಞೆಯನ್ನು ಕೊಡು'' ಎಂದಳು. ಈ ಮಾತನ್ನು ಕೇಳಿ ಮರೀಚಿಪುತ್ರನಾದ ಕಾಶ್ಯಪನು ದುಃಖಿತೆಯಾದ ದಿತಿಯನ್ನು ಕುರಿತು "ಎಲೈ ತಪಸ್ವಿನಿಯೆ! ಹಾಗೆಯೇ ಆಗಲಿ; ನಿನಗೆ ಶುಭವಾಗುವುದು. ಇಂದ್ರನನ್ನು ಜಯಿಸತಕ್ಕ ಪುತ್ರನನ್ನೇ ನೀನು ಪಡೆಯುವೆ. ನೀನು ಒಂದುಸಾವಿರ ವರ್ಷದ ವರೆಗೆ ಶುಚಿಯಾಗಿ ತಪಸ್ಸನ್ನು ಮಾಡಿ ಬಾ! ಮೂರು ಲೋಕಕ್ಕೂ ಪ್ರಭುವಾಗತಕ್ಕ ಪುತ್ರನನ್ನೇ ನನ್ನ ಅನುಗ್ರಹದಿಂದ ಪಡೆಯುವೆ" ಎಂದು ಕೈಯಿಂದ ಆಕೆಯ ದೇಹವನ್ನು ಸವರಿ, ಆಶೀರ್ವದಿಸಿ ತಪಸ್ಸಿಗೆ ಹೋದನು. ದಿತಿಯೂ ಬಹಳ ಸಂತೋಷದಿಂದ ಕುಶಪ್ಲವನವೆಂಬ ಸ್ಥಳಕ್ಕೆ ಹೋಗಿ, ಕ್ರೂರವಾದ ತಪಸ್ಸನ್ನು ಮಾಡಲಾರಂಭಿಸಿದಳು. ಹೀಗೆ ಈಕೆಯು ತಪಸ್ಸು ಮಾಡುತ್ತಿರುವ ಕಾಲದಲ್ಲಿ, ಇಂದ್ರನು ಈಕೆಯಲ್ಲಿ ಬಹಳ ವಿನಯವನ್ನು ತೋರಿಸುತ್ತಾ ಇವಳಿಗೆ ಬೇಕಾದ ಸಮಿತ್ತು, ದರ್ಭೆ, ಅಗ್ನಿ ಮುಂತಾದುವುಗಳನ್ನೂ, ಗಡ್ಡೆ, ಗೆಣಸು, ಹಣ್ಣು ಮೊದಲಾದ ಆಹಾರ ಸಾಮಗ್ರಿಗಳನ್ನೂ ತಂದುಕೊಟ್ಟು ಉಪಚರಿಸುತ್ತಿದ್ದನು. ಇದಲ್ಲದೆ ಬಹಳ ಭಕ್ತಿಯಿಂದ ಆಕೆಯ ಕಾಲುಗಳನ್ನೊತ್ತುತ್ತಲೂ ಬೀಸುತ್ತಲೂ ಎಡೆಬಿಡದೆ ಉಪಚಾರಗಳನ್ನು ಮಾಡುತ್ತಲೂ ಇದ್ದನು, ಇವಳು ತನ್ನ ತಪಸ್ಸನ್ನು ಮುಗಿಸುವುದಕೆ ಕ್ಲುಪ್ತಮಾಡಿಕೊಂಡಿದ್ದ ಸಾವಿರ ವರ್ಷಗಳು ಮುಗಿಯುತ್ತ ಬಂದು ಇನ್ನು ಹತ್ತುವರ್ಷಗಳು ಮಾತ್ರವೇ ಉಳಿದಿದ್ದಾಗ ದಿತಿಯು ಆ ಇಂದ್ರನು ಮಾಡುತ್ತಿದ್ದ ಉಪಚಾರಕ್ಕೆ ಬಹಳವಾಗಿ ಮೆಚ್ಚಿ ಇಂದ್ರನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವಳು. "ಎಲೈ ದೇವಶ್ರೇಷ್ಠನೆ! ನಿನ್ನ ತಂದೆಯಾದ ಮಹಾತ್ಮನಾದ ಕಶ್ಯಪನನ್ನು ನಾನು ಪ್ರಾರ್ಥಿಸಿಕೊಂಡಿರುವುದರಿಂದ ಸಾವಿರ ವರ್ಷಗಳ ಮೇಲೆ ನನಗೆ ಒಬ್ಬ

ಪುತ್ರನುಂಟಾಗುವನೆಂದು ಅನುಗ್ರಹಿಸಿರುವನು. ಆ ಕ್ಲುಪ್ತಕಾಲಕ್ಕೆ ಇನ್ನು ಹತ್ತು ವರ್ಷಗಳು ಮಾತ್ರವೇ ಉಳಿದಿರುವುವು. ಆಮೇಲೆ ನೀನು ನಿನ್ನ ಒಡಹುಟ್ಟಿದವನನ್ನು ನೋಡಬಹುದು. ಎಲೈ ಇಂದ್ರನೆ ಹುಟ್ಟುವಾಗಲೇ ಆತನು ನಿನ್ನನ್ನು ಜಯಿಸಬೇಕೆಂಬ ಆತುರವುಳ್ಳವನಾಗಿರುವನು. ನಾನು ಅವನನ್ನು ಸಮಾಧಾನಪಡಿಸಿ, ನಿನ್ನನ್ನು ದ್ವೇಷಿಸದಂತೆ ಮಾಡುವೆನು. ಅವನೊಡನೆ ಕಲೆತು ನೀನು ಮೂರು ಲೋಕಗಳನ್ನೂ, ಜಯಿಸಿ ನಿಷ್ಕಂಟಕವಾಗಿ ಆಳು" ಎಂದು ಹೇಳಿ, ಅವಳು ನಿದ್ರೆಮಾಡಲಾರಂಭಿಸಿದಳು. ಆಗ ಇಂದ್ರನು ಆಕೆಯ ಶರೀರವನ್ನು ಪ್ರವೇಶಿಸಿ ಒಳಗಿದ್ದ ಗರ್ಭವನ್ನು ಏಳು ವಿಭಾಗವಾಗಿ ಒಡೆದುಬಿಟ್ಟನು. ಹೀಗೆ ಭೇದಿಸಲ್ಪಟ್ಟ ಆ ಗರ್ಭವು ಗಟ್ಟಿಯಾಗಿ ಅಳುವುದಕ್ಕಾರಂಭಿಸಿತು. ಆಗ ದಿತಿಗೆ ಎಚ್ಚರವುಂಟಾಗಲು ಇಂದ್ರನು ಆ ಗರ್ಭವನ್ನು ಕುರಿತು ಅಳಬೇಡವೆಂದು ಹೇಳುತ್ತಿದ್ದನು. ಆದರೂ ಅದು ಅಳುತ್ತಲೇ ಇದ್ದುದರಿಂದ ಪುನಃ ಪುನಃ ಅದನ್ನು ಭೇದಿಸುತ್ತಿದ್ದನು. ಆಗ ದಿತಿಯು 'ಕೊಲ್ಲಬೇಡ ಕೊಲ್ಲಬೇಡ' ವೆಂದು ಕೂಗಿಕೊಳ್ಳಲು ಇಂದ್ರನು ಮಾತೃವಾಕ್ಯ ಗೌರವದಿಂದ ಹೊರಗೆ ಬಂದು ಕೈಮುಗಿದು ನಿಂತುಕೊಂಡು ಆ ದಿತಿಯನ್ನು ಕುರಿತು "ಅಮ್ಮಾ! ನೀನು ಮಲಗಿದ್ದಾಗ ನಾನು ನಿನ್ನ ದೇಹದಲ್ಲಿ ಪ್ರವೇಶಿಸಿ ನನಗೆ ವೈರಿಯಾದ ಆ ಗರ್ಭವನ್ನು ಭೇದಿಸಿದೆನು. ನನ್ನ ಇದೊಂದಪರಾಧವನ್ನು ಕ್ಷಮಿಸಬೇಕು" ಎಂದನು.

ಸರ್ಗ ೪೭

ಸಪ್ತಮಾರುತರ ವೃತ್ತಾಂತವು

ಹೀಗೆ ಗರ್ಭವು ಏಳು ತುಂಡುಗಳಾಗಿ ಒಡೆದುಹೋಗಲು, ದಿತಿಯು ಬಹಳ ದುಃಖಗೊಂಡು, ಇಂದ್ರನನ್ನು ಕುರಿತು ಸಮಾಧಾನದಿಂದಲೇ ಒಂದಾನೊಂದು ವಾಕ್ಯವನ್ನು ಹೇಳುವಳು "ಎಲೈ ಇಂದ್ರನೇ! ಹೀಗೆ ನನ್ನ ಗರ್ಭವು ಭೇದಿಸಲ್ಪಟ್ಟುದು ನನ್ನ ತಪಸ್ಸಿನಿಂದಲೇ ಹೊರತು, ಇದರಲ್ಲಿ ನಿನ್ನ ಅಪರಾಧವೇನೂ ಇಲ್ಲ. ಆದರೆ ಈ ಕೆಟ್ಟುಹೋದ ಗರ್ಭಕ್ಕೆ ಯಾವುದಾದರೊಂದು ಬಗೆಯಿಂದ ಮೇಲ್ಮೆಯನ್ನುಂಟುಮಾಡಬೇಕೆಂದು ಕೋರುತ್ತೇನೆ. ಈ ಗರ್ಭಗಳು ಸಪ್ತ ಮರುತ್ತುಗಳಿಗೂ ಪಾಲಕರಾಗಿರಲಿ! ಎಲೈ

ವತ್ಸನೇ! ಈ ನನ್ನ ಏಳು ಮಕ್ಕಳೂ ವಾತಸ್ಕಂಧಾಭಿಮಾನ ದೇವತೆಗಳಾ
ಸಪ್ತ ಮರುತ್ತಗಳೆಂಬ ಹೆಸರಿನಿಂದ ದಿವ್ಯ ರೂಪವುಳ್ಳವರಾಗಿ ಸ್ವರ್ಗದಲ್ಲಿ
ಸಂಚರಿಸುತ್ತಿರಲಿ. ಇವರಲ್ಲಿ ಒಬ್ಬನು ಬ್ರಹ್ಮಲೋಕದಲ್ಲಿಯೂ, ಮತ್ತೊ
ಬ್ಬನು ಇಂದ್ರಲೋಕದಲ್ಲಿಯೂ, ಮೂರನೆಯವನು ವಾಯುವೆಂಬ ಹೆಸರಿ
ನಿಂದ ಅಂತರಿಕ್ಷದಲ್ಲಿಯೂ ಉಳಿದ ನಾಲ್ಕು ಮಂದಿಯೂ ನಿನ್ನ ಅಪ್ಪಣೆಯ
ನ್ನನುಸರಿಸಿ ನಾಲ್ಕು ದಿಕ್ಕುಗಳಲ್ಲಿಯೂ ಸಂಚರಿಸುತ್ತಿರಲಿ. ಇವರೆಲ್ಲರೂ
ದೇವಸ್ವರೂಪವನ್ನು ಹೊಂದಲಿ. ನೀನು ಗರ್ಭವನ್ನು ಭೇದಿಸುವಾಗ
ಮಾ ರುದಃ (ಅಳಬೇಡ) ಮಾ ರುದಃ (ಅಳಬೇಡ) ಎಂದು ಕೂಗುತ್ತಿದ್ದುದ
ರಿಂದ ಆ ಹೆಸರೇ ಇವರಿಗೆ ಲೋಕದಲ್ಲಿ ಪ್ರಖ್ಯಾತವಾಗಿರಲಿ" ಎಂದಳು
ಇದನ್ನು ಕೇಳಿ ಇಂದ್ರನು ಕೈ ಮುಗಿದು ನಿಂತು "ಎಲೈ ಜನನಿ ಇದೆಲ್ಲವೂ
ನೀನು ಹೇಳಿದಂತೆಯೇ ಆಗುವುದು. ಸಂದೇಹಬೇಡ. ನಿನ್ನ ಮಕ್ಕ
ಳೆಲ್ಲರೂ ದೇವತ್ವವನ್ನೇ ಹೊಂದುವರು. ನಿನಗೆ ಶುಭವಾಗಲಿ"
ಎಂದನು. ಹೀಗೆ ಅವರಿಬ್ಬರೂ ನಿಶ್ಚಯಮಾಡಿಕೊಂಡು ಕೃತಾರ್ಥರಾಗಿ
ಸ್ವರ್ಗಕ್ಕೆ ಬಂದು ಸೇರಿದರೆಂದು ನಾನು ಹಿಂದೆ ಕೇಳಿದ ಕಥೆಯೊಂದುಂಟು.
ಎಲೈ ರಾಮನೆ! ತಪಸ್ಸು ಮಾಡುತ್ತಿದ್ದ ದಿತಿಯನ್ನು ಇಂದ್ರನು
ಉಪಚರಿಸುತ್ತಿದ್ದ ಸ್ಥಾನವೇ ಇದು. ಇಕ್ಷ್ವಾಕು ರಾಜನಿಗೆ "ಅಲಂಬುಸೆ"
ಯೆಂಬ ಪತ್ನಿಯಲ್ಲಿ ಹುಟ್ಟಿ ಪರಮಧಾರ್ಮಿಕನೆಂದು ಖ್ಯಾತಿಹೊಂದಿದ ವಿಶಾಲ
ನೆಂಬ ರಾಜನೊಬ್ಬನು ಈ ಪಟ್ಟಣವನ್ನು ಸ್ಥಾಪಿಸಿದುದರಿಂದ ಇದಕ್ಕೂ
"ವಿಶಾಲಿ" ಎಂಬ ಹೆಸರುಂಟಾಯಿತು. ಆ ವಿಶಾಲನಿಗೆ ಮಹಾ ಬಲಶಾಲಿ
ಯಾದ ಹೇಮಚಂದ್ರನು ಪುತ್ರನಾಗಿ ಹುಟ್ಟಿದನು. ಆತನ ಮಗನು
ಸುಚಂದ್ರನು. ಆ ಸುಚಂದ್ರನ ಮಗನು ಧೂಮ್ರಾಶ್ವನು. ಆತನ
ಮಗನು ಸೃಂಜಯನು. ಆತನ ಕುಮಾರನು ಸಹದೇವನು. ಆ ಸಹ
ದೇವನಿಂದ ಕುಶಾಶ್ವನೆಂಬವನು ಹುಟ್ಟಿದನು. ಆತನಿಗೆ ಸೋಮದತ್ತನೂ
ಆ ಸೋಮದತ್ತನಿಗೆ ಕಕುತ್ಸ್ಥನೂ ಪುತ್ರರಾದರು. ಆ ಕಕುತ್ಸ್ಥನ
ಮಗನೇ ಈಗ ಈ ಪಟ್ಟಣವನ್ನು ಆಳುತ್ತಿರುವನು. ಈತನಿಗೆ "ಸುಮತಿ"
ಯೆಂದು ಹೆಸರು. ಈತನು ಮಹಾಪರಾಕ್ರಮಶಾಲಿಯಾಗಿ ದೇವತೆಗಳಿಗೆ
ಸಮಾನನಾಗಿ ಶತ್ರುಗಳಿಗೆ ಅಜೇಯನಾಗಿ ಖ್ಯಾತಿ ಹೊಂದಿರುವನು. ಎಲೈ
ರಾಮನೇ! ಇಕ್ಷ್ವಾಕುವಂಶದಲ್ಲಿ ಹುಟ್ಟಿದ ರಾಜರು ಇಷ್ಟು ಮಂದಿ

ಮಾತ್ರವೇ ಎಂದು ಸಂದೇಹಪಡಬೇಡ. ಆ ಇಕ್ಷ್ವಾಕುವಿನ ಅನುಗ್ರಹದಿಂದ ಆ ವಂಶದಲ್ಲಿ ಹುಟ್ಟಿದ ರಾಜರೆಲ್ಲರೂ ದೀರ್ಘಾಯುಸ್ಸುಳ್ಳವರಾಗಿಯೇ ಇರುತ್ತಿದ್ದರು. ಅವರ ಧೈರ್ಯವೂ ಅವರ ವೀರ್ಯವೂ ಅವರ ಧರ್ಮಸ್ವಭಾವವೂ ಬಹಳ ಅತಿಶಯವಾದುದು. ಎಲೈ ವತ್ಸನೆ! ನಾವು ಈ ರಾತ್ರಿಯಲ್ಲಿ ಇಲ್ಲಿಯೇ ಸುಖವಾಗಿದ್ದು, ನಾಳೆ ಪ್ರಾತಃಕಾಲದಲ್ಲಿ ಜನಕರಾಜನನ್ನು ನೋಡುವುದಕ್ಕೆ ಹೋಗಬಹುದು" ಎಂದನು. ಆ ವಿಶಾಲಾಪಟ್ಟಣದ ಅಧಿಪತಿಯಾದ ಸುಮತಿಯು ಬಹಳ ಧಾರ್ಮಿಕನಾಗಿಯೂ ಮಹಾ ತೇಜಸ್ವಿಯಾಗಿಯೂ ಕೀರ್ತಿವಂತನಾಗಿಯೂ ಇದ್ದುದರಿಂದ, ವಿಶ್ವಾಮಿತ್ರನು ತನ್ನ ಪಟ್ಟಣಕ್ಕೆ ಬಂದು ಮುಟ್ಟಿದ ವೃತ್ತಾಂತವನ್ನು ತಿಳಿದು ಋತ್ವಿಕ್ಕುಗಳನ್ನೂ ಬಂಧುಗಳನ್ನೂ ಸಂಗಡ ಕರೆದುಕೊಂಡು ಈ ವಿಶ್ವಾಮಿತ್ರನನ್ನು ಇದಿರುಗೊಂಡು, ಇವರಿಗೆ ನಾನಾ ವಿಧವಾದ ಸತ್ಕಾರಗಳನ್ನು ಮಾಡಿ ಕೈಮುಗಿದು ಆತನ ಕುಶಲಪ್ರಶ್ನೆಯನ್ನು ಕೇಳಿ "ಎಲೈ ಮಹರ್ಷಿಯೆ! ಮಹಾತ್ಮನಾದ ನೀನು ನನ್ನ ದೇಶದಲ್ಲಿ ಕಾಲಿಟ್ಟುದರಿಂದ ಈಗ ನಾನು ಧನ್ಯನಾದೆನು. ಈಗಲೀಗ ನಾನು ಅನುಗ್ರಹಿಸಲ್ಪಟ್ಟೆನು. ತಮ್ಮ ದರ್ಶನವು ಪ್ರತ್ಯಕ್ಷವಾಗಿಯೇ ಈಗ ನನಗೆ ಲಭಿಸಿರುವುದರಿಂದ ನನ್ನಂತೆ ಭಾಗ್ಯಶಾಲಿಯು ಈ ಪ್ರಪಂಚದಲ್ಲಿ ಯಾರೂ ಇಲ್ಲವು" ಎಂದನು.

ಸರ್ಗ ೪೮

ಅಹಲ್ಯಾ ವೃತ್ತಾಂತವು

ಹೀಗೆ ಸುಮತಿ ವಿಶ್ವಾಮಿತ್ರರಿಬ್ಬರೂ ಒಬ್ಬರಿಗೊಬ್ಬರು ಕುಶಲಪ್ರಶ್ನೆಗಳನ್ನು ಕೇಳಿ ಮುಗಿಸಿದ ಮೇಲೆ ಆ ಸುಮತಿರಾಜನು ವಿಶ್ವಾಮಿತ್ರನನ್ನು ಕುರಿತು "ಎಲೈ ಮಹಾತ್ಮನೆ! ನಿನ್ನೊಡನೆ ಬಂದಿರುವ ಈ ಬಾಲಕರಾರು? ನೋಡಿದರೆ ದೇವದೇವನಾದ ಮಹಾವಿಷ್ಣುವಿನಂತೆ ಪರಾಕ್ರಮವುಳ್ಳವರಾಗಿ ಕಾಣುವರು. ಇವರು ಆನೆಯಂತೆಯೂ ಸಿಂಹದಂತೆಯೂ ಬಹು ಗಂಭೀರವಾದ ಮತ್ತು ಧೀರವಾದ ನಡೆಯುಳ್ಳವರಾಗಿರುವರು. ಹುಲಿಗಳಂತೆ ಮಹಾಬಲವುಳ್ಳವರಾಗಿಯೂ ಗೂಳಿಗಳಂತೆ ಪೈಕಟ್ಟುಳ್ಳವರಾಗಿಯೂ ಕಾಣಿಸುತ್ತಿರುವರು. ಇವರ ಕಣ್ಣುಗಳು ತಾವರೆ ಎಸಳುಗಳಂತೆ ವಿಸ್ತಾರವಾಗಿರುವುವು. ಕತ್ತಿಯನ್ನೂ ಬಿಲ್ಲು ಬತ್ತಳಿಕೆಯನ್ನೂ ಧರಿಸಿರು

ವರು. ಯೌವನದಿಂದಲೂ ಎಣೆಯಿಲ್ಲದ ದೇಹಸೌಂದರ್ಯದಿಂದಲೂ ಅಶ್ವಿನೀದೇವತೆಗಳಂತೆ ಕಾಣುತ್ತಿರುವರು. ವಿನೋದಾರ್ಥವಾಗಿ ದೇವ ಲೋಕದಿಂದ ಕೆಳಕ್ಕೆ ಇಳಿದುಬಂದ ದೇವತೆಗಳಂತೆಯೇ ತೋರುವರು. ರಾಜತೇಜಸ್ಸುಳ್ಳ ಈ ಬಾಲಕರು ಕಾಲು ನಡೆಯಿಂದಲೇ ಇಷ್ಟು ದೂರದ ವರೆಗೆ ಬರಲು ಕಾರಣವೇನು? ಇವರು ಯಾರ ಮಕ್ಕಳು? ಚಂದ್ರ ಸೂರ್ಯರು ಆಕಾಶವನ್ನು ಹೇಗೋ ಹಾಗೆ ಇವರಿಬ್ಬರೂ ಈ ಪ್ರದೇಶ ವನ್ನೆಲ್ಲಾ ತಮ್ಮ ತೇಜಸ್ಸಿನಿಂದಲೇ ಬೆಳಗುತ್ತಿರುವರು. ಇವರಿಬ್ಬರ ನಡೆ ನುಡಿಗಳೂ ಹಾವಭಾವಗಳೂ ಇಂಗಿತಗಳೂ ಆಕಾರವೂ ದೇಹಪ್ರಮಾ ಣವೂ ಅವಳಿಮಕ್ಕಳಿಗಿರುವಂತೆ ಒಂದೇ ವಿಧವಾಗಿರುವುವು. ಸುಕುಮಾ ರಾಂಗವುಳ್ಳ ಈ ಬಾಲಕರು ಬಹಳ ಕಡಿದಾದ ಕಾಡುದಾರಿಯಲ್ಲಿ ನಡೆದು ಇಲ್ಲಿ ಬರುವುದಕ್ಕೆ ಕಾರಣವೇನು? ಈ ಬಾಲ್ಯದಲ್ಲಿಯೇ ಆಯುಧಧಾರಿ ಗಳಾಗಿರುವುದೇಕೆ? ಇವೆಲ್ಲವನ್ನೂ ನನಗೆ ತಿಳಿಸಬೇಕು" ಎಂದು ಪ್ರಾರ್ಥಿಸಿದನು. ಆಗ ವಿಶ್ವಾಮಿತ್ರನು ತಾನು ದಶರಥನನ್ನು ಪ್ರಾರ್ಥಿಸಿ ಈ ಮಕ್ಕಳನ್ನು ಸಿದ್ಧಾಶ್ರಮಕ್ಕೆ ಕರೆತಂದು ರಾಕ್ಷಸರನ್ನು ಕೊಲ್ಲಿಸಿದುದೇ ಮೊದಲಾದ ಪೂರ್ವ ವೃತ್ತಾಂತಗಳೆಲ್ಲವನ್ನೂ ಆ ಸುಮತಿಗೆ ವಿವರವಾಗಿ ಹೇಳಿದನು. ಆಗ ಆ ಸುಮತಿಯು ಮಹಾತ್ಮನಾದ ದಶರಥನ ಮಕ್ಕಳು ತನ್ನಲ್ಲಿಗೆ ಅತಿಥಿಗಳಾಗಿ ಬಂದುದಕ್ಕಾಗಿ ಬಹಳ ಸಂತೋಷಪಟ್ಟು, ಶಾಸ್ತ್ರೋ ಕ್ತವಾಗಿ ಅವರಿಗೆ ಸಮಸ್ತ ಸತ್ಕಾರಗಳನ್ನೂ ಮಾಡಿದನು. ಹೀಗೆ ಸತ್ಕಾರ ವನ್ನು ಹೊಂದಿದ ರಾಮಲಕ್ಷ್ಮಣರಿಬ್ಬರೂ ಬಹಳ ಸಂತೋಷದಿಂದ ಆ ರಾತ್ರಿಯನ್ನು ಅಲ್ಲಿಯೇ ಕಳೆದು, ಬೆಳಗಾದಮೇಲೆ ಅಲ್ಲಿಂದ ಹೊರಟು ಮಿಥಿಲಾಪುರವನ್ನು ಸೇರಿದರು. ಋಷಿಗಳೆಲ್ಲರೂ ಜನಕರಾಜನ ಪಟ್ಟಣವಾದ ಆ ಮಿಥಿಲೆಯ ಅಂದವನ್ನು ನೋಡಿ ಅದನ್ನು ಬಹಳವಾಗಿ ಕೊಂಡಾಡಿದರು. ಆ ಪಟ್ಟಣದ ಉಪವನ ಪ್ರದೇಶದಲ್ಲಿ ರಾಮನು ಬಹು ಪುರಾತನವಾಗಿಯೂ ನಿರ್ಜನವಾಗಿಯೂ, ಬಹಳ ಅಂದವಾಗಿಯೂ ಇದ್ದ ಒಂದಾಶ್ರಮ ವನ್ನು ಕಂಡು ವಿಶ್ವಾಮಿತ್ರನನ್ನು ಕುರಿತು, "ಎಲೈ ಮಹಾತ್ಮನೇ! ಬಹು ಮನೋಹರವಾದ ಈ ಪ್ರದೇಶವು ಋಷ್ಯಾಶ್ರಮದಂತೆ ತೋರುವುದು. ಇಲ್ಲಿ ಋಷಿಗಳೊಬ್ಬರೂ ವಾಸವಾಗಿರುವಂತೆ ಕಾಣಲಿಲ್ಲ. ಇದು ಪೂರ್ವದಲ್ಲಿ ಯಾವ ಮಹರ್ಷಿಯ ಆಶ್ರಮವಾಗಿತ್ತು? ಇದನ್ನು ನಮಗೆ ತಿಳಿಸಬೇಕು"

ಎಂದನು. ಆವಶ್ಯಾಗಿ ವಿಶ್ವಾಮಿತ್ರನು ಈ ಸ್ಥಳದಲ್ಲಿ ರಾಮನ ಪ್ರಭಾವದಿಂದ ಒಂದು ಅದ್ಭುತ ಕಾರ್ಯವು ನಡೆಯಬೇಕಾಗಿರುವುದೆಂದು ತನ್ನ ಮನಸ್ಸಿನಲ್ಲಿಯೇ ಸಂತೋಷಪಡುತ್ತಾ "ವತ್ಸ ರಾಮನೆ! ಒಳ್ಳೆಯದು! ಆ ವೃತ್ತಾಂತವನ್ನು ನೀನು ಅವಶ್ಯವಾಗಿ ಕೇಳಬೇಕು. ಇದು ಯಾರ ಆಶ್ರಮವೆಂಬುದನ್ನೂ ಯಾರ ಶಾಪದಿಂದ ಇದಕ್ಕೆ ಈ ಸ್ಥಿತಿಯು ಬಂದಿತೆಂಬುದನ್ನೂ ವಿವರಿಸುವೆನು ಕೇಳು. ಇದು ಪೂರ್ವದಲ್ಲಿ ಮಹಾತ್ಮನಾದ ಗೌತಮನ ಆಶ್ರಮವು. ಇದನ್ನು ಸಮಸ್ತ ದೇವತೆಗಳೂ ಪೂಜಿಸುವರು. ಆ ಗೌತಮನು ಅಹಲ್ಯೆಯೆಂಬ ತನ್ನ ಧರ್ಮಪತ್ನಿಯೊಡನೆ ಅನೇಕ ವರ್ಷಗಳವರೆಗೆ ಇಲ್ಲಿಯೇ ತಪಸ್ಸುಮಾಡುತ್ತಿದ್ದನು. ಒಂದಾನೊಂದು ಕಾಲದಲ್ಲಿ ಇಂದ್ರನು ಆ ಗೌತಮನು ಆಶ್ರಮದಲ್ಲಿಲ್ಲದ ಸಮಯವನ್ನು ನೋಡಿ ಆ ಗೌತಮನಂತೆಯೇ ವೇಷವನ್ನು ಧರಿಸಿಬಂದು, ಅಹಲ್ಯೆಯನ್ನು ನೋಡಿ, ಅವಳ ರೂಪಿಗೆ ಮರುಳಾಗಿ ಆಕೆಯ ಮನಸ್ಸನ್ನು ಒಲಿಸಿಕೊಳ್ಳಲು, ಮನೋವಿಕಾರವನ್ನುಂಟುಮಾಡುವ ಕೆಲವು ಮಾತುಗಳನ್ನಾಡಿದನು. ಇದನ್ನು ಕೇಳಿ ಅಹಲ್ಯೆಯು ತನ್ನ ಮನಸ್ಸಿನಲ್ಲಿ ತನ್ನ ಪತಿಯು ಹೀಗೆ ಎಂದಿಗೂ ಹೇಳತಕ್ಕವನಲ್ಲ. ಈತನು ಯಾರೋ ಬೇರೆಯವನಾಗಿರಬೇಕು. ಇಂದ್ರನು ಬಹುಕಾಲದಿಂದ ನನ್ನಲ್ಲಿ ಕಣ್ಣಿಟ್ಟಿರುವುದಾಗಿ ಕೇಳಿರುವೆನು. ಆದುದರಿಂದ "ಈತನೇ ಇಂದ್ರನಾಗಿರಬೇಕು" ಎಂದು ನಿಶ್ಚಯಿಸಿ ಅದನ್ನು ದೃಢವಾಗಿ ನಂಬಿದ್ದರೂ ಆ ದೇವೇಂದ್ರನ ರೂಪವನ್ನು ನೋಡಿ ಆಕೆಯ ಬುದ್ಧಿಯೂ ಕೆಟ್ಟುಹೋಯಿತು. ಒಡನೆಯೇ ಸಮ್ಮತಿಸಿ ಆತನೊಡನೆ ಇದ್ದು ಆಮೇಲೆ ಅವನನ್ನು ನೋಡಿ "ಎಲೈ ಪ್ರಭುವೇ! ನಮ್ಮ ಕೋರಿಕೆಯು ನೆರವೇರಿತಲ್ಲವೇ? ಇನ್ನು ನೀನು ಇಲ್ಲಿರುವುದು ಸರಿಯಲ್ಲ. ಹೊರಟುಹೋಗು. ನೀನು ದೇವತೆಗಳಿಗೆಲ್ಲಾ ಒಡೆಯನೆನಿಸಿಕೊಂಡಿರುವೆ. ನಿನ್ನ ಮಾನವನ್ನು ಕೆಡಿಸಿಕೊಳ್ಳಬೇಡ. ಈ ವಿಷಯವು ಯಾರಿಗೂ ತಿಳಿಯದಂತೆ ನಮ್ಮಿಬ್ಬರನ್ನೂ ಕಾಪಾಡತಕ್ಕ ಭಾರವು ನಿನ್ನದಾಗಿದೆ" ಎಂದಳು. ಆಗ ಇಂದ್ರನು ನಗುತ್ತಾ ಆ ಅಹಲ್ಯೆಯನ್ನು ಕುರಿತು "ಎಲೆ ಸುಂದರಿಯೆ, ಹಾಗೆಯೇ ಸರಿ! ಇನ್ನು ನಾನು ಹೊರಡುವೆನು" ಎಂದು ಹೇಳಿ, ಬಹು ವೇಗದಿಂದ ಆ ಪರ್ಣಶಾಲೆಯನ್ನು ಬಿಟ್ಟು ಭಯದಿಂದ ಹೊರಕ್ಕೆ ಬರುವಷ್ಟರೊಳಗಾಗಿ ಇದಿರಾಗಿ ಬರುತ್ತಿದ್ದ ಗೌತಮನನ್ನು

ಕಂಡನು. ಈ ಮಹರ್ಷಿಯಾದರೋ ಆಗಲೇ ಸ್ನಾನ ಮಾಡಿ, ದರ್ಭೆಗಳನ್ನೂ ಸಮಿತ್ತುಗಳನ್ನೂ ಕೈಯಲ್ಲಿ ಹಿಡಿದು ದೇವದಾನವರನ್ನೂ ತನ್ನ ತಪೋಬಲದಿಂದ ಲಕ್ಷ್ಯಮಾಡದವನಾಗಿ ಅಗ್ನಿಯಂತೆ ಮಹಾ ತೇಜಸ್ವಿಯಾಗಿ ಜ್ವಲಿಸುತ್ತಿದ್ದನು. ಈತನನ್ನು ನೋಡಿದೊಡನೆ ಭಯದಿಂದ ಇಂದ್ರನ ಮುಖದಲ್ಲಿ ಬಿಳುಪೇರಿ ವೈವರ್ಣ್ಯವುಂಟಾಯಿತು. ಆಗ ಗೌತಮನು ಈ ಸ್ಥಿತಿಯನ್ನು ನೋಡಿ ಇಂದ್ರನೇ ಈ ವೇಷವನ್ನು ಧರಿಸಿ ಬಂದಿರುವನೆಂದು ತಿಳಿದು, ಆತನ ದುಶ್ಚರ್ಯೆಗಾಗಿ ಕೋಪಗೊಂಡು "ಎಲೆ ದುರ್ಬುದ್ಧಿಯೇ, ನನ್ನ ವೇಷದಿಂದ ಬಂದು ಈ ಅಕೃತ್ಯವನ್ನು ಮಾಡಿದೆಯಲ್ಲವೆ? ಆದುದರಿಂದ ನೀನು ಅಂಗವಿಹೀನನಾಗು!" ಎಂದು ಶಪಿಸಲು ಆ ಕ್ಷಣವೇ ಇಂದ್ರನಿಗೆ ಆ ಅವಸ್ಥೆಯುಂಟಾಯಿತು. ಆಮೇಲೆ ಗೌತಮನು ಅಹಲ್ಯೆಯ ಬಳಿಗೆ ಬಂದು "ಎಲೆ ಪಾಪಿನಿಯೆ! ನೀನೂ ಅನೇಕ ವರ್ಷಗಳವರೆಗೆ ಅನ್ನಪಾನಾದಿಗಳೊಂದೂ ಇಲ್ಲದೆ ವಾಯುಭಕ್ಷಣವನ್ನು ಮಾಡುತ್ತಿದ್ದು ಬೂದಿಯಲ್ಲಿ ಬಿದ್ದು ಹೊರಳಿ ಸಂಕಟಪಡುತ್ತ ಯಾರ ಕಣ್ಣಿಗೂ ಗೋಚರಿಸದೆ ಈ ನಿರ್ಜನವಾದ ಆಶ್ರಮದಲ್ಲಿಯೇ ಇರು! ದಶರಥ ಪುತ್ರನಾದ ಶ್ರೀರಾಮನು ಯಾವಾಗ ಈ ವನವನ್ನು ತನ್ನ ಪಾದಸ್ಪರ್ಶದಿಂದ ಪವಿತ್ರವಾಗಿ ಮಾಡುವನೋ ಆಗ ನಿನಗೆ ಶಾಪವಿಮೋಚನವಾಗಿ ಸ್ತ್ರೀ ರೂಪವನ್ನು ಹೊಂದುವೆ. ಆತನಿಗೆ ತಕ್ಕ ರೀತಿಯಲ್ಲಿ ಆತಿಥ್ಯಗಳನ್ನು ಮಾಡಿದ ಮೇಲೆಯೇ ಲೋಭ ಮೋಹಾದಿ ದುರ್ಬುದ್ಧಿಗಳೆಲ್ಲವೂ ಹೋಗುವುವು. ಆಮೇಲೆ ನೀನು ನನ್ನೊಡನೆ ಮೊದಲಿನಂತೆಯೇ ಸುಖವಾಗಿರಬಹುದು" ಎಂದು ಶಪಿಸಿದುದಲ್ಲದೆ ಅದರಿಂದ ನಷ್ಟವಾದ ತನ್ನ ತಪಶ್ಶಕ್ತಿಯನ್ನು ಪುನಃ ಗಳಿಸಿಕೊಳ್ಳುವುದಕ್ಕಾಗಿ ಆ ಕ್ಷಣವೇ ಆಶ್ರಮವನ್ನು ಬಿಟ್ಟು ಸಿದ್ಧಚಾರಣಾದಿಗಳಿಂದ ಸೇವಿತವಾಗಿರುವ ಪರಿಶುದ್ಧ ಹಿಮವತ್ಪರ್ವತದ ಶಿಖರಕ್ಕೆ ಹೋಗಿ ತಪಸ್ಸು ಮಾಡುತ್ತಿದ್ದನು.

ಸರ್ಗ ೪೯

ಅಹಲ್ಯೆಯ ಶಾಪವಿಮೋಚನೆ

ಹೀಗೆ ಇಂದ್ರನು ತನಗುಂಟಾದ ದುರವಸ್ಥೆಗೆ ನಾಚಿಕೊಂಡು, ಭಯದಿಂದ ನಡುಗುತ್ತ ದೇವಸಭೆಗೆ ಬಂದು, ಅಲ್ಲಿದ್ದ ಋಷಿಗಳನ್ನೂ ಅಗ್ನ್ಯಾದಿ ದೇವತೆಗಳನ್ನೂ ನೋಡಿ, " ಎಲೈ ದೇವತೆಗಳಿರಾ! ಗೌತಮ ಮಹರ್ಷಿಯು ನಮ್ಮೆಲ್ಲರ ಪದವಿಯನ್ನೂ ಆಕ್ರಮಿಸಬೇಕೆಂಬ ದುರಾಶೆಯಿಂದ ತಪಸ್ಸು ಮಾಡುತ್ತಿರುವುದನ್ನು ನಾನು ಕೇಳಿ, ಅವನಿಗೆ ಯಾವುದಾದರೂ ಒಂದು ವಿಧದಲ್ಲಿ ಕೋಪವನ್ನು ಹುಟ್ಟಿಸುವುದರಿಂದ ಆತನ ತಪಸ್ಸನ್ನು ಕೆಡಿಸಬೇಕೆಂದೆಣಿಸಿ, ಆತನ ಆಶ್ರಮಕ್ಕೆ ಹೋಗಿ ಒಂದು ದುಷ್ಕೃತ್ಯವನ್ನು ಮಾಡಲಾರಂಭಿಸಿದೆನು. ನನ್ನ ಉದ್ದೇಶದಂತೆಯೇ ಆತನು ಕೋಪಗೊಂಡು ನನ್ನನ್ನೂ ಆತನ ಹೆಂಡತಿಯನ್ನೂ ಶಪಿಸಿದನು. ಇದರಿಂದ ಆತನ ತಪಸ್ಸೆಲ್ಲವೂ ಕೆಟ್ಟುಹೋಯಿತು. ಎಲೈ ದೇವತೆಗಳೇ! ನಿಮ್ಮ ಕ್ಷೇಮಕ್ಕಾಗಿ ಪ್ರಯತ್ನಪಟ್ಟ ನನಗೆ ಆತನ ಶಾಪದಿಂದ ಈ ದುರವಸ್ಥೆಯುಂಟಾಯಿತು. ನಿಮಗಾಗಿ ನನಗೆ ಉಂಟಾಗಿರುವ ಈ ದುರವಸ್ಥೆಯನ್ನು ತಪ್ಪಿಸುವುದಕ್ಕೆ ತಕ್ಕ ಉಪಾಯವನ್ನು ನೀವೇ ಯೋಚಿಸಬೇಕು " ಎಂದನು. ಇದನ್ನು ಕೇಳಿ ದೇವತೆಗಳೆಲ್ಲರೂ ಅಲ್ಲಿಂದ ಹೊರಟು ಪಿತೃದೇವತೆಗಳ ಬಳಿಗೆ ಬಂದು ಎಲ್ಲ ವಿಚಾರಗಳನ್ನೂ ಅವರಿಗೆ ತಿಳಿಸಿ ಅವರ ಉಪದೇಶದಂತೆ, ಇಂದ್ರನಿಗೆ ಸಂಭವಿಸಿದ್ದ ಕಷ್ಟವನ್ನು ಪರಿಹಾರಮಾಡಿದರು. ಇದೆಲ್ಲವೂ ಆ ಗೌತಮ ಮಹರ್ಷಿಯ ಪ್ರಭಾವದಿಂದಲೇ ಉಂಟಾಯಿತು. ವತ್ಸ, ರಾಮನೇ! ನಿನ್ನ ಮಹಿಮೆಯು ಸಾಮಾನ್ಯವಲ್ಲ! ಬಾ! ಈ ಆಶ್ರಮಕ್ಕೆ ಹೋಗೋಣ. ನಿನ್ನಿಂದಲೇ ಆ ಅಹಲ್ಯೆಗೆ ಶಾಪ ವಿಮೋಚನವಾಗಬೇಕಾದುದರಿಂದ ಅವಳನ್ನು ಉದ್ಧರಿಸು " ಎಂದನು. ಇದನ್ನು ಕೇಳಿ ರಾಮನು ಲಕ್ಷ್ಮಣನೊಡಗೂಡಿ ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು ಆ ಆಶ್ರಮಕ್ಕೆ ಪ್ರವೇಶಿಸಿದೊಡನೆ ಅಲ್ಲಿ ಅಹಲ್ಯೆಯನ್ನು ಕಂಡನು. ಈ ಮಹಾತ್ಮಳಾದರೋ ವಾಯುಭಕ್ಷಣವೇ ಮೊದಲಾದ ನಿಯಮದಿಂದ ತಪಸ್ಸುಮಾಡಿ, ಜಾಜ್ವಲ್ಯಮಾನವಾದ ತೇಜಸ್ಸುಳ್ಳವಳಾಗಿ, ದೇವತಿರ್ಯಙ್ಮನುಷ್ಯಾದಿ ಜಂತುಗಳ ಕಣ್ಣಿಗೆ ಬೀಳದೆ, ಬ್ರಹ್ಮನು ಬಹು ಪ್ರಯತ್ನಪಟ್ಟು ಸೃಷ್ಟಿಸಿರುವನೋ ಎಂಬಂತೆ ಲೋಕಾತಿಶಯವಾದ ಸೌಂದರ್ಯದಿಂದ ಕೂಡಿ, ಮಾಯಾ ಸ್ವರೂಪ

ವುಳ್ಳವಳಂತೆ ಆಶ್ಚರ್ಯವನ್ನುಂಟುಮಾಡುತ್ತಾ ಮಂಜಿನಿಂದಲೂ, ಮೋಡ ಗಳಿಂದಲೂ ಮರೆಸಲ್ಪಟ್ಟ ಚಂದ್ರಕಲೆಯಂತೆಯೂ, ಹೊಗೆಯಿಂದ ಸುತ್ತ ಲ್ಪಟ್ಟ ಅಗ್ನಿಜ್ವಾಲೆಯಂತೆಯೂ, ನೀರಿನ ಮಧ್ಯದಲ್ಲಿ ಥಳಥಳಿಸುತ್ತಿರುವ ಸೂರ್ಯಬಿಂಬದಂತೆಯೂ, ಪತಿಶಾಪದಿಂದ ಯಾರ ಕಣ್ಣಿಗೂ ಬೀಳದಂತೆ ಇರುತ್ತಿದ್ದರೂ ರಾಮನ ದರ್ಶನವಾದಕೂಡಲೆ ಶಾಪವಿಮೋಚನವನ್ನು ಹೊಂದಿ, ಅಲ್ಲಿದ್ದವರೆಲ್ಲರಿಗೂ ಗೋಚರಿಸಿದಳು. ಆಗ ರಾಮಲಕ್ಷ್ಮಣರಿ ಬ್ಬರೂ ಬಹು ಭಕ್ತಿಯಿಂದ ಆಕೆಯ ಕಾಲನ್ನು ಹಿಡಿದು ನಮಸ್ಕರಿಸಿದರು. ಆ ಅಹಲ್ಯೆಯೂ ಕೂಡ ತನ್ನ ಪತಿಯಾದ ಗೌತಮನು ಹಿಂದೆ ಹೇಳಿದ್ದ ವಾಕ್ಯವನ್ನು ಸ್ಮರಿಸಿಕೊಂಡು, ಅವರನ್ನು ಬಹಳವಾಗಿ ಸತ್ಕರಿಸಿ, ಅರ್ಘ್ಯ ಪಾದ್ಯಾದಿಗಳಿಂದ ಉಪಚರಿಸಿದಳು. ಅದೆಲ್ಲವನ್ನೂ ರಾಮನು ಬಹು ಪ್ರೀತಿಯಿಂದ ಸ್ವೀಕರಿಸಿದನು. ದೇವದುಂದುಭಿ ಧ್ವನಿಗಳೊಡನೆ ಆಕಾಶ ದಿಂದ ಪುಷ್ಪವೃಷ್ಟಿಯು ಸುರಿಯಿತು. ಗಂಧರ್ವರೂ ಅಪ್ಸರ ಸ್ತ್ರೀಯರೂ ಬಂದು, ನೃತ್ಯಗೀತಾದಿಗಳಿಂದ ಸಂತೋಷಿಸುತ್ತಿದ್ದರು. ಅಹಲ್ಯೆಯು ತಪೋಬಲದಿಂದ ತನ್ನ ದೋಷವನ್ನು ಹೋಗಲಾಡಿಸಿಕೊಂಡು ಪರಿಶುದ್ಧ ಳಾದುದನ್ನೂ ರಾಮನು ತನ್ನ ಆಶ್ರಮಕ್ಕೆ ಪ್ರವೇಶಿಸಿದುದನ್ನೂ ಗೌತಮ ಮಹರ್ಷಿಯು ಯೋಗದೃಷ್ಟಿಯಿಂದ ತಿಳಿದು, ಒಡನೆಯೇ ಆ ಸ್ಥಳಕ್ಕೆ ಬಂದನು. ಆಗ ದೇವತೆಗಳೆಲ್ಲರೂ 'ಭಲೇ! ಭಲೇ!' ಎಂದು ಕೊಂಡಾ ಡುತ್ತಿದ್ದರು. ಆಗ ಆ ಅಹಲ್ಯಾ ಗೌತಮರಿಬ್ಬರೂ ಸಂತೋಷದಿಂದ ಸೇರಿ, ರಾಮನನ್ನು ಸತ್ಕರಿಸಿ, ಸುಖವಾಗಿ ತಪಸ್ಸುಮಾಡುತ್ತಿದ್ದರು. ರಾಮನೂ ಕೂಡ ಅವರ ಸತ್ಕಾರಕ್ಕೆ ಬಹಳ ಸಂತೋಷಿಸಿ, ಅಲ್ಲಿಂದ ಮುಂದೆ ಮಿಥಿಲಾಪಟ್ಟಣವನ್ನು ಕುರಿತು ಹೊರಟನು.

ಸರ್ಗ ೫೦

ರಾಮಾದಿಗಳು ಮಿಥಿಲಾ ಪಟ್ಟಣಕ್ಕೆ ಹೋದುದು
ಜನಕನು ವಿಶ್ವಾಮಿತ್ರನೊಡನೆ ಸಂಭಾಷಿಸಿದುದು

ರಾಮನು ಲಕ್ಷ್ಮಣನೊಡನೆ ಈಶಾನ್ಯಾಭಿಮುಖವಾಗಿ ಹೊರಟು ವಿಶ್ವಾಮಿತ್ರನನ್ನು ಮುಂದಿಟ್ಟುಕೊಂಡು, ಜನಕನ ಯಜ್ಞಶಾಲೆಯನ್ನು ಸೇರಿ, ವಿಶ್ವಾಮಿತ್ರನನ್ನು ಕುರಿತು, "ಎಲೈ ಮಹರ್ಷಿಯೆ! ಈ ಜನಕ

ರಾಜನ ಯಜ್ಞ ಸಮೃದ್ಧಿಯು ಅತಿಶಯವಾಗಿರುವದು. ನಾನಾ ದೇಶಗಳಿಂದ ವೇದಾಧ್ಯಯನ ಸಂಪನ್ನರಾದ ಅನೇಕ ಸಹಸ್ರ ಬ್ರಾಹ್ಮಣರು ಬಂದು ಸೇರಿರುವರು. ಎಲ್ಲೆಲ್ಲಿ ನೋಡಿದರೂ ನೂರಾರು ಬಂಡಿಗಳಲ್ಲಿ ತುಂಬಿದ ಯಜ್ಞ ಸಾಮಗ್ರಿಗಳಿಂದ ಶೋಭಿಸುತ್ತಿರುವ ಋಷಿಗಳ ನಿವೇಶನಗಳು ಕಾಣುತ್ತಿವೆ. ಇಲ್ಲಿ ನಮಗೆ ಅನುಕೂಲವಾದ ವಾಸಸ್ಥಳವು ಸಿಕ್ಕುವುದು ಹೇಗೆ? ಅದಕ್ಕಾಗಿ ಈಗಲೇ ತಾವು ತಕ್ಕ ಪ್ರಯತ್ನವನ್ನು ಮಾಡಬೇಕಲ್ಲವೆ?" ಎಂದನು. ಈ ಮಾತನ್ನು ಕೇಳಿ ವಿಶ್ವಾಮಿತ್ರನು ವಿಶೇಷವಾಗಿ ಜನಗಳ ಗುಂಪಿಗೆ ಅವಕಾಶವಿಲ್ಲದಂತೆಯೂ, ಜಲಸಮೃದ್ಧಿಯಿರುವಂತೆಯೂ ಒಂದು ಸ್ಥಳವನ್ನು ಇವರಿಗಾಗಿ ಏರ್ಪಡಿಸಿಕೊಟ್ಟನು. ಹೀಗೆ ವಿಶ್ವಾಮಿತ್ರನು ಬಂದಿಳಿರುವುದನ್ನು ಜನಕನು ಕೇಳಿ, ಪುರೋಹಿತನಾದ ಶತಾನಂದನೊಡಗೂಡಿ ಈ ವಿಶ್ವಾಮಿತ್ರನನ್ನು ಇದಿರುಗೊಂಡು ಬಂದನು. ಮಹಾತ್ಮರಾದ ಅನೇಕ ಋತ್ವಿಕ್ಕುಗಳು ಅರ್ಘ್ಯವನ್ನು ತಂದು ಮಂತ್ರವತ್ತಾಗಿ ವಿಶ್ವಾಮಿತ್ರನಿಗೆ ಸಮರ್ಪಿಸಿದರು. ವಿಶ್ವಾಮಿತ್ರನು ಈ ಸತ್ಕಾರವನ್ನು ಕೈಕೊಂಡು, ಆ ಜನಕನ ಕ್ಷೇಮ ಲಾಭಗಳನ್ನೂ ಯಜ್ಞದ ಆನುಕೂಲ್ಯಗಳನ್ನೂ ವಿಚಾರಿಸಿ, ಶತಾನಂದನೇ ಮೊದಲಾದ ಪುರೋಹಿತರುಗಳನ್ನೂ ಋತ್ವಿಕ್ಕುಗಳನ್ನೂ ಕ್ರಮವಾಗಿ ಕುಶಲ ಪ್ರಶ್ನೆ ಮಾಡಿ, ಅವರೆಲ್ಲರೊಡನೆ ಕೂಡಿ ಸಂತೋಷದಿಂದಿದ್ದನು. ಆಮೇಲೆ ಜನಕನು ವಿಶ್ವಾಮಿತ್ರನಿಗೆ ಕೈಮುಗಿದು "ಸ್ವಾಮಿ! ಋಷಿಗಳೊಡನೆ ಈ ಪೀಠವನ್ನಲಂಕರಿಸಬೇಕು" ಎಂದು ಪ್ರಾರ್ಥಿಸಲು, ಅದರಂತೆಯೇ ವಿಶ್ವಾಮಿತ್ರನು ಪೀಠವನ್ನಲಂಕರಿಸಿದ ಮೇಲೆ, ಶತಾನಂದನೂ ಋತ್ವಿಕ್ಕುಗಳೂ ಜನಕ ಮಹಾರಾಜನೂ ಈ ರಾಮಲಕ್ಷ್ಮಣರೂ ಕ್ರಮವಾಗಿ ತಕ್ಕ ತಕ್ಕ ಸ್ಥಾನಗಳಲ್ಲಿ ಕುಳಿತುಕೊಂಡರು. ಎಲ್ಲರೂ ಹೀಗೆ ಕುಳಿತುಕೊಂಡಿರುವಾಗ ಜನಕನು ಬಹು ವಿನಯದಿಂದ ವಿಶ್ವಾಮಿತ್ರನನ್ನು ಕುರಿತು "ಎಲೈ ಮಹಾತ್ಮನೇ! ಈಗಲೀಗ ನನ್ನ ಯಜ್ಞ ಸಮೃದ್ಧಿಯು ದೇವತೆಗಳಿಂದ ಸಾರ್ಥಕವಾಗಿ ಮಾಡಲ್ಪಟ್ಟಿತು. ತಮ್ಮ ದರ್ಶನವುಂಟಾದುದರಿಂದ ಯಜ್ಞದ ಫಲವೇ ಲಭಿಸಿದಂತಾಯಿತು. ಈಗಲೀಗ ನಾನು ಧನ್ಯನಾದೆನು. ಎಲೈ ಋಷಿಶ್ರೇಷ್ಠನೇ! ಮಹಾತ್ಮನಾದ ನೀನು ಈ ಮಹರ್ಷಿಗಳೊಡಗೂಡಿ ನನ್ನ ಯಜ್ಞಮಂಟಪವನ್ನಲಂಕರಿಸಿರುವಾಗ ನನ್ನ ಭಾಗ್ಯಕ್ಕೆ ಎಣೆಯಾವುದುಂಟು? ಮಹಾ ಬುದ್ಧಿಶಾಲಿಗಳಾದ

ಈ ಋತ್ವಿಕ್ಕುಗಳೆಲ್ಲರೂ ಈ ಯಾಗಕ್ಕೆ ಇನ್ನು ಹನ್ನೆರಡು ದಿವಸಗಳು ಮಾತ್ರವೇ ಉಳಿದಿರುವುವೆಂದು ಹೇಳುತ್ತಿರುವರು. ಇದು ಪೂರ್ಣವಾದ ಕೂಡಲೆ ಸಮಸ್ತ ದೇವತೆಗಳೂ ಪ್ರತ್ಯಕ್ಷವಾಗಿ ಇಲ್ಲಿಗೆ ಬಂದು ತಮ್ಮ ತಮ್ಮ ಹವಿರ್ಭಾಗಗಳನ್ನು ಕೈಕೊಳ್ಳುವರಾದುದರಿಂದ ಅದುವರೆಗೆ ತಾವು ಇಲ್ಲಿಯೇ ಇದ್ದರೆ ಆ ಸಮಸ್ತ ದೇವತೆಗಳನ್ನೂ ಪ್ರತ್ಯಕ್ಷದಲ್ಲಿ ನೋಡಬಹುದು" ಎಂದು ಹೇಳಿ ಆ ವಿಶ್ವಾಮಿತ್ರನ ಪಕ್ಕದಲ್ಲಿದ್ದ ರಾಜಕುಮಾರರಿಬ್ಬರನ್ನೂ ನೋಡಿದನು. ಆಗ ಜನಕನಿಗೆ ಮುಖದಲ್ಲಿ ಸಂತೋಷ ಉಕ್ಕುತ್ತಿರಲು, ವಿಶ್ವಾಮಿತ್ರನನ್ನು ನೋಡಿ ಕೈಮುಗಿದು "ಎಲೈ ಮಹಾತ್ಮನೆ! ನಿನಗೆ ಮಂಗಳವಾಗಲಿ. ಈ ಮಕ್ಕಳಾರು? ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳವರಂತೆ ಕಾಣುವರು. ಆನೆಯಂತೆ ಗಂಭೀರವಾಗಿಯೂ ಸಿಂಹದಂತೆ ಧೀರವಾಗಿಯೂ ಇರುವ ನಡೆಯುಳ್ಳವರು. ಹುಲಿಯಂತೆಯೂ ವೃಷಭದಂತೆಯೂ ತೋರುವ ಮೈಕಟ್ಟುಳ್ಳವರು. ಇವರ ಕಣ್ಣುಗಳು ತಾವರೆಯ ಎಸಳುಗಳಂತೆ ವಿಸ್ತಾರವಾಗಿರುವುವು. ರೂಪದಲ್ಲಿ ಅಶ್ವಿನೀ ದೇವತೆಗಳಂತೆ ಕಾಣುವರು. ದೇವತೆಗಳು ವಿನೋದಕ್ಕಾಗಿ ಈ ಭೂಮಿಗೆ ಬಂದಿರುವರೋ ಎಂಬ ಸಂದೇಹವನ್ನುಂಟುಮಾಡುತ್ತಿರುವರು. ಸುಕುಮಾರರಾದ ಈ ಬಾಲಕರು ಬಿಲ್ಲು, ಬತ್ತಳಿಕೆ, ಕತ್ತಿ ಮುಂತಾದ ಆಯುಧಗಳನ್ನು ಧರಿಸಿ ಪಾದಚಾರಿಗಳಾಗಿ ಇಷ್ಟುದೂರ ಬರುವದಕ್ಕೆ ಕಾರಣವೇನು? ಇವರು ಯಾರ ಮಕ್ಕಳು? ಚಂದ್ರ ಸೂರ್ಯರು ಆಕಾಶವನ್ನು ಹೇಗೋ ಹಾಗೆ ಇವರು ಈ ಸ್ಥಳವೆಲ್ಲವನ್ನೂ ತಮ್ಮ ದೇಹಕಾಂತಿಯಿಂದ ಬೆಳಗುತ್ತಿರುವರು. ಇವರಿಬ್ಬರ ಆಕಾರವೂ, ರೂಪವೂ, ಪ್ರಮಾಣವೂ, ಇಂಗಿತಗಳೂ ಅವಳಿ ಮಕ್ಕಳಿಗಿರುವಂತೆ ಒಂದೇ ವಿಧವಾಗಿರುವುದು. ಇವರ ವಿಷಯವನ್ನು ನನಗೆ ತಿಳಿಸಬೇಕು ಎಂದು ಕೇಳಲು, ವಿಶ್ವಾಮಿತ್ರನು ಅವರ ಚರಿತ್ರೆಗಳೆಲ್ಲವನ್ನು ಆಮೂಲಾಗ್ರವಾಗಿ ತಿಳಿಸುತ್ತಾ ತಾನು ದಶರಥನ ಬಳಿಗೆ ಹೋಗಿ ಈ ಬಾಲಕರನ್ನು ಕರೆತಂದು ರಾಕ್ಷಸರನ್ನು ಕೊಲ್ಲಿಸಿದುದು ಮೊದಲುಗೊಂಡು ಅಹಲ್ಯೆಯ ಶಾಪವಿಮೋಚನದವರೆಗೂ ನಡೆದ ಅದ್ಭುತ ವೃತ್ತಾಂತಗಳೆಲ್ಲವನ್ನೂ ಹೇಳಿದ ಮೇಲೆ, ಮುಂದೆ ಆ ಜನಕರಾಜನ ಪಟ್ಟಣದಲ್ಲಿರುವ ದೊಡ್ಡ ಧನುಸ್ಸಿನ ಮೂಲಕವಾಗಿ ಇವರ ಬಲಾಬಲಗಳನ್ನು ಪರೀಕ್ಷಿಸಬೇಕೆಂಬ ಇಚ್ಛೆಯಿಂದಲೇ ಇಲ್ಲಿಗೆ ಬಂದುದಾಗಿಯೂ ಸೂಚಿಸಿ ಸುಮ್ಮನಾದನು.

ಸರ್ಗ ೫೧

ವಿಶ್ವಾಮಿತ್ರನ ಚರಿತ್ರವು.

ಆ ವಿಶ್ವಾಮಿತ್ರನ ವಾಕ್ಯವನ್ನು ಕೇಳಿದ ಮೇಲೆ ಅಲ್ಲಿ ಗೌತಮನ ಹಿರಿಯ ಮಗನಾಗಿ ಮಹಾ ತಪಸ್ವಿಯಾಗಿದ್ದ ಶತಾನಂದನು ತನ್ನ ತಾಯಿಯನ್ನು ಶಾಪದಿಂದ ಉದ್ಧರಿಸಿದ ರಾಮನ ಪ್ರಭಾವಕ್ಕೆ ಆಶ್ಚರ್ಯಗೊಂಡು ಮಿತಿಮೀರಿದ ಸಂತೋಷದಿಂದ ಉಬ್ಬಿದವನಾಗಿ ವಿಶ್ವಾಮಿತ್ರನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು. "ಮಹರ್ಷಿಯೇ! ದೀರ್ಘ ತಪಸ್ಸನ್ನು ಮಾಡುತ್ತಿದ್ದ ನನ್ನ ತಾಯಿಯನ್ನು ಇವರಿಗೆ ನೀನೇ ತೋರಿಸಿದೆಯಾ? ಮಹಾ ಮಹಿಮೆಯುಳ್ಳವಳಾಗಿ, ಯಶಸ್ವಿನಿಯಾದ ಆಕೆಯು ಸಮಸ್ತ ಪ್ರಾಣಿಗಳಿಂದಲೂ ಪೂಜಿಸಲ್ಪಡತಕ್ಕ ಈ ರಾಮನಿಗೆ ಯಥೋಚಿತವಾದ ಸತ್ಕಾರಗಳನ್ನು ಮಾಡಿದಳೆ? ಪೂರ್ವದಲ್ಲಿ ದುರ್ದೈವ ವಶದಿಂದ ನನ್ನ ತಾಯಿಗೆ ಉಂಟಾದ ದುರವಸ್ಥೆಗಳನ್ನು ಇವರಿಗೆ ವಿವರವಾಗಿ ತಿಳಿಸಿದೆಯಾ? ಎಲೈ ಕೌಶಿಕನೇ! ನನ್ನ ತಾಯಿಯು ಈ ರಾಮನ ಅನುಗ್ರಹದಿಂದ ಶಾಪವಿಮೋಚನವನ್ನು ಹೊಂದಿದ ಮೇಲೆ ನನ್ನ ತಂದೆಯೊಡನೆ ಸೇರಿದಳೆ? ನನ್ನ ತಂದೆಯು ರಾಮನಿಗೆ ತಕ್ಕ ಸತ್ಕಾರಗಳನ್ನು ಮಾಡಿದನೆ? ಈ ರಾಮನೂ ನನ್ನ ತಂದೆಯಾದ ಗೌತಮನನ್ನು ಯಥೋಚಿತವಾದ ಗೌರವದಿಂದ ಸತ್ಕರಿಸಿದನೆ?" ಎಂದು ಬಹಳ ಆದರದಿಂದ ಕೇಳಲು, ಅದಕ್ಕಾಗಿ ವಿಶ್ವಾಮಿತ್ರನು ಆತನನ್ನು ಕುರಿತು "ಎಲೈ ಮುನಿಶ್ರೇಷ್ಠನೇ! ಯಾವ ವಿಷಯದಲ್ಲಿಯೂ ಕೊರತೆಯಿಲ್ಲ. ಯಾವುದನ್ನು ಹೇಗೆ ನಡೆಸಬೇಕೋ ಅವೆಲ್ಲವನ್ನೂ ಲೋಪವಿಲ್ಲದೆ ಕ್ರಮವಾಗಿಯೇ ನಡೆಸಿರುವೆನು. ರೇಣುಕೆಯು ಜಮದಗ್ನಿಯನ್ನು ಸೇರಿದಂತೆಯೇ ನಿನ್ನ ತಾಯಿಯು ಗೌತಮನನ್ನು ಸೇರಿರುವಳು" ಎಂದನು. ಇದನ್ನು ಕೇಳಿ ಶತಾನಂದನು ಸಂತೋಷದಿಂದ ರಾಮನನ್ನು ನೋಡಿ "ಎಲೈ ನರಶ್ರೇಷ್ಠನೇ! ನಿನಗೆ ಸುಖಾಗಮನ ಸುಪ್ರಾಂಟಗಳು. ಮಹಾತ್ಮನಾದ ಈ ವಿಶ್ವಾಮಿತ್ರನೊಡನೆ ಭಾಗ್ಯವಶದಿಂದ ಇಲ್ಲಿಗೆ ಬಂದಿರುವೆ. ಈತನ ತಪಃ ಕರ್ಮಗಳೂ ತೇಜಸ್ಸೂ ಇಷ್ಟೆಂದು ಯಾರಿಂದಲೂ ಊಹಿಸಲು ಸಾಧ್ಯವಲ್ಲ. ಬ್ರಹ್ಮಋಷಿಗಳಲ್ಲಿ ಈತನಿಗಿಂತ ಮೇಲಾದವರೊಬ್ಬರೂ ಇಲ್ಲ. ನಿನ್ನ ಸಮಸ್ತ ಶ್ರೇಯಸ್ಸುಗಳಿಗೂ ಈತನೇ ಮೂಲವೆಂದು ತಿಳಿ. ಮಹಾ ತಪಸ್ವಿಯಾದ ಈ ವಿಶ್ವಾ

ಮಿತ್ರನ ರಕ್ಷಣೆಗೆ ಒಳಪಟ್ಟಿರುವ ನಿನ್ನ ಭಾಗ್ಯಕ್ಕೆ ಎಣೆಯೇ ಇಲ್ಲವು. ಎಲೈ ರಾಮನೇ, ಈ ವಿಶ್ವಾಮಿತ್ರನ ಮಹಿಮೆಯನ್ನು ಕ್ರಮವಾಗಿ ತಿಳಿಸುವೆನು. ಕೇಳು. ಈತನು ಮೊದಲು ರಾಜನಾಗಿದ್ದನು. ಎಲ್ಲಾ ಧರ್ಮಗಳನ್ನೂ ತಿಳಿದು, ಶಸ್ತ್ರಾಸ್ತ್ರ ವಿದ್ಯೆಗಳಲ್ಲಿ ನಿಪುಣನಾಗಿ, ಪ್ರಜೆಗಳ ಕ್ಷೇಮವನ್ನೇ ಚಿಂತಿಸುತ್ತ ಬಹುಕಾಲದವರೆಗೆ ರಾಜ್ಯವನ್ನಾಳುತ್ತಿದ್ದನು. ಈತನ ವಂಶವು ಸಾಕ್ಷಾತ ಬ್ರಹ್ಮನಿಂದಲೇ ಹುಟ್ಟಿದುದು. ಬ್ರಹ್ಮನಿಂದ ಕುಶನೆಂಬ ರಾಜನು ಹುಟ್ಟಿದನು. ಆತನಿಂದ ಗಾಧಿಯೆಂಬವನು ಹುಟ್ಟಿದನು. ಆ ಗಾಧಿಯ ಪುತ್ರನೇ ಈ ಮಹಾ ತೇಜಸ್ವಿಯಾದ ವಿಶ್ವಾಮಿತ್ರನು. ಈತನು ಅನೇಕ ಸಂವತ್ಸರಗಳವರೆಗೆ ಧರ್ಮದಿಂದ ರಾಜ್ಯವನ್ನಾಳುತ್ತಿದ್ದು, ಒಂದಾನೊಂದು ಕಾಲದಲ್ಲಿ ಅಕ್ಷೌಹಿಣೀ ಸೈನ್ಯದೊಡನೆ ಕೂಡಿ ಭೂಮಿಯನ್ನೆಲ್ಲಾ ತಿರುಗಲಾರಂಭಿಸಿದನು. ಹೀಗೆ ಅನೇಕ ದೇಶಗಳನ್ನೂ ಅವುಗಳೊಳಗಿನ ಮುಖ್ಯ ಪಟ್ಟಣಗಳನ್ನೂ ಅನೇಕ ನದಿಗಳನ್ನೂ ಬೆಟ್ಟಗಳನ್ನೂ ಋಷ್ಯಾಶ್ರಮಗಳನ್ನೂ ನೋಡುತ್ತಾ ಕೊನೆಗೆ ವಸಿಷ್ಠರ ಆಶ್ರಮಕ್ಕೆ ಬಂದನು. ಆ ಆಶ್ರಮವಾದರೋ ನಾನಾ ವೃಕ್ಷಗಳಿಂದಲೂ ಅನೇಕ ಮೃಗಜಾತಿಗಳಿಂದಲೂ ಶೋಭಿತವಾಗಿ, ದೇವದಾನವ ಗಂಧರ್ವ ಸಿದ್ಧಚಾರಣಾದಿಗಳಿಂದ ಸೇವಿಸಲ್ಪಟ್ಟು ಅತಿ ಮನೋಹರವಾಗಿತ್ತು. ಎಲ್ಲೆಲ್ಲಿ ನೋಡಿದರೂ ಬ್ರಹ್ಮರ್ಷಿಗಳೂ ದೇವರ್ಷಿಗಳೂ ತುಂಬಿದ್ದರು. ಆ ಮಹಾತ್ಮರೆಲ್ಲರೂ ಅಗ್ನಿಯಂತೆ ತೇಜಸ್ಸುಳ್ಳವರಾಗಿ ತಪಸ್ಸು ಮಾಡುತ್ತಿದ್ದರು. ಇಲ್ಲಿ ತಪಸ್ಸಿದ್ಧಿಯನ್ನು ಪಡೆದು, ಕೆಲವರು ಜಲಾಹಾರವನ್ನೂ ಮತ್ತೆ ಕೆಲವರು ವಾಯು ಭಕ್ಷಣವನ್ನೂ ಮಾಡುತ್ತಿದ್ದರು. ಇನ್ನು ಕೆಲವರು ಗೆಡ್ಡೆ ಗೆಣಸು, ಎಲೆ, ಹಣ್ಣು ಮುಂತಾದುವುಗಳಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡು ಜಿತೇಂದ್ರಿಯರಾಗಿ, ಕಾಮಕ್ರೋಧಗಳಿಲ್ಲದೆ ತಾಳ್ಮೆಯುಳ್ಳವರಾಗಿದ್ದರು. ಅಲ್ಲಲ್ಲಿ ಜಪ ಹೋಮ ಪರಾಯಣರಾಗಿದ್ದ ವಾಲಖಿಲ್ಯರೂ ವೈಖಾನಸರೂ ತುಂಬಿದ್ದರು. ಹೀಗೆ ಬೇರೊಂದು ಬ್ರಹ್ಮಲೋಕವೋ ಎಂಬಂತೆ ಪ್ರಕಾಶಿಸುತ್ತಿದ್ದ ಆ ವಸಿಷ್ಠಾಶ್ರಮವನ್ನು ಮಹಾ ಬಲಶಾಲಿಯಾದ ರಾಜತೇಜಸ್ಸುಳ್ಳ ವಿಶ್ವಾಮಿತ್ರನು ಕಂಡನು.

ಸರ್ಗ ೫೨

ವಸಿಷ್ಠನು ತನ್ನ ಹೋಮಧೇನುವಿನ ಮೂಲಕವಾಗಿ ವಿಶ್ವಾಮಿತ್ರನಿಗೆ ಔತನವನ್ನು ಮಾಡಿಸಿದುದು.

ಆ ಪುಣ್ಯಾಶ್ರಮವನ್ನು ಕಂಡೊಡನೆ ಮಹಾ ಬಲಶಾಲಿಯಾದ ವಿಶ್ವಾಮಿತ್ರನು ಸಂತೋಷಗೊಂಡು ವಿನಯದಿಂದ ಬಂದು ಋಷಿಗೆ ನಮಸ್ಕರಿಸಿದನು. ಆಗ ವಸಿಷ್ಠನು ಈತನ ಸುಖಾಗಮನವನ್ನು ಕೇಳಿ ಆಸನವನ್ನು ಕೊಟ್ಟು ಕುಳ್ಳಿರುವಂತೆ ಹೇಳಿ ಗೆಡ್ಡೆ ಗೆಣಸುಗಳನ್ನೂ ಬಗೆಬಗೆಯ ಹಣ್ಣುಗಳನ್ನೂ ತಂದುಕೊಟ್ಟು ಉಪಚರಿಸಿದನು. ಇದರಿಂದ ವಿಶ್ವಾಮಿತ್ರನು ಬಹಳ ಸಂತುಷ್ಟನಾಗಿ ವಸಿಷ್ಠನನ್ನು ನೋಡಿ "ಎಲೈ ಮಹರ್ಷಿಯೆ, ನಿನ್ನ ತಪಸ್ಸೂ ಅಗ್ನಿಹೋತ್ರ ಮುಂತಾದ ಕರ್ಮಗಳೆಲ್ಲವೂ ನಿರ್ವಿಘ್ನವಾಗಿ ನಡೆಯುತ್ತಿವೆಯೆ? ಶಿಷ್ಯರೆಲ್ಲರೂ ಕ್ಷೇಮವೆ? ನಿನ್ನ ಆಶ್ರಮ ವೃಕ್ಷಗಳೆಲ್ಲವೂ ಫಲಭರಿತಗಳಾಗಿವೆಯೆ?" ಎಂದು ಕೇಳಲು, ವಸಿಷ್ಠನು ಆತನಿಗೆ ತನ್ನ ಕ್ಷೇಮ ಲಾಭಗಳೆಲ್ಲವನ್ನೂ ಹೇಳಿ ಅವನು ಸುಖಾಸೀನನಾಗಿದ್ದ ಮೇಲೆ ಆತನನ್ನು ಕುರಿತು ತಾನೂ ಕುಶಲ ಪ್ರಶ್ನೆಯನ್ನು ಮಾಡಲಾರಂಭಿಸಿದನು. "ಎಲೈ ರಾಜನೆ! ನಿನಗೆ ಕ್ಷೇಮವೇ? ಕ್ಷತ್ರಧರ್ಮವನ್ನನುಸರಿಸಿ ನಿನ್ನ ಪ್ರಜೆಗಳೆಲ್ಲರನ್ನೂ ಕ್ಷೇಮದಿಂದ ಕಾಪಾಡುವೆಯಾ? ನಿನ್ನ ಭೃತ್ಯರನ್ನು ಚೆನ್ನಾಗಿ ಪೋಷಿಸುತ್ತಿರುವೆಯಾ? ಅವರೆಲ್ಲರೂ ನಿನಗೆ ವಿಧೇಯರಾಗಿರುವರೆ? ನಿನ್ನ ಶತ್ರುಗಳೆಲ್ಲರನ್ನೂ ಜಯಿಸಿ ವಶಪಡಿಸಿಕೊಂಡಿರುವೆಯಾ? ನಿನ್ನ ಸೈನ್ಯಗಳೂ ಬೊಕ್ಕಸಗಳೂ ಮಿತ್ರರೂ ಇನ್ನೂ ಉಳಿದ ರಾಜ್ಯಾಂಗಗಳೆಲ್ಲವೂ ಕ್ರಮವಾಗಿರುವುವೆ? ನಿನ್ನ ಪುತ್ರಪೌತ್ರಾದಿ ಬಂಧುವರ್ಗವೆಲ್ಲವೂ ಕ್ಷೇಮವೆ?" ಎಂದು ಕೇಳಲು, ಮಹಾ ತೇಜಸ್ವಿಯಾದ ವಿಶ್ವಾಮಿತ್ರನೂ ಕೂಡ ವಿನಯದಿಂದ ಆ ವಸಿಷ್ಠನನ್ನು ಕುರಿತು "ಎಲೈ ಮಹಾತ್ಮನೆ! ನಿನ್ನ ಅನುಗ್ರಹದಿಂದ ಎಲ್ಲರಿಗೂ ಕ್ಷೇಮವು" ಎಂದು ಉತ್ತರ ಕೊಟ್ಟನು. ಹೀಗೆ ಇವರಿಬ್ಬರೂ ಬಹಳ ಸಂತೋಷದಿಂದ ಕುಶಲ ಪ್ರಶ್ನೆಯನ್ನು ಕೇಳಿ ಬೇರೆ ಬೇರೆ ಮಾತುಗಳನ್ನಾಡುತ್ತ ಕುಳಿತಿದ್ದರು. ಆ ಮಾತುಗಳೆಲ್ಲವೂ ಮುಗಿದ ಮೇಲೆ ವಸಿಷ್ಠನು ವಿಶ್ವಾಮಿತ್ರನನ್ನು ಕುರಿತು ನಗುತ್ತ "ಎಲೈ ರಾಜನೇ! ಈ ಆಶ್ರಮಕ್ಕೆ ಬಂದಿರುವ ನಿನಗೂ ನಿನ್ನ ಈ ದೊಡ್ಡ ಸೈನ್ಯಕ್ಕೂ ಒಳ್ಳೇ ಔತನವನ್ನು ಮಾಡಿಸಬೇಕೆಂದಿರುವೆನು.

ಅದನ್ನು ಪ್ರೀತಿಯಿಂದ ನೀನು ಅಂಗೀಕರಿಸಬೇಕು. ಅತಿಥಿಗಳಾಗಿ ಬಂದಿರುವ ನಿಮ್ಮಂತಹ ರಾಜರನ್ನು ನಾವು ಪ್ರಯತ್ನಪೂರ್ವಕವಾಗಿ ಸತ್ಕರಿಸಿ ಸಂತೋಷಪಡಿಸಬೇಕಾದುದೇ ಧರ್ಮವು” ಎಂದನು. ಅದಕ್ಕೆ ಬುದ್ಧಿಶಾಲಿಯಾದ ವಿಶ್ವಾಮಿತ್ರನು “ ನಿಮಗೆ ಅಷ್ಟು ಶ್ರಮವೇಕೆ ? ಈ ನಿಮ್ಮ ಪ್ರಿಯ ವಾಕ್ಯದಿಂದಲೇ ನನಗೆ ಸಮಸ್ತ ಸತ್ಕಾರಗಳನ್ನೂ ನೀವು ಮಾಡಿದ ಹಾಗಾಯಿತು. ಇದಕ್ಕಿಂತಲೂ ನೀವು ಮಾಡಬೇಕಾದುದೇನು ? ನಿಮ್ಮ ಆಶ್ರಮದಲ್ಲಿರುವ ಈ ಫಲಮೂಲಗಳೂ, ನೀವು ಕೊಟ್ಟ ಅರ್ಘ್ಯಪಾದ್ಯಾಚಮನೀಯಗಳೂ ನಿಮ್ಮ ದರ್ಶನವೂ ನನಗೆ ಲಭಿಸಿದುದೇ ಸಾಕು. ಇದಕ್ಕಿಂತಲೂ ಬೇರೆ ಆತಿಥ್ಯವೇನಿರುವುದು. ನಾವು ಹೋಗಿ ಬರುವೆವು. ಇದೋ ನಮಸ್ಕರಿಸುವೆವು. ಅಪ್ಪಣೆಯನ್ನು ಕೊಡಿ” ಎಂದನು. ವಸಿಷ್ಠನು ಬಾರಿ ಬಾರಿಗೂ ವಿಶ್ವಾಮಿತ್ರನನ್ನು ನಿರ್ಬಂಧಿಸುತ್ತಿರಲು ವಿಶ್ವಾಮಿತ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡು “ಎಲೈ ಮಹಾಮುನಿಯೆ, ಇನ್ನು ನಿಮ್ಮ ಪ್ರೀತಿಯಿದ್ದಂತೆ ನಡೆಸಬಹುದು” ಎಂದನು. ಆಗ ಧರ್ಮಾತ್ಮನಾದ ವಸಿಷ್ಠನು ಬಹಳ ಸಂತೋಷಪಟ್ಟು ತನ್ನ ಹೋಮಧೇನುವನ್ನು ಕುರಿತು “ಎಲೈ ಶಬಲೆ! ಬೇಗ ಬಾ. ಚತುರಂಗ ಬಲದೊಡಗೂಡಿ ಬಂದಿರುವ ಈ ರಾಜರ್ಷಿಗೆ ತಕ್ಕ ಮೃಷ್ಟಾನ್ನದ ಔತಣವನ್ನು ಮಾಡಿಸಬೇಕೆಂದಿರುವೆನು. ಅದಕ್ಕೆ ತಕ್ಕ ಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಬೇಕು. ಈತನಿಗಾಗಲೀ ಈತನ ಸೈನ್ಯಕ್ಕಾಗಲೀ ಯಾವ ಯಾವ ರೀತಿಯ ಆಹಾರಗಳು ಬೇಕೋ ಆಯಾ ಆಹಾರಗಳನ್ನು ಷಡ್ರಸೋಪೇತವಾಗಿ ಅವರವರ ಇಷ್ಟದಂತೆ ಒದಗಿಸಿಕೊಡಬೇಕು. ಎಲೈ ಹೋಮಧೇನುವೆ! ರಸಾಯನಗಳನ್ನೂ ಭಕ್ಷ್ಯ ಭೋಜ್ಯ ಲೇಹ್ಯ ಪಾನೀಯಗಳೇ ಮೊದಲಾದ ಬಗೆ ಬಗೆಯ ಆಹಾರಗಳನ್ನೂ ಉತ್ಕೃಷ್ಟವಾದ ಶಾಲ್ಯನ್ನ ರಾಶಿಗಳನ್ನೂ ಈಗಲೇ ಒದಗಿಸಿಡು. ಯಾವ ಭಾಗದಲ್ಲಿಯೂ ಲೋಪವಿಲ್ಲದಂತೆ ಈ ರಾಜನನ್ನೂ ಇವನ ಸೈನ್ಯಗಳನ್ನೂ ತೃಪ್ತಿಪಡಿಸಿ ಕಳುಹಿಸಬೇಕು” ಎಂದನು.

ಸರ್ಗ ೫೩

ವಿಶ್ವಾಮಿತ್ರನು ಹೋಮಧೇನುವನ್ನು ತನಗೆ ಕೊಡಬೇಕೆಂದು ವಸಿಷ್ಠನನ್ನು ಕೇಳಿದುದು.

ಹೀಗೆ ವಸಿಷ್ಠನು ಕಾಮಧೇನುವನ್ನು ಕುರಿತು ಹೇಳಿದೊಡನೆಯೇ, ಅದು ಯಾರು ಯಾರಿಗೆ ಯಾವ ಯಾವುದು ಇಷ್ಟವೋ ಆಗಾಗಲೇ ಅದನ್ನು ಒದಗಿಸಿಕೊಡಲಾರಂಭಿಸಿತು. ಕಬ್ಬು, ಜೇನು, ಅರಳು, ಉತ್ಕೃಷ್ಟವಾದ ಮದ್ಯಗಳು, ಮೇಲಾದ ಭಕ್ಷ್ಯ, ಭೋಜ್ಯ, ಪಾನೀಯಗಳು, ಬೆಟ್ಟದಂತೆ ದೊಡ್ಡದಾದ ಬಿಸಿ ಬಿಸಿಯಾದ ಅನ್ನದ ರಾಶಿಗಳು, ತೊವ್ವೆಗಳು ಮೊಸರಿನ ಕಾಲುವೆಗಳು, ರುಚಿಯಾದ ನಾನಾ ವಿಧವಾದ ರಸಗಳು, ಪರಮಾನ್ನಗಳು, ಕ್ಷಾಡವೆಂಬ ಆಹಾರ ಪದಾರ್ಥಗಳು, ಬೆಲ್ಲದಿಂದ ಮಾಡಲ್ಪಟ್ಟ ಅನೇಕ ಪದಾರ್ಥಗಳು ಇವೇ ಮೊದಲಾದ ಬಗೆ ಬಗೆಯಾದ ಆಹಾರಗಳೆಲ್ಲವೂ ಸಿದ್ಧಪಡಿಸಲ್ಪಟ್ಟುವು. ಹೀಗೆ ವಸಿಷ್ಠನು ಮಾಡಿಸಿದ ಔತನದಿಂದ, ಆ ವಿಶ್ವಾಮಿತ್ರನೂ ಆತನ ಸಮಸ್ತ ಸೈನ್ಯಗಳೂ ವಿಶೇಷವಾದ ತೃಪ್ತಿಯನ್ನೂ ಸಂತೋಷವನ್ನೂ ಹೊಂದಿದರು. ಹೀಗೆ ವಿಶ್ವಾಮಿತ್ರನು ಅಂತಃಪುರ ಸ್ತ್ರೀಯರುಗಳೊಡನೆಯೂ ಮಂತ್ರಿ ಪುರೋಹಿತಾದಿಗಳೊಡನೆಯೂ ಭೃತ್ಯರೊಡನೆಯೂ ಸೇರಿ, ಆ ಔತನದಿಂದ ಬಹಳ ಸಂತೋಷಪಟ್ಟು ವಸಿಷ್ಠನನ್ನು ಕುರಿತು, "ಎಲೈ ಬ್ರಾಹ್ಮಣೋತ್ತಮನೆ! ಪೂಜ್ಯನಾದ ನೀನು ಮಾಡಿದ ಅತ್ಯದ್ಭುತವಾದ ಈ ಸತ್ಕಾರಗಳಿಗಾಗಿ ಬಹಳ ಸಂತೋಷಪಟ್ಟೆನು. ಆದರೆ ನನ್ನ ಪ್ರಾರ್ಥನೆಯೊಂದುಂಟು. ನಿನಗೆ ಸಾವಿರಾರು ಗೋವುಗಳನ್ನು ಕೊಡುವೆನು. ನಿನ್ನಲ್ಲಿರುವ ಈ ಹೋಮಧೇನುವೊಂದನ್ನು ಮಾತ್ರ ನನಗೆ ಕೊಡು. ಇದು ಗೋವುಗಳಿಗೆಲ್ಲಾ ರತ್ನ ಪ್ರಾಯವಾದುದು. "ರತ್ನಹಾರೀ ಚ ಪಾರ್ಥಿವಃ" ಎಂಬ ನ್ಯಾಯದಿಂದ ಉತ್ತಮ ವಸ್ತುಗಳೆಲ್ಲವೂ ರಾಜನಿಗೆ ಸೇರಬೇಕೆಂಬ ಧರ್ಮವನ್ನು ನೀನೂ ತಿಳಿದೇ ಇರುವೆಯಲ್ಲವೆ? ಆದುದರಿಂದ ನ್ಯಾಯವಾಗಿ ಈ ಧೇನುವು ರಾಜನಾದ ನನಗೆ ಸೇರಬೇಕಾದುದು" ಎಂದನು. ಇದನ್ನು ಕೇಳಿ ವಸಿಷ್ಠನು ಆ ವಿಶ್ವಾಮಿತ್ರನನ್ನು ಕುರಿತು ನಗುತ್ತಾ "ಎಲೈ ರಾಜನೆ, ಸಾವಿರ ಗೋವುಗಳೇ ಅಲ್ಲ! ಲಕ್ಷ ಗೋವುಗಳನ್ನು ಕೊಟ್ಟರೂ, ಈ ಧೇನುವನ್ನು ನಾನು ಕೊಡಲಾರೆನು. ಅದು ಹಾಗಿರಲಿ! ನಿನ್ನ ಬೊಕ್ಕಸದಲ್ಲಿ

ರುವ ಚಿನ್ನ ಬೆಳ್ಳಿಗಳ ರಾಶಿಯೆಲ್ಲವನ್ನೂ ತಂದು ಕೊಟ್ಟರೂ, ನಾನು ಇದನ್ನು ಬಿಟ್ಟಿರಲಾರೆನು. ಮನಸ್ವಿಯಾದ ಪುರುಷನಿಗೆ ಕೀರ್ತಿಯು ಹೇಗೋ ಹಾಗೆ ತಪಸ್ವಿಯಾದ ನನಗೆ ಇದೇ ಶಾಶ್ವತ ಧನವಾಗಿರುವುದು. ದೇವತೆಗಳಿಗೆ ಕೊಡಬೇಕಾದ ಹವ್ಯವೂ, ಪಿತೃಗಳಿಗೆ ಕೊಡಬೇಕಾದ ಕವ್ಯಗಳೂ, ನನ್ನ ಅಗ್ನಿಹೋತ್ರಗಳೂ ನನ್ನ ಪ್ರಾಣಯಾತ್ರೆಯೂ ನಾನು ಮಾಡಬೇಕಾದ ಬಲಿಹೋಮ ಸ್ವಾಹಾಕಾರ ವಷಟ್ಕಾರಗಳೇ ಮೊದಲಾದ ಕರ್ಮಗಳೂ, ನಾನು ಅನುಸಂಧಿಸಬೇಕಾದ ಸಮಸ್ತ ಶಾಸ್ತ್ರಗಳೂ ಈ ಧೇನುವಿಗೆ ಅಧೀನವಾಗಿರುವುವು. ಎಲೈ ರಾಜನೆ, ಹೆಚ್ಚಾಗಿ ಹೇಳಿದುದರಿಂದೇನು ? ಈ ಪಶುವೇ ನನ್ನ ಪ್ರಾಣವು! ಇದೇ ನನ್ನ ಸರ್ವಸ್ವವು! ನನ್ನ ಸಮಸ್ತ ಸಂತೋಷವೂ ಇದರಲ್ಲಿಯೇ ಅಡಗಿರುವುದು. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ನಾನು ಇದನ್ನು ಬಿಡದಿರುವುದಕ್ಕೆ ಇನ್ನೂ ಅನೇಕ ಕಾರಣಗಳುಂಟು. ಆದುದರಿಂದ ನಾನು ಕೊಡಲಾರೆನು" ಎಂದನು. ಅದಕ್ಕಾಗಿ ವಿಶ್ವಾಮಿತ್ರನು ಪುನಃ ವಸಿಷ್ಠನನ್ನು ಕುರಿತು ಬಹಳ ಅನುನಯದಿಂದ "ಎಲೈ ವ್ರತನಿಷ್ಠನೆ! ನಿನಗೆ ಚಿನ್ನದ ಪಕ್ಕರೆಗಳಿಂದಲೂ, ಹಾರಗಳಿಂದಲೂ, ಬಂಗಾರದ ಅಂಕುಶಗಳಿಂದಲೂ, ಅಲಂಕರಿಸಲ್ಪಟ್ಟ ನಾಲ್ಕು ಸಾವಿರ ಆನೆಗಳನ್ನು ಕೊಡುವೆನು ಮತ್ತು ಬಿಳೀ ಕುದುರೆಗಳಿಂದಲೂ ಚಿನ್ನದ ಗೆಜ್ಜೆಗಳಿಂದಲೂ ಅಲಂಕರಿಸಲ್ಪಟ್ಟು ಸುವರ್ಣಮಯವಾದ ಎಂಟುನೂರು ರಥಗಳನ್ನು ಕೊಡುವೆನು. ಒಳ್ಳೆಯ ಜಾತಿಯಲ್ಲಿಯೂ ಉತ್ತಮವಾದ ದೇಶದಲ್ಲಿಯೂ ಹುಟ್ಟಿ ಬಹಳ ವೇಗವತ್ತಾದ ಹನ್ನೊಂದು ಸಾವಿರ ಕುದುರೆಗಳನ್ನೂ ಕೊಡುವೆನು. ಮತ್ತು ಬಗೆ ಬಗೆಯಾದ ಬಣ್ಣಗಳುಳ್ಳ ಒಂದು ಕೋಟಿ ಪ್ರಾಯದ ಹಸುಗಳನ್ನು ಕೊಡುವೆನು. ಎಲೈ ಬ್ರಾಹ್ಮಣನೆ! ಸುಮ್ಮನೆ ವಿವರಿಸುವುದರಿಂದೇನು ? ನಿನ್ನ ಮನಸ್ತೃಪ್ತಿಯಾಗುವಂತೆ ರತ್ನಗಳನ್ನಾಗಲಿ, ಚಿನ್ನವನ್ನಾಗಲಿ ಎಷ್ಟು ಕೇಳುವೆಯೋ ಅಷ್ಟನ್ನೂ ಕೊಡುವೆನು. ಈ ಧೇನುವನ್ನು ಮಾತ್ರ ನನಗೆ ಬಿಟ್ಟುಕೊಡು" ಎಂದನು. ಅದಕ್ಕಾ ವಸಿಷ್ಠನು "ಎಲೈ ರಾಜನೆ! ನನಗೆ ಬೇರೆ ರತ್ನಗಳೇಕೆ ? ಇದೇ ನನ್ನ ರತ್ನವು, ಇದೇ ನನ್ನ ಧನವು. ಇದೇ ನನ್ನ ಸರ್ವಸ್ವವು. ಇದೇ ನನ್ನ ಜೀವವು ಮತ್ತು ನಾನು ಮಾಡಬೇಕಾದ ದರ್ಶಪೌರ್ಣಮಾಸಾದಿ ಸಮಸ್ತ ಸತ್ಕರ್ಮಗಳೂ

ಇದೇ! ನನ್ನ ಸಮಸ್ತ ವ್ರತಗಳಿಗೂ ಇದೇ ಮೂಲವು. ಎಲೈ ರಾಜನೆ! ಸುಮ್ಮನೆ ಚರ್ಚೆಯೇಕೆ ? ಈ ಕಾಮಧೇನುವನ್ನು ಎಂದಿಗೂ ನಾನು ಕೊಡತಕ್ಕವನಲ್ಲ" ಎಂದನು.

ಸರ್ಗ ೫೪

ಶಬಲೆಯು ಸೈನ್ಯಗಳನ್ನು ಸೃಷ್ಟಿಸಿ ವಿಶ್ವಾಮಿತ್ರನ ಸೈನ್ಯವನ್ನು ಓಡಿಸಿದುದು

ಹೀಗೆ ವಸಿಷ್ಠನು ಕಾಮಧೇನುವನ್ನು ಕೊಡದಿರುವುದನ್ನು ನೋಡಿ ವಿಶ್ವಾಮಿತ್ರನು ಅದನ್ನು ಬಲಾತ್ಕಾರದಿಂದ ಎಳೆದುಕೊಂಡು ಹೋಗಲಾರಂಭಿಸಿದನು. ಆಗ ಆ ಧೇನುವು ದುಃಖದಿಂದ ಕೂಗುತ್ತ ತನ್ನಷ್ಟಕ್ಕೆ ತಾನು "ಅಹಾ! ಮಹಾತ್ಮನಾದ ವಸಿಷ್ಠನು ನನ್ನನ್ನು ಬಿಟ್ಟುಬಿಡುವನೆ? ರಾಜಭಟರು ಹೀಗೆ ನನ್ನನ್ನು ಸಂಕಟಪಡಿಸಿ ಎಳೆದುಕೊಂಡು ಹೋಗುತ್ತಿರುವರಲ್ಲಾ ! ಆತನ ವಿಷಯದಲ್ಲಿ ನಾನು ಏನು ಅಪರಾಧ ಮಾಡಿದೆನು ? ನಿರಪರಾಧಿನಿಯಾಗಿ ಬಹಳ ಪ್ರಿಯ ಭಕ್ತಳಾದ ನನ್ನನ್ನು ವಸಿಷ್ಠನು ತೊರೆದು ಬಿಡುವನಲ್ಲಾ ?" ಎಂದು ಚಿಂತಿಸಿ, ಆಗಾಗ ನಿಟ್ಟುಸಿರನ್ನು ಬಿಡುತ್ತ ಕೊನೆಗೆ ಕೋಪಗೊಂಡು, ಆ ಭೃತ್ಯರೆಲ್ಲರೂ ಕೈಬಿಟ್ಟು ಹೋಗುವಂತೆ ಮೈಯನ್ನು ಝಾಡಿಸಿತು. ಅವರೆಲ್ಲರೂ ಚದರಿ ಹೋಗಲು ಅದು ಬಹು ವೇಗದಿಂದ ಬಂದು ವಸಿಷ್ಠನ ಕಾಲಿನ ಮೇಲೆ ಬಿದ್ದು ಅಳುತ್ತ ಮೇಘದಂತೆ ಗಂಭೀರ ಧ್ವನಿಯಿಂದ ಆತನನ್ನು ಕುರಿತು "ಪೂಜ್ಯನೇ! ನನ್ನನ್ನು ತೊರೆದುಬಿಡುವೆಯಾ? ಈ ರಾಜ ದೂತರು ನನ್ನನ್ನು ನಿನ್ನಿಂದ ಅಗಲಿಸಿ ಎಳೆದುಕೊಂಡು ಹೋಗುತ್ತಿರುವರಲ್ಲಾ !" ಎಂದಿತು. ಇದನ್ನು ಕೇಳಿ ವಸಿಷ್ಠನು ಸಂಕಟಪಡುತ್ತಿರುವ ಆ ಧೇನುವನ್ನು ಕುರಿತು, "ಎಲೆ! ಶಬಲೆ! ನಿನ್ನನ್ನು ನಾನು ಎಂದಿಗೂ ಬಿಡುವುದಿಲ್ಲ. ನೀನು ನನಗೆ ಯಾವ ಅಪರಾಧವನ್ನೂ ಮಾಡಿದವಳಲ್ಲ. ಈ ರಾಜನೇ ಬಲಾತ್ಕಾರದಿಂದ ನಿನ್ನನ್ನು ಎಳೆದುಕೊಂಡು ಹೋಗಬೇಕೆಂದು ಪ್ರಯತ್ನಿಸುತ್ತಿರುವನು ನಾನೇನು ಮಾಡಲಿ? ಇವನು ರಾಜನಾದುದರಿಂದ ಆತನನ್ನೆದಿರಿಸತಕ್ಕ ಬಲವು ಬ್ರಾಹ್ಮಣರಾದ ನಮಗೆಲ್ಲಿಯದು ? ಈತನಾದರೋ ಮಹಾಬಲಶಾಲಿಯು. ಈ ದೇಶಕ್ಕೆಲ್ಲಾ ಒಡೆಯನು. ಅಕ್ಷೋಹಿಣಿ ಸಂಖ್ಯೆಯುಳ್ಳ

ಚತುರಂಗ ಸೈನ್ಯಗಳನ್ನು ಕಟ್ಟಿಕೊಂಡು ಬಂದಿರುವನು. ಇವನ ಆನೆಗಳು, ಕುದುರೆಗಳು, ರಥಗಳು, ಕಾಲಾಳುಗಳು ಇವೆಲ್ಲವೂ ಮಹಾಬಲವುಳ್ಳವುಗಳಾಗಿರುವುವು. ಆದುದರಿಂದ ನಮಗಿಂತಲೂ ಪ್ರಬಲನಾದ ಈತನ ಮೇಲೆ ನಮ್ಮ ಕೈಯ್ಯಿಂದೂ ಸಾಗದು. ಏನು ಮಾಡಲಿ? ಅಥವಾ ಒಂದು ವೇಳೆ ನನ್ನ ತಪೋಬಲದಿಂದಲೇ ಆತನನ್ನು ನಿಗ್ರಹಿಸಬಹುದಾದರೂ, ರಾಜನನ್ನು ಇದಿರಿಸುವುದು ಆತನ ಪ್ರಜೆಗಳಾದ ನಮಗೆ ಧರ್ಮವಲ್ಲ" ಎಂದನು. ಅದಕ್ಕಾ ಕಾಮಧೇನುವು ಮಹಾ ತೇಜಸ್ವಿಯಾದ ವಸಿಷ್ಠನನ್ನು ಕುರಿತು ವಿನಯದೊಡನೆ "ಎಲೈ ತಪಸ್ವಿಯೇ! ಇದೇನು ಹೀಗೆ ಹೇಳುವೆ? ಕ್ಷತ್ರಿಯ ಬಲವೊಂದು ಬಲವೆ? ಅದಕ್ಕಿಂತಲೂ ಪ್ರಬಲವಾದ ಶಕ್ತಿಯು ಬ್ರಾಹ್ಮಣರಲ್ಲಿರುವುದು. ಕ್ಷತ್ರಿಯ ತೇಜಸ್ಸಿಗಿಂತಲೂ ಬ್ರಹ್ಮತೇಜಸ್ಸು ಬಹಳ ಅತಿಶಯವಾದುದಲ್ಲವೆ? ಅದಲ್ಲಿಯೂ ನಿನ್ನ ತಪೋಬಲವೆಂಬುದನ್ನು ಅಷ್ಟಿಷ್ಟೆಂದು ನಿರ್ಣಯಿಸುವುದಕ್ಕೂ ಸಾಧ್ಯವಿಲ್ಲ. ಆದುದರಿಂದ ಈ ರಾಜನಾದ ವಿಶ್ವಾಮಿತ್ರನು ನಿನಗಿಂತಲೂ ಬಲಶಾಲಿಯೆಂದು ಎಂದಿಗೂ ತಿಳಿಯಬೇಡ. ಆತನು ಮಹಾ ವೀರ್ಯವುಳ್ಳವನಾಗಿದ್ದರೂ ನಿನ್ನ ತೇಜಸ್ಸನ್ನು ಮೀರಲಾರನು. ಎಲೈ ಮಹಾತ್ಮನೆ, ಅದೆಲ್ಲವೂ ಹಾಗಿರಲಿ. ಇದಕ್ಕಾಗಿ ನೀನು ಸ್ವಲ್ಪವೂ ಶ್ರಮ ತೆಗೆದುಕೊಳ್ಳಬೇಕಾದುದಿಲ್ಲ. ಈ ವಿಷಯದಲ್ಲಿ ಅನುಗ್ರಹಿಸಿ ಆಜ್ಞೆಯನ್ನು ಕೊಡು. ನಿನ್ನ ಅನುಗ್ರಹ ಬಲದಿಂದಲೇ ಈ ದುರಾತ್ಮನಾದ ರಾಜನ ಕೊಬ್ಬನ್ನಡಗಿಸುವೆನು" ಎಂದಿತು. ಆಗ ವಸಿಷ್ಠನು "ಎಲೈ ಧೇನುವೆ! ಹಾಗೆಯೇ ಆಗಲಿ. ಈಗಲೇ ನಿನ್ನ ಅವಯವಗಳಿಂದ ಶತ್ರು ಸೈನ್ಯವನ್ನಡಗಿಸತಕ್ಕ ಸೈನ್ಯವೊಂದನ್ನು ಸೃಷ್ಟಿಸು" ಎಂದನು. ಆಗ ಆ ಧೇನುವು ಒಂದಾವರ್ತಿ ಹುಂಕಾರ ಮಾಡಿದ ಮಾತ್ರಕ್ಕೆ ಪಪ್ಲವವೆಂಬ ಅನೇಕ ಸೈನ್ಯಗಳು ಪರಂಪರೆಯಾಗಿ ಹೊರಟು ವಿಶ್ವಾಮಿತ್ರನ ಸೈನ್ಯವೆಲ್ಲವನ್ನೂ ಆತನ ಮುಂದೆಯೇ ಕೊಲ್ಲುತ್ತಿದ್ದುವು. ಹೀಗೆ ತನ್ನ ಸೈನ್ಯವೆಲ್ಲವೂ ನಾಶ ಹೊಂದುತ್ತಿರುವುದನ್ನು ವಿಶ್ವಾಮಿತ್ರನು ನೋಡಿ ಬಹಳ ಕೋಪಗೊಂಡು, ರಥದ ಮೇಲೆ ಕುಳಿತು ಬಂದು ಮ್ಲೇಚ್ಛ ಜಾತಿಯ ಪಪ್ಲವರೆಂಬ ಆ ಸೈನಿಕರೆಲ್ಲರನ್ನೂ ಶಸ್ತ್ರಗಳಿಂದ ಹೊಡೆಯಲಾರಂಭಿಸಿದನು. ಹೀಗೆ ಮ್ಲೇಚ್ಛ ಸೈನ್ಯಗಳೆಲ್ಲವೂ ಆ ವಿಶ್ವಾಮಿತ್ರನಿಂದ ಹತವಾದುದನ್ನು ನೋಡಿ, ಕಾಮ

ಧೇನುವು ಕೋಪದಿಂದ ಮತ್ತೊಂದಾವರ್ತಿ ಕೂಗಲು, ಶಕರೆಂದೂ, ಯವನರೆಂದೂ ಹೆಸರುಗೊಂಡು ಬೇರೆ ಬೇರೆ ವೀರ ಭಟರು ಹೊರಡಲಾರಂಭಿಸಿದರು. ಇವರೆಲ್ಲರೂ ಮಹಾ ವೀರ್ಯವುಳ್ಳವರಾಗಿ, ಹೊಂಬಣ್ಣದ ಮೈಯುಳ್ಳವರಾಗಿ, ಉದ್ದವಾದ ಕತ್ತಿಗಳನ್ನು ಕೈಯಲ್ಲಿ ಹಿಡಿದು, ರಕ್ತ ವರ್ಣವಾದ ಬಟ್ಟೆಗಳನ್ನು ಧರಿಸಿ, ಆ ಪ್ರದೇಶವೆಲ್ಲವನ್ನೂ ಸುತ್ತಿಕೊಂಡು ವಿಶ್ವಾಮಿತ್ರನ ಸೈನ್ಯವನ್ನು ಸಿಕ್ಕಿದ ಕಡೆಯಲ್ಲಿ ಕೊಲ್ಲಲಾರಂಭಿಸಿದರು. ಆಗ ವಿಶ್ವಾಮಿತ್ರನೂ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಆ ಮ್ಲೇಚ್ಛ ಯವನಾದಿಗಳೆಲ್ಲರನ್ನೂ ಅಡಗಿಸುತ್ತ ಬಂದನು.

ಸರ್ಗ ೫೫

ವಿಶ್ವಾಮಿತ್ರನು ಶಿವನಿಂದ ಅಸ್ತ್ರವಿಶೇಷಗಳನ್ನು ಪಡೆಯುದು

ಆ ಮೇಲೆ ವಸಿಷ್ಠನು ವಿಶ್ವಾಮಿತ್ರನ ಅಸ್ತ್ರಗಳಿಂದ ಮೂರ್ಛೆ ಬಿದ್ದಿರುವ ಮ್ಲೇಚ್ಛ ಸೈನ್ಯಗಳೆಲ್ಲವನ್ನೂ ನೋಡಿ ಕಾಮಧೇನುವನ್ನು ಕುರಿತು ಪುನಃ ಯೋಗ ಬಲದಿಂದ ಸೈನ್ಯಗಳನ್ನು ಸೃಷ್ಟಿಸುವ ಹಾಗೆ ಆಜ್ಞೆ ಮಾಡಿದನು. ಒಡನೆಯೇ ಆ ಹಸುವು ಒಂದಾವರ್ತಿ "ಹಂಭಾ" ಎಂದು ಕೂಗಲು ಅದರಿಂದ ಸೂರ್ಯ ತೇಜಸ್ಸುಳ್ಳ ಕಾಂಭೋಜರು ಹುಟ್ಟಲಾರಂಭಿಸಿದರು. ಅದರ ಕೆಚ್ಚಲಿನಿಂದ ಪುನಃ ಪಪ್ಲವರೆಂಬ ಸೈನಿಕರು ಕೈಯ್ಯಲ್ಲಿ ಶಸ್ತ್ರವನ್ನು ಹಿಡಿದು ಹೊರಟು ಬಂದರು. ಅದರ ಬೇರೆ ಅಂಗದಿಂದ ಯವನರೆಂಬವರು ಹುಟ್ಟಿದರು. ಅದರ ರೋಮ ಕೂಪಗಳಿಂದ ಹಾರೀತರೂ ಕಿರಾತರೇ ಮೊದಲಾದವರು ಹುಟ್ಟಿದರು. ಇವರೆಲ್ಲರೂ ವಿಶ್ವಾಮಿತ್ರನ ಚತುರಂಗ ಸೈನ್ಯಗಳನ್ನು ಸಿಕ್ಕಿದ ಕಡೆಯಲ್ಲಿ ಕೊಲ್ಲುತ್ತ ಬಂದರು. ಹೀಗೆ ವಸಿಷ್ಠನಿಂದ ತನ್ನ ಸೈನ್ಯಗಳೆಲ್ಲವೂ ನಾಶವಾಗುತ್ತಿರುವುದನ್ನು ನೋಡಿ, ವಿಶ್ವಾಮಿತ್ರನ ನೂರು ಮಂದಿ ಮಕ್ಕಳೂ ನಾನಾ ವಿಧವಾದ ಆಯುಧಗಳನ್ನು ಹಿಡಿದು, ಕೋಪದಿಂದ ವಸಿಷ್ಠರ ಮೇಲೆಯೇ ಬೀಳುವುದಕ್ಕೆ ಹೋಗಲು ಮಹಾ ಮಹಿಮೆಯುಳ್ಳ ಆ ವಸಿಷ್ಠನು ಕೋಪದಿಂದ ಒಂದಾವರ್ತಿ ಹುಂಕಾರ ಮಾಡಿದ ಮಾತ್ರದಲ್ಲಿ ಅವರೆಲ್ಲರೂ ದಗ್ಧರಾದರು. ಹಾಗೆಯೇ ಅವರ ಅನೇಕ ಸೈನ್ಯಗಳೂ ಸುಟ್ಟು ಹೋದುವು. ಹೀಗೆ ತನ್ನ ಮಕ್ಕಳೂ ಅನೇಕ ಸೈನ್ಯವೂ ಒಂದು ಮುಹೂರ್ತ ಮಾತ್ರದಲ್ಲಿ ಸುಟ್ಟು

ಹೋದುದನ್ನು ನೋಡಿ ವಿಶ್ವಾಮಿತ್ರನು ಬಹಳ ನಾಚಿಕೆಗೊಂಡು ಚಿಂತಾ ಕ್ರಾಂತನಾಗಿ ವೇಗವಿಲ್ಲದ ಸಮುದ್ರದಂತೆಯೂ, ಹಲ್ಲುಗಳಿಲ್ಲದ ಹಾವಿನಂತೆಯೂ ರಾಹುಗ್ರಸ್ತನಾದ ಸೂರ್ಯನಂತೆಯೂ ಇದ್ದನು. ಆತನ ಉತ್ಸಾಹವೂ ದರ್ಪವೂ ಅಡಗಿಹೋದುವು. ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಯಂತೆ ದುಃಖದಿಂದ ಬಹಳ ದೀನನಾಗಿ ಸತ್ತುಳಿದ ತನ್ನ ಒಬ್ಬ ಮಗನನ್ನು ತನ್ನ ರಾಜ್ಯಕ್ಕೆ ನಿಯಮಿಸಿ ಕಾಡಿಗೆ ಹೊರಟು ಹೋದನು. ಕಿನ್ನರರಿಂದಲೂ ನಾಗರಿಂದಲೂ ಸೇವಿಸಲ್ಪಟ್ಟ ಹಿಮವತ್ಪರ್ವತದ ತಪ್ಪಲಿನಲ್ಲಿ ಮಹಾ ಶಿವನನ್ನು ಕುರಿತು ಒಂದು ದೊಡ್ಡ ತಪಸ್ಸನ್ನು ಮಾಡಲಾರಂಭಿಸಿದನು. ಹೀಗೆ ಕೆಲವು ಕಾಲ ಕಳೆಯಲು, ವೃಷಭಧ್ವಜನಾದ ಪರಮೇಶ್ವರನು ಇವನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಬಂದು ನಿಂತು ವಿಶ್ವಾಮಿತ್ರನನ್ನು ಕುರಿತು "ಎಲೈ ರಾಜನೆ! ಏಕೆ ತಪಸ್ಸನ್ನು ಮಾಡುವೆ? ನಿನ್ನ ಕೋರಿಕೆಯೇನು? ನಿನಗೆ ಬೇಕಾದ ವರಗಳನ್ನು ಕೇಳು ಕೊಡುವೆನು।" ಎಂದನು. ಆಗ ವಿಶ್ವಾಮಿತ್ರನು ವಿನಯದಿಂದ ಕೈ ಮುಗಿದು ನಿಂತು "ಎಲೈ ಮಹಾದೇವನೆ! ನೀನು ನನ್ನಲ್ಲಿ ಪ್ರಸನ್ನನಾಗಿರುವೆಯಾದರೆ ನನಗೆ ಎಲ್ಲಾ ಧನುರ್ವೇದಗಳನ್ನೂ ಅವುಗಳ ರಹಸ್ಯ ಮಂತ್ರಗಳನ್ನೂ ಸಾಂಗೋಪಾಂಗವಾಗಿ ಅನುಗ್ರಹಿಸು. ದೇವದಾನವ ಯಕ್ಷ ರಾಕ್ಷಸಾದಿಗಳಲ್ಲಿಯೂ ಮಹರ್ಷಿಗಳಲ್ಲಿಯೂ ಗಂಧರ್ವರಲ್ಲಿಯೂ ಯಾವ ಯಾವ ಅಪೂರ್ವಾಸ್ತ್ರಗಳುಂಟೋ ಅವೆಲ್ಲವೂ ನನಗೆ ತಿಳಿಯುವಂತೆ ಕರುಣಿಸು. ನಿನ್ನ ಅನುಗ್ರಹದಿಂದಲೇ ನನ್ನ ಕೋರಿಕೆಯು ನೆರವೇರಬೇಕಾಗಿರುವುದು" ಎಂದನು. ಅದಕ್ಕಾ ಭಗವಂತನು "ಹಾಗೆಯೇ ಆಗಲಿ" ಎಂದು ಕರುಣಿಸಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು. ವಿಶ್ವಾಮಿತ್ರನು ಮೊದಲೇ ಕ್ಷತ್ರಿಯನಾಗಿದ್ದುದರಿಂದ ಆತನಿಗೆ ಸ್ವಾಭಾವಿಕವಾಗಿದ್ದ ರಾಜದರ್ಪವು ಈಗ ಶಂಕರನ ಕೃಪಾ ವಿಶೇಷದಿಂದ ಪ್ರಾಪ್ತವಾದ ಅಸ್ತ್ರ ವಿಶೇಷಗಳಿಂದ ಇನ್ನೂ ಮಿತಿ ಮೀರಿತು. ಪರ್ವಕಾಲದಲ್ಲಿ ಸಮುದ್ರವು ಉಕ್ಕಿ ಬರುವಂತೆ ಆ ವಿಶ್ವಾಮಿತ್ರನು ವೀರ್ಯದಿಂದ ಕೊಬ್ಬಿದವನಾಗಿ ಇನ್ನು ಆ ವಸಿಷ್ಠನನ್ನು ಕೊಂದೆನೆಂದೇ ನಿಶ್ಚಯಿಸಿಕೊಂಡು ವಸಿಷ್ಠಾಶ್ರಮಕ್ಕೆ ಬಂದನು. ತಾನು ಹೊಸದಾಗಿ ಸಂಪಾದಿಸಿದ ಅಸ್ತ್ರಗಳೆಲ್ಲವನ್ನೂ ಅಲ್ಲಿ ಕ್ರಮವಾಗಿ ಪ್ರಯೋಗಿಸುತ್ತಿರಲು ಆ ಅಸ್ತ್ರಗಳ ಜ್ವಾಲೆಯಿಂದ ತಪೋವನವೆಲ್ಲವೂ ದಗ್ಧವಾಗುತ್ತಾ

ಬಂದಿತು. ವಿಶ್ವಾಮಿತ್ರನ ಆ ಅಸ್ತ್ರಜ್ವಾಲೆಯನ್ನು ತಡೆಯಲಾರದೆ ಅಲ್ಲಿದ್ದ ಋಷಿಗಳೂ, ವಟುಗಳೂ, ಮೃಗಗಳೂ, ಪಕ್ಷಿಗಳೂ ಭಯಪಟ್ಟು ದಿಕ್ಕು ದಿಕ್ಕಿಗೆ ಓಡಲಾರಂಭಿಸಿದುವು. ಆ ಆಶ್ರಮದಲ್ಲಿ ಒಂದು ಪ್ರಾಣಿಯಾದರೂ ನಿಲ್ಲದೆ ಶೂನ್ಯ ಪ್ರದೇಶವಾಯಿತು. ಒಂದು ನಿಮಿಷ ಮಾತ್ರದಲ್ಲಿಯೇ ಆ ಆಶ್ರಮವು ಮರಗಿಡಗಳೊಂದೂ ಇಲ್ಲದ ಚೌಳು ಭೂಮಿಯಂತೆ ಕಾಣಿಸಿ ನಿಶ್ಶಬ್ದವಾಯಿತು. ಆಗ ವಸಿಷ್ಠನು ಇದೆಲ್ಲವನ್ನೂ ಕಣ್ಣಾರೆ ಕಂಡು ಓಡಿಹೋಗುತ್ತಿದ್ದ ಋಷಿಗಳೆಲ್ಲರನ್ನೂ ಕೂಗಿ "ಭಯಪಡಬೇಡಿರಿ. ಭಯಪಡಬೇಡಿರಿ. ಇದೋ ಸೂರ್ಯನು ಮಂಜನ್ನು ಹೇಗೋ ಹಾಗೆ ಒಂದು ನಿಮಿಷ ಮಾತ್ರದಲ್ಲಿ ಈ ಗಾಧಿ ಪುತ್ರನನ್ನು ನಿರ್ಮೂಲ ಮಾಡುವೆನು" ಎಂದು ಮಹಾ ಕೋಪಯುಕ್ತನಾಗಿ ಇದಿರಾಗಿದ್ದ ವಿಶ್ವಾಮಿತ್ರನನ್ನು ನೋಡಿ "ಎಲೈ ಮೂಢನೇ, ಬಹು ಕಾಲದಿಂದ ಬೆಳೆಸಿದ ಈ ಆಶ್ರಮವೆಲ್ಲವನ್ನೂ ಕೆಡಿಸಿದೆಯಲ್ಲವೆ? ನಿನ್ನ ಈ ಅಕೃತ್ಯಕ್ಕೆ ಈಗಲೇ ತಕ್ಕ ಫಲವನ್ನು ತೋರಿಸುವೆನು. ಇನ್ನು ನಿನ್ನ ಆಯುಸ್ಸು ತೀರಿತೆಂದೇ ತಿಳಿ" ಎಂದು ಹೊಗೆಯಾಡದ ಕಾಲಾಗ್ನಿಯಂತೆಯೂ, ಬೇರೊಂದು ಯಮದಂಡದಂತೆಯೂ ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ತನ್ನ ಬ್ರಹ್ಮದಂಡವನ್ನು ಮೇಲಕ್ಕೆತ್ತಿ ನಿಂತನು.

ಸರ್ಗ ೫೬

ವಸಿಷ್ಠನು ವಿಶ್ವಾಮಿತ್ರನನ್ನು ಜಯಿಸಿದುದು.

ವಸಿಷ್ಠನು ಹೀಗೆ ಹೇಳಿ ದಂಡವನ್ನೆತ್ತಿದೊಡನೆಯೇ ಮಹಾ ಬಲಶಾಲಿಯಾದ ವಿಶ್ವಾಮಿತ್ರನು ಆಗ್ನೇಯಾಸ್ತ್ರವನ್ನು ತೆಗೆದುಕೊಂಡು "ಎಲೈ ಬಡ ಬ್ರಾಹ್ಮಣನೇ! ನಿಲ್ಲು" ಎಂದು ಆರ್ಭಟಿಸಿದನು. ಆಗ ವಸಿಷ್ಠನು ಆ ದಂಡವನ್ನು ಹಿಡಿದಹಾಗೆಯೇ ವಿಶ್ವಾಮಿತ್ರನನ್ನು ನೋಡಿ ಕೋಪದಿಂದ "ಎಲೈ ನೀಚ ಕ್ಷತ್ರಿಯನೇ! ಇದೋ ನಿಂತಿರುವೆನು; ನಿನ್ನ ಬಲವನ್ನೆಲ್ಲಾ ತೋರಿಸು. ಈಗಲೇ ನಿನ್ನ ಕೆಚ್ಚನ್ನು ಮುರಿದುಬಿಡುವೆನು. ಎಲೈ ಗಾಧಿ ಪುತ್ರನೆ! ನಿನ್ನ ಕ್ಷತ್ರಿಯ ಬಲವೆಲ್ಲಿ? ಮಹತ್ತಾದ ನಮ್ಮ ಬ್ರಹ್ಮ ಬಲವೆಲ್ಲಿ? ಎಲೈ ಕ್ಷತ್ರಿಯಾಧಮನೇ, ನಮ್ಮ ಬ್ರಹ್ಮತೇಜಸ್ಸಿನ ಶಕ್ತಿಯನ್ನು ಈಗಲೇ ನಿನಗೆ ತೋರಿಸಿಕೊಡುವೆನು. ನೋಡು!" ಎಂದು ತನ್ನ ಬ್ರಹ್ಮ

ದಂಡವನ್ನು ಬೀಸಲು ಆ ಕ್ಷಣದಲ್ಲಿಯೇ ಬೆಂಕಿಯು ಉರಿಯು ನೀರಿನಿಂದ ಹೇಗೋ ಹಾಗೆ ವಿಶ್ವಾಮಿತ್ರನು ಹಿಡಿದಿದ್ದ ಆಗ್ನೇಯಾಸ್ತ್ರವು ಆ ಬ್ರಹ್ಮ ದಂಡದ ಬಲದಿಂದ ಅಡಗಿತು. ಆಗ ವಿಶ್ವಾಮಿತ್ರನು ತನ್ನ ಆಗ್ನೇಯಾಸ್ತ್ರವು ವಿಫಲವಾದುದನ್ನು ನೋಡಿ ಮೇಲೆ ಮೇಲೆ ವಾರುಣಾಸ್ತ್ರವನ್ನೂ, ರೌದ್ರಾ ಸ್ತ್ರವನ್ನೂ, ಐಂದ್ರಾಸ್ತ್ರ ಪಾಶುಪತಾಸ್ತ್ರಗಳನ್ನೂ, ಐಷೀಕವೆಂಬ ಅಸ್ತ್ರವನ್ನೂ ಕ್ರಮವಾಗಿ ಉಪಯೋಗಿಸಲಾರಂಭಿಸಿದನು. ಅದರ ಮೇಲೆಯೂ ಮಾನವ, ಮೋಹನ, ಗಾಂಧರ್ವ, ಸ್ವಾಪನ, ಜೃಂಭಣ, ಮಾದನ, ಸಂತಾಪನ, ವಿಲಾಪನ, ಶೋಷಣ, ದಾರಣ, ವಜ್ರ, ಬ್ರಹ್ಮಪಾಶ, ಕಾಲಪಾಶ, ವರುಣಪಾಶ, ಪೈನಾಕಾಸ್ತ್ರ, ದಯಿತಗಳೆಂಬ ಅಸ್ತ್ರಗಳನ್ನೂ, ದಂಡಾಸ್ತ್ರ, ಪೈಶಾಚ, ಕ್ರೌಂಚವೆಂಬಿವುಗಳನ್ನೂ, ಧರ್ಮಚಕ್ರ, ಕಾಲಚಕ್ರ, ವಿಷ್ಣು ಚಕ್ರಗಳೆಂಬ ಮೂರು ಚಕ್ರಗಳನ್ನೂ, ವಾಯವ್ಯ, ಮಥನ, ಹಯಗ್ರೀವ ಗಳೆಂಬ ಮೂರು ಅಸ್ತ್ರಗಳನ್ನೂ, ಎರಡು ಶಕ್ತ್ಯಾಯುಧಗಳನ್ನೂ, ಕಂಕಾಳ ಮುಸಲಾಯುಧಗಳನ್ನೂ, ಭಯಂಕರವಾದ ವೈದ್ಯಾಧರ, ಕಾಲಾಸ್ತ್ರಗಳೆಂಬ ಮಹಾಸ್ತ್ರಗಳನ್ನೂ; ದಾರುಣ, ತ್ರಿಶೂಲ, ಘೋರ, ಕಾಪಾಲ, ಕಂಕಣಗ ಳೆಂಬ ದಿವ್ಯಾಸ್ತ್ರಗಳನ್ನೂ ಆ ವಸಿಷ್ಠನ ಮೇಲೆ ಎಡೆಬಿಡದೆ ಪ್ರಯೋಗಿಸುತ್ತಿ ದ್ದನು. ಹೀಗೆ ವಿಶ್ವಾಮಿತ್ರನು ಎಷ್ಟೆಷ್ಟು ಅಸ್ತ್ರಗಳನ್ನು ಪ್ರಯೋಗಿಸುತ್ತಿ ದ್ದರೂ ಮಹಾ ತಪಸ್ವಿಯಾದ ಆ ವಸಿಷ್ಠನ ಕೈಯಲ್ಲಿದ್ದ ಬ್ರಹ್ಮದಂಡವು ಲೋಕವೆಲ್ಲವೂ ಆಶ್ಚರ್ಯಪಡುವಂತೆ ನಿಮಿಷಮಾತ್ರದಲ್ಲಿ ಅವುಗಳನ್ನು ನುಂಗುತ್ತಿತ್ತು. ಹೀಗೆ ತನ್ನ ಅಸ್ತ್ರಗಳೆಲ್ಲವೂ ವಿಫಲವಾದುದನ್ನು ನೋಡಿ ವಿಶ್ವಾಮಿತ್ರನು ವಸಿಷ್ಠನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲುಪಕ್ರ ಮಿಸಿದನು. ಇದನ್ನು ನೋಡಿ ಅಗ್ನ್ಯಾದಿಗಳೂ, ಗಂಧರ್ವರೂ, ಮಹರ್ಷಿ ಗಳೂ ಭಯದಿಂದ ನಡುಗುತ್ತಿದ್ದರು. ಮೂರು ಲೋಕವೂ ಹೆದರಿತು. ಏನಾದರೇನು! ಅಂತಹ ಘೋರವಾದ ಬ್ರಹ್ಮಾಸ್ತ್ರವನ್ನೂ ಕೂಡ ವಸಿಷ್ಠನ ಬ್ರಹ್ಮದಂಡವು ನುಂಗಿತು. ಹೀಗೆ ಮಹಾತ್ಮನಾದ ವಸಿಷ್ಠನು ತನ್ನ ಬ್ರಹ್ಮ ತೇಜಸ್ಸಿನಿಂದ ಆ ಬ್ರಹ್ಮಾಸ್ತ್ರವನ್ನು ನುಂಗಿಬಿಟ್ಟಕೂಡಲೇ ಆತನಿಗೆ ಒಂದು ಭಯಂಕರವಾದ ರೂಪವುಂಟಾಯಿತು. ಅದನ್ನು ನೋಡಿ ಮೂರು ಲೋಕವೂ ಮೂರ್ಛೆ ಹೊಂದುವ ಸ್ಥಿತಿಯಲ್ಲಿತ್ತು. ಆಗ ಆತನ ಮೈಯು ಲ್ಲಿದ್ದ ಒಂದೊಂದು ರೋಮಕೂಪದಲ್ಲಿಯೂ ಅಗ್ನಿಜ್ವಾಲೆಯಂತೆ ಉರಿಯು

ಹೊರಡಲಾರಂಭಿಸಿತು. ಆತನು ಕೈಯಲ್ಲಿ ಎತ್ತಿ ಹಿಡಿದಿದ್ದ ಬ್ರಹ್ಮದಂಡವೂ ಕೂಡ ಹೊಗೆಯಿಲ್ಲದ ಕಾಲಾಗ್ನಿಯಂತೆಯೂ ಬೇರೊಂದು ಯಮದಂಡದಂತೆಯೂ ಜ್ವಲಿಸುತ್ತಿತ್ತು. ಆಗ ಅಲ್ಲಿದ್ದ ಋಷಿಗಳೆಲ್ಲರೂ ಆ ವಸಿಷ್ಠನ ಮಹಿಮೆಯನ್ನು ಕೊಂಡಾಡುತ್ತ ಸಂತೋಷದಿಂದ ಆತನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೆ! ನಿನ್ನ ಬ್ರಹ್ಮಬಲವು ಅಮೋಘವಾದುದು. ಈಗ ನೀನು ಹೊರಗೆ ಕಾಣಿಸುತ್ತಿರುವ ಆ ಬ್ರಹ್ಮಾಸ್ತ್ರದ ಉರಿಯನ್ನು ನಿನ್ನ ತೇಜಸ್ಸಿನಲ್ಲಿಯೇ ಅಡಗಿಸಿಡು! ಎಲೈ ಮಹಾತ್ಮನೇ, ಈ ವಿಶ್ವಾಮಿತ್ರನು ಅನೇಕ ತಪಸ್ಸುಗಳನ್ನು ಮಾಡಿ ಶಸ್ತ್ರಗಳನ್ನು ಪಡೆದು ಬಂದಿದ್ದರೂ ನಿನ್ನಿಂದ ನಿಗ್ರಹಿಸಲ್ಪಟ್ಟನು. ಇನ್ನು ಪ್ರಸನ್ನನಾಗು. ಮೂರು ಲೋಕಗಳೂ ತತ್ತಳಿಸುತ್ತಿರುವುವು. ಅವುಗಳಿಗೆ ಕ್ಷೇಮವನ್ನುಂಟುಮಾಡು" ಎಂದು ಪ್ರಾರ್ಥಿಸಿದರು. ಒಡನೆಯೇ ವಸಿಷ್ಠನು ಆ ತೇಜಸ್ಸನ್ನು ತನ್ನಲ್ಲಿಯೇ ಅಡಗಿಸಿಕೊಂಡನು. ಇತ್ತಲಾಗಿ ವಿಶ್ವಾಮಿತ್ರನು ಈ ಬ್ರಾಹ್ಮಣನಿಂದ ತನಗೆ ನಿಗ್ರಹವುಂಟಾದುದಕ್ಕಾಗಿ ಸಂಕಟದಿಂದ ನಿಟ್ಟುಸಿರುಬಿಡುತ್ತಾ ತನ್ನಲ್ಲಿ ತಾನು "ಛಿ! ಕ್ಷತ್ರಿಯ ಬಲವನ್ನು ಸುಡು! ಬ್ರಹ್ಮಬಲವೇ ಬಲವು! ಇದಕ್ಕೆ ಬೇರೆ ನಿದರ್ಶನವೇಕೆ? ಆಹಾ! ನಾನು ಬಹುದಿನಗಳವರೆಗೆ ತಪಸ್ಸುಮಾಡಿ ಗಳಿಸಿ ತಂದ ದಿವ್ಯಾಸ್ತ್ರಗಳೆಲ್ಲವೂ ಈ ಬ್ರಾಹ್ಮಣನ ಕೈಯಲ್ಲಿದ್ದ ಒಂದು ಬ್ರಹ್ಮದಂಡದಿಂದ ಅಡಗಿಸಲ್ಪಟ್ಟುವಲ್ಲವೆ? ಈಗ ಇವೆರಡರ ತಾರತಮ್ಯವೂ ನನಗೆ ಚೆನ್ನಾಗಿ ತಿಳಿಯಿತು. ಇನ್ನು ಮೇಲೆ ನನ್ನ ಮನಸ್ಸನ್ನೂ ಇಂದ್ರಿಯಗಳನ್ನೂ ಕೆಡಿಸತಕ್ಕ ಈ ಕ್ಷತ್ರಿಯ ಸ್ವಭಾವವನ್ನು ಬಿಟ್ಟು ಬ್ರಾಹ್ಮಣ್ಯಕ್ಕೆ ಕಾರಣವಾದ ತಪಸ್ಸನ್ನೇ ಮಾಡಿ ಅದನ್ನು ಹೇಗಾದರೂ ಸಂಪಾದಿಸುವೆನು" ಎಂದು ಸಂಕಲ್ಪಿಸಿದನು.

ಸರ್ಗ ೫೭.

ವಿಶ್ವಾಮಿತ್ರನು ತಪಸ್ಸನ್ನು ಮಾಡಿ ರಾಜರ್ಷಿಯಾದುದು.

ವಿಶ್ವಾಮಿತ್ರನು ತನಗುಂಟಾದ ಅವಮಾನವನ್ನು ಸಹಿಸಲಾರದೆ ಆಗಾಗ ಅದನ್ನೇ ನೆನೆಸಿಕೊಂಡು ಬಹಳ ಸಂಕಟದಿಂದ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತಾ ಮಹಾತ್ಮನಾದ ಆ ವಸಿಷ್ಠನಲ್ಲಿ ಬದ್ಧದ್ವೇಷದಿಂದ ಕೂಡಿದವನಾಗಿ 'ದಕ್ಷಿಣದಿಕ್ಕಿಗೆ ಹೊರಟು ತನ್ನ ಪತ್ನಿಯೊಡನೆಕೂಡಿ ಘೋರ

ವಾದ ತಪಸ್ಸನ್ನು ಮಾಡಲಾರಂಭಿಸಿದನು. ಆ ಕಾಲದಲ್ಲಿ ಆಹಾರವಿಲ್ಲದೆ ಗೆಡ್ಡೆ, ಗೆಣಸು, ಹಣ್ಣು ಮುಂತಾದುವುಗಳಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡು ಬಹಿರಿಂದ್ರಿಯಗಳೆಲ್ಲವನ್ನೂ ಅಡಗಿಸಿ ದೊಡ್ಡ ತಪಸ್ಸಿನಲ್ಲಿದ್ದನು. ಆಮೇಲೆ ಈತನಿಗೆ ಸತ್ಯವಂತರಾಗಿಯೂ ಧಾರ್ಮಿಕರಾಗಿಯೂ ಇರುವ ಹವಿಷ್ಯಂದ, ಮಧುಷ್ಯಂದ, ಧೃಢನೇತ್ರರೆಂಬ ಮೂರು ಮಕ್ಕಳು ಹುಟ್ಟಿದರು. ಹೀಗೆ ಸಾವಿರ ವರುಷಗಳು ಕಳೆಯಲು ಲೋಕ ಪಿತಾಮಹನಾದ ಬ್ರಹ್ಮನು ಈತನ ಸಮೀಪಕ್ಕೆ ಬಂದು ಈತನನ್ನು ಕುರಿತು ಮೃದುವಾದ ವಾಕ್ಯದಿಂದ "ಎಲೈ ಕೌಶಿಕನೇ! ಈಗ ನಿನ್ನ ಮಹಾ ತಪಸ್ಸಿನಿಂದ ಸಮಸ್ತ ರಾಜರ್ಷಿಗಳಿಗೂ ಮೇಲೆನಿಸಿಕೊಂಡಿರುವೆ. ಇನ್ನು ನಾವು ನಿನ್ನನ್ನು ರಾಜರ್ಷಿಯೆಂದೇ ಎಣಿಸುವೆವು" ಎಂದು ಹೇಳಿ ಅಂತರ್ಧಾನವನ್ನು ಹೊಂದಿ ದೇವತೆಗಳೊಡಗೂಡಿ ತನ್ನ ಲೋಕಕ್ಕೆ ಹೊರಟು ಹೋದನು. ಇತ್ತಲಾಗಿ ವಿಶ್ವಾಮಿತ್ರನು ಈ ಮಾತನ್ನು ಕೇಳಿದೊಡನೆಯೇ ಲಜ್ಜೆಯಿಂದ ತಲೆಯನ್ನು ತಗ್ಗಿಸಿದವನಾಗಿ ಬಹಳ ಸಂಕಟದಿಂದ ತನ್ನಲ್ಲಿ ತಾನು "ಛೀ? ಇಷ್ಟು ದೊಡ್ಡ ತಪಸ್ಸನ್ನು ಮಾಡಿದೆನು. ಇದರಿಂದ ದೇವತೆಗಳೆಲ್ಲರೂ ನನ್ನನ್ನು ರಾಜರ್ಷಿಯೆಂದು ಕರೆದುಬಿಟ್ಟ ಮಾತ್ರಕ್ಕೆ ಫಲವೇನು?" ಎಂದು ಯೋಚಿಸಿ ಪುನಃ ಮತ್ತೂ ದೊಡ್ಡ ತಪಸ್ಸನ್ನು ಮಾಡಲಾರಂಭಿಸಿದನು. ಹೀಗೆ ಜಿತೇಂದ್ರಿಯನಾಗಿ ತಪಸ್ಸು ಮಾಡುತ್ತಿರುವಾಗಲೇ ಅತ್ತ ಅಯೋಧ್ಯೆಯಲ್ಲಿ ಇಕ್ಷ್ವಾಕು ವಂಶದಲ್ಲಿ ಹುಟ್ಟಿ ಸತ್ಯಸಂಧನೆಂದು ಖ್ಯಾತಿ ಹೊಂದಿದ್ದ ತ್ರಿಶಂಕುವೆಂಬ ರಾಜನು ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು. ಆತನಿಗೆ ಒಂದಾನೊಂದು ಕಾಲದಲ್ಲಿ ಈ ಮನುಷ್ಯ ದೇಹದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂಬ ಬುದ್ಧಿಯು ಹುಟ್ಟಿತು. ಅದಕ್ಕೆ ತಕ್ಕ ಒಂದು ಯಜ್ಞವನ್ನು ಮಾಡಬೇಕೆಂದು ಯೋಚಿಸಿದನು. ಆಗ ಪುರೋಹಿತರಾದ ವಸಿಷ್ಠರಿಗೆ ತನ್ನ ಈ ಉದ್ದೇಶವನ್ನು ತಿಳಿಸಲು, ಅವರು ಇದು ಅಸಾಧ್ಯ ಕಾರ್ಯವೆಂದು ಹೇಳಿಬಿಟ್ಟರು. ಹೀಗೆ ಅವರಿಂದ ತಿರಸ್ಕರಿಸಲ್ಪಟ್ಟವನಾಗಿ ದಕ್ಷಿಣಾಭಿಮುಖವಾಗಿ ಹೊರಟು ವಸಿಷ್ಠರ ನೂರು ಮಂದಿ ಮಕ್ಕಳೂ ತಪಸ್ಸು ಮಾಡುತ್ತಿದ್ದ ಸ್ಥಾನಕ್ಕೆ ಬಂದನು. ಮಹಾಯಶಸ್ವಿಗಳಾಗಿ ಬಹುಕಾಲದಿಂದ ತಪಸ್ಸು ಮಾಡುತ್ತಲಿರುವ ಮಹಾತ್ಮರಾದ ಆ ಗುರುಪುತ್ರರೆಲ್ಲರನ್ನೂ

ನೋಡಿ ವಿನಯದಿಂದ ನಮಸ್ಕರಿಸಿ, ಕೈಮುಗಿದು ಲಜ್ಜೆಯಿಂದ ತಲೆಯನ್ನು ತಗ್ಗಿಸಿಕೊಂಡು “ಎಲೈ ಗುರುಪುತ್ರರೇ! ಒಂದಾನೊಂದು ಕಾರ್ಯಕ್ಕಾಗಿ ಪ್ರಯತ್ನಿಸಿದ ನನ್ನನ್ನು ವಸಿಷ್ಠರು ತಿರಸ್ಕರಿಸಿದುದರಿಂದ ನಾನು ಈಗ ನಿಮ್ಮಲ್ಲಿ ಮರೆಹೊಕ್ಕಿರುವೆನು. ಆಶ್ರಿತರನ್ನು ರಕ್ಷಿಸತಕ್ಕ ಸ್ವಭಾವವುಳ್ಳ ನೀವೆಲ್ಲರೂ ಹೇಗಾದರೂ ನನ್ನನ್ನು ಉದ್ಧರಿಸಬೇಕು. ನಾನೊಂದು ಮಹಾಯಜ್ಞವನ್ನು ಮಾಡಬೇಕೆಂದಿರುವೆನು. ಅದಕ್ಕೆ ನೀವೆಲ್ಲರೂ ಅನುಮತಿಸಬೇಕು. ಗುರುಪುತ್ರರಾದುದರಿಂದ ನೀವು ನನಗೆ ಬಹಳ ಪೂಜ್ಯರು. ನಿಮ್ಮೆಲ್ಲರಿಗೂ ಕೈಮುಗಿದು ಬೇಡುವೆನು. ತಪೋಧನರಾಗಿಯೂ ಬ್ರಾಹ್ಮಣೋತ್ತಮರಾಗಿಯೂ ಇರುವ ನಿಮಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಯಾಚಿಸುವೆನು. ನೀವೆಲ್ಲರೂ ಅಕ್ಕರೆಯಿಂದ ಆ ಯಜ್ಞವನ್ನು ನಡೆಸಿ ನನ್ನ ಕಾರ್ಯಸಿದ್ಧಿಯನ್ನುಂಟುಮಾಡಬೇಕು. ಈ ಶರೀರದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂದಿರುವೆನು. ನಿಮ್ಮ ತಂದೆಯಾದ ವಸಿಷ್ಠರು ನಮಗೆ ಕುಲಪುರೋಹಿತರಾಗಿದ್ದರೂ ನಮ್ಮನ್ನು ತಿರಸ್ಕರಿಸಿಬಿಟ್ಟರು. ನನಗೆ ಬೇರೆಗತಿಯಿಲ್ಲ. ಗುರುಪುತ್ರರಾದ ನೀವಲ್ಲದೆ ನಮ್ಮನ್ನು ಉದ್ಧರಿಸತಕ್ಕವರು ಬೇರೆ ಯಾರುಂಟು? ಆ ವಸಿಷ್ಠರು ಕೈ ಬಿಟ್ಟಮೇಲೆ ನಮ್ಮನ್ನು ರಕ್ಷಿಸತಕ್ಕ ಭಾರವು ನಿಮ್ಮದೆ ಅಲ್ಲವೆ?” ಎಂದು ಪ್ರಾರ್ಥಿಸಿದನು.

ಸರ್ಗ ೫೯.

ತ್ರಿಶಂಕುವು ವಸಿಷ್ಠಪುತ್ರರಿಂದ ತಿರಸ್ಕೃತನಾಗಿ ವಿಶ್ವಾಮಿತ್ರನನ್ನು ಮರೆಹೊಗುವುದು.

ತ್ರಿಶಂಕುವಿನ ಈ ಮಾತನ್ನು ಕೇಳಿ ಆ ನೂರು ಮಂದಿ ಋಷಿಪುತ್ರರೂ ಬಹಳ ಕೋಪಗೊಂಡವರಾಗಿ, ಆತನನ್ನು ಕುರಿತು “ಎಲೈ ಅವಿವೇಕಿಯೆ, ನೀನು ಮೊದಲೇ ಬುದ್ಧಿಯಿಲ್ಲದವನಾಗಿ ಅಸಾಧ್ಯಕಾರ್ಯಕ್ಕಾರಂಭಿಸಿದೆ. ಅದರಿಂದ ಸತ್ಯವಾದಿಯಾದ ನಮ್ಮ ತಂದೆಯು ನಿನ್ನನ್ನು ನಿರಾಕರಿಸಿರಬಹುದೇ ಹೊರತು ನಿನ್ನಲ್ಲಿ ದ್ವೇಷಬುದ್ಧಿಯಿಂದಲ್ಲ. ಹೀಗಿರುವಾಗಲೂ ಆತನ ಮಾತನ್ನು ನೀನು ಉಲ್ಲಂಘಿಸಿ ಮತ್ತೊಬ್ಬರಲ್ಲಿ ಕೇಳುವುದು ಉಚಿತವೇ? ಇಕ್ಷ್ವಾಕುವಂಶದವರೆಲ್ಲರಿಗೂ ಪುರೋಹಿತನಾಗಿಯೂ ಪರಮಗುರುವಾಗಿಯೂ ಇರುವ ನಮ್ಮ ತಂದೆಯ ಮಾತನ್ನು ಮೀರಿ ನಡೆಯು

ವುದು ನಿನಗೆ ಧರ್ಮವೇ? ಲೋಕಪೂಜ್ಯನಾಗಿಯೂ ಬ್ರಹ್ಮರ್ಷಿಯಾಗಿಯೂ ಇರುವ ಆ ವಸಿಷ್ಠನೇ ಅಸಾಧ್ಯವೆಂದು ಬಿಟ್ಟುಬಿಟ್ಟ ಯಜ್ಞವನ್ನು ಮಾಡಿಸುವುದಕ್ಕೆ ನಮ್ಮಿಂದ ಹೇಗೆ ಸಾಧ್ಯವು. ಎಲೈ ಮೂಢನೇ, ನಿನ್ನ ಪಟ್ಟಣಕ್ಕೆ ಹಿಂದಿರುಗಿ ಹೋಗು. ಆ ವಸಿಷ್ಠನು ಮೂರು ಲೋಕಕ್ಕೂ ಯಾಗ ಮಾಡಿಸತಕ್ಕ ಸಾಮರ್ಥ್ಯವುಳ್ಳವನು. ಆತನನ್ನು ಅವಮಾನಪಡಿಸಬೇಕೆಂದರೆ ನಮ್ಮಿಂದ ಸಾಧ್ಯವೇ? ಛೀ ಹೋಗು" ಎಂದು ತಿರಸ್ಕರಿಸಿಬಿಟ್ಟರು. ಹೀಗೆ ಮಿತಿಮೀರಿದ ಕೋಪದಿಂದ ಆ ಗುರುಪುತ್ರರು ಹೇಳಿದುದನ್ನು ಕೇಳಿ, ದೊರೆಯು ಪುನಃ ಅವರನ್ನು ಕುರಿತು, "ಕುಲಗುರುವಾದ ವಸಿಷ್ಠನು ತಿರಸ್ಕರಿಸಿದನೆಂದು ನಿಮ್ಮಲ್ಲಿಗೆ ಬಂದೆನು. ನೀವೂ ತಿರಸ್ಕರಿಸಿದರಲ್ಲವೇ? ಆದರೇನು? ಇರಲಿ. ಮತ್ತೊಬ್ಬರ ಬಳಿಗಾದರೂ ಹೋಗಿ ನನ್ನ ಕಾರ್ಯವನ್ನು ಸಾಧಿಸಿಕೊಳ್ಳುವೆನು. ಎಲೈ ತಪೋಧನರೇ, ನೀವು ಕ್ಷೇಮದಿಂದಿರಿ" ಎಂದು ಹೇಳಿದನು. ಹೀಗೆ ಆ ರಾಜನು ಮರ್ಮಭೇದಕವಾಗಿ ಹೇಳಿದ ಮಾತನ್ನು ಕೇಳಿ ಆ ಋಷಿಪುತ್ರರೆಲ್ಲರೂ ಬಹಳ ಕೋಪಗೊಂಡು, "ಛೀ ನೀಚನೆ! ನೀನು ಚಂಡಾಲನಾಗಿ ಹೋಗು!" ಎಂದು ಶಾಪಕೊಟ್ಟು ತಮ್ಮ ಆಶ್ರಮದೊಳಗೆ ಪ್ರವೇಶಿಸಿದರು. ಹೀಗೆ ವಸಿಷ್ಠಪುತ್ರರು ಆತನ ಮೇಲೆ ಶಾಪಜಲವನ್ನು ಪ್ರೋಕ್ಷಿಸಿದೊಡನೆಯೇ, ಉರಿಯುವ ಬೆಂಕಿಗೆ ನೀರೆರೆದಂತೆ, ಆತನ ರಾಜತೇಜಸ್ಸೂ ರೂಪಲಾವಣ್ಯಗಳೂ ಕಂದಿ ಮೈಯೆಲ್ಲವೂ ಕಪ್ಪಾಯಿತು. ಆ ರಾತ್ರಿಯು ಕಳೆದು ಬೆಳಗಾಗುವುದರೊಳಗಾಗಿಯೇ ಆ ರಾಜನಿಗೆ ಚಂಡಾಲತ್ವವುಂಟಾಯಿತು. ಆತನು ಉಟ್ಟಿದ್ದ ಬಟ್ಟೆಗಳೆಲ್ಲವೂ ಕಪ್ಪಾದುವು. ಮೈ ಬಣ್ಣವು ಕೆಟ್ಟಿತು. ಘೋರ ಸ್ವರೂಪವುಂಟಾಯಿತು. ತಲೆಯ ಕೂದಲುಗಳು ಉದುರಿಹೋದುವು. ಅವನು ಧರಿಸಿಕೊಂಡಿದ್ದ ಗಂಧಪುಷ್ಪಾದಿಗಳೆಲ್ಲವೂ ಶ್ಮಶಾನ ಜನ್ಯವಾದುವುಗಳಂತೆ ಕಾಣಿಸಿದುವು. ಆತನು ಧರಿಸಿದ್ದ ರಾಜಯೋಗ್ಯವಾದ ಆಭರಣಗಳೆಲ್ಲವೂ ಉಕ್ಕಿನಿಂದ ಮಾಡಲ್ಪಟ್ಟಂತೆ ತೋರಿದವು. ಹೀಗೆ ಘೋರ ರೂಪದಿಂದ ಚಂಡಾಲನಾದ ರಾಜನನ್ನು ನೋಡಿ ಮಂತ್ರಿಗಳೂ ಪುರಜನರೂ ಭಯಪಟ್ಟು ಆ ಪಟ್ಟಣವನ್ನೇ ಬಿಟ್ಟು ಓಡಿಹೋದರು. ರಾಜನೊಬ್ಬನೇ ಏಕಾಕಿಯಾಗಿ ನಿಂತನು. ಹೀಗೆ ತನ್ನ ದುರವಸ್ಥೆಯನ್ನು ನೋಡಿ ಅವನು ಹಗಲೂ ರಾತ್ರಿಯೂ ಸಂಕಟಪಡುತ್ತಿದ್ದರೂ ತಾನು ಉದ್ದೇಶಿಸಿದ ಕೆಲಸವನ್ನು ಹೇಗಾದರೂ

ಮಾಡಿ ಸಾಧಿಸಬೇಕೆಂಬ ದೃಢಸಂಕಲ್ಪವನ್ನು ಬಿಡದೆ ವಸಿಷ್ಠನಿಗೆ ವೈರಿಯಾದ ವಿಶ್ವಾಮಿತ್ರನನ್ನು ಹುಡುಕಿಕೊಂಡು ಹೊರಟು ತಪಸ್ಸು ಮಾಡುತ್ತಿದ್ದ ಈತನ ಬಳಿಗೆ ಬಂದನು. ಹೀಗೆ ದೀನ ದೆಸೆಯನ್ನು ಹೊಂದಿ ಚಂಡಾಲ ರೂಪದಿಂದ ಬಂದಿರುವ ಈ ರಾಜನನ್ನು ಕಂಡೊಡನೆಯೇ ವಿಶ್ವಾಮಿತ್ರನಿಗೆ ಆತನಲ್ಲಿ ಪೂರ್ಣವಾದ ದಯೆಯುಂಟಾಯಿತು. ಆಗ ಧರ್ಮಬುದ್ಧಿಯುಳ್ಳ ಮಹಾತೇಜಸ್ವಿಯಾದ ವಿಶ್ವಾಮಿತ್ರನು ಬಹಳ ಮರುಕಗೊಂಡು ಘೋರ ರೂಪದಿಂದ ಮುಂದೆ ನಿಂತಿರುವ ಆ ರಾಜನನ್ನು ನೋಡಿ "ಎಲೆ ರಾಜನೆ, ನಿನಗೆ ಮಂಗಳವಾಗಲಿ. ನೀನು ಇಲ್ಲಿಗೆ ಬಂದ ಉದ್ದೇಶವೇನು? ಮಹಾ ಬಲಶಾಲಿಯಾದ ನೀನು ಅಯೋಧ್ಯಾಧಿಪತಿಯಾಗಿದ್ದು ಹೀಗೆ ಚಂಡಾಲತ್ವವನ್ನು ಹೊಂದಲು ಕಾರಣವೇನು?" ಎಂದನು. ಅದಕ್ಕಾ ರಾಜನು ವಿನಯದಿಂದ ಕೈಮುಗಿದು ನಿಂತು "ಎಲೈ ಮಹಾತ್ಮನೇ, ನನಗೆ ಈ ಮನುಷ್ಯ ಶರೀರದೊಡನೆಯೇ ಸ್ವರ್ಗಕ್ಕೆ ಹೋಗಬೇಕೆಂಬ ಕುತೂಹಲವುಂಟಾಯಿತು. ನೂರಾರು ಯಾಗಗಳನ್ನು ಮಾಡಿದರೂ ಈ ಕೋರಿಕೆಯು ನೆರವೇರಲಿಲ್ಲ. ಇದಕ್ಕಾಗಿಯೇ ತಕ್ಕ ಯಜ್ಞವೊಂದನ್ನು ಮಾಡಿಸಬೇಕೆಂದು ನಮ್ಮ ಕುಲ ಪುರೋಹಿತರಾದ ವಸಿಷ್ಠರನ್ನು ಪ್ರಾರ್ಥಿಸಿದೆನು. ಇದು ಅಸಾಧ್ಯವೆಂದು ಹೇಳಿ ಅವರು ತಿರಸ್ಕರಿಸಿಬಿಟ್ಟರು. ಅಲ್ಲಿಂದ ಅವರ ಮಕ್ಕಳ ಬಳಿಗೆ ಬಂದು ಕೇಳಿದೆನು. ಅವರೂ ತಿರಸ್ಕರಿಸಿದರು. ಕೊನೆಗೆ ನನ್ನ ಕೋರಿಕೆಯು ನೆರವೇರಲೇ ಇಲ್ಲ. ಅದರ ಮೇಲೆ ಈಗ ಈ ದುರವಸ್ಥೆಯೂ ಬಂದೊದಗಿತು. ಇದುವರೆಗೆ ನಾನೆಂದಿಗೂ ಸುಳ್ಳಾಡಿದವನಲ್ಲ. ಮುಂದೆಯೂ ಸುಳ್ಳಾಡತಕ್ಕವನಲ್ಲ. ಎಲೈ ಸೌಮ್ಯಸ್ವರೂಪನೇ, ಇದೋ ನನ್ನ ಕ್ಷತ್ರಿಯ ಧರ್ಮದ ಮೇಲೆ ಆಣೆಯಿಟ್ಟು ಪ್ರಮಾಣ ಮಾಡುವೆನು. ಎಂತಹ ನಾನಾ ವಿಪತ್ತುಗಳು ಬಂದೊದಗಿದರೂ ಸುಳ್ಳೆಂಬುದು ನನ್ನ ಬಾಯಿಂದ ಹೊರಡಲಾರದು. ಇದುವರೆಗೆ ಎಷ್ಟೋ ಯಾಗಗಳನ್ನು ಮಾಡಿದೆನು. ಧರ್ಮದಿಂದಲೇ ಪ್ರಜೆಗಳನ್ನು ಕಾಪಾಡಿದೆನು. ಮಹಾತ್ಮರಾದ ಗುರುಜನಗಳೆಲ್ಲರನ್ನೂ ನನ್ನ ವಿನಯಾದಿ ಗುಣಗಳಿಂದಲೂ ಸದಾಚಾರಗಳಿಂದಲೂ ಸಂತೋಷಪಡಿಸಿರುವೆನು. ಇನ್ನೇನು ಮಾಡಲಿ? ಹೀಗೆ ಧರ್ಮಾರ್ಜನೆಗಾಗಿ ಪ್ರಯತ್ನಪಟ್ಟು ಅದಕ್ಕಾಗಿ ಯಜ್ಞವನ್ನು ಮಾಡಬೇಕೆಂದು ನಾನು ಆಸೆಪಟ್ಟರೆ, ಈ ಸತ್ಕಾರ್ಯಕ್ಕೆ ನನ್ನ ಗುರುಗಳು ಸಮ್ಮತಿಸದೆ ಹೋದರು.

ಎಲೈ ಮಹಾತ್ಮನೇ, ಮುಖ್ಯವಾಗಿ ಮನುಷ್ಯ ಪ್ರಯತ್ನವು ಎಷ್ಟಿದ್ದರೂ ಪ್ರಯೋಜನವಿಲ್ಲ. ಎಲ್ಲಕ್ಕೂ ಅದೃಷ್ಟವೇ ಕಾರಣವು. ಅದೃಷ್ಟದಿಂದಲೇ ಸಮಸ್ತ ಕಾರ್ಯಗಳೂ ಸಿದ್ಧಿಸುವುವು. ಯಾವುದಕ್ಕೂ ಅದೃಷ್ಟವೇ ಕಾರಣ ವಲ್ಲದೆ ಪುರುಷ ಪ್ರಯತ್ನದಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ನಾನು ಉದ್ದೇಶಿಸಿದ ಕೆಲಸಗಳೆಲ್ಲವನ್ನೂ ದೈವವೇ ಕೆಡಿಸಿತು. ಹೀಗೆ ಅದೃಷ್ಟಹೀನನಾಗಿ ಸಂಕಟಪಡುತ್ತಿರುವ ನನ್ನನ್ನು ಅನುಗ್ರಹಿಸಬೇಕು. ನನಗೆ ನಿಮ್ಮನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಪುನಃ ಆ ವಸಿಷ್ಠನೇ ಕರೆದರೂ ನಾನು ಹೋಗತಕ್ಕವನಲ್ಲ. ಆದುದರಿಂದ ನೀನು ನನ್ನಲ್ಲಿ ಕೃಪೆಯಿಟ್ಟು ನಿನ್ನ ಅನುಗ್ರಹವೆಂಬ ಪುರುಷಕಾರದಿಂದ ನನಗೆ ಪ್ರತಿಕೂಲವಾಗಿರುವ ದೈವವನ್ನು ಅನುಕೂಲಪಡಿಸಿಕೊಡು" ಎಂದನು.

ಸರ್ಗ ೫೯.

ವಿಶ್ವಾಮಿತ್ರನು ತ್ರಿಶಂಕುವಿನ ಯಜ್ಞವನ್ನು ಮಾಡಿಸಿದುದು.

ವಿಶ್ವಾಮಿತ್ರನು ಹೀಗೆ ದೈನ್ಯದಿಂದ ಬೇಡುತ್ತಲಿರುವ ಚಂಡಾಲ ರೂಪಿಯಾದ ಆ ರಾಜನ ಮಾತನ್ನು ಕೇಳಿ, ಬಹಳ ದಯೆಯಿಂದ ಆತನನ್ನು ಕುರಿತು, "ಎಲೈ ಇಕ್ಷ್ವಾಕು ಕುಲಶ್ರೇಷ್ಠನೆ! ನಿನಗೆ ಸುಖಾಗಮನವು. ನೀನು ಧಾರ್ಮಿಕನೆಂಬುದನ್ನು ಬಲ್ಲೆನು. ಎಲೆ ವತ್ಸನೆ, ಏಕೆ ಭಯಪಡುವೆ? ನಿನ್ನನ್ನು ಕಾಪಾಡುವೆನು. ಇದೋ ನಾವು ಮಾಡುವ ಯಜ್ಞದಲ್ಲಿ ಸಹಾಯಕ ರಾಗಿರುವುದಕ್ಕಾಗಿ ಪುಣ್ಯಕರ್ಮಪರರಾದ ಮಹರ್ಷಿಗಳೆಲ್ಲರನ್ನೂ ಈಗಲೇ ಕರೆ ಸುವೆನು. ನೀನು ಯಜ್ಞವನ್ನು ಮಾಡಬಹುದು. ಎಲೆ ರಾಜನೆ! ಈ ಚಂಡಾಲ ಸ್ವರೂಪದಲ್ಲಿರುವಾಗ ಯಜ್ಞವನ್ನು ಮಾಡಿ ಸ್ವರ್ಗವನ್ನು ಸೇರು ವುದು ಹೇಗೆಂದು ಸಂದೇಹಪಡಬೇಡ. ಇದು ನಿನಗೆ ಗುರುಶಾಪದಿಂದ ಉಂಟಾಗಿರುವುದರಿಂದ ಇದನ್ನು ತಪ್ಪಿಸುವುದಕ್ಕೆ ಬ್ರಹ್ಮನಿಂದಲೂ ಸಾಧ್ಯ ವಲ್ಲ. ಈ ಚಂಡಾಲ ದೇಹದೊಡನೆಯೇ ನೀನು ಸ್ವರ್ಗಕ್ಕೆ ಹೋಗುವ ಹಾಗೆ ಮಾಡುವೆನು. ನನ್ನ ಸಾಮರ್ಥ್ಯವನ್ನು ನೋಡು! ಎಲೈ ನರೇಂ ದ್ರನೆ, ಹೆಚ್ಚಾಗಿ ಹೇಳಿದುದರಿಂದೇನು? ಮರೆಹೊಕ್ಕವರನ್ನು ಕಾಪಾಡು ವುದರಲ್ಲಿ ಸಮರ್ಥನಾದ ವಿಶ್ವಾಮಿತ್ರನೆಂಬ ನನ್ನಲ್ಲಿ ನೀನು ಶರಣಾಗತಿ ಯನ್ನು ಮಾಡಿದ ಮೇಲೆ, ಆ ಸ್ವರ್ಗವು ನಿನ್ನ ಕೈಯಲ್ಲಿಯೇ ಇರುವುದೆಂದು

ತಿಳಿ ", ಎಂದು ಆತನಿಗೆ ಅಭಯವನ್ನು ಕೊಟ್ಟು, ಕೂಡಲೆ ಯಜ್ಞಸಾಮಗ್ರಿಗಳನ್ನು ಸಿದ್ಧಪಡಿಸುವಂತೆ ಧಾರ್ಮಿಕರಾಗಿಯೂ ಪ್ರಾಜ್ಞರಾಗಿಯೂ ಇರುವ ತನ್ನ ಮಕ್ಕಳಿಗೆ ಅಪ್ಪಣೆ ಮಾಡಿದನು. ಆಮೇಲೆ ತನ್ನ ಶಿಷ್ಯರೆಲ್ಲರನ್ನೂ ಕರೆದು "ಎಲೈ ವತ್ಸರೇ, ನೀವು ಈಗಲೇ ಹೋಗಿ ಋಷಿಗಳೆಲ್ಲರನ್ನೂ ಕರೆದು ಬನ್ನಿರಿ. ಅವರು ತಮ್ಮ ತಮ್ಮ ಶಿಷ್ಯರನ್ನೂ ಮಿತ್ರರನ್ನೂ ಋತ್ವಿಕ್ಕುಗಳನ್ನೂ ವಿದ್ವಾಂಸರನ್ನೂ ಸಂಗಡ ಕರೆದುಕೊಂಡು ಬರುವ ಹಾಗೆ ಹೇಳಿರಿ. ನೀವು ನಮ್ಮ ಅಪ್ಪಣೆಯಂತೆ ಅವರನ್ನು ಕರೆಯುವಾಗ ಆ ಋಷಿಗಳಲ್ಲಿ ಯಾರಾದರೂ ನಮ್ಮ ಮಾತನ್ನು ಅನಾದರಿಸಿ, ತಿರಸ್ಕಾರ ವಾಕ್ಯಗಳನ್ನಾಡಿದ ಪಕ್ಷದಲ್ಲಿ, ಅದೆಲ್ಲವನ್ನೂ ನನಗೆ ಬಂದು ತಿಳಿಸಬೇಕು " ಎಂದನು. ಈ ಮಾತನ್ನು ಕೇಳಿ ಶಿಷ್ಯರೆಲ್ಲರೂ ನಾನಾ ದಿಕ್ಕುಗಳಿಗೆ ಹೋಗಿ ಕರೆದ ಕೂಡಲೆ, ಎಲ್ಲ ಕಡೆಗಳಿಂದಲೂ ಬ್ರಹ್ಮವಾದಿಗಳಾದ ಋಷಿಗಳು ಬಂದು ಸೇರುತ್ತಿದ್ದರು. ಕರೆಯುವುದಕ್ಕೆ ಹೋಗಿದ್ದವರೆಲ್ಲರೂ ಬಂದು ಆಗಾಗ ಅವರವರು ಹೇಳಿದ ಪ್ರತ್ಯುತ್ತರಗಳನ್ನು ತಿಳಿಸುತ್ತಿದ್ದರು. ಆಗ ಅವರಲ್ಲಿ ಕೆಲವರು ವಿಶ್ವಾಮಿತ್ರನನ್ನು ಕುರಿತು "ಅಯ್ಯನೆ! ನಿನ್ನ ಅಪ್ಪಣೆಯಂತೆ ಬ್ರಹ್ಮವಾದಿಗಳೆಲ್ಲರೂ ಅನೇಕವಾಗಿ ಬಂದು ಸೇರಿರುವರು. ಆದರೆ ಮಹೋದಯನೆಂಬ ಹೆಸರುಳ್ಳ ಋಷಿಯೊಬ್ಬನೂ ವಸಿಷ್ಠನ ನೂರುಮಂದಿ ಮಕ್ಕಳೂ ಇಲ್ಲಿಗೆ ಬರುವುದಕ್ಕೆ ಒಪ್ಪಲಿಲ್ಲ. ಅವರು ಇಲ್ಲಿಗೆ ಬಾರದಿದ್ದುದೂ ಹಾಗಿರಲಿ! ನಾವು ಅವರನ್ನು ಕರೆದ ಕೂಡಲೆ ಕೋಪದಿಂದ ಒಂದೆರಡು ಕೆಟ್ಟ ಮಾತುಗಳನ್ನೂ ಆಡಿದರು. ಅವುಗಳನ್ನೂ ತಿಳಿಸುವೆವು. ಕೇಳಬೇಕು. "ಯಾಗ ಮಾಡಿಸುವ ಯೋಗ್ಯತೆಯು ಬ್ರಾಹ್ಮಣನಿಗಲ್ಲದೆ ಇತರ ಜಾತಿಯವರಿಗಿಲ್ಲ. ಈ ಯಾಗದಲ್ಲಿ ಕ್ಷತ್ರಿಯನು ಪುರೋಹಿತನಂತೆ! ಹೊಲೆಯನು ದೀಕ್ಷಿತನಂತೆ! ಆಹಾ! ಬಹಳ ಚೆನ್ನಾಗಿದೆ! ಈ ಯಜ್ಞದಲ್ಲಿ ಯಾವ ದೇವತೆಗಳು ಬಂದು ತಮ್ಮ ತಮ್ಮ ಭಾಗದ ಹವಿಸ್ಸನ್ನು ತೆಗೆದುಕೊಳ್ಳುವರೋ? ಋಷಿಗಳಾದರೂ ಋತ್ವಿಕ್ಕುಗಳಾಗಿ ನಿಂತು ಆ ಯಾಗಶೇಷವನ್ನು ಹೇಗೆ ತಿನ್ನುವರೋ? ವಿಶ್ವಾಮಿತ್ರನ ಅಧೀನದಲ್ಲಿರುವ ಬ್ರಾಹ್ಮಣರಾದರೂ ಹೇಗೆ ಆ ಚಂಡಾಲಭೋಜನವನ್ನು ಮಾಡಿ ಸ್ವರ್ಗವನ್ನು ಹೊಂದಬಲ್ಲರು?" ಎಂದು ಕ್ರೂರವಾದ ಕೆಲವು ಮಾತುಗಳನ್ನು ಹೇಳುತ್ತಿದ್ದರು ಎಂದರು. ಶಿಷ್ಯರ ಈ ಮಾತನ್ನು ಕೇಳಿ ವಿಶ್ವಾಮಿತ್ರನು ಕೋಪದಿಂದ

ಕೆಂಪಾದ ಕಣ್ಣುಗಳುಳ್ಳವನಾಗಿ “ಎಲೈ ಶಿಷ್ಯರೆ! ದೋಷ ರಹಿತನಾಗಿ ಕ್ರೂರವಾದ ತಪಸ್ಸನ್ನು ಮಾಡುತ್ತಿರುವ ನನ್ನನ್ನು ಯಾರು ದೂಷಿಸಿದರೋ, ಆ ದುರಾತ್ಮರಾದ ವಸಿಷ್ಠಪುತ್ರರನ್ನು ಈಗಲೇ ಭಸ್ಮಮಾಡುವೆನು. ಇದರಲ್ಲಿ ಸಂದೇಹವಿಲ್ಲ. ಈಗಲೇ ಅವರು ಕಾಲಪಾಶದಿಂದ ಕಟ್ಟಲ್ಪಟ್ಟವರಾಗಿ ಯಮನ ಪಟ್ಟಣಕ್ಕೆ ಸಾಗಿಸಲ್ಪಡುವರು. ಇಷ್ಟುಮಾತ್ರವೇ ಅಲ್ಲ. ಮುಂದಿನ ಏಳು ನೂರು ಜನ್ಮಗಳವರೆಗೂ ಈ ಲೋಕದಲ್ಲಿ ಅವರು ವಿಕಾರ ರೂಪವುಳ್ಳವರಾಗಿ ನಾಯಿ ಮಾಂಸದಿಂದಲೇ ಹೊಟ್ಟೆಯನ್ನು ಹೊರೆಯುತ್ತ ಮುಷ್ಟಿಕರೆಂಬ ಹೆಸರಿನಿಂದ ಹೀನ ಜಾತಿಯಲ್ಲಿ ಹುಟ್ಟಿ, ಸಿಕ್ಕಿದ ಕಡೆಯಲ್ಲಿ ಹೆಣವನ್ನು ತಿನ್ನುತ್ತ ಅಲ್ಲಲ್ಲಿ ಸಂಚರಿಸುತ್ತಿರಲಿ! ಬುದ್ಧಿಹೀನನಾದ ಆ ಮಹೋದಯನೂ ಕೂಡ ದೋಷ ರಹಿತನಾದ ನನ್ನನ್ನು ದೂಷಿಸಿದುದರಿಂದ ಸಮಸ್ತ ಲೋಕಗಳಲ್ಲಿಯೂ ನಿಂದಿತನಾಗಿ ಬೇಡನಾಗಿ ಹುಟ್ಟಿ ದಯೆಯಿಲ್ಲದೆ ಪ್ರಾಣಿಗಳನ್ನು ಕೊಲ್ಲುತ್ತ ಬಹುಕಾಲದವರೆಗೆ ದುರ್ಗತಿಯನ್ನೇ ಅನುಭವಿಸುತ್ತಿರಲಿ” ಎಂದು ಅವರೆಲ್ಲರನ್ನೂ ಶಪಿಸಿ, ಮಹಾತೇಜಸ್ವಿಯಾದ ಆ ವಿಶ್ವಾಮಿತ್ರನು ಸುಮ್ಮನಾದನು.

ಸರ್ಗ ೬೦

ವಿಶ್ವಾಮಿತ್ರನು ತ್ರಿಶಂಕುವಿಗೋಸ್ಕರ ಬೇರೊಂದು ಸ್ವರ್ಗವನ್ನು ಸೃಷ್ಟಿಸುವುದು.

ಹೀಗೆ ವಿಶ್ವಾಮಿತ್ರನು ವಸಿಷ್ಠಪುತ್ರರನ್ನೂ ಮಹೋದಯನನ್ನೂ ತನ್ನ ತಪೋಬಲದಿಂದ ಕೆಡಿಸಿದ ಮೇಲೆ, ಆ ಯಜ್ಞಕ್ಕಾಗಿ ಕರೆಸಿದ ಋಷಿಗಳನ್ನು ಕುರಿತು “ಎಲೈ ಋಷಿಗಳೆ! ಇದೋ! ಈತನು ಇಕ್ಷ್ವಾಕು ವಂಶದಲ್ಲಿ ಹುಟ್ಟಿದ ತ್ರಿಶಂಕುವೆಂಬ ರಾಜನು. ಈತನು ಪರಮ ಧಾರ್ಮಿಕನು. ಬಹಳ ಉದಾರಿಯು ಈ ಶರೀರದೊಡನೆಯೇ ಸ್ವರ್ಗವನ್ನು ಪಡೆಯಬೇಕೆಂಬ ಉದ್ದೇಶದಿಂದ ನನ್ನನ್ನು ಮರೆಹೊಕ್ಕಿರುವನು. ಆದುದರಿಂದ ನಾವೆಲ್ಲರೂ ಸೇರಿ ಈತನಿಗೆ ಸಶರೀರ ಸ್ವರ್ಗವುಂಟಾಗುವಂತೆ ಒಂದು ಯಜ್ಞವನ್ನು ಮಾಡಿಸಬೇಕಾಗಿರುವುದು. ಅದಕ್ಕೆ ತಕ್ಕ ಸನ್ನಾಹಗಳನ್ನು ಮಾಡಿರಿ” ಎಂದನು. ಇದನ್ನು ಕೇಳಿ ಧರ್ಮಜ್ಞರಾದ ಆ ಮಹರ್ಷಿಗಳೆಲ್ಲರೂ ಕೂಡಿ, ತಮ್ಮೊಳಗೆ ತಾವು “ಕುಶಿಕ ಪುತ್ರನಾದ ಈ ವಿಶ್ವಾಮಿತ್ರನು ಬಹಳ ಕೋಪಸ್ವಭಾವವುಳ್ಳವನು. ಈತನು ಹೇಳಿದಂತೆ ನಾವು

ಅವಶ್ಯವಾಗಿ ನಡೆಸಬೇಕು. ಈತನು ಅಗ್ನಿಸಮಾನನು. ನಮ್ಮೆಲ್ಲರಿಗೂ ಪೂಜ್ಯನು. ಈತನ ಮಾತಿಗೆ ವಿರೋಧವಾಗಿ ಹೇಳಿದ ಪಕ್ಷದಲ್ಲಿ ನಮಗೂ ಶಾಪವನ್ನು ಕೊಟ್ಟುಬಿಡುವನು. ಆದುದರಿಂದ ನಾವೆಲ್ಲರೂ ಈ ಯಜ್ಞವನ್ನು ನಡೆಸಿಯೇ ತೀರಬೇಕು! ಈ ವಿಶ್ವಾಮಿತ್ರನು ಮಹಾಮಹಿಮೆಯುಳ್ಳವ ನಾದುದರಿಂದ, ಆತನನ್ನು ಮುಂದಿಟ್ಟುಕೊಂಡು ಮಾಡುವ ಈ ಯಜ್ಞ ದಲ್ಲಿ, ತ್ರಿಶಂಕುವಿನ ಕೋರಿಕೆಯು ಕೈಗೂಡುವುದರಲ್ಲಿ ಸಂದೇಹವಿರದು. ನಮ್ಮಲ್ಲಿ ಪ್ರತಿಯೊಬ್ಬರೂ ಅಕ್ಕರೆಯಿಂದ ತಮ್ಮ ತಮ್ಮ ಕಾರ್ಯಗಳನ್ನು ಶಾಸ್ತ್ರೋಕ್ತವಾಗಿಯೇ ನಡೆಸಬೇಕು" ಎಂದು ನಿಶ್ಚಯಿಸಿಕೊಂಡು, ಅವರವರ ಕೆಲಸಗಳನ್ನು ಕ್ರಮವಾಗಿ ಮಾಡುತ್ತ ಬಂದರು. ಮಹಾ ತೇಜಸ್ವಿಯಾದ ವಿಶ್ವಾಮಿತ್ರನೇ ಆ ಯಜ್ಞವನ್ನು ಮಾಡಿಸತಕ್ಕ ಮುಖ್ಯ ಪುರೋಹಿತನಾಗಿ ನಿಂತನು. ಮಂತ್ರಜ್ಞರಾದ ಋತ್ವಿಕ್ಕುಗಳೆಲ್ಲರೂ ಮಂತ್ರ ಲೋಪವಿಲ್ಲದೆ ಕಲ್ಪೋಕ್ತವಾದ ರೀತಿಯಿಂದ ಶಾಸ್ತ್ರಾನುಸಾರವಾಗಿ ತಮ್ಮ ತಮ್ಮ ಕರ್ಮಗಳನ್ನು ನಡೆಸಿದರು. ಹೀಗೆ ಬಹುಕಾಲದವರೆಗೆ ಅವರವರ ಕರ್ಮಗಳನ್ನು ನಡೆಸುತ್ತ ಬಂದಮೇಲೆ, ಕೊನೆಗೆ ಮಹಾ ತಪಸ್ವಿಯಾದ ವಿಶ್ವಾಮಿತ್ರನು ಆ ಯಜ್ಞದ ಹವಿರ್ಭಾಗಗಳನ್ನು ತೆಗೆದುಕೊಳ್ಳುವುದಕ್ಕಾಗಿ ಆಯಾ ದೇವತೆಗಳನ್ನು ಮಂತ್ರೋಚ್ಚಾರಣ ಪೂರ್ವಕವಾಗಿ ಕರೆದನು. ಬಹು ಕಾಲದವರೆಗೆ ನಿರೀಕ್ಷಿಸಿ ಪುನಃಪುನಃ ಮಂತ್ರಗಳನ್ನು ಹೇಳಿ ಕರೆದರೂ ಯಾವ ದೇವತೆಗಳೂ ಬರಲಿಲ್ಲ. ಆಗ ವಿಶ್ವಾಮಿತ್ರನು ಕೋಪಗೊಂಡು ಹೋಮೋಪಕರಣವಾದ ಸ್ರುವವನ್ನು ಎತ್ತಿ ಹಿಡಿದು ತ್ರಿಶಂಕುವನ್ನು ನೋಡಿ, "ಎಲೈ ತ್ರಿಶಂಕುವೆ! ಈ ಹವಿರ್ದಾನವು ಹಾಗಿರಲಿ! ದೇವತೆ ಗಳು ಬಂದರೇನು! ಬಾರದಿದ್ದರೇನು! ನಾನು ಇದುವರೆಗೆ ಗಳಿಸಿಟ್ಟಿರುವ ಅಲ್ಪಸ್ವಲ್ಪ ತಪಶ್ಶಕ್ತಿಯೇ ಸಾಕು. ಈ ಯಜ್ಞದ ಕಷ್ಟವೇ ನಮಗೆ ಬೇಡ. ನನ್ನ ತಪೋಬಲವನ್ನು ನೋಡು! ಇದರಿಂದಲೇ ನಿನ್ನನ್ನು ಸ್ವರ್ಗಕ್ಕೇರಿ ಸುವೆನು. ವಸಿಷ್ಠನು ಯಾವುದನ್ನು ಅಸಾಧ್ಯವೆಂದು ಹೇಳಿದನೋ ಆ ಸ್ವರ್ಗವನ್ನು ಈಗಲೇ ನಿನಗೆ ತೋರಿಸುವೆನು! ಇದೋ ನನ್ನ ತಪಶ್ಶಕ್ತಿ ಯನ್ನು ನಿನಗೆ ಕೊಟ್ಟಿರುವೆನು. ಇನ್ನು ಹೊರಡು" ಎಂದನು. ವಿಶ್ವಾ ಮಿತ್ರನು ಹೀಗೆ ಹೇಳಿದೊಡನೆ ಋಷಿಗಳೆಲ್ಲರೂ ನೋಡುತ್ತಿರುವಾಗಲೇ, ಆ ತ್ರಿಶಂಕುವು ಚಂಡಾಲ ದೇಹದೊಡನೆಯೇ ಅಂತರಿಕ್ಷ ಮಾರ್ಗವಾಗಿ ಸ್ವರ್ಗ

ಕ್ಕೇರಿದನು. ಹೀಗೆ ತ್ರಿಶಂಕುವು ದೇವಲೋಕಕ್ಕೆ ಬಂದಿರುವುದನ್ನು ಕೇಳಿ, ಇಂದ್ರನು ಸಮಸ್ತ ದೇವತೆಗಳೊಡಗೂಡಿ ಅಲ್ಲಿಗೆ ಬಂದು ಆತನನ್ನು ನೋಡಿ "ಎಲೈ ತ್ರಿಶಂಕುವೆ! ನೀನು ಸ್ವರ್ಗಲೋಕವಾಸಕ್ಕೆ ಅರ್ಹನಲ್ಲ. ನಿನ್ನ ಲೋಕಕ್ಕೆ ಹಿಂತಿರುಗು. ಮೌಢ್ಯದಿಂದ ಗುರುಶಾಪಕ್ಕೊಳಗಾಗಿ ಜಾತಿ ಕೆಟ್ಟಿರುವ ನೀನೆಲ್ಲಿ? ಪುಣ್ಯಲೋಕವೆಲ್ಲಿ? ಸಾಕು! ತಲೆಕೆಳಗಾಗಿ ಭೂಮಿಯಮೇಲೆ ಬೀಳು" ಎಂದನು. ಈ ಮಾತುಗಳು ಕಿವಿಗೆ ಬಿದ್ದೊಡನೆಯೇ ತ್ರಿಶಂಕುವು ಅಂತರಿಕ್ಷದಿಂದ ತಲೆಕೆಳಗಾಗಿ ಬೀಳುತ್ತ "ಎಲೈ ಮಹರ್ಷಿಯೆ! ರಕ್ಷಿಸು! ರಕ್ಷಿಸು!" ಎಂದು ಮೊರೆಯಿಟ್ಟನು. ತ್ರಿಶಂಕುವು ಹೀಗೆ ಮೊರೆಯಿಡುತ್ತ ಬೀಳುವುದನ್ನು ವಿಶ್ವಾಮಿತ್ರನು ನೋಡಿ ಮಿತಿಮೀರಿದ ಕೋಪದಿಂದ "ಎಲೈ ತ್ರಿಶಂಕುವೆ! ನಿಲ್ಲು! ನಿಲ್ಲು!" ಎಂದು ಗರ್ಜಿಸಿ ಬೇರೊಬ್ಬ ಬ್ರಹ್ಮನೋ ಎಂಬಂತೆ ಅಲ್ಲಿದ್ದ ಮಹರ್ಷಿಗಳ ನಡುವೆ ನಿಂತು, ಆ ತ್ರಿಶಂಕುವಿನ ದಕ್ಷಿಣ ದಿಕ್ಕಿನಲ್ಲಿ ಮತ್ತೊಂದು ಸ್ವರ್ಗಲೋಕವನ್ನೇ ಹೊಸದಾಗಿ ಸೃಷ್ಟಿಸಲಾರಂಭಿಸಿ, ಆ ದಿಕ್ಕಿನಲ್ಲಿಯೇ ಬೇರೊಂದು ಸಪ್ತರ್ಷಿಮಂಡಲವನ್ನೂ ಉಂಟುಮಾಡಿದನು. ಮೇಲೆ ಮೇಲೆ ಈತನಿಗೆ ಕೋಪವು ಹೆಚ್ಚುತ್ತಿರಲು ನಕ್ಷತ್ರ ಪರಂಪರೆಗಳನ್ನು ಬೇರೆ ಬೇರೆಯಾಗಿ ಸೃಷ್ಟಿಸಿಟ್ಟನು. ಆಮೇಲೆ ತನ್ನಲ್ಲಿ ತಾನು "ಈ ಲೋಕಕ್ಕೆ ಇಂದ್ರನೊಬ್ಬನನ್ನು ಬೇರೆಯಾಗಿ ಸೃಷ್ಟಿಸಬೇಕಲ್ಲವೆ? ಅಥವಾ ಬೇರೆ ಇಂದ್ರನೇಕೆ? ಇದಕ್ಕೆ ತ್ರಿಶಂಕುವೇ ಇಂದ್ರನಾಗಿರಲಿ!" ಎಂದು ನಿಶ್ಚಯಿಸಿ, ಇತರ ದೇವವರ್ಗಗಳನ್ನೂ ಕ್ರಮವಾಗಿ ಸೃಷ್ಟಿಸುವುದಕ್ಕಾರಂಭಿಸಿದನು. ಇದನ್ನು ನೋಡಿ ದೇವದಾನವರೂ ಋಷಿಗಳೂ ತತ್ತಳಿಸಿದರು. ಮೂರು ಲೋಕವೂ ಭಯದಿಂದ ನಡುಗಿತು. ಆಗ ದೇವತೆಗಳೆಲ್ಲರೂ ಋಷಿಗಳನ್ನು ಮುಂದಿಟ್ಟುಕೊಂಡು ವಿಶ್ವಾಮಿತ್ರನ ಬಳಿಗೆ ಬಂದು ಆತನನ್ನು ಕುರಿತು ಅನುನಯದಿಂದ, "ಎಲೈ ಮಹಾತ್ಮನಾದ ವಿಶ್ವಾಮಿತ್ರನೆ! ನೀನು ಹೀಗೆ ಕೋಪಿಸಬಹುದೆ? ನಿನಗೆ ತಿಳಿಯದ ಧರ್ಮವಾವುದೂ ಇಲ್ಲ. ಈ ರಾಜನು ಗುರುಶಾಪದಿಂದ ಜಾತಿಕೆಟ್ಟವನು. ಈ ಶರೀರದೊಡನೆಯೇ ಸ್ವರ್ಗವನ್ನು ಪ್ರವೇಶಿಸುವುದಕ್ಕೆ ಇವನಿಗೆ ಯೋಗ್ಯತೆಯೆಲ್ಲಿಯದು?" ಎಂದು ವಿನಯದಿಂದ ಸಮಾಧಾನಪಡಿಸಲು ಅವರನ್ನು ನೋಡಿ ವಿಶ್ವಾಮಿತ್ರನು, "ಎಲೈ ದೇವತೆಗಳಿರಾ! ನಾನು ಈತನನ್ನು ಈ ಶರೀರ

ದೊಡನೆಯೇ ಸ್ವರ್ಗ ಸೇರಿಸುವುದಕ್ಕಾಗಿ ಅಭಯವನ್ನು ಕೊಟ್ಟುಬಿಟ್ಟಿರುವೆನು. ಕೊಟ್ಟ ಭಾಷೆಯನ್ನು ತಪ್ಪಲಾರೆನು. ಆದುದರಿಂದ ಈಗ ನಾನು ಸೃಷ್ಟಿಸಿರುವ ಹೊಸ ಲೋಕವೇ ಈತನ ವಾಸಕ್ಕೆ ಯೋಗ್ಯವಾದ ಶಾಶ್ವತ ಸ್ವರ್ಗವಾಗಿರಲಿ! ಮತ್ತು ಇತರ ಲೋಕಗಳಿರುವವರೆಗೂ ನಾನು ಸೃಷ್ಟಿಸಿದ ಈ ನಕ್ಷತ್ರಗಳೆಲ್ಲವೂ ಇಲ್ಲಿಯೇ ಸ್ಥಿರವಾಗಿರಲಿ! ಇದಕ್ಕೆ ನೀವು ಅಡ್ಡಿ ಮಾಡಕೂಡದು" ಎಂದನು. ಇದನ್ನು ಕೇಳಿ ದೇವತೆಗಳೆಲ್ಲರೂ "ಎಲೈ ಮುನೀಂದ್ರನೆ! ಹಾಗೆಯೇ ಆಗಬಹುದು. ಆದರೆ ಹೊಸ ನಕ್ಷತ್ರಗಳೆಲ್ಲವೂ ಆಕಾಶದಲ್ಲಿ ಬಹುಕಾಲದಿಂದಿರುವ ಜ್ಯೋತಿಶ್ಚಕ್ರಗಳ ಹೊರಗೆ ಪ್ರತ್ಯೇಕವಾಗಿ ನೆಲೆಗೊಂಡಿರಲಿ! ಮತ್ತು ಅವುಗಳ ನಡುವೆ ಈ ತ್ರಿಶಂಕುವು ತಾನು ಮಾಡಿದ ಗುರುದ್ರೋಹಕ್ಕಾಗಿ ತಲೆಕೆಳಗಾಗಿ ನಿಂತಿರಲಿ. ಆದರೆ ಇವನು ದೇವತೆಗಳಂತೆ ತೇಜಸ್ವಿಯಾಗಿ ಪ್ರಕಾಶಿಸುತ್ತ ಸ್ವರ್ಗಲೋಕದಲ್ಲಿರುವಂತೆಯೇ ಕೃತಾರ್ಥನಾಗಿ ಶಾಶ್ವತ ಕೀರ್ತಿಯನ್ನು ಹೊಂದಿರಲಿ. ಈ ಜ್ಯೋತಿಸ್ಸುಗಳೆಲ್ಲವೂ ಈತನನ್ನೇ ಹಿಂಬಾಲಿಸಿ ಸಂಚರಿಸುತ್ತಿರಲಿ" ಎಂದರು. ಆಮೇಲೆ ವಿಶ್ವಾಮಿತ್ರನು ಹಾಗೆಯೇ ಆಗಲೆಂದೊಪ್ಪಿಕೊಳ್ಳಲು ಅಲ್ಲಿ ಬಂದಿದ್ದ ದೇವತೆಗಳೂ, ಋಷಿಗಳೂ ಆತನನ್ನು ಕೊಂಡಾಡಿ, ತಾವೇ ಪ್ರತ್ಯಕ್ಷವಾಗಿ ನಿಂತು ಈ ಯಜ್ಞವನ್ನು ಪೂರ್ತಿಮಾಡಿಸಿ ತಮ್ಮ ದಾರಿಯನ್ನು ಹಿಡಿದು ಹೊರಟುಹೋದರು.

ಸರ್ಗ ೬೧

ಅಂಬರೀಷನು ನರಬಲಿಗಾಗಿ ಶುನಶ್ಶೇಫನೆಂಬುವನನ್ನು ಕೊಂಡುಕೊಂಡುದು.

ಆಮೇಲೆ ವಿಶ್ವಾಮಿತ್ರನು ಯಾಗಕ್ಕಾಗಿ ಕರೆಸಿದ್ದ ಋಷಿಗಳೆಲ್ಲರನ್ನೂ ಹಿಂದಕ್ಕೆ ಕಳುಹಿಸಿ, ತಪೋವನದಲ್ಲಿದ್ದ ಋಷಿಗಳೆಲ್ಲರನ್ನೂ ಕುರಿತು, "ಎಲೈ ಋಷಿಗಳೇ! ಈ ದಕ್ಷಿಣ ದಿಕ್ಕಿನಲ್ಲಿ ನಾನು ಮಾಡುತ್ತಿದ್ದ ತಪಸ್ಸಿಗೆ ದೊಡ್ಡ ವಿಘ್ನವು ಸಂಭವಿಸಿತು. ಬೇರೊಂದು ದಿಕ್ಕಿಗೆ ಹೋಗಿ ತಪಸ್ಸನ್ನು ಮಾಡಬೇಕೆಂದಿರುವೆನು. ಪಶ್ಚಿಮ ದಿಕ್ಕಿನಲ್ಲಿ ವಿಸ್ತಾರವಾದ ತಪೋವನಗಳಿರುವುವು. ಅಲ್ಲಿ ಪುಷ್ಕರವೆಂಬ ಪುಣ್ಯತೀರ್ಥವುಂಟು. ಅದರ ತೀರದಲ್ಲಿ ತಪಸ್ಸನ್ನು ಮಾಡಬಹುದು. ಅದು ಬಹಳ ಉತ್ತಮವಾದ ಸ್ಥಾನವು" ಎಂದು ಹೇಳಿ, ಆ ಪುಷ್ಕರಕ್ಕೆ ಹೋಗಿ ಅಲ್ಲಿ ಫಲಮೂಲಗಳನ್ನು ಭಕ್ಷಿಸುತ್ತ, ಕಠಿನವಾದ ತಪಸ್ಸನ್ನು ಮಾಡಲಾರಂಭಿಸಿದನು.

ಈ ಕಾಲಕ್ಕೆ ಸರಿಯಾಗಿ ಅಯೋಧ್ಯಾ ಪಟ್ಟಣಕ್ಕೆ ಅಧಿಪತಿಯಾದ ಅಂಬರೀಷನೆಂಬ ರಾಜನು ಒಂದು ಯಜ್ಞವನ್ನು ಮಾಡತೊಡಗಿದ್ದನು. ಆ ಯಜ್ಞ ಮಧ್ಯದಲ್ಲಿ ಇಂದ್ರನು ಯಜ್ಞ ಪಶುವನ್ನು ಕದ್ದುಕೊಂಡು ಹೋಗಲು ಯಜ್ಞವನ್ನು ಮಾಡಿಸುತ್ತಿದ್ದ ಪುರೋಹಿತನು ರಾಜನನ್ನು ನೋಡಿ "ಎಲೈ ರಾಜನೇ, ನಿನ್ನ ಅಜಾಗ್ರತೆಯಿಂದಲೇ ಯಜ್ಞಪಶುವನ್ನು ಯಾರೋ ಕದ್ದುಕೊಂಡು ಹೋಗಿರುವರು. ಇದನ್ನು ಗಮನಿಸಿ ನೋಡದುದರಿಂದ ನಿನಗೆ ಬಹಳ ಕೇಡುಂಟಾಗಬಹುದು. ಅದಕ್ಕೆ ಪ್ರಾಯಶ್ಚಿತ್ತವಾಗಿ ಒಂದು ಅಸಾಧ್ಯ ಕಾರ್ಯವನ್ನು ಮಾಡಬೇಕಾಗಿರುವುದು. ಈಗ ನಷ್ಟವಾಗಿರುವ ಪಶುವನ್ನೇ ಹುಡುಕಿ ತಂದು ಯಜ್ಞವನ್ನು ಪೂರ್ತಿಮಾಡಬೇಕು. ಅದು ಸಾಧ್ಯವಿಲ್ಲದಿದ್ದರೆ ಆ ಸ್ಥಾನದಲ್ಲಿ ಒಬ್ಬ ಮನುಷ್ಯನನ್ನಿಟ್ಟು ಆತನನ್ನೇ ಯಜ್ಞಪಶುವಾಗಿ ಮಾಡಬೇಕು," ಎಂದನು. ಪುರೋಹಿತನು ಹೇಳಿದ ಈ ಮಾತನ್ನು ಕೇಳಿ ರಾಜನು ನರಪಶುವನ್ನು ಹುಡುಕಿ ತರುವುದಕ್ಕಾಗಿ ಸಾವಿರಾರು ಗೋವುಗಳನ್ನು ಕೊಟ್ಟು ನಾನಾ ದೇಶಗಳಿಗೂ, ಪಟ್ಟಣಗಳಿಗೂ, ಪುಣ್ಯಾಶ್ರಮಗಳಿಗೂ ಜನರನ್ನು ಕಳುಹಿಸಿ ತಾನೂ ಒಂದು ಕಡೆಗೆ ಹೊರಟನು. ಎಲ್ಲೆಲ್ಲಿ ಹುಡುಕಿದರೂ ನರಬಲಿಗೆ ತಕ್ಕ ಮನುಷ್ಯನು ಸಿಕ್ಕಲೇ ಇಲ್ಲ. ಕೊನೆಗೆ ಭೃಗುತುಂಗವೆಂಬ ಒಂದು ಬೆಟ್ಟದ ತಪ್ಪಲಲ್ಲಿ ಪತ್ನಿಪುತ್ರರೊಡನೆ ವಾಸಮಾಡುತ್ತಿದ್ದ ಋಚೀಕನೆಂಬ ಬ್ರಾಹ್ಮಣನೊಬ್ಬನನ್ನು ಕಂಡನು. ಆ ಬ್ರಹ್ಮರ್ಷಿಯನ್ನು ನೋಡಿ ನಮಸ್ಕರಿಸಿ ವಿನಯದಿಂದ ಕುಶಲಪ್ರಶ್ನೆಯನ್ನು ಕೇಳಿ, ಪ್ರಿಯವಾಕ್ಯಗಳಿಂದ ಆತನನ್ನು ಮರುಳುಗೊಳಿಸಿ ಕೊನೆಗೆ "ಎಲೈ ಮಹಾತ್ಮನೇ! ನಾನೊಂದು ಕಾರ್ಯಾರ್ಥಿಯಾಗಿ ಬಂದಿರುವೆನು. ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ನಿನ್ನ ಮಕ್ಕಳಲ್ಲಿ ಒಬ್ಬನನ್ನು ನನಗೆ ಕೊಡುವುದಾದರೆ ಅದಕ್ಕೆ ಬೆಲೆಯಾಗಿ ಸಾವಿರಾರು ಗೋವುಗಳನ್ನು ಕೊಡುವೆನು. ಒಬ್ಬ ಮಗನನ್ನು ನನಗೆ ಯಜ್ಞಪಶುವಿಗಾಗಿ ಕೊಡುವೆಯಾ? ಸಮಸ್ತ ದೇಶಗಳನ್ನೂ ತಿರುಗಿ ನೋಡಿದೆನು. ನಮ್ಮ ಯಜ್ಞಪಶುವಾಗಲೀ, ಆ ಸ್ಥಾನಕ್ಕೆ ಬೇರೊಬ್ಬ ಮನುಷ್ಯನಾಗಲೀ ಸಿಕ್ಕಲಿಲ್ಲ. ಆದುದರಿಂದ ಈ ಬೆಲೆಯನ್ನು ತೆಗೆದುಕೊಂಡು ನಿನ್ನ ಮಕ್ಕಳಲ್ಲಿ ಒಬ್ಬನನ್ನು ನನಗೆ ಕೊಡು" ಎಂದನು. ಅದಕ್ಕಾ ಋಚೀಕನು, "ಎಲೈ ರಾಜನೆ! ನೀನು ಎಷ್ಟೇ ಬೆಲೆ

ಯನ್ನು ಕೊಟ್ಟರೂ ನನ್ನ ಹಿರಿಯ ಮಗನನ್ನು ನಾನು ಕೊಡಲಾರೆನು" ಎಂದನು. ಇದನ್ನು ಕೇಳುತ್ತಿದ್ದ ಆತನ ಹೆಂಡತಿಯು ರಾಜನನ್ನು ನೋಡಿ, "ಎಲೈ ರಾಜೇಂದ್ರನೆ! ಪೂಜ್ಯನಾದ ನನ್ನ ಪತಿಯು ಹಿರಿಯ ಮಗನನ್ನು ಕೊಡಲಾರನೆಂದು ಹೇಳಿದನಲ್ಲವೆ? ಅದರಂತೆಯೇ ನನಗೆ ಕಿರಿಯ ಮಗನಾದ ಈ ಶುನಕನೆಂಬುವನು ಬಹಳ ಪ್ರೀತಿಪಾತ್ರನಾಗಿರುವನು. ಆದುದರಿಂದ ನಾನು ಈ ಕನಿಷ್ಠ ಪುತ್ರನನ್ನು ಬಿಟ್ಟಿರಲಾರೆನು. ಸ್ವಾಭಾವಿಕವಾಗಿ ಲೋಕದಲ್ಲಿ ತಂದೆಗೆ ಹಿರಿಯ ಮಗನಲ್ಲಿಯೂ ತಾಯಿಗೆ ಕಿರಿಯ ಮಗನಲ್ಲಿಯೂ ಬಹಳ ಪ್ರೀತಿಯುಂಟಲ್ಲವೇ! ಆದುದರಿಂದ ಈತನನ್ನು ನಾನು ಕೊಡಲಾರೆನು" ಎಂದಳು. ಹೀಗೆ ಆ ದಂಪತಿಗಳಿಬ್ಬರೂ ಹೇಳಿದುದನ್ನು ಕೇಳಿ ಅವರ ಮಧ್ಯಮ ಪುತ್ರನಾದ ಶುನಶ್ಶೇಫನು, ತಾನಾಗಿಯೇ ಅಂಬರೀಷನನ್ನು ಕುರಿತು, "ಎಲೈ ರಾಜನೆ! ಇನ್ನು ನಿನಗೆ ಸಂದೇಹವೇನು? ನನ್ನ ತಂದೆಯು ನಮ್ಮಣ್ಣನನ್ನು ಕೊಡಲಾರೆನೆಂದನು. ತಾಯಿಯು ನನ್ನ ತಮ್ಮನನ್ನು ಬಿಡುವುದಿಲ್ಲವೆಂದಳು. ಇವರ ಮಾತಿನಿಂದಲೇ ಇವರಿಬ್ಬರೂ ಇಷ್ಟಪಟ್ಟು ನನ್ನನ್ನು ವಿಕ್ರಯಿಸಿಬಿಟ್ಟರೆಂದು ವ್ಯಕ್ತವಾಯಿತಲ್ಲವೆ? ಇನ್ನು ನನ್ನನ್ನು ಕರೆದುಕೊಂಡು ಹೋಗು" ಎಂದನು. ರಾಜನು ಬಹಳ ಸಂತೋಷಪಟ್ಟು ತಾನು ತಂದಿದ್ದ ಸಾವಿರ ಗೋವುಗಳನ್ನೂ ಈ ಬ್ರಾಹ್ಮಣನಿಗೆ ಕೊಟ್ಟು. ಆ ಶುನಶ್ಶೇಫನನ್ನು ರಥದ ಮೇಲೆ ಏರಿಸಿಕೊಂಡು ತನ್ನ ಪಟ್ಟಣಕ್ಕೆ ಅಭಿಮುಖವಾಗಿ ಬಹು ವೇಗದಿಂದ ಹೋಗುತ್ತಿದ್ದನು.

ಸರ್ಗ ೬೨

ವಿಶ್ವಾಮಿತ್ರನು ಶುನಶ್ಶೇಫನನ್ನು ರಕ್ಷಿಸಿದುದು.

ಹೀಗೆ ಮಹಾಯಶಸ್ವಿಯಾದ ಅಂಬರೀಷನು ಶುನಶ್ಶೇಫನನ್ನು ರಥದ ಮೇಲೆ ಏರಿಸಿಕೊಂಡು ಹೋಗುತ್ತಿರುವಾಗ ಮಧ್ಯಾಹ್ನವಾಗಲು, ಈ ವಿಶ್ವಾಮಿತ್ರನು ತಪಸ್ಸು ಮಾಡುತ್ತಿದ್ದ ಪುಷ್ಕರಕ್ಷೇತ್ರದಲ್ಲಿಯೇ ಆ ಅಂಬರೀಷನೂ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಕ್ಕಾಗಿ ಬಂದಿಳಿದನು. ಆಗ ಆ ಶುನಶ್ಶೇಫನು ರಾಜನು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಸಮಯವನ್ನು ನೋಡಿ, ಸಮೀಪದಲ್ಲಿದ್ದ ತಪೋವನಕ್ಕೆ ಬಂದು ಅಲ್ಲಿ ಋಷಿಗಳೊಡಗೂಡಿ ತಪಸ್ಸು ಮಾಡುತ್ತಿದ್ದ ತನ್ನ ಮಾವನಾದ ವಿಶ್ವಾಮಿತ್ರನನ್ನು ಕಂಡನು. ಈತನು ಮಹಾಗುಣಾಢ್ಯನಾಗಿ ತಂದೆಗೆ ಬಹಳ ವಿಧೇಯ

ನಾಗಿದ್ದರೂ, ಪ್ರಾಣಭಯವು ಇವನ ಮುಖವನ್ನು ಕಳೆಗುಂದಿಸಿತ್ತು. ಮಾರ್ಗಾಯಾಸದಿಂದಲೂ ಬಹಳ ಬಳಲಿದವನಾಗಿ ಬಂದು, ಈ ವಿಶ್ವಾಮಿತ್ರನ ಕಾಲಮೇಲೆ ಬಿದ್ದು, ಆತನನ್ನು ಕುರಿತು, "ಎಲೈ ಮಾವನೆ! ನನಗೆ ತಂದೆತಾಯಿಗಳಿದ್ದರೇನು? ಅಣ್ಣತಮ್ಮಂದಿರಿದ್ದರೇನು? ಅವರೆಲ್ಲರೂ ನನ್ನನ್ನು ತೊರೆದುಬಿಟ್ಟರು. ಅನಾಥನಾಗಿ ಬಂದಿರುವೆನು. ನನ್ನನ್ನು ಕಾಪಾಡತಕ್ಕ ಬಂಧುಗಳು ಬೇರೊಬ್ಬರೂ ಇಲ್ಲ. ಶರಣಾಗತವತ್ಸಲನಾದ ನೀನೇ ನನಗೆ ಗತಿಯು. ಈ ರಾಜನು ನನ್ನನ್ನು ಯಜ್ಞಪಶುವನ್ನಾಗಿ ಹಿಡಿದುಕೊಂಡು ಹೋಗುತ್ತಿರುವನು. ಇದನ್ನು ತಪ್ಪಿಸಿ ನನಗೆ ಪ್ರಾಣದಾನವನ್ನು ಮಾಡಬೇಕು. ಆದರೆ ನಾನು ಸ್ವಕಾರ್ಯಧುರಂಧರನೆಂದೆಣಿಸಬೇಡ. ಈ ವಿಪತ್ತಿನಿಂದ ನನ್ನನ್ನು ತಪ್ಪಿಸುವುದು ಮಾತ್ರವೇ ಅಲ್ಲವೆ ಈ ರಾಜನ ಯಜ್ಞವೂ ಪೂರ್ತಿಯಾಗುವಂತೆ ಮಾಡಿ, ನಮ್ಮಿಬ್ಬರನ್ನೂ ಕೃತಕೃತ್ಯರನ್ನಾಗಿ ಮಾಡಬೇಕು. ಹೀಗೆ ನೀನು ಅನುಗ್ರಹಿಸುವುದಾದರೆ; ನಾನು ದೀರ್ಘಕಾಲದವರೆಗೆ ತಪಸ್ಸು ಮಾಡುತ್ತಿದ್ದು ಕೊನೆಗೆ ಪುಣ್ಯಲೋಕವನ್ನು ಹೊಂದಬಹುದು. ಎಲೆ ಮಹಾತ್ಮನೆ! ದಿಕ್ಕಿಲ್ಲದ ನನ್ನನ್ನು ಕಾಪಾಡುವ ಭಾರವು ನಿನ್ನದಾಗಿದೆ. ನೀನು ಪುತ್ರವಾತ್ಸಲ್ಯವನ್ನಿಟ್ಟು ನನ್ನನ್ನು ಈ ವಿಪತ್ತಿನಿಂದ ತಪ್ಪಿಸಬೇಕು" ಎಂದು ಪ್ರಾರ್ಥಿಸಿದನು. ಇದನ್ನು ಕೇಳಿ ಮಹಾತಪಸ್ವಿಯಾದ ವಿಶ್ವಾಮಿತ್ರನು "ಹೆದರಬೇಡ" ವೆಂದು ಬಹು ವಿಧದಲ್ಲಿ ಆತನನ್ನು ಸಮಾಧಾನಪಡಿಸಿ, ಪಕ್ಕದಲ್ಲಿದ್ದ ತನ್ನ ಮಕ್ಕಳನ್ನು ಕುರಿತು, "ಎಲೈ ಮಕ್ಕಳಿರಾ! ಶ್ರೇಯಸ್ಕಾಂಕ್ಷಿಗಳಾದ ತಂದೆತಾಯಿಗಳು ಯಾವ ಉದ್ದೇಶದಿಂದ ಮಕ್ಕಳನ್ನು ಪಡೆಯಲಪೇಕ್ಷಿಸುವರೊ, ಆ ಪ್ರಯೋಜನ ಸಿದ್ಧಿಗೆ ಈಗ ತಕ್ಕ ಸಮಯವು ಒದಗಿದೆ. ಪುತ್ರರಿಗೆ ಪಿತೃವಾಕ್ಯ ಪರಿಪಾಲನವೊಂಬುದೊಂದೇ ಮುಖ್ಯ ಧರ್ಮವಲ್ಲವೆ? ಆದುದರಿಂದ ನಾನು ಹೇಳುವ ಮಾತನ್ನು ನೀವು ನಡೆಸಿಕೊಡಬೇಕು. ಇದು ನಿಮಗೂ ನನಗೂ ಪಾರಲೌಕಿಕವಾದ ಶ್ರೇಯಸ್ಸಿಗೆ ಕಾರಣವಾಗಿರುವುದು. ಇದೋ! ಈ ಮುನಿಪುತ್ರನು ನನ್ನಲ್ಲಿ ಬಂದು ಮೊರೆಹೊಕ್ಕು ಪ್ರಾಣದಾನವನ್ನು ಬೇಡುತ್ತಿರುವನು. ಈ ಕೆಲಸವು ನಿಮ್ಮಿಂದಲೇ ಆಗಬೇಕಾಗಿರುವುದು. ನೀವೆಲ್ಲರೂ ಧರ್ಮಬುದ್ಧಿಯುಳ್ಳವರು. ಪುಣ್ಯಶೀಲರು. ನಿಮ್ಮ ಕೀರ್ತಿಯು ಶಾಶ್ವತವಾಗಿರಬೇಕಾದರೆ, ನಿಮ್ಮಲ್ಲಿ ಒಬ್ಬರು ಯಜ್ಞ

ಪಶುವಾಗಿದ್ದು ಅಗ್ನಿಗೆ ತೃಪ್ತಿಯನ್ನುಂಟುಮಾಡಿ, ಈತನ ಕೋರಿಕೆಯನ್ನು ಸಲ್ಲಿಸಬೇಕು. ಇದರಿಂದ ಈ ಶುನಶ್ಶೇಫನನ್ನು ರಕ್ಷಿಸಿದಂತಾಗುವುದು ಮಾತ್ರವೇ ಅಲ್ಲದೆ ಈ ರಾಜನ ಯಜ್ಞವೂ ಪೂರ್ತಿಯನ್ನು ಹೊಂದುವುದು. ದೇವತೆಗಳೂ ತೃಪ್ತಿಪಡುವರು. ನನ್ನ ಮಾತನ್ನೂ ನಡೆಸಿದಂತಾಗುವುದು '' ಎಂದನು. ಇದನ್ನು ಕೇಳಿ, ಮಧುಷ್ಯಂದನೇ ಮೊದಲಾದ ಆತನ ಮಕ್ಕಳೆಲ್ಲರೂ ತಂದೆಯನ್ನು ಕುರಿತು ಗರ್ವದಿಂದ ಪರಿಹಾಸ್ಯಮಾಡುತ್ತ, " ಎಲೈ ತಂದೆಯೆ! ಇದೇನು? ಹೊಟ್ಟೆಯಲ್ಲಿ ಹುಟ್ಟಿದ ನಮ್ಮನ್ನು ಬಿಟ್ಟು ಕಂಡವರ ಮಕ್ಕಳನ್ನು ಕಾಪಾಡುವುದು ಇದು ಯಾವ ಧರ್ಮವು? ಉತ್ತಮವಾದ ಮೃಷ್ಟಾನ್ನವಿರುವಾಗಲೂ ಅದನ್ನು ಬಿಟ್ಟು ನಾಯಿಯ ಮಾಂಸವನ್ನು ತಿನ್ನುವಂತೆ ಇದೊಂದು ದೊಡ್ಡ ಅಕಾರ್ಯವಲ್ಲವೇ?" ಎಂದರು. ಮಕ್ಕಳಾಡಿದ ಈ ಮಾತನ್ನು ಕೇಳಿ ವಿಶ್ವಾಮಿತ್ರನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ಅವರನ್ನು ಕುರಿತು, ' ಛೀ! ನೀಚರೆ! ಧರ್ಮಸೂಕ್ಷ್ಮವನ್ನರಿಯದೆಯೂ ತಂದೆಯಾದ ನನ್ನಲ್ಲಿ ಸ್ವಲ್ಪವೂ ಗೌರವವಿಡದೆಯೂ ನಿರ್ಭಯರಾಗಿ ನೀವು ಈ ಕ್ರೂರ ವಾಕ್ಯಗಳನ್ನಾಡಿರುವಿರಲ್ಲವೆ? ಇರಲಿ! ನೀವೆಲ್ಲರೂ ಆ ವಸಿಷ್ಠ ಪುತ್ರರಂತೆಯೇ ಜಾತಿಯಲ್ಲಿ ಚಂಡಾಲರಾಗಿ, ಶ್ವಮಾಂಸವನ್ನೇ ಭಕ್ಷಿಸುತ್ತಿದ್ದು, ಸಾವಿರ ವರ್ಷಗಳವರೆಗೆ ಈ ಭೂಮಿಯಲ್ಲಿಯೇ ವಾಸಮಾಡುತ್ತಿರಿ?'' ಎಂದು ಅವರೆಲ್ಲರಿಗೂ ಶಾಪವನ್ನು ಕೊಟ್ಟು ಶುನಶ್ಶೇಫನನ್ನು ಕುರಿತು ಒಂದಾನೊಂದು ಮಾತನ್ನು ಹೇಳುವನು. " ಎಲೈ ವತ್ಸನೇ! ಹೆದರಬೇಡ! ಇದೋ! ಈ ವಿಭೂತಿಯನ್ನು ಮಂತ್ರಿಸಿ ಕೊಡುವೆನು. ಇದೇ ನಿನಗೆ ದೊಡ್ಡ ರಕ್ಷೆಯಾಗಿರುವುದು. ನೀನು ದರ್ಭೆಯ ಹಗ್ಗದಿಂದ ಬಿಗಿಯಲ್ಪಟ್ಟು ಕೆಂಪಾದ ಬಟ್ಟೆಯನ್ನು ಧರಿಸಿ, ವಿಷ್ಣುದೇವತಾತ್ಮಕವಾದ ಆ ಯೂಪಸ್ತಂಭದ ಬಳಿಗೆ ಹೋದ ಮೇಲೆ, ಅಗ್ನಿಗೆ ಅಭಿಮುಖನಾಗಿ ನಿಂತು, ಈಗ ನಾನು ನಿನಗೆ ಹೇಳಿಕೊಡುವ ಈ ಎರಡು ಶ್ಲೋಕಗಳನ್ನು ಹೇಳು. ಇವರಲ್ಲಿ ಇಂದ್ರನ ವಿಷಯವಾದುದೊಂದು. ಉಪೇಂದ್ರನ ವಿಷಯವಾದುದು ಮತ್ತೊಂದು. ಆ ಯಜ್ಞಕಾಲದಲ್ಲಿ ನೀನು ಸರ್ವೋತ್ತಮವಾದ ಈ ಎರಡು ಶ್ಲೋಕಗಳನ್ನು ಹೇಳಿದ ಮಾತ್ರದಿಂದಲೇ ಜೀವಿತ ಸಿದ್ಧಿಯನ್ನು ಹೊಂದುವೆ" ಎಂದು ಹೇಳಿ, ಆ ಎರಡು ಶ್ಲೋಕಗಳನ್ನೂ ಉಪದೇಶಿಸಿದನು. ಆ ಋಷಿಪುತ್ರನು ಆ

ಎರಡನ್ನೂ ಪರಿಗ್ರಹಿಸಿ ಮನಸ್ಸಿನಲ್ಲಿ ಧ್ಯಾನಿಸುತ್ತ ಬಹು ವೇಗದಿಂದ ಅಂಬರೀಷನ ಸಮೀಪಕ್ಕೆ ಬಂದು ಆತನನ್ನು ಕುರಿತು, "ಎಲೈ! ಮಹಾ ಬಲಶಾಲಿಯಾದ ರಾಜಶ್ರೇಷ್ಠನೇ! ಸಾವಕಾಶವೇಕೆ? ಯಜ್ಞ ಸಭೆಗೆ ಹೋಗೋಣ ನಡೆ. ದೀಕ್ಷೆಯನ್ನು ವಹಿಸಿ ಬೇಗ ಯಾಗವನ್ನು ಪೂರ್ತಿ ಮಾಡು. ಹೊತ್ತು ಮೀರುವುದು" ಎಂದನು, ಹೀಗೆ ಆತುರಪಡುತ್ತಿರುವ ಆ ಋಷಿಪುತ್ರನ ಧೈರ್ಯಕ್ಕೆ ಆ ರಾಜನೇ ಬಹಳ ಸಂತೋಷಪಟ್ಟು ಒಡನೆಯೇ ಯಜ್ಞವಾಟವನ್ನು ಪ್ರವೇಶಿಸಿದನು. ಯಜ್ಞಪೂರ್ತಿಗಾಗಿ ಸಭಿಕರ ಅನುಜ್ಞೆಯನ್ನು ಪಡೆದು, ಶುನಶ್ಶೇಫನಿಗೆ ಬಲಿ ಚಿಹ್ನೆಗಳಾದ ದರ್ಭೆಯ ಪವಿತ್ರಗಳನ್ನೂ ರಕ್ತವರ್ಣವಾದ ಗಂಧಮಾಲ್ಯವಸ್ತ್ರಾದಿಗಳನ್ನೂ ತೊಡಿಸಿ, ಯೂಪಸ್ತಂಭಕ್ಕೆ ಕಟ್ಟಿದನು. ಹೀಗೆ ಕಟ್ಟಲ್ಪಟ್ಟ ಆ ಋಷಿಪುತ್ರನು ವಿಶ್ವಾಮಿತ್ರನು ತನಗೆ ಉಪದೇಶಿಸಿದ್ದ ರೀತಿಯಲ್ಲಿಯೇ ಇಂದ್ರನನ್ನೂ, ಉಪೇಂದ್ರನನ್ನೂ ಕುರಿತು, ಆ ಎರಡು ಶ್ಲೋಕಗಳನ್ನೂ ಮನಸ್ಸಿನಲ್ಲಿಯೇ ಧ್ಯಾನಿಸಿ ಸ್ತೋತ್ರಮಾಡಿದನು. ಆಗ ಈ ಸ್ತೋತ್ರಕ್ಕೆ ಇಂದ್ರನು ಮೆಚ್ಚಿದವನಾಗಿ ಶುನಶ್ಶೇಫನಿಗೆ ದೀರ್ಘಾಯುಸ್ಸನ್ನು ಅನುಗ್ರಹಿಸಿದುದಲ್ಲದೆ, ಅಂಬರೀಷನಿಗೂ ಆ ಯಜ್ಞದಿಂದ ಇತರರು ಸಾಮಾನ್ಯವಾಗಿ ಹೊಂದಬಹುದಾದ ಫಲಕ್ಕಿಂತಲೂ ಬಹುಗುಣವಾದ ಫಲವುಂಟಾಗಲೆಂದು ಅನುಗ್ರಹಿಸಿ, ಅವರಿಬ್ಬರನ್ನೂ ಕೃತಾರ್ಥರನ್ನಾಗಿ ಮಾಡಿದನು. "ಎಲೈ ರಾಮನೆ! ಇತ್ತಲಾಗಿ ವಿಶ್ವಾಮಿತ್ರನು ಪುನಃ ಆ ಪುಷ್ಕರದಲ್ಲಿಯೇ ಸಾವಿರ ವರುಷಗಳ ವರೆಗೂ ತಪಸ್ಸು ಮಾಡುತ್ತಿದ್ದನು."

ಸರ್ಗ ೬೩

ವಿಶ್ವಾಮಿತ್ರನು ಮಹರ್ಷಿ ಎನಿಸಿಕೊಂಡುದು.

ಹೀಗೆ ವಿಶ್ವಾಮಿತ್ರನು ಸಾವಿರ ವರುಷಗಳವರೆಗೆ ತಪಸ್ಸುಮಾಡಿ ವ್ರತಸ್ನಾತನಾಗಿರುವಾಗ, ಈತನ ತಪಸ್ಸಿಗೆ ತಕ್ಕ ಫಲವನ್ನು ಕೊಡಬೇಕೆಂದುದ್ದೇಶಿಸಿ, ಬ್ರಹ್ಮನೇ ಮೊದಲಾದ ದೇವತೆಗಳೆಲ್ಲರೂ ಈತನಿರುವ ಸ್ಥಳಕ್ಕೆ ಬಂದರು. ಆಗ ಮಹಾತೇಜಸ್ವಿಯಾದ ಬ್ರಹ್ಮನು ವಿಶ್ವಾಮಿತ್ರನನ್ನು ಕುರಿತು ಅನುನಯದಿಂದ "ಎಲೈ ಮಹಾತ್ಮನೆ! ನಿನಗೆ ಮಂಗಳವಾಗಲಿ. ಇದುವರೆಗೆ ನೀನು ರಾಜರ್ಷಿ ಎನಿಸಿಕೊಂಡಿದ್ದೆಯಲ್ಲವೆ? ಈಚೆಗೆ

ಮಾಡಿರುವ ತಪಸ್ಸಿನ ಪ್ರಭಾವದಿಂದ ಇನ್ನುಮೇಲೆ ನೀನು ಋಷಿ ಎನಿಸಿಕೊಳ್ಳುವೆ" ಎಂದು ಅನುಗ್ರಹಿಸಿ ನಿಜಲೋಕಕ್ಕೆ ಹೊರಟುಹೋದನು. ವಿಶ್ವಾಮಿತ್ರನಾದರೋ ಅದಕ್ಕೂ ತೃಪ್ತಿಪಡದೆ, ತನ್ನ ತಪಸ್ಸನ್ನು ಮಾಡುತ್ತಲೇ ಇದ್ದನು. ಹೀಗೆ ಬಹುಕಾಲವು ಕಳೆಯಲು "ಮೇನಕೆ" ಯೆಂಬ ಅಪ್ಸರಸ್ತ್ರೀಯು ಒಂದಾನೊಂದು ಕಾಲದಲ್ಲಿ ಸ್ನಾನಮಾಡುವುದಕ್ಕಾಗಿ ಆ ಪುಷ್ಕರ ತೀರ್ಥಕ್ಕೆ ಬಂದಳು. ಮೇಘದಲ್ಲಿ ಹೊಳೆಯುತ್ತಿರುವ ಮಿಂಚಿನಂತೆ ಅದ್ಭುತವಾದ ದೇಹಕಾಂತಿಯುಳ್ಳವಳಾಗಿಯೂ ಎಣೆಯಿಲ್ಲದ ರೂಪವುಳ್ಳವಳಾಗಿಯೂ ಇದ್ದ ಆಕೆಯನ್ನು ನೋಡಿ ಜಿತೇಂದ್ರಿಯನಾಗಿದ್ದ ಈ ವಿಶ್ವಾಮಿತ್ರನ ಮನಸ್ಸು ಕದಲಿತು. ಆಗ ಋಷಿಯು ಆಕೆಯನ್ನು ಕುರಿತು "ಎಲೈ ಭದ್ರೆ! ನಿನಗೆ ಸುಖಾಗಮನವುಂಟಾಗಲಿ! ನಿನ್ನನ್ನು ನೋಡಿದೊಡನೆಯೇ ನನ್ನ ಮನಸ್ಸು ಚಂಚಲವಾಯಿತು. ಈ ಆಶ್ರಮದಲ್ಲಿಯೇ ನೀನು ಕೆಲವು ದಿವಸಗಳು ವಾಸವಾಗಿದ್ದು ನನ್ನ ಕೋರಿಕೆಯನ್ನು ನೆರವೇರಿಸು" ಎಂದನು. ಅದರಂತೆಯೇ ಆಕೆಯು ಹತ್ತು ವರುಷಗಳವರೆಗೆ ಆ ಆಶ್ರಮದಲ್ಲಿಯೇ ವಿಶ್ವಾಮಿತ್ರನೊಡಗೂಡಿ ಸುಖವಾಗಿರುತ್ತಿದ್ದಳು. ಆಮೇಲೆ ಒಂದಾನೊಂದು ಕಾಲದಲ್ಲಿ ಇದ್ದಕ್ಕಿದ್ದ ಹಾಗೆಯೇ ಈ ವಿಶ್ವಾಮಿತ್ರನಿಗೆ ಜ್ಞಾನೋದಯವಾಗಿ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾದುವು. ಆಗ ಅವನ ಮನಸ್ಸಿನಲ್ಲಿ ಮಿತಿಮೀರಿದ ಕೋಪವೂ ದುಃಖವೂ ಉಕ್ಕಿಬರುತ್ತಿರಲು ತನ್ನಲ್ಲಿ ತಾನು "ಛೀ, ಇದೆಲ್ಲವೂ ನನ್ನ ತಪಸ್ಸನ್ನು ಕೆಡಿಸುವುದಕ್ಕಾಗಿ ದೇವತೆಗಳು ಮಾಡಿರುವ ತಂತ್ರವೆಂದೇ ತೋರುವುದು. ಐಹಿಕಸುಖಕ್ಕೆ ಮರುಳಾಗಿ ಹಿಂದಿನ ಹತ್ತುವರುಷಗಳನ್ನೂ ವ್ಯರ್ಥವಾಗಿ ಕಳೆದುಬಿಟ್ಟೆನು. ನನ್ನ ತಪಸ್ಸೆಲ್ಲವೂ ಕೆಟ್ಟುಹೋಯಿತು. ಆಹಾ! ಮಾಡಕ್ಕ್ಯದೇನು" ಎಂದು ಬಾರಿಬಾರಿಗೂ ನಿಟ್ಟುಸಿರುಬಿಟ್ಟು, ಕೋಪದಿಂದ ಹಲ್ಲನ್ನು ಕಡಿಯುತ್ತಿದ್ದನು. ಇದನ್ನು ನೋಡಿ ಮೇನಕೆಯು ಭಯದಿಂದ ನಡುಗುತ್ತಾ ಕೈಮುಗಿದು ನಿಂತಿದ್ದಳು. ಹೀಗೆ ಭಯದಿಂದ ತತ್ತರಿಸುತ್ತಿರುವ ಮೇನಕೆಯನ್ನು ವಿಶ್ವಾಮಿತ್ರನು "ಹೆದರಬೇಡ" ವೆಂದು ಸಮಾಧಾನಪಡಿಸಿ ಕಳುಹಿಸಿ, ಆಮೇಲೆ ಉತ್ತರದಿಕ್ಕಿಗೆ ಹೋಗಿ, ಅಲ್ಲಿದ್ದ ಹಿಮವತ್ಪರ್ವತದ ತಪ್ಪಲನ್ನು ಸೇರಿ ಅಲ್ಲಿ ದೃಢವಾದ ಸಂಕಲ್ಪದಿಂದ ಮನಸ್ಸನ್ನು ನಿಗ್ರಹಿಸಿ, ತನ್ನ ಕೋರಿಕೆಯು ಸಲ್ಲುವವರೆಗೂ ಬಿಡದೆ ತಪಸ್ಸು

ಮಾಡಿ ಸಿದ್ಧಿಯನ್ನು ಪಡೆಯಬೇಕೆಂದು ಉದ್ದೇಶಿಸಿ, ಕೌಶಕೀ ನದಿಯ ತೀರದಲ್ಲಿ ಘೋರವಾದ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ಒಂದು ಸಹಸ್ರವರುಷಗಳು ಕಳೆದವು. ಆ ಹಿಮವತ್ಪರ್ವತದಲ್ಲಿದ್ದ ದೇವತೆಗಳೆಲ್ಲರಿಗೂ ಭಯವುಂಟಾಯಿತು. ಆಗ ಅವರೆಲ್ಲರೂ ಋಷಿಗಳೊಡನೆ ಕಲೆತು ಆಲೋಚಿಸಿ, ಬ್ರಹ್ಮನ ಸಮೀಪಕ್ಕೆ ಹೋಗಿ, ಆತನನ್ನು ಕುರಿತು, ಎಲೈ ದೇವನೆ! ವಿಶ್ವಾಮಿತ್ರನ ತಪೋಜ್ವಾಲೆಯು ಅತಿ ತೀವ್ರವಾಗಿರುವುದು. ಆತನಿಗೆ ಈಗಲೇ ಮಹರ್ಷಿತ್ವವನ್ನು ಅನುಗ್ರಹಿಸಿ ಕೊಟ್ಟುಬಿಡು" ಎಂದು ಪ್ರಾರ್ಥಿಸಿದರು. ಅದನ್ನು ಕೇಳಿದೊಡನೆ ಬ್ರಹ್ಮನು ವಿಶ್ವಾಮಿತ್ರನಿರುವ ಸ್ಥಳಕ್ಕೆ ಬಂದು, "ವತ್ಸ ಕೌಶಿಕನೆ! ನಿನ್ನ ಕ್ರೂರವಾದ ತಪಸ್ಸಿಗೆ ಮೆಚ್ಚಿದೆನು. ಇನ್ನು ನೀನು ಮಹರ್ಷಿಯೆನಿಸಿ, ಋಷಿಗಳೆಲ್ಲರಿಗೂ ಮೇಲಾಗಿರು" ಎಂದನು. ಇದನ್ನು ಕೇಳಿ ವಿಶ್ವಾಮಿತ್ರನಿಗೆ ದುಃಖವಾಗಲಿ, ಸಂತೋಷವಾಗಲಿ ಯಾವುದೂ ಉಂಟಾಗಲಿಲ್ಲ. ಆಗ ಬ್ರಹ್ಮನಿಗಿದಿರಾಗಿ ಕೈಮುಗಿದು ನಿಂತುಕೊಂಡು "ಮಹಾತ್ಮನೆ! ನನ್ನ ಸತ್ಕರ್ಮಗಳ ಫಲವಾಗಿ ನೀನು ನನಗೆ ಮಹರ್ಷಿತ್ವವನ್ನು ಅನುಗ್ರಹಿಸಿರುವೆಯಷ್ಟೆ? ಹಾಗಿದ್ದರೆ ಇನ್ನು ಮೇಲೆ ನನಗೆ ಜಿತೇಂದ್ರಿಯತ್ವ ಉಂಟಾದ ಹಾಗೆಯೇ ಆಯಿತು" ಎಂದನು. ಅದಕ್ಕಾಗಿ ಬ್ರಹ್ಮನು "ಎಲೈ ವಿಶ್ವಾಮಿತ್ರನೆ! ಈಗಲೇ ನಿನಗೆ ಜಿತೇಂದ್ರಿಯತ್ವವು ಬಾರದು. ಇನ್ನೂ ಕೆಲವು ಕಾಲದವರೆಗೆ ನೀನು ಪ್ರಯತ್ನಿಸಿದ ಹೊರತು ಅದನ್ನು ಪಡೆಯಲಾರೆ. ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡುತ್ತಿರು" ಎಂದು ಹೇಳಿ, ದೇವತೆಗಳೊಡನೆ ತನ್ನ ಲೋಕಕ್ಕೆ ಹೊರಟುಹೋದನು. ಆಮೇಲೆ ವಿಶ್ವಾಮಿತ್ರನು ದೃಢಮನಸ್ಸಿನಿಂದ ಪುನಃ ತಪಸ್ಸು ಮಾಡಲಾರಂಭಿಸಿ, ಎರಡು ತೋಳುಗಳನ್ನು ಮೇಲಕ್ಕೆ ನೀಡಿ, ನಿರಾಧಾರನಾಗಿ ನಿಂತು, ವಾಯು ಭಕ್ಷಣವನ್ನು ಮಾಡುತ್ತಾ ಬೇಸಗೆಯಲ್ಲಿ ಪಂಚಾಗ್ನಿ ಮಧ್ಯದಲ್ಲಿಯೂ, ಮಳೆಗಾಲದಲ್ಲಿ ನಿರಾವರಣವಾದ ಪ್ರದೇಶದಲ್ಲಿಯೂ, ಚಳಿಗಾಲದಲ್ಲಿ ಜಲಮಧ್ಯದಲ್ಲಿಯೂ ನಿಂತು, ಸಹಸ್ರ ವರುಷಗಳವರೆಗೆ ಘೋರವಾದ ತಪಸ್ಸನ್ನು ಮಾಡಿದನು. ಹೀಗೆ ಹಗಲು ರಾತ್ರಿಯೆನ್ನದೆ ಯಾವಾಗಲೂ ಎಡೆಬಿಡದೆ ತಪಸ್ಸು ಮಾಡುತ್ತಿರುವ ವಿಶ್ವಾಮಿತ್ರನನ್ನು ನೋಡಿ, ಇಂದ್ರಾದಿ ದೇವತೆಗಳೆಲ್ಲರೂ ಭಯಪಟ್ಟರು. ಆಮೇಲೆ ಇಂದ್ರನು ದೇವತೆಗಳೊಡನೆ ಕಲೆತು ಆಲೋಚಿಸಿ

ರಂಭೆಯೆಂಬ ಅಪ್ಸರ ಸ್ತ್ರೀಯನ್ನು ಕರೆದು, ತಮಗೆ ಕ್ಷೇಮವನ್ನೂ, ವಿಶ್ವಾಮಿತ್ರನಿಗೆ ವಿರೋಧವನ್ನೂ ಉಂಟುಮಾಡುವಂತೆ ಒಂದಾನೊಂದು ವಾಕ್ಯವನ್ನು ಹೇಳಿದನು.

ಸರ್ಗ ೬೪

ಇಂದ್ರನಿಂದ ಕಳುಹಿಸಲ್ಪಟ್ಟ ರಂಭೆಯನ್ನು ವಿಶ್ವಾಮಿತ್ರನು ಶಪಿಸಿದುದು.

ಹೀಗೆ ಇಂದ್ರನು ರಂಭೆಯನ್ನು ಕರೆದು "ಎಲೆ ರಂಭೆ, ದೇವತೆಗಳ ಕ್ಷೇಮಕ್ಕಾಗಿ ನೀನೊಂದು ದೊಡ್ಡ ಕೆಲಸವನ್ನು ಮಾಡಬೇಕಾಗಿರುವುದು. ಈಗಲೇ ನೀನು ವಿಶ್ವಾಮಿತ್ರನ ಬಳಿಗೆ ಹೋಗಿ ಆತನನ್ನು ಮರುಳುಗೊಳಿಸಿ ಆತನ ಮನಸ್ಸನ್ನು ಕೆಡಿಸಿ ತಪಸ್ಸಿಗೆ ವಿಘ್ನವನ್ನುಂಟುಮಾಡಬೇಕು"ಎಂದನು. ಅದಕ್ಕಾರಂಭೆಯು ನಾಚಿಕೆಯಿಂದಲೂ ಭಯದಿಂದಲೂ ಕೂಡಿ ಕೈಮುಗಿದು "ಎಲೆ ದೇವನೆ! ಆ ವಿಶ್ವಾಮಿತ್ರನು ಬಹಳ ಕಠಿನ ಸ್ವಭಾವದವನು. ಆತನು ಸಾಮಾನ್ಯನಲ್ಲ. ಋಷಿಗಳೊಳಗೆಲ್ಲ ಮೇಲಾದವನು. ಸುಲಭ ಕೋಪಿಯಾದುದರಿಂದ ನನಗೆ ಕ್ರೂರವಾದ ಶಾಪವನ್ನು ಕೊಡದೆ ಬಿಡನು. ಅವನ ಹೆಸರನ್ನು ಕೇಳಿದ ಮಾತ್ರಕ್ಕೆ ನನಗೆ ಭಯವುಂಟಾಗಿರುವುದು. ಈ ವಿಷಯದಲ್ಲಿ ನನ್ನನ್ನು ಮನ್ನಿಸಬೇಕು" ಎಂದಳು. ಅದನ್ನು ಕೇಳಿ ತನ್ನ ಮುಂದೆ ಕೈಮುಗಿದು ಭಯದಿಂದ ನಡುಗುತ್ತ ನಿಂತಿರುವ ಆಕೆಯನ್ನು ನೋಡಿ "ಹೆದರಬೇಡ. ನಿನಗೆ ಕ್ಷೇಮವುಂಟಾಗುವುದು. ನಿನ್ನ ಸಹಾಯಕ್ಕಾಗಿ ಇನ್ನೂ ಅನೇಕರನ್ನು ಕಳುಹಿಸುವೆನು. ನಾನೂ ಒಂದು ಕೋಗಿಲೆಯ ರೂಪವನ್ನು ಧರಿಸಿ ಮನ್ಮಥನೊಡಗೂಡಿ ನಿನ್ನೊಡನೆಯೇ ಆ ತಪೋವನಕ್ಕೆ ಬಂದು ಅಲ್ಲಿ ಒಂದು ಮನೋಹರವಾದ ಮಾವಿನ ಮರದಲ್ಲಿ ಕುಳಿತು ಕೂಗುವೆನು. ಆ ಕಾಲಕ್ಕೆ ನೀನೂ ನಿನ್ನ ರೂಪಾತಿಶಯವನ್ನು ತೋರಿಸುತ್ತ ಆತನ ಬಳಿಯಲ್ಲಿ ನಿಂತು ಅವನು ತಾನಾಗಿಯೇ ತಪಸ್ಸನ್ನು ಬಿಟ್ಟುಬಿಡುವಂತೆ ಮನೋವಿಕಾರವನ್ನುಂಟುಮಾಡು" ಎಂದನು. ಇದನ್ನು ಕೇಳಿ ರಂಭೆಯು ಅತಿಶಯವಾದ ರೂಪವನ್ನು ಧರಿಸಿ ವಿಶ್ವಾಮಿತ್ರನ ಬಳಿಗೆ ಬಂದು ಆತನನ್ನು ಮೋಹಗೊಳಿಸುವುದಕ್ಕಾರಂಭಿಸಿದಳು. ಈ ಕಾಲಕ್ಕೆ ಸರಿಯಾಗಿ ಮನೋಹರವಾದ ಒಂದು ಕೋಕಿಲ ಧ್ವನಿಯೂ ಹೊರಟಿತು. ಕಿವಿಗಿಂಪಾದ ಈ ಧ್ವನಿಯನ್ನು ಕೇಳಿದಾಗ ವಿಶ್ವಾಮಿತ್ರನಿಗೆ ಮನಸ್ಸಿನಲ್ಲಿ ಸ್ವಲ್ಪವಾಗಿ ಆಹ್ಲಾದವು ಅಂಕುರಿಸಿತು. ಒಡನೆಯೇ ಕಣ್ಣುಗಳನ್ನು ತೆರೆದು

ನೋಡಿದನು. ಇದಿರಿಗೆ ಅದ್ಭುತವಾದ ರೂಪವುಳ್ಳ ಸ್ತ್ರೀಯು ನಿಂತಿದ್ದಳು. ಹೀಗೆ ಕಿವಿಗಿಂಪಾದ ಗಾನವನ್ನೂ ಕಣ್ಣುಗಳಿಗಾನಂದವನ್ನುಂಟುಮಾಡುವ ಸ್ತ್ರೀ ರೂಪವನ್ನೂ ಕಂಡು ವಿಶ್ವಾಮಿತ್ರನಿಗೆ ಸಂದೇಹವುಂಟಾಯಿತು. ಇದೂ ಇಂದ್ರನ ತಂತ್ರವೆಂದೇ ತಿಳಿದು, ಮುಂದಿದ್ದ ರಂಭೆಯುನ್ನು ನೋಡಿ ಕೋಪದಿಂದ "ಎಲೆ ರಂಭೆ! ನಾನು ಕ್ರೋಧಾದಿಗಳನ್ನು ಜಯಿಸಬೇಕೆಂಬ ಉದ್ದೇಶದಿಂದ ತಪಸ್ಸುಮಾಡುತ್ತಿರುವ ನನ್ನ ಮನಸ್ಸನ್ನು ಕೆಡಿಸುವುದಕ್ಕೆ ಬಂದಿರುವೆಯಾ? ನೀನು ಹತ್ತು ಸಾವಿರ ವರುಷಗಳವರೆಗೂ ಕಲ್ಲಾಗಿರು. ಮಹಾ ತೇಜಸ್ವಿಯಾಗಿಯೂ ತಪೋಬಲವುಳ್ಳವನಾಗಿಯೂ ಇರುವ 'ಬ್ರಾಹ್ಮಣನೊಬ್ಬನು ಕೊನೆಗೆ ನಿನ್ನನ್ನು ಈ ಶಾಪದಿಂದ ಬಿಡುಗಡೆ ಮಾಡುವನು' ಎಂದು ಶಾಪವನ್ನು ಕೊಟ್ಟು ಆಮೇಲೆ ತನ್ನಲ್ಲಿ ತಾನು "ಅಯ್ಯೋ, ಕೋಪವನ್ನು ತಡೆದುಕೊಳ್ಳುವ ಶಕ್ತಿಯು ನನಗಿಲ್ಲದುದರಿಂದಲ್ಲವೆ ಹೀಗೆ ಶಾಪವನ್ನು ಕೊಟ್ಟೆನು" ಎಂದು ಪಶ್ಚಾತ್ತಾಪಪಡುತ್ತಿದ್ದನು. ಇತ್ತಲಾಗಿ ರಂಭೆಯು ಶಿಲಾರೂಪವನ್ನು ಹೊಂದಿದಳು. ಈ ಶಾಪ ವಾಕ್ಯವನ್ನು ಕೇಳುತ್ತಿದ್ದ ಮನ್ಮಥನೂ, ಇಂದ್ರನೂ ಭಯದಿಂದ ನಡುಗುತ್ತ ಹಾಗೆಯೇ ಹಿಂತಿರುಗಿ ಓಡಿದರು. ಇತ್ತ ಆ ವಿಶ್ವಾಮಿತ್ರನು ತನ್ನ ತಪಸ್ಸೆಲ್ಲವೂ ಹೀಗೆ ಕೋಪದಿಂದ ವಿಫಲವಾದುದಕ್ಕಾಗಿ ತನಗೆ ಇನ್ನೂ ಇಂದ್ರಿಯ ಜಯವುಂಟಾಗಲಿಲ್ಲವೆಂಬ ದುಃಖದಿಂದಲೇ ಕೊರಗುತ್ತಿದ್ದನು. ಕೊನೆಗೆ ಈತನ ಮನಸ್ಸಿನಲ್ಲಿ, ಇನ್ನುಮೇಲೆ ಕೋಪವನ್ನು ಬಿಟ್ಟೇಬಿಡಬೇಕು, ಇನ್ನು ಮಾತನ್ನೇ ಆಡುವುದಿಲ್ಲ. ಹೆಚ್ಚಾಗಿ ಹೇಳಿದುದರಿಂದೇನು! ಉಸಿರಾಡುತ್ತಿರುವುದರಿಂದಲ್ಲವೇ ಈ ಅನರ್ಥಗಳೆಲ್ಲವೂ ಉಂಟಾಗುವುವು. ಇನ್ನು ನೂರು ವರುಷಗಳವರೆಗೂ ಈ ಉಸಿರನ್ನೇ ತಡೆದಿಟ್ಟು ನನ್ನ ದೇಹವನ್ನು ಸಂಪೂರ್ಣವಾಗಿ ಶೋಷಿಸಿಬಿಡುವೆನು. ನನಗೆ ತಪಸ್ಸಿನಿಂದ ಬ್ರಾಹ್ಮಣ್ಯವು ಬರುವವರೆಗೂ ಈ ಇಂದ್ರಿಯಗಳನ್ನು ಜಯಿಸಿ ಉಸಿರಾಡದೆ ಊಟಮಾಡದೆ ನಿಶ್ಚಲನಾಗಿರುವೆನು. ಎಷ್ಟು ವರುಷಗಳಾದರೂ ಆಗಲಿ. ಆಹಾರಗಳಿಲ್ಲದಿದ್ದರೂ ನನ್ನ ತಪಃಪ್ರಭಾವದಿಂದಲೇ ದೇಹವು ಕೃಶವಾಗದಂತೆ ನೋಡಿಕೊಳ್ಳುವೆನೆಂದು ಸಂಕಲ್ಪಿಸಿಕೊಂಡು ಸಾವಿರ ವರ್ಷಗಳವರೆಗೂ ಉಸಿರಾಡದೆಯೂ ಊಟಮಾಡದೆಯೂ ದೀಕ್ಷೆಯನ್ನು ವಹಿಸುವುದಾಗಿ ದೃಢಪ್ರತಿಜ್ಞೆಯನ್ನು ಮಾಡಿದನು.

ಸರ್ಗ ೬೫.

ವಿಶ್ವಾಮಿತ್ರನು ಬ್ರಹ್ಮರ್ಷಿತ್ವವನ್ನು ಪಡೆದುದು.

ಆ ಮೇಲೆ ಓವಮೇಯನಲ್ಲಿ ಮೊದಲು ತಾನಿದ್ದ ಉತ್ತರಭಾಗವನ್ನು ಬಿಟ್ಟು ಸ್ವಲ್ಪ ಪೂರ್ವಾಭಿಮುಖನಾಗಿ ಹೊರಟು ಸ್ವಲ್ಪ ದೂರ ಹೋಗಿ ಅಲ್ಲಿ ಒಂದು ಸಾವಿರ ವರುಷಗಳವರೆಗೂ ಮೌನವ್ರತವನ್ನು ವಹಿಸಿ ಅತಿ ದುಷ್ಕರವಾದ ತಪಸ್ಸನ್ನು ಮಾಡುತ್ತಿದ್ದನು. ಆ ಒಂದು ಸಾವಿರ ವರ್ಷಗಳು ಕಳೆಯುವುದರೊಳಗಾಗಿ ನಡುವೆ ಎಷ್ಟೋ ವಿಘ್ನಗಳು ಬಂದೊದಗಿದರೂ ಮನಸ್ಸನ್ನು ಕದಲಿಸದೆ ಮರದ ತುಂಡಿನಂತೆ ನಿಶ್ಚಲನಾಗಿದ್ದನು. ಕಾಮಕ್ರೋಧಾದಿಗಳಿಗೆ ಅವಕಾಶಕೊಡದೆ ದೃಢ ಮನಸ್ಸಿನಿಂದ ಆ ಒಂದು ಸಾವಿರ ವರ್ಷಗಳನ್ನೂ ಕಳೆದನು. ಈತನ ವ್ರತವು ಮುಗಿಯಿತು. ಆಗ ಅನ್ನವನ್ನು ಭುಜಿಸಲು ಪ್ರಯತ್ನಿಸುತ್ತಿರುವಾಗ, ಇಂದ್ರನು ಬ್ರಾಹ್ಮಣ ರೂಪದಿಂದ ಈತನ ಬಳಿಗೆ ಬಂದು ಸಿದ್ಧವಾಗಿದ್ದ ಆ ಅನ್ನವನ್ನು ತನಗೆ ಕೊಡಬೇಕೆಂದು ಪ್ರಾರ್ಥಿಸಿದನು. ಈ ವಿಶ್ವಾಮಿತ್ರನು ಆ ಅನ್ನವೆಲ್ಲವನ್ನೂ ಆ ಬ್ರಾಹ್ಮಣನಿಗೆ ಕೊಟ್ಟುಬಿಟ್ಟು, ತನಗೆ ಸ್ವಲ್ಪವಾದರೂ ಉಳಿಯದಿದ್ದುದರಿಂದ, ತಾನು ಊಟಮಾಡದೆಯೇ ಮೌನವ್ರತವನ್ನು ವಹಿಸಿ, ಆ ಬ್ರಾಹ್ಮಣನನ್ನು ಕುರಿತು ಯಾವ ಮಾತನ್ನೂ ಆಡದೆಯೇ ಸುಮ್ಮನೆ ಇದ್ದುಬಿಟ್ಟನು. ಹೀಗೂ ಸಾವಿರ ವರುಷಗಳು ಕಳೆದುವು. ಅದುವರೆಗೆ ತನ್ನ ಉಚ್ಛ್ವಾಸ ನಿಶ್ವಾಸಗಳನ್ನೂ ಕೂಡ ತಡೆದುಬಿಟ್ಟನು. ಹೀಗೆ ಉಸಿರಾಡದೆ ಮಹಾ ಘೋರವಾದ ವ್ರತದಲ್ಲಿರುವಾಗ ಈತನ ತಲೆಯಿಂದ ಒಂದು ಹೊಗೆಯು ಹೊರಡಲಾರಂಭಿಸಿತು. ಇದನ್ನು ನೋಡಿ ಮೂರು ಲೋಕವೂ ತತ್ತಳಿಸಿತು. ಎಲ್ಲರೂ ಭಯದಿಂದ ತಪಿಸುತ್ತಿದ್ದರು. ಪ್ರಪಂಚವೆಲ್ಲವೂ ಉರಿಯುತ್ತಿರುವಂತೆ ತೋರಿತು. ಆಗ ದೇವ ಗಂಧರ್ವ ರಾಕ್ಷಸಾದಿಗಳೆಲ್ಲರೂ ಈ ತಪೋಜ್ವಾಲೆಯಿಂದ ಕಂದಿದ ತೇಜಸ್ಸುಳ್ಳವರಾಗಿ, ತತ್ತಳಿಸಿ ಕಳವಳಗೊಂಡು ಬ್ರಹ್ಮನ ಸಮೀಪಕ್ಕೆ ಹೋಗಿ ವಿನಯದಿಂದ ಆತನನ್ನು ಕುರಿತು, “ ಎಲೈ ದೇವನೆ ! ಮಹರ್ಷಿಯಾದ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸುವುದಕ್ಕಾಗಿ ನಾವು ಅನೇಕ ಪ್ರಯತ್ನಗಳನ್ನು ಮಾಡಿದೆವು. ರಂಭೆಯೇ ಮೊದಲಾದ ಅಪ್ಸರ ಸ್ತ್ರೀಯರನ್ನು ಕಳುಹಿಸಿ ಆತನಿಗೆ ಮೋಹಪುಟ್ಟುಂಟಾಗುವಂತೆ ಪ್ರಯತ್ನಿಸಿದೆವು. ಆತನಿಗೆ ಕೋಪವನ್ನುಂಟುಮಾಡುವುದಕ್ಕೂ ಅನೇಕ ಪ್ರಯ

ತ್ನಗಳನ್ನು ಮಾಡಿದೆವು. ಆದರೆ ಏನು ಮಾಡಿದರೂ ಆತನ ತಪಸ್ಸನ್ನು ಕೆಡಿಸುವುದಕ್ಕಾಗಲಿಲ್ಲ. ಮೇಲೆ ಮೇಲೆ ತಪಸ್ಸನ್ನು ಹೆಚ್ಚಿಸುತ್ತಲೇ ಇರುವನು. ಆತನಲ್ಲಿ ಯಾವುದಾದರೊಂದು ದೋಷವೂ ಕೂಡ ಕಾಣಿಸುವುದಿಲ್ಲ. ಸ್ವಾಮಿ, ಆತನ ಕೋರಿಕೆಯನ್ನು ನೀವು ಸಲ್ಲಿಸದಿದ್ದರೆ ಚರಾಚರಾತ್ಮಕವಾದ ಈ ಪ್ರಪಂಚವೆಲ್ಲವನ್ನೂ ತಪೋಜ್ವಾಲೆಯಿಂದ ಸುಟ್ಟುಬಿಡುವನು. ದಿಕ್ಕುಗಳೆಲ್ಲವೂ ಪ್ರಕಾಶವಿಲ್ಲದೆ ಮಲಿನವಾಗುತ್ತ ಬಂದಿರುವುವು. ಸಮುದ್ರಗಳೆಲ್ಲವೂ ಕ್ಷೋಭೆ ಹೊಂದುತ್ತಿರುವುವು. ಪರ್ವತಗಳೆಲ್ಲವೂ ಸಿಡಿಯುತ್ತಿರುವುವು. ಭೂಮಿಯು ನಡುಗುತ್ತಿರುವುದು. ವಾಯುವೂ ಕೂಡ ಬಹಳ ವ್ಯಾಕುಲತೆಯಿಂದ ಬೀಸುತ್ತಿರುವುದು. ಇದಕ್ಕೆ ಪ್ರತೀಕಾರವೇನೆಂದು ತಿಳಿಯಲಿಲ್ಲ. ಈ ಮಹೋತ್ಪಾತಗಳಿಂದ ಅವರವರು ತಮ್ಮ ತಮ್ಮ ನಿತ್ಯಕರ್ಮಗಳನ್ನು ಬಿಟ್ಟು ನಾಸ್ತಿಕರಂತೆ ಆಗುವರೆಂದೂ ತೋರುತ್ತಿರುವುದು. ಎಲೈ ಮಹಾತ್ಮನೆ, ಈ ಮೂರು ಲೋಕದವರ ಮನಸ್ಸೂ ಕಳವಳಹೊಂದಿ ಮುಂದುಗಾಣದಿರುವುದು. ಸೂರ್ಯನ ತೇಜಸ್ಸೆಲ್ಲವೂ ಆ ಮಹರ್ಷಿಯ ತೇಜಸ್ಸಿನಿಂದ ಕಂದಿಹೋಗಿರುವುದು. ಇದಕ್ಕಿಂತಲೂ ವಿಪರೀತವೇನಾಗಬೇಕು ? ಮಹಾ ಪ್ರಭಾವವುಳ್ಳ ಅಗ್ನಿರೂಪನಾದ ಆ ವಿಶ್ವಾಮಿತ್ರ ಮಹರ್ಷಿಯು ಈ ಮೂರು ಲೋಕವನ್ನೂ ನಾಶಮಾಡಲು ಪ್ರಯತ್ನಿಸುವುದಕ್ಕೆ ಮೊದಲೇ ನೀನು ಆತನಿಗೆ ಪ್ರಸನ್ನನಾಗಿ ಅನುಗ್ರಹಿಸಬೇಕು. ಪೂರ್ವಕಾಲದಲ್ಲಿ ಪ್ರಳಯ ಕಾಲಾಗ್ನಿಯು ಪ್ರಪಂಚವೆಲ್ಲವನ್ನೂ ಸುಟ್ಟಂತೆಯೇ ಈ ಜಗತ್ತನ್ನು ಸುಟ್ಟುಬಿಡುವನೆಂದೇ ತೋರುವುದು. ಆತನು ಯಾವುದನ್ನು ಕೋರಿದರೂ ಅದನ್ನು ಈಗಲೇ ಅನುಗ್ರಹಿಸಿ ಕೊಟ್ಟುಬಿಡು. ಕೊನೆಗೆ ಆತನು ಸ್ವರ್ಗಾಧಿಪತ್ಯವನ್ನೇ ಕೇಳಿದರೂ ಕೊಟ್ಟುಬಿಡಬಹುದು" ಎಂದರು. ಆಗ ಬ್ರಹ್ಮನು ಆ ದೇವತೆಗಳೊಡನೆಯೇ ವಿಶ್ವಾಮಿತ್ರನ ಬಳಿಗೆ ಬಂದು, ವಿಶ್ವಾಮಿತ್ರನನ್ನು ಕುರಿತು, "ಎಲೈ ಬ್ರಹ್ಮರ್ಷಿಯೇ ನಿನಗೆ ಸ್ವಾಗತವು. ನಿನ್ನ ತಪಸ್ಸಿಗೆ ನಾವು ಮೆಚ್ಚಿದೆವು. ನಿನ್ನ ಈ ತಪಸ್ಸಿನ ಫಲವಾಗಿ ಬ್ರಾಹ್ಮಣ್ಯವನ್ನೂ ದೀರ್ಘಾಯುಸ್ಸನ್ನೂ ಕೊಟ್ಟಿರುವೆವು. ನಿನಗೆ ಮಂಗಳವಾಗಲಿ. ಇನ್ನು ನಿನ್ನ ತಪಸ್ಸನ್ನು ನಿಲ್ಲಿಸಿ ಸುಖವಾಗಿ ಹೊರಟುಹೋಗು" ಎಂದನು. ಹೀಗೆ ಬ್ರಹ್ಮನೂ ದೇವತೆಗಳೂ ಹೇಳಿದ ಮಾತನ್ನು ಕೇಳಿ ವಿಶ್ವಾಮಿತ್ರನಿಗೆ ಬಹಳ ಸಂತೋಷವುಂಟಾಯಿತು. ಆಗ

ಅವರೆಲ್ಲರಿಗೂ ನಮಸ್ಕರಿಸಿ, “ ಎಲೈ ದೇವತೆಗಳಿರಾ! ನನಗೆ ನೀವು ಬ್ರಾಹ್ಮಣ್ಯವನ್ನೂ ದೀರ್ಘಾಯುಸ್ಸನ್ನೂ ಅನುಗ್ರಹಿಸಿರುವುದಾದರೆ ಓಂಕಾರ ವಷಟ್ಕಾರಗಳೂ, ವೇದಗಳೂ ತಾವಾಗಿ ಬಂದು ನನ್ನನ್ನು ವರಿಸುವಹಾಗೆ ಮಾಡಬೇಕು. ಮತ್ತು ಅವುಗಳನ್ನು ಮತ್ತೊಬ್ಬರಿಗೆ ಉಪದೇಶಿಸುವುದಕ್ಕೂ ಇತರರಿಂದ ಯಾಗ ಮಾಡಿಸುವುದಕ್ಕೂ ನನಗೆ ಅರ್ಹತೆಯುಂಟಾಗಬೇಕು. ಇದೆಲ್ಲವೂ ಹಾಗಿರಲಿ. ನನ್ನ ಮುಖ್ಯವಾದ ಕೋರಿಕೆಯು ಮತ್ತೊಂದುಂಟು. ನನ್ನ ವೈರಿಯಾದ ವಸಿಷ್ಠನುಂಟಲ್ಲವೆ ? ಆತನು ಕ್ಷತ್ರಿಯರಿಗೆ ಬೇಕಾದ ಅಥರ್ವಣ ವೇದವನ್ನೂ ಬ್ರಾಹ್ಮಣರಿಗೆ ಯೋಗ್ಯವಾದ ಇತರ ವೇದಗಳನ್ನೂ ಚೆನ್ನಾಗಿ ಬಲ್ಲವನು. ಬ್ರಹ್ಮಪುತ್ರನಾದ ಆತನ ಬಾಯಿಯಿಂದಲೇ ಇದನ್ನು ಹೇಳಿಸಬೇಕು. ಈ ನನ್ನ ಕೋರಿಕೆಯನ್ನು ನೆರವೇರಿಸಿಕೊಡಬೇಕು ” ಎಂದು ಪ್ರಾರ್ಥಿಸಿದನು. ಆಗ ದೇವತೆಗಳೆಲ್ಲರೂ ವಸಿಷ್ಠರನ್ನು ಪ್ರಾರ್ಥಿಸಿ ಕರೆತಂದು ಅವರಿಬ್ಬರಿಗೂ ಸ್ನೇಹವನ್ನುಂಟು ಮಾಡಿ ವಿಶ್ವಾಮಿತ್ರನನ್ನು ಬ್ರಹ್ಮರ್ಷಿಯೆಂದು ಕರೆಯುವಂತೆ ಆತನನ್ನು ಪ್ರಾರ್ಥಿಸಿದರು. ಆಗ ವಸಿಷ್ಠನು ಹಾಗೆಯೇ ಆಗಲೆಂದು ವಿಶ್ವಾಮಿತ್ರನನ್ನು ಕುರಿತು “ ಎಲೈ ಗಾಧಿ ಪುತ್ರನೆ ! ನೀನು ಬ್ರಹ್ಮರ್ಷಿಯೇ ಆದೆ. ಇದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಯಾಜನಾಧ್ಯಾಪನಾದಿ ಕರ್ಮಗಳೆಲ್ಲಕ್ಕೂ ನಿನಗೆ ಯೋಗ್ಯತೆಯುಂಟು ” ಎಂದನು. ದೇವತೆಗಳೆಲ್ಲರೂ ಅದನ್ನನುಮೋದಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟುಹೋದರು. ಆ ವಿಶ್ವಾಮಿತ್ರನು ಧರ್ಮಜ್ಞಾನವುಳ್ಳನಾದುದರಿಂದ ಬ್ರಾಹ್ಮಣ್ಯವನ್ನು ಪಡೆದಮೇಲೆ ವಸಿಷ್ಠನನ್ನು ಬಹಳವಾಗಿ ಪೂಜಿಸಿದನು. ಹೀಗೆ ಕೃತಾರ್ಥನಾಗಿ ತಪಸ್ಸುಮಾಡುತ್ತಿದ್ದು ಭೂಮಿಯೆಲ್ಲವನ್ನೂ ಸಂಚರಿಸುತ್ತಿದ್ದನು. ಎಲೈ ರಾಮನೆ, ಇದೀಗ ವಿಶ್ವಾಮಿತ್ರನ ಚರಿತ್ರವು. ಇದೇ ಈತನು ಬ್ರಾಹ್ಮಣ್ಯವನ್ನು ಸಂಪಾದಿಸಿದ ರೀತಿಯು. ಈತನೇ ಋಷಿಗಳೆಲ್ಲರಿಗೂ ಶಿರೋರತ್ನಪ್ರಾಯನು. ತಪಸ್ಸೇ ಈ ರೂಪವಾಗಿ ಅವತರಿಸಿರುವುದೆಂದು ತಿಳಿ. ಈತನು ಬಹಳ ಧರ್ಮಪರನು. ಮತ್ತು ವೀರ್ಯಗಳಿಗೆಲ್ಲಾ ಮುಖ್ಯಾಶ್ರಯನು” ಎಂದು ಶತಾನಂದನು ವಿಶ್ವಾಮಿತ್ರನ ಪ್ರಭಾವವೆಲ್ಲವನ್ನೂ ವಿವರಿಸಿದನು. ಆ ಮೇಲೆ ಜನಕರಾಜನು ವಿಶ್ವಾಮಿತ್ರನನ್ನು ನೋಡಿ ಬಹಳ ವಿನಯದಿಂದ ಕೈಮುಗಿದು “ಎಲೈ ಋಷಿಶ್ರೇಷ್ಠನೇ, ಈಗ ನಾನು ಧನ್ಯನಾದೆನು. ಕಕುತ್‌ಸ್ಥ ವಂಶದಲ್ಲಿ ಹುಟ್ಟಿದ ಈ

ರಾಮರೊಡನೆ ನೀನು ನನ್ನ ಯಜ್ಞಕ್ಕೆ ಬಂದುದು ನನ್ನ ಭಾಗ್ಯೋದಯ ವಲ್ಲವೆ! ನಿನ್ನ ದರ್ಶನದಿಂದ ಈಗ ನಾನು ಸಮಸ್ತ ಪಾಪಗಳಿಂದಲೂ ಉದ್ಧರಿಸಲ್ಪಟ್ಟೆನು. ನೀನು ಮಹಾ ಪ್ರಭಾವವುಳ್ಳವನು. ಬ್ರಹ್ಮರ್ಷಿಗಳೊಳಗೆಲ್ಲಾ ಮೇಲಾದವನು. ನಿನ್ನ ಸಂದರ್ಶನದಿಂದ ನನಗೆ ಸಮಸ್ತ ಸದ್ಗುಣಗಳೂ ಉಂಟಾದುವು. ನಿನ್ನ ತಪಃಪ್ರಭಾವವೆಲ್ಲವನ್ನೂ ಶತಾನಂದನ ಮೂಲಕವಾಗಿ ನಾನೂ ಈ ರಾಮ ಲಕ್ಷ್ಮಣರೂ ಆಮೂಲಾಗ್ರವಾಗಿ ಕೇಳಿ ತಿಳಿದೆವು. ಈ ಸಭೆಯಲ್ಲಿರುವ ಸಮಸ್ತ ಋಷಿಗಳಿಗೂ ನಿನ್ನ ಗುಣಾತಿಶಯಗಳೆಲ್ಲವೂ ಚೆನ್ನಾಗಿ ತಿಳಿದುವು. ಎಲೈ ಮಹರ್ಷಿಯೇ! ನಿನ್ನ ತಪಸ್ಸೂ ನಿನ್ನ ವೀರ್ಯವೂ ನಿನ್ನ ಸದ್ಗುಣಗಳೂ ಮಿತಿಯಿಲ್ಲದವುಗಳಾಗಿರುವುವು. ಸೃಷ್ಟಿಕರ್ತನಾದ ಬ್ರಹ್ಮನಿಗೂ ಪರಮೇಶ್ವರನಿಗೂ ಇರತಕ್ಕ ಮಹಾ ಪ್ರಭಾವಗಳೆಲ್ಲವೂ ನಿನ್ನಲ್ಲಿ ಕಾಣುತ್ತಿರುವುವು. ಅದ್ಭುತವಾದ ಈ ನಿನ್ನ ಚರಿತ್ರವನ್ನು ಎಷ್ಟು ಕೇಳಿದರೂ ತೃಪ್ತಿಯುಂಟಾಗುವುದಿಲ್ಲ. ಎಲೈ ಮಹಾತ್ಮನೇ, ಹೊತ್ತುಮೀರುತ್ತಿರುವುದು. ಸೂರ್ಯನು ಅಸ್ತಂಗತನಾಗುತ್ತಿರುವನು. ಸಾಯಂಕಾಲದ ಕರ್ಮಗಳನ್ನು ನಡೆಸುವುದಕ್ಕೆ ಇದು ತಕ್ಕ ಸಮಯವಾಗಿರುವದರಿಂದ, ಇನ್ನು ನಿತ್ಯಾಹ್ನಿಕಗಳಿಗಾಗಿ ಹೋಗುವೆವು. ನಾಳೆ ಬೆಳಗಾದಮೇಲೆ ನನಗೆ ದರ್ಶನವನ್ನು ಕೊಡಬೇಕು. ನಿನಗೆ ಸ್ವಾಗತವು. ನಾನು ಹೋಗಿಬರುವೆನು. ಅಪ್ಪಣೆಯನ್ನು ಕೊಡಬೇಕು" ಎಂದು ಪ್ರಾರ್ಥಿಸಿದನು. ಅದನ್ನು ಕೇಳಿ ಆ ವಿಶ್ವಾಮಿತ್ರನು ಆ ಜನಕನ ವಿನಯಾದಿ ಗುಣಗಳಿಗಾಗಿ ಸಂತೋಷಗೊಂಡು ಹೋಗಿಬರುವಂತೆ ಅನುಮತಿಯನ್ನು ಕೊಟ್ಟನು. ಆ ಮೇಲೆ ಜನಕನು ತನ್ನ ಪುರೋಹಿತರೊಡನೆಯೂ ಬಂಧುಗಳೊಡನೆಯೂ ಕೂಡಿ ವಿಶ್ವಾಮಿತ್ರನಿಗೆ ಪ್ರದಕ್ಷಿಣ ನಮಸ್ಕಾರಾದಿಗಳನ್ನು ಮಾಡಿ ಅರಮನೆಗೆ ಹೊರಟುಹೋಗಲು, ವಿಶ್ವಾಮಿತ್ರನೂ ಕೂಡ ಅಲ್ಲಿನ ಋಷಿಗಳಿಂದ ಬಹಳವಾಗಿ ಸತ್ಕರಿಸಲ್ಪಟ್ಟು ರಾಮ ಲಕ್ಷ್ಮಣರೊಡಗೂಡಿ ತನ್ನ ಆಶ್ರಮಕ್ಕೆ ಹೋಗಿ ಸೇರಿದನು.

ಸರ್ಗ ೬೬

ಜನಕನು ಶಿವಧನುಸ್ಸಿನ ವೃತ್ತಾಂತವನ್ನು ಹೇಳಿದುದು.

ಬೆಳಗಾದಕೂಡಲೆ ಜನಕನು ರಾಮ ಲಕ್ಷ್ಮಣರೊಡನೆ ವಿಶ್ವಾಮಿತ್ರನನ್ನು ಅರಮನೆಗೆ ಕರೆಯಿಸಿ ಆ ಮೂವರನ್ನೂ ವಿಧ್ಯುಕ್ತವಾಗಿ ಸತ್ಕರಿಸಿದ

ಮೇಲೆ ವಿಶ್ವಾಮಿತ್ರನನ್ನು ಕುರಿತು “ ಎಲೈ ಪೂಜ್ಯನೇ! ನಿನಗೆ ಸ್ವಾಗತವು. ನಾನು ಈಗ ಮಾಡಬೇಕಾದ ಕೆಲಸವಾವುದೆಂಬುದನ್ನು ಅಪ್ಪಣೆ ಕೊಡಬೇಕು. ನಾನು ತಮ್ಮ ಆಜ್ಞಾನುವರ್ತಿಯಾಗಿ ನಡೆಯುತಕ್ಕವನೆಂದು ವಿಜ್ಞಾಪಿಸಿಕೊಂಡನು. ಇದನ್ನು ಕೇಳಿ ಧರ್ಮಸ್ವರೂಪನಾದ ಆ ವಿಶ್ವಾಮಿತ್ರನು “ ಎಲೈ ರಾಜನೆ! ದಶರಥನ ಮಕ್ಕಳಾದ ಈ ಕ್ಷತ್ರಿಯ ಕುಮಾರರಿಬ್ಬರೂ ಲೋಕಪ್ರಸಿದ್ಧರಾದವರು. ನಿನ್ನಲ್ಲಿರುವ ಶ್ರೇಷ್ಠವಾದ ರುದ್ರಧನುಸ್ಸನ್ನು ನೋಡಬೇಕೆಂದು ಅಪೇಕ್ಷೆಪಟ್ಟಿದ್ದಾರೆ. ಅದನ್ನು ಇವರಿಗೂ ತೋರಿಸು. ಈ ರಾಜಕುಮಾರರು ಅದನ್ನು ನೋಡುವುದರಿಂದ ಆ ತಮ್ಮ ಆಶೆಯನ್ನು ತೀರಿಸಿಕೊಂಡು ತಮ್ಮ ಪಟ್ಟಣಕ್ಕೆ ಹಿಂದಿರುಗುವರೆಂದು ಹೇಳಿದನು. ಆಗ ಜನಕನು ವಿಶ್ವಾಮಿತ್ರನನ್ನು ಕುರಿತು “ ಎಲೈ ಮಹಾತ್ಮನೆ! ಮೊದಲು ಈ ಧನುಸ್ಸು ನನ್ನಲ್ಲಿರುವುದಕ್ಕೆ ಕಾರಣವನ್ನು ತಿಳಿಸುವೆನು ಕೇಳು. ನಮ್ಮ ವಂಶಕ್ಕೆ ನಿಮಿಯೆಂಬ ಚಕ್ರವರ್ತಿಯೇ ಕೂಟಸ್ಥನು. ಆತನಿಂದ ಆರನೆಯವನಾದ ದೇವರಾತನೆಂಬ ಪ್ರಸಿದ್ಧನಾದ ರಾಜನೊಬ್ಬನಿದ್ದನು. ಮಹಾತ್ಮನಾದ ಶಿವನ ಧನುಸ್ಸು ಈ ದೇವರಾತನಲ್ಲಿ ನ್ಯಾಸರೂಪವಾಗಿ ಇಡಲ್ಪಟ್ಟಿತು. ಪೂರ್ವದಲ್ಲಿ ದಕ್ಷಯಜ್ಞವು ನಡೆಯುತ್ತಿದ್ದಾಗ ಅದನ್ನು ಕೆಡಿಸಬೇಕೆಂದು ಪ್ರಯತ್ನಿಸಿದ ರುದ್ರನು ಈ ಧನುಸ್ಸನ್ನು ಸೆಳೆದು ಕೋಪದಿಂದ ಅಲ್ಲಿದ್ದ ದೇವತೆಗಳನ್ನು ಕುರಿತು, “ ಎಲೈ ದೇವತೆಗಳಿರಾ! ಈ ಯಜ್ಞದಲ್ಲಿ ನನಗೆ ಸೇರತಕ್ಕ ಹವಿರ್ಭಾಗವನ್ನು ನೀವು ಕೊಡಿಸದಿದ್ದುದರಿಂದ ಈಗಲೇ ನಿಮ್ಮ ತಲೆಗಳನ್ನು ಈ ಧನುಸ್ಸಿನಿಂದ ಕತ್ತರಿಸಿಬಿಡುವೆನು” ಎಂದು ಆರ್ಭಟಿಸಿದನು. ಆಗ ದೇವತೆಗಳೆಲ್ಲರೂ ಭಯದಿಂದಲೂ ದುಃಖದಿಂದಲೂ ಆತನ ಕ್ಷಮೆಯನ್ನು ಬೇಡಲು ಪರಶಿವನು ಕೋಪವನ್ನು ತೊರೆದು ಪ್ರಸನ್ನನಾಗಿ ಈ ಧನುಸ್ಸನ್ನೇ ಆ ದೇವತೆಗಳಿಗೆ ಅನುಗ್ರಹಿಸಿಕೊಟ್ಟನು. ಆ ದೇವತೆಗಳೇ ಆಮೇಲೆ ಅದನ್ನು ನಮ್ಮ ವಂಶದವನಾದ ದೇವರಾತನಿಗೆ ಕೊಟ್ಟರು. ಈಚೆಗೆ ನಾನು ಯಜ್ಞಾರ್ಥವಾಗಿ ಭೂಮಿಯನ್ನು ಶೋಧಿಸುತ್ತಿರುವಾಗ ಒಬ್ಬ ಕನ್ನಿಕೆಯು ನನ್ನ ನೇಗಿಲಿಗೆ ಸಿಕ್ಕಿದಳು. ನೇಗಿಲಿಗೆ ಸಿಕ್ಕಿದುದರಿಂದಲೇ ಆಕೆಗೆ ಸೀತೆಯೆಂದು ಹೆಸರಿಟ್ಟೆನು. ಹೀಗೆ ನೆಲದಲ್ಲಿ ಸಿಕ್ಕಿದ ಆ ಮುದ್ದುಮಗಳನ್ನು ನಾನು ಬಹಳಪ್ರೇಮದಿಂದ ಬಳೆಯಿಸಿರುವೆನು. ಅವಳು ನನಗೆ ಸಾಕುಮಗಳೆನಿಸಿಕೊಂಡಿರುವಳೇ ಹೊರತು ಔರಸಪುತ್ರಿಯಲ್ಲ. ಈ ಕನ್ಯೆಯು ಸ್ತ್ರೀಗರ್ಭದಲ್ಲಿ ಹುಟ್ಟಲಿಲ್ಲವಾಗಿ ಸಾಮಾನ್ಯರಾಜರಿಗೆ ಇವಳನ್ನು ಕೊಟ್ಟು ಮದುವೆಮಾಡುವುದುಚಿತವಲ್ಲವೆಂದು ತೋರಿತು.

ಆದುದರಿಂದಲೇ ಇವಳನ್ನು ವೀರ್ಯಶುಲ್ಕೆಯಾಗಿಟ್ಟು ಈ ಧನುಸ್ಸನ್ನು ಬಗ್ಗಿಸಬಲ್ಲ ರಾಜರಿಗೆ ಕೊಡಬೇಕೆಂದಿರುವೆನು. ಹೀಗೆ ನನಗೆ ಭೂಮಿಯಲ್ಲಿ ಸಿಕ್ಕಿದ ಈ ಕನ್ನಿಕೆಯು ನನ್ನಲ್ಲಿ ಬಳೆಯುತ್ತಿರುವುದನ್ನು ನೋಡಿ ಅನೇಕ ರಾಜರು ಬಂದು ಕೇಳಿದರು. ಅವರೆಲ್ಲರಿಗೂ ನಾನು ಈ ಶಿವಧನುಸ್ಸನ್ನು ಬಗ್ಗಿಸಿದ ಹೊರತು ಈಕೆಯನ್ನು ಕೊಡಲಾರೆನೆಂದು ಹೇಳುತ್ತಿರುವೆನು. ಅದಕ್ಕಾಗಿ ಅನೇಕ ರಾಜರು ನಾನಾ ದಿಕ್ಕುಗಳಿಂದ ಬಂದು ಸೇರಿ ಈ ಧನುಸ್ಸಿನ ಸಾರವನ್ನು ನೋಡಬೇಕೆಂದು ಅಪೇಕ್ಷಿಸಿದರು. ಅವರ ಕೋರಿಕೆಯಂತೆ ಈ ಧನುಸ್ಸನ್ನು ಅವರ ಮುಂದೆ ತಂದಿಟ್ಟೆನು. ಇದನ್ನು ಎತ್ತಿಹಿಡಿಯುವುದಕ್ಕಾಗಲಿ, ಅಥವಾ ಇದನ್ನು ಆಡಿಸುವುದಕ್ಕಾಗಲಿ ಇದುವರೆಗೆ ಒಬ್ಬರಾದರೂ ಸಮರ್ಥರಾಗಲಿಲ್ಲ. ಅವರ ವೀರ್‍ಯವೆಲ್ಲವೂ ವಿಫಲವಾದುದನ್ನು ನೋಡಿ ಅಲ್ಪ ವೀರ್‍ಯವುಳ್ಳವರೆಂದು ಅವರೆಲ್ಲರನ್ನೂ ನಾನು ತಿರಸ್ಕರಿಸಿಬಿಟ್ಟೆನು. ಹೀಗೆ ತಿರಸ್ಕಾರವುಂಟಾದುದಕ್ಕಾಗಿ ಆ ರಾಜರೆಲ್ಲರೂ ಒಂದುಗೂಡಿ ನನ್ನ ಮೇಲಿನ ಕೋಪದಿಂದ ಮಿಥಿಲೆಯನ್ನು ಮುತ್ತಿದರು. ಅವರು ಹೀಗೆ ಪಟ್ಟಣವನ್ನು ಮುತ್ತಿಗೆಹಾಕುವುದಕ್ಕೆ ಬೇರೊಂದು ಕಾರಣವೂ ಉಂಟು. ವೀರ್ಯ ಶುಲ್ಕದ ವ್ಯಾಜದಿಂದ ತಮ್ಮನ್ನು ನಾನು ತಿರಸ್ಕರಿಸಿದನೆಂಬ ದುರಭಿಪ್ರಾಯದಿಂದ ಅವರಿಗೆ ನನ್ನಲ್ಲಿ ಇಷ್ಟು ಕೋಪವುಂಟಾಯಿತು. ಹೀಗೆ ಒಂದು ಸಂವತ್ಸರ ಕಾಲದವರೆಗೂ ನನ್ನ ಪಟ್ಟಣವನ್ನು ಅವರು ಮುತ್ತಿಗೆ ಹಾಕಿದ್ದುದರಿಂದ ನನ್ನ ಸೈನ್ಯ ಸಾಮಗ್ರಿಗಳೆಲ್ಲವೂ ಕುಂದುತ್ತ ಬಂದುವು. ಸೈನ್ಯಗಳೆಲ್ಲವೂ ಸಾಯುತ್ತಿದ್ದುವು. ಆಗ ನಾನು ಬಹಳ ದುಃಖದಿಂದ ದೇವತೆಗಳನ್ನು ಕುರಿತು ತಪಸ್ಸುಮಾಡಿದೆನು. ಅವರು ನನ್ನ ತಪಸ್ಸಿಗೆ ಪ್ರೀತರಾಗಿ ಚತುರಂಗ ಸೈನ್ಯಗಳನ್ನು ಅನುಗ್ರಹಿಸಿಕೊಟ್ಟರು. ಆ ಸೈನ್ಯವು ಮುತ್ತಿಗೆಹಾಕಿದ್ದ ರಾಜರೆಲ್ಲರನ್ನೂ ಭಂಗಪಡಿಸಿ ದಿಕ್ಕುದಿಕ್ಕುಗಳಿಗೆ ಓಡಿಸಿತು. ಪಾಪಕರ್ಮವುಳ್ಳ ಆ ರಾಜರೆಲ್ಲರೂ ಹೀಗೆ ಭಂಗಹೊಂದಿ ನಿರ್ವೀರ್‍ಯರಾಗಿ, ಮುಂದಕ್ಕೆ ಬೇರೆ ಸೈನ್ಯಗಳನ್ನು ಸೇರಿಸಿಕೊಂಡು ಬಂದು ಯುದ್ಧಮಾಡುವುದಕ್ಕೂ ಹೆದರಿ ಮಂತ್ರಿಗಳೊಡಗೂಡಿ ತಮ್ಮ ತಮ್ಮ ದೇಶಗಳಿಗೆ ಹೊರಟುಹೋದರು. ಇದೇ ಆ ಧನುಸ್ಸಿನ ಪೂರ್ವ ವೃತ್ತಾಂತವು. ಈ ರಾಜಕುಮಾರರಿಗೂ ಆ ಧನುಸ್ಸನ್ನು ತೋರಿಸುವೆನು. ಒಂದುವೇಳೆ ಈ ರಾಮನು ಆ ಧನುಸ್ಸಿಗೆ ನಾಣೇರಿಸಬಲ್ಲವನಾದರೆ ಸೀತೆಯನ್ನು ಈತನಿಗೆ ಪಾಣಿಗ್ರಹಣಮಾಡಿಸುವೆನೆಂದು ಹೇಳಿದನು.

ಭಾರತದ ವೀರಮಹಿಳೆಯರು

ಭಾಗ ೧

ಕನ್ನಡದ ವೀರಮಹಿಳೆಯರು ೧

ಅಕ್ಕಾದೇವಿ—ಕ್ರಿ. ಶ. ೧೦೬೬

ರಣಭೈರವಿಯೆಂದು ಹೆಸರಾಂತ ಅಕ್ಕಾದೇವಿಯು ಕನ್ನಡ ಸಾಮ್ರಾಜ್ಯಮಂದಿರಕ್ಕೆ ಕೀರ್ತಿಯ ಕಲಶವನ್ನಿತ್ತ ಕಲ್ಯಾಣ ಚಾಲುಕ್ಯರ ವಂಶಜೆ. ಚೋಳಕುಲ ಪ್ರಳಯನೂ ಸಾಹಸ ಭೀಮನೂ ಆದ ಸತ್ಯಾಶ್ರಯ ಇರಿವ ಬೆಡಂಗನು ಈಕೆಯ ತಂದೆಯು. ಅನುವು ದೊರೆತರೆ ಕುಲ ಪುತ್ರಿಯೂ ಕುಲಪುತ್ರನಂತೆ ಅತುಲ ಪರಾಕ್ರಮವನ್ನು ಬೀರಿ ಕುಲದ್ವಯಗಳನ್ನು ಉದ್ಧರಿಸಬಲ್ಲಳೆಂಬ ಮಾತಿಗೆ ಸತ್ಯಾಶ್ರಯನ ಮಗಳಾದ ಅಕ್ಕಾದೇವಿಯೇ ನಿದರ್ಶನ. ಜಯಸಿಂಹನು ಸಿಂಹ ವಿಕ್ರಮನಾಗಿ ಗುಡುಗಿ ಗಗನವನ್ನು ನಡುಗಿಸಿದರೆ, ಅಕ್ಕಾದೇವಿಯು ರಣಭೈರವಿಯಾಗಿ ಭೇರಿಯನ್ನು ಮೊಳಗಿಸಿ ಅರಿಗಳ ತಂಡವನ್ನೂ ಪುಂಡರ ದಂಡನ್ನೂ ಅಡಗಿಸಿದಳು. ಕದಂಬಕುಲದ ಮಹಾಮಂಡಲೇಶ್ವರನಾದ ಚಟ್ಟರಸನು ಒಳ್ಳೇ ಶೂರನಾಗಿದ್ದನು. ಸಾಮ್ರಾಜ್ಯ ಸ್ಥಾಪನೆಯ ಕಾರ್ಯದಲ್ಲಿ ಚಾಲುಕ್ಯರಿಗೆ ಈತನಿಂದಾದ ಸಹಾಯ ಅಪಾರ. ಇದರ ಸ್ಮರಣೆಯೆಂದು ಚಾಲುಕ್ಯಕುವರಿ ಕದಂಬ ಕುಲವನ್ನು ಸೇರಿದಳು. ಚಟ್ಟರಸನ ಮಗನಾದ ಜಯಸಿಂಹನೊಡನೆ ಅಕ್ಕಾದೇವಿಯ ವಿವಾಹವಾಯಿತು. ಹುಟ್ಟಿದ ಮನೆಯ ಋಣವನ್ನು ತೀರಿಸಿದ ಹೆಣ್ಣು ಹೊಂದಿದ ಮನೆಯ ಅಂದವನ್ನು ಹೆಚ್ಚಿಸಿತು. ಭಾಗ್ಯಲಕ್ಷ್ಮಿಯಂತೆ ಬಂದ ಅಕ್ಕಾದೇವಿಯಿಂದ ಹಾನಗಲ್ಲಿನ ಕದಂಬರ ಪ್ರಭಾವವು ಬಾಲೇಂದುವಿನಂತೆ ಬೆಳೆಯಲಾರಂಭಿಸಿತು. ಚಟ್ಟರಸನು ನೆಟ್ಟ ಈ ನೂತನ ಶಾಖೆ ತನ್ನ ಪುರಾತನ ವೃಕ್ಷದ ಖ್ಯಾತಿಯನ್ನು ಕಾಯ್ದುಕೊಂಡು ಕೊನರೊಡೆಯಲಾರಂಭಿಸಿತು.

ತಂದೆಯ ತರುವಾಯ ಜಯಸಿಂಹನು ಪಟ್ಟವೇರಿದನು. ಪಟ್ಟದ ರಾಣಿಯಾದ ಅಕ್ಕಾದೇವಿಯು ರಾಜಕಾರ್ಯಗಳಲ್ಲಿ ಪ್ರಾಮುಖ್ಯವಾಗಿ

ಸಹಾಯಮಾಡತೊಡಗಿದಳು. ಅರ್ಧಾಂಗಿಯ ಪದವನ್ನು ಸಾರ್ಥಕ ಗೊಳಿಸಿದಳು. ಆದರೆ ದೈವದುರ್ವಿಲಾಸದಿಂದ ಕದಂಬ ಮಂಡಲಕ್ಕೆ ಈ ಭಾಗ್ಯ ಬಹುಕಾಲ ಲಭಿಸಲಿಲ್ಲ. ತಾರುಣ್ಯದ ಭರದಲ್ಲಿಯೇ ಜಯಸಿಂಹನು ಅಕಾಲ ಮರಣಕ್ಕೀಡಾದನು. ಕೋಡಿವರಿಯಲಿದ್ದ ಅಕ್ಕಾದೇವಿಯ ಸೌಭಾಗ್ಯ ಸಂತೆ ಹರಿಗಡಿಯಿತು. ಪತಿವಿಯೋಗದ ದಾರುಣವಾದ ದುಃಖ ದಿಂದ ಹೃದಯವು ತಳಮಳಿಸುತ್ತಿದ್ದರೂ ತನ್ನ ಮೇಲೆ ಬಿದ್ದ ಹಿರಿದಾದ ಹೊಣೆಗೆ ಹೆಗಲುಕೊಡಲು ಅದನ್ನೆಲ್ಲಾ ಮರೆತು ಅಕ್ಕಾದೇವಿಯು ಮುಂದಾಗಬೇಕಾಯಿತು. ಭೂಪತಿಯು ಗತಿಸಿದುದರಿಂದ ಭೂದೇವಿಗೆ ಬಂದ ಆಪತ್ತನ್ನು ಪರಿಹರಿಸಿ ಕದಂಬ ಕುಲದ ಕಪಿಧ್ವಜವನ್ನು ಕೆಳಗಿಳಿಯು ದಂತೆ ಕಾಪಾಡಲು ರಾಜಮಾತೆಯಾದ ಅವಳು ಸಂಚಾಲನ ಸೂತ್ರವನ್ನು ವಹಿಸಿದಳು. ಮಕ್ಕಳಾದರೋ ಇನ್ನೂ ಚಿಕ್ಕವರು. ಸಂಧಿಸಾಧಿಸಿ ಸಾಗಿಬರಲು ಹವಣಿಸುತ್ತಿದ್ದ ಹಗೆಗಳ ಉಪಟಳವೋ ಹೇಳತೀರದು. ಆದರೆ ಎದೆಗಾತಿಯಾದ ಅವಳು ಬೆದರದೆ ಎದುರು ಬಂದ ಪ್ರಸಂಗ ಗಳನ್ನು ಸಾವಧಾನತೆಯಿಂದ ಹೆದರಿಸಿ ರಾಜ್ಯ ವ್ಯವಸ್ಥೆಯನ್ನು ಕಾಯ್ದು ದಲ್ಲದೆ ಅದನ್ನು ವಿಸ್ತಾರಗೊಳಿಸಿದಳು. ರಾಜಗುರು ಮಂತ್ರಿ ನಾಯ ಕರು ಅವಳ ಆಡಳಿತವನ್ನು ಮನ್ನಿಸಿ ನೆರವನ್ನಿತ್ತರು. ಮಾಂಗಲ್ಯವನ್ನು ಕಳೆದುಕೊಂಡರೂ ಮೂಲೆಗುಂಪಾಗಿ ಕುಳ್ಳಿರದಿದ್ದರೆ ವಿಧವೆಯೂ ನಾಡಿನ ಮಂಗಳವನ್ನು ಸಾಧಿಸಬಲ್ಲಳೆಂಬುದಕ್ಕೆ ಅಕ್ಕಾದೇವಿಯರ ಉದಾಹರಣೆ ಪರ್ಯಾಪ್ತವಾಗಿದೆ. ಈ ಮಾತು ಕೇವಲ ರಾಜ ವಿಧವೆಯರಿಗೇ ಅಲ್ಲ. ರಾಜ್ಯದ ವಿಧವೆಯರಿಗೆಲ್ಲ ಸಲ್ಲುವುದು.

ಪತಿಯ ಮೃತ್ಯುವಿನಿಂದಾದ ಮರ್ಮಾಘಾತವನ್ನು ಸಹಿಸಿದ ಅಕ್ಕಾ ದೇವಿಯ ಮಾತೃಹೃದಯಕ್ಕೆ ಮತ್ತೊಂದು ಪೆಟ್ಟುಬಿದ್ದಿತು. ಮಗನ ಆಳಿಕೆಯನ್ನು ನೋಡಿ ಕೃತಾರ್ಥಳಾಗಬೇಕೆನ್ನುವಷ್ಟರಲ್ಲಿ ಅದಾಗಲೇ ಯೌವನದಲ್ಲಿ ಪದಾರ್ಪಣ ಮಾಡುತ್ತಲಿದ್ದ ಹಿರಿಯ ಮಗ ಮಯೂರ ವರ್ಮನ ಮೇಲೆ ಮೃತ್ಯುವು ಪಾಶವನ್ನೆಸೆದು ಆತನನ್ನು ಸೆಳೆದೊಯ್ದಿತು. ನಿರುಪಾಯಳಾದ ಅಕ್ಕಾದೇವಿಯು ಕಿರಿಯ ಮಗನಾದ ತೈಲ ಅಥವಾ ತೋಯಿಮದೇವನನ್ನು ಪಟ್ಟಕ್ಕೆಕೂರಿಸಿ ರಾಜ್ಯದಾಡಳಿತವನ್ನು ಎಂದಿನಂತೆ ಮುಂದೆ ಸಾಗಿಸಿದಳು. ಬದ್ಧ ವೈರಿಗಳಾದ ಚೋಳರ ಹಾವಳಿಯಿಂದ

ದೇಶವು ಹೊಯ್ದಾಡ ಹತ್ತಿತ್ತು. ದೂರದೃಷ್ಟಿಯುಳ್ಳ ಅಕ್ಕಾದೇವಿಯು ಪ್ರತ್ಯಕ್ಷ ಆಡಳಿತವನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಶಾಸನ ಪದ್ಧತಿಯನ್ನು ಭದ್ರಗೊಳಿಸಿದಳು. ಪುಂಡಾಟವನ್ನೆಬ್ಬಿಸಿದ ಗೋಕಾವಿಯ ಗೌಡನೊಡನೆ ಕಲಿತನದಿಂದ ಕಾದುವಾಗಿನ ಅವಳ ರೌದ್ರಾವತಾರ ರಣಭೈರವಿಯೆಂಬ ಅಭಿಧಾನಕ್ಕೆ ಅನುರೂಪವಾಗಿತ್ತು. “ ರಣ ಭೈರವಿ ಅಕ್ಕಾದೇವಿಯರ್‌ಗೆಲ್ಗೆ ” ಎಂಬ ವಿಜಯ ನಿನಾದವು ದಶದಿಕ್ಕುಗಳಲ್ಲಿ ವ್ಯಾಪಿಸಿತು. ಕರಾಲವಾದ ಆಕೆಯ ಅಸಿಧಾರೆಯು ಕಾಂತಿಯಿಂದ ಕನ್ನಡ ನಾಡಿನ ಶೌರ್ಯ ಕಳೆಗೊಂಡಿತು. ಹರಿದ ಕೆನ್ನೀರ ಕಾಲುವೆಯಿಂದ ಭೂದೇವಿಯು ವಕ್ಷಸ್ಥಲದಲ್ಲಿ ಕನ್ನಡತಿಯರ ಕಡುಗಲಿತನದ ಮೂರ್ತಿ ಒಡಮೂಡಿತು. ಚೆಂಡಾಡಿದ ರುಂಡಗಳ ಪ್ರಚಂಡ ಮಾಲೆಯಿಂದ ಕನ್ನಡ ರುದ್ರಪರಿರಂಜಿಸಿದನು.

ತೋಯಿಮದೇವನು ಪ್ರಾಯಕ್ಕೆ ಬಂದು ರಾಜ್ಯದಾಡಳಿತವನ್ನು ವಹಿಸಿದನು. ಆದರೂ ನಾಡು ಅಕ್ಕಾದೇವಿಯನ್ನು ಬಿಡುವು ತೆಗೆದುಕೊಳ್ಳಲು ಬಿಡಲಿಲ್ಲ. ಅವಳ ಧುರೀಣತ್ವವನ್ನು ಬಿಟ್ಟುಕೊಡಲು ಆಕೆಯ ಅನುಭವದಿಂದ ಅನುಪಮವಾದ ಲಾಭವನ್ನು ಪಡೆದ ಅದು ಮನಸ್ಸು ಮಾಡಲಿಲ್ಲ. ಕದಂಬ ಮಂಡಲದ ರಾಜಕೀಯ ದಿಗ್ದರ್ಶನ ಮಾಡುತ್ತ ಅವಳು ಮುಂದೆ ಕೆಲಕಾಲ ಬಾಳಿದಳು. ಬನವಾಸಿಯ ನಾಡು ಆಗ ಇವಳ ಆಧಿಪತ್ಯಕ್ಕೆ ಒಳಪಟ್ಟಿತ್ತು. ಅದ್ವಿತೀಯ ಶಕ್ತಿಶಾಲಿನಿಯಾದ ಇವಳು ಯುಕ್ತಿ ಕುಶಲೆಯೂ ಆಗಿದ್ದಳು. ಅವಳ ರಾಜಕಾರಣ ಪಟುತ್ವವು ಮಿಗಿಲಾಗಿತ್ತು. ಈಕೆಯ ಆಳಿಕೆಯನ್ನು “ ಸುಖಸಂಕಥಾವಿನೋದದ ಆಳಿಕೆ ” ಎಂದು ಕವಿಗಳು ಹೊರಳುತ್ತಿದ್ದರು. ಕಿಸುಕಾಡ ನಾಡನ್ನು (ಧಾರವಾಡ ಜಿಲ್ಲೆಯ ರೋಣತಾಲ್ಲೂಕಿನ ಪ್ರದೇಶ) ಆಳುತ್ತಿರುವಾಗ ಸೂಡಿಪಟ್ಟಣದಲ್ಲಿ ಒಂದು ಶಾಸನಘಟನೆಯನ್ನು ಪ್ರಚುರಗೊಳಿಸಿದುದಾಗಿ ತಿಳಿಯುತ್ತದೆ. ವೀರಪತ್ನಿಯಾಗಿ ಅಕ್ಕಾದೇವಿಯು ತಾಯ್ನಾಡಿಗೆ ಸಲ್ಲಿಸಿದ ಸೇವೆ ಕನ್ನಡಿಗರಿಗೆ ಹೆಮ್ಮೆಯದಾಗಿದೆ. ಕನ್ನಡಿತಿಯರಿಗೆ ಆದರ್ಶವಾಗಿದೆ. ಕನ್ನಡ ಸಂತಾನಕ್ಕೆ ಮಾರ್ಗದರ್ಶಿಯಾಗಿದೆ. ಇಂದಿಗೆ ಉಪಲಬ್ಧವಿರುವ ಕನ್ನಡ ನಾಡಿನ ಇತಿಹಾಸದಲ್ಲಿ ಉಲ್ಲೇಖಿತವಾಗಿರುವ ವೀರರಮಣಿಯರಲ್ಲಿ ಇವಳೇ ಮೊದಲಿನವಳು.

ಕಾರ್ನಾಡರಾಣಿ—ಕ್ರಿ. ಶ. ೧೬೨೩

ಸಾಹಸಿಯಾಗಿದ್ದರೂ ಸಹಕಾರಿಗಳ ಸಹಾಯವಿಲ್ಲದೆ ನಿಷ್ಫಲಜೀವಿಯಾದ ಓರ್ವ ಅಭಾಗಿನಿ ಈ ಕಾರ್ನಾಡರಾಣಿ. ಪತಿಯು ಮರಣ ಹೊಂದಲು ತನ್ನ ಚಿಕ್ಕ ಮಗುವಿನ ಸಂರಕ್ಷಣೆ ಮಾಡುತ್ತ ಕಾರ್ನಾಡ ರಾಣಿಯು ಗೇರುಸೊಪ್ಪೆಯ ರಾಜ್ಯವನ್ನು ಆಳುತ್ತಿದ್ದಳು. ಸ್ತ್ರೀಯ ಶಕ್ತಿಗಳೆಂದರೆ ಆಪದ್ಧನಗಳೇ ಸರಿ. ಜೀವನದಲ್ಲಿ ಒಮ್ಮೆಯೂ ವಿಕಾಸಕ್ಕೆ ಅವಕಾಶ ದೊರೆಯದೆ ಕುಂಠಿತವಾದ ಶಕ್ತಿ ವಲ್ಲರಿಗಳನ್ನು ಕಣ್ಣೀರನ್ನು ಹೊಯ್ದು ಹಸಿಮಾಡಿ ಬಿಸಿಯುಸುರುಗಳನ್ನು ಸೀಡಿ ಉಸಿರುತುಂಬಿ ದುಃಖದ ಕಿಚ್ಚಿನಿಂದ ಕಾಯಿಸ್ದು ಕಾವುಕೊಟ್ಟು ಕೊನರೊಡೆಸಿ ಕುಡಿಬಿಡಿಸ ಬೇಕು. ಆಪತ್ಕಾಲದಲ್ಲಿ ಇಂಥ ಪೋಷಣೆಯಿಂದ ಅನೆಷ್ಟು ಸಫಲತೆ ದೊರೆಯಬಹುದೆಂದು ಸಂದೇಹವಾಗುವುದು ಸಹಜವಾಗಿದೆ. ಆದರೆ ಅನುವು ಆಪತ್ತುಗಳಲ್ಲಿ ಪತಿಮರಣದಿಂದ ಗತಪ್ರಾಣರಾದರೂ ಕರ್ತವ್ಯವೇ ಉಸಿರಾಗಿ ಬಾಳುವ ಕನ್ನಡ ಮಹಿಳೆಯರು ತಾಯ್ನಾಡಿಗೆ ಸಲ್ಲಿಸಿದ ಸೇವೆ ಯಿಂದ ಸಂದೇಹ ನಿವಾರಣೆಯಾಗದಿರದು. ಆದರೂ ಮಾನವ ಜೀವನ ಜಯದೊರೆಯಲು ಸ್ವಸಾಮರ್ಥ್ಯವಲ್ಲದೆ ಸ್ವಜನರ ನೆನವೂ ಅನುಕೂಲ ಪರಿಸ್ಥಿತಿಯೂ ಅತ್ಯಗತ್ಯ. ಅದರಲ್ಲೂ ಅರಸು ಜೀವನ ! ಪ್ರಜೆಗಳೂ ಪ್ರಜಾ ಮುಖಂಡರೂ ಪ್ರಬಲರಾಗಿ ಬಲವನ್ನೀಯದೆ ಹೋದಲ್ಲಿ ಎಂಥ ಬಲಶಾಲಿ ಯಾದ ಅರಸನಾದರೂ ಪರಚಕ್ರಗಳನ್ನು ಪ್ರತಿಭಟಿಸಿ ನಿಂತು ವಿಜಯಿಯಾಗು ವುದು ಶಕ್ಯವೆ? ಸಾಮಾನ್ಯವಾಗಿ ಅಶಕ್ಯವೆಂದೇ ಹೇಳಬೇಕಾಗುತ್ತದೆ. ಅಂದ ಮೇಲೆ ಓರ್ವ ಅಬಲೆಯ ಪಾಡೇನು ? ಶೌರ್ಯ ಧೈರ್ಯಗಳೆಂಬ ಅಶ್ವದ್ವಯ ಗಳನ್ನು ಹೂಡಿ ಕಾರ್ನಾಡರಾಣಿ ರಾಜ್ಯರಥವನ್ನು ಪ್ರಗತಿಪಥದಲ್ಲಿ ಮುಂದೋಡಿಸಬಹುದಾಗಿತ್ತು. ಆದರೆ ಮುಂದೊಡ್ಡಿದ ನಾಯಕರ ಹೇಡಿ ತನವು ಅವಳ ಮಾರ್ಗವನ್ನು ತಡೆಯುವ ತಗ್ಗುಮುಗ್ಗಾಗಿ ಪರಿಣಮಿಸಿತು. ಅವಳ ಶಕ್ತಿ ಕುಂದಿತು. ಸ್ಫೂರ್ತಿ ಕುಂದಿತು. ತೇಜ ನಂದಿತು. ತಾಯ್ನಾಡಿನ ಸ್ವಾತಂತ್ರ್ಯ ಸಂಪತ್ತನ್ನು ಕಾಯಬೇಕೆಂದಿದ್ದ ಅವಳು ನಿರುಪಾಯಳಾಗಿ ನಾಡನ್ನು ಬಿಟ್ಟು ಕಾಡನ್ನು ಸೇರಬೇಕಾಯಿತು.

ವಿಜಯ ನಗರ ಸಾಮ್ರಾಜ್ಯದ ಪತನಾನಂತರ ತಲೆಯೆತ್ತಿದ ಸಾಮಂ ತಾಧಿಪತ್ಯಗಳಲ್ಲಿ ಕೆಳದಿಯೂ ಒಂದು. ಕರ್ನಾಟಕದ ಜೀವನದ ಮೂಲಾ

ಧಾರ ಮೂವತ್ತಾರು ವರ್ಷಗಳ ಹಿಂದೆಯೇ ವಾಸ್ತವವಾಗಿ ಶ್ರೀರಂಗ ಪಟ್ಟಣದಲ್ಲಿ ಸ್ಥಾಪಿತವಾಗಿದ್ದರೂ ಒಂದು ಕಾಲದಲ್ಲಿ ಕರ್ನಾಟಕದ ಪ್ರಾಮುಖ್ಯತೆಯೇ ಕೆಳದಿಯಲ್ಲಿ ನೆಲಸಿತು ಎನ್ನುವಂತಾಗಿತ್ತು. ಅಷ್ಟಿತ್ತು ಕೆಳದಿಯ ಪ್ರಭಾವ. ವೆಂಕಟಪ್ಪನಾಯಕನ ಶೂರತನ ಪೂರ್ಣಿಮೆಯ ಚಂದ್ರನಂತೆ ಪ್ರಭಾವ ವಾರಿಧಿ ವೃದ್ಧಿಗೆ ಕಾರಣವಾಯಿತು. ಸ್ವಾತಂತ್ರ್ಯ ವಹಿಸಿದ ವಿಜಯನಗರದ ಸಾಮಂತರಲ್ಲಿ ಈತನೇ ಮೊದಲನೆಯವನು. ಕೇದಿನಗಳಲ್ಲಿಯೇ ಈತನ ದಂಡಯಾತ್ರೆ ಮೊದಲಾಯಿತು. ನೆರೆಹೊರೆಯ ಸ್ವಾತಂತ್ರ್ಯ ಆ ಸ್ವಾತಂತ್ರ್ಯ ವೀರನ ಮಹತ್ವಾಕಾಂಕ್ಷೆಗೆ ಈಡಾಯಿತು. ಶಕ್ತಿಯ ಕೇಂದ್ರೀಕರಣಕ್ಕಾಗಿ ಸಾಮಂತರಾಜ್ಯ ಸಾಮ್ರಾಜ್ಯಗಳು ಆವಶ್ಯಕವಾಗಿದ್ದರೂ ಸಣ್ಣಪುಟ್ಟ ಆಡಳಿತಗಳನ್ನು ಅವುಗಳ ಸ್ವಾಧೀನಕ್ಕೆ ಬಿಟ್ಟು ಸಮಾನತೆಯಿಂದ ನಡೆಸಿಕೊಂಡು ಸೌಹಾರ್ದತೆಯ ಸಾಮ್ರಾಜ್ಯಗಳನ್ನು ಸ್ಥಾಪಿಸಿದರಾಗದೇ? ಬಲಪ್ರಯೋಗದಿಂದ ಅವನ್ನು ವಶಪಡಿಸಿಕೊಳ್ಳುವುದು ಅವಶ್ಯವಾಗಿದೆಯೇ? ಕಂಟಕಪ್ರಾಯವೆಂದು ತಿಳಿದು ಅವುಗಳನ್ನು ಕಿತ್ತೆಸೆದು ನಿಷ್ಕಂಟಕವಾಗಬೇಕಾದುದು ಅನಿವಾರ್ಯವಾಗಿದೆಯೆ?-ಪ್ರಶ್ನೆಮಾಲಿಕೆಯನ್ನೇ ಪವಣಿಸಬಹುದು. ಇಲ್ಲಿ ಅದು ಅಪ್ರಸ್ತುತವಾದುದರಿಂದ ಅಸ್ತು. ವೆಂಕಟಪ್ಪನಾಯಕನು ನಡೆಸಿದ ಹಾವಳಿಯಿಂದ ಹರಣಗೆಟ್ಟರೂ ರಾಣಿಯು ತನ್ನಂಥ ಅಸಹಾಯ ಅಬಲೆಯಮೇಲೆ ಆ ಬಲವಂತನ ದೃಷ್ಟಿ ಬೀಳಲಿಕ್ಕಿಲ್ಲವೆಂದು ಆಗಾಗ ಸಮಾಧಾನಮಾಡಿಕೊಳ್ಳುತ್ತಿದ್ದಳು. ಆದರೆ ದುರ್ದೈವದಿಂದ ಆಸೆ ನಿರಾಸೆಯಾಯಿತು. ವಿಧಿಯ ವಿಕಟ ಪ್ರಹಾರದಂತೆ ವೆಂಕಟಪ್ಪನಾಯಕನ ಅಧಿಕಾರ ದರ್ಪಗಳಿಂದ ಕೂಡಿದ ಓಲೆಯು ರಾಣಿಯ ಕೈಸೇರಿತು. ಕಣ್ಣಿಗೆ ಕತ್ತಲೆ ಕವಿಯಿತು. ನಾಡನ್ನು ತನಗೊಪ್ಪಿಸಿ ಒಡೆತನವನ್ನು ಒಡಂಬಡಬೇಕೆಂದು ಕಟ್ಟಪ್ಪಣೆಮಾಡಿದ ನಾಯಕನ ಓಲೆಯಿಂದ ರಾಣಿಯು ಕಂಗೆಟ್ಟಳಾದರೂ ಕೈಕಾಲುಗೆಡಲಿಲ್ಲ. ವೆಂಕಟಪ್ಪನಾಯಕನ ಶೌರ್ಯವನ್ನು ಸನ್ಮಾನಿಸಲು ಅವಳಿಗೆ ಆತಂಕವಿಲ್ಲದಿದ್ದರೂ ಅಂಜಿ ಸ್ವಾಭಿಮಾನವನ್ನು ತೊರೆದು ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದು ಆ ಮಾನಿನಿಗೆ ಒಪ್ಪಿಗೆಯಾಗಲಿಲ್ಲ. ಆದ್ದರಿಂದ ಸಮರಸನ್ನಾಹಕ್ಕಾಗಿ ಅವಳು ತನ್ನ ಅಧಿಕಾರಿಗಳನ್ನೂ ನಾಯಕರನ್ನೂ ಬರಮಾಡಿಕೊಂಡಳು. ಆದರೆ ಅವರಿಗೆ ಹೇಳಿದ ಹಿತವಚನಗಳೆಲ್ಲವೂ ಗೋರ್ಕಲ್ಲ ಮೇಲೆ ಕರೆದ ನೀರಿನಂತೆ

ನಿರುಪಯೋಗಿಯಾದುವು. ಅವಳಿಗೆ ಬೆಂಬಲವೀಯಬೇಕೆಂಬ ಹಂಬಲವು ಒಬ್ಬರ ಹೃದಯದಲ್ಲಿಯೂ ಹುಟ್ಟಲಿಲ್ಲ. ಅವರ ಹೇಡಿತನಕ್ಕೆ ಕಿಡಿ ಕಿಡಿ ಯಾದಳು. ಆದರೆ ಏಕಾಕಿಯಾದ ಅವಳು ಏನನ್ನೂ ಮಾಡಲು ಸಾಧ್ಯ ವಿರಲಿಲ್ಲ. ಅನ್ಯ ಉಪಾಯಗಳನ್ನು ಕಾಣದೆ ಅವಳು ವೆಂಕಟಪ್ಪನಾಯಕನ ಇಚ್ಛೆಯಂತೆ ವೈಗಾವಲಿನ ಭಟರನ್ನು ಹಿಂದೆಬಿಟ್ಟು ಅವನನ್ನು ಕಾಣಲು ಹೋದಳು. ನಾಯಕನು ಆಕೆಯನ್ನು ಮರ್ಯಾದೆಯಿಂದ ಬರಮಾಡಿ ಕೊಂಡನು. ಸಂರಕ್ಷಣೆಯ ಆಶ್ವಾಸನವನ್ನಿತ್ತು ವಿಶ್ವಾಸವನ್ನು ವ್ಯಕ್ತ ಪಡಿಸಿದನು. ಆದರೆ ಅದು ಕೇವಲ ಬಹಿರಂಗದ ಮಾತು. ಅಂತರಂಗ ದಲ್ಲಿಯ ಅವಿಶ್ವಾಸ ಮಾತ್ರ ಅಳಿಯಲಿಲ್ಲ. ನಾಯಕನು ರಾಣಿಯ ಕೋಟೆ ಯನ್ನು ಸಡಲಿಸಲು ಸೈನಿಕರಿಗೆ ಆಜ್ಞೆಯನ್ನಿತ್ತನು. ಒಪ್ಪಂದದ ಚಿನ್ನ ಒಡನಾಡಿತನದ ಒಪ್ಪು ಪಡೆಯದೆ ಕಪ್ಪಿಟ್ಟುಹೋಯಿತು. ನಾಯಕನ ಆಶ್ವಾಸನ ಮಣ್ಣುಗೂಡಿತು. ಮಾತು ಕೃತಿಗಳಲ್ಲಿಯ ವೈಷಮ್ಯ ರಾಣಿಗೆ ವಿಷಸಮಾನವಾಯಿತು. ಅವಳು ಸ್ತಬ್ಧಳಾಗಿ ನಾಯಕನು ಕೈಗೊಂಡ ವಿಧ್ವಂಸನ ಕಾರ್ಯವನ್ನು ಅವಲೋಕಿಸತೊಡಗಿದಳು. ಅರಿವೇ ಮರೆ ಯಾಯಿತೇನೊ !

ಆದರೆ ಅವಳ ಸಹನಶೀಲತೆ ಬಹುಕಾಲ ಉಳಿಯಲಿಲ್ಲ. ತನ್ನ ಪ್ರೀತಿಯ ದುರ್ಗವು ಕಣ್ಣೆದುರಿನಲ್ಲಿಯೇ ಹಾಳಾಗುತ್ತಿರುವುದನ್ನು ನೋಡು ವುದು ಅವಳಿಗೆ ಅಸಹ್ಯವಾಯಿತು. ಕೋಟೆಯನ್ನು ಉಳಿಸಲು ಕೊನೆಯ ಪ್ರಯತ್ನ ಮಾಡಿದಳು. ತನ್ನಿಂದ ಅನೇಕ ಸಾರಿ ಉಪಕೃತರಾದ ಪಶ್ಚಿಮ ಕರಾವಳಿಯ ಪೋರ್ಚುಗೀಸರ ನೆರವನ್ನು ಕೋರಿದಳು. ಮುಳುಗುವವನು ಹುಲ್ಲುಕಡ್ಡಿಯನ್ನು ಹಿಡಿಯುವಂತೆ ತನ್ನವರು ತನಗಾಗದಿರುವಾಗ ಅನ್ಯ ರಾಗುವರೆ? ಆಕಾಶವೇ ಕಳಚಿಬಿದ್ದಿರುವಾಗ ಕೊಡೆಯು ಆಸರವಾಗ ಬಹುದೆ? ಉಪಕಾರದ ಋಣವು ಉಪೇಕ್ಷೆಯಿಂದ ತೀರಿತು. ಆಸೆಯಿಂದ ಮುಂದೋಡಿದ ಮನಸ್ಸು ನಿರಾಸೆಯಿಂದ ಹಿಂದೋಡಿತು. ತನ್ನ ಮನೆ ಯನ್ನು ಪರಕೀಯರು ಪಾದಾಕ್ರಾಂತ ಮಾಡುವ ನೋಟವನ್ನು ನೋಡ ಲಾರದೆ ಅವಳು ತನ್ನ ಮಗುವಿನೊಂದಿಗೆ ಕಾಡಿಗೆ ನಡೆದಳು. ಇತಿಹಾ ಸವು ವೆಂಕಟಪ್ಪನಾಯಕನ ಶೌರ್ಯವನ್ನು ಹಾಡಿ ಹರಸುತ್ತದೆ. ಆದರೆ ಆ ಶೌರ್ಯಕ್ಕೆ ಬಲಿಯಾಗಿ ಮನೆ ಮಾರುಗಳನ್ನು ತ್ಯಜಿಸಿ ವನವನ್ನು ಸೇರಿದ

ಅಬಲೆಗಾಗಿ ಅವರ ಅಂತಃಕರಣದಲ್ಲಿ ಮರುಕವಿದೆಯೆ ? ಕೊರಗಿ ಕೊರಗಿ ಕರಗಿ ಹೋದವಳಿಗಾಗಿ ಅವರ ಹೃದಯದಲ್ಲಿ ಕರುಣೆ ಇದೆಯೇ ? ರಾಜ್ಯ ಲಕ್ಷ್ಮಿಯಾಗಿ ಸೌಖ್ಯದಲ್ಲಿ ನಲಿಯುತ್ತಿದ್ದವಳು ದುಃಖದಿಂದ ರಾಜ್ಯವೆಲ್ಲ ಅಲೆದಾಡಿ ಅನಂತಾತ್ಮನಲ್ಲಿ ವಿಲೀನವಾದವಳಿಗಾಗಿ ಅವರ ಕರುಳಿನಲ್ಲಿ ಕಳವಳವಿದೆಯೇ ? ನಿಷ್ಕಾಮಕರ್ಮಿಯಾಗಿರುವ ಮಹಿಳಾ ಜೀವನವು ಅತ್ತ ಲಕ್ಷ್ಯ ಕೊಡದಿದ್ದರೂ ಶ್ರದ್ಧಾಂಜಲಿಯನ್ನರ್ಪಿಸುವುದು ಅವರ ಕರ್ತವ್ಯವಾಗಿರಲಿಲ್ಲವೇ ?

ಬೆಳವಡಿಯ ಮಲ್ಲಮ್ಮಾಜಿ—ಕ್ರಿ. ಶ. ೧೬೭೮

ಪರಾಕ್ರಮವೇ ಮೂರ್ತಿವೆತ್ತು ವೈರಿದೋರಿದಂತಿದ್ದ ಸ್ವಾದಿಯ ಮಧುಲಿಂಗನಾಯಕನ ನೆಚ್ಚಿನ ಕುವರಿ ಮಲ್ಲಮ್ಮಾಜಿ ಬೆಳವಡಿಯ ಈಶಪ್ರಭು ರಾಯನ ಮೆಚ್ಚಿನ ಮಹಾರಾಣಿ. ಅನುರೂಪ ದಾಂಪತ್ಯ ಮಿಲನವು ವಿಧಿಯ ಹಣೆಯ ಬರಹದಲ್ಲಿಯೇ ಇಲ್ಲವೆನ್ನುವ ಸಾಮಾನ್ಯ ವಿಧಾನಕ್ಕೆ ಈ ದಂಪತಿಗಳ ಉದಾಹರಣೆಯು ಅಪವಾದವಾಗಿತ್ತು. ಬೆಳೆಯ ಸಿರಿಯು ಮೊಳೆಯಲ್ಲಿ ಎಂಬಂತೆ ಚಿಕ್ಕಂದಿನಲ್ಲಿಯೇ ಅಸಾಧಾರಣವಾದ ಧೈರ್ಯವೂ ಅನುಪಮವಾದ ಶೌರ್ಯವೂ ವಿಲಕ್ಷಣವಾದ ಬುದ್ಧಿಯೂ ಇವಳಲ್ಲಿ ಕಂಡುಬರುತ್ತಿದ್ದುವು. ನಾಯಕನು ನಿಯೋಜಿಸಿದ ಗುರುಗಳ ಸಮ್ಮುಖದಲ್ಲಿ ಅಣ್ಣನಾದ ಸದಾಶಿವನಾಯಕನೊಡನೆ ಈಕೆಯ ವಿದ್ಯಾಭ್ಯಾಸಂಗಕ್ಕೆ ಮೊದಲಾಯಿತು. ಇವರೊಡನೆ ರಾಜ್ಯದಲ್ಲಿಯ ಮನ್ನೆ ಮಾನೆಯರ ಮಕ್ಕಳೂ ಇದ್ದರು. ಮಲ್ಲಮ್ಮಾಜಿಯ ಅಪೂರ್ವ ಪ್ರತಿಭೆಯ ಮುಂದೆ ಒಮ್ಮೊಮ್ಮೆ ಸಹಪಾಟಿಗಳೂ ತಲೆ ಬಗ್ಗಿಸಬೇಕಾಗುತ್ತಿತ್ತು. ವಿದ್ಯಾರ್ಥಿಗಳಲ್ಲಿ ವಿದ್ಯಾಧ್ಯಯನದಲ್ಲಿ ಅವಳೇ ಮುಂದಾಗಿದ್ದಳು. ಶಿಕ್ಷಣವನ್ನು ಪೂರೈಸಿ ಮಲ್ಲಮ್ಮಾಜಿಯು ಕ್ಷಾತ್ರ ವಿದ್ಯೆಗಳಲ್ಲಿಯೂ ಕನ್ನಡ ಸಂಸ್ಕೃತ ಮೊದಲಾದ ಭಾಷೆಗಳಲ್ಲಿಯೂ ಪಾರಂಗತಳಾಗಿ ಪಾಂಡಿತ್ಯವನ್ನು ಸಂಪಾದಿಸಿ ಪ್ರೌಢ ವಯಸ್ಕಳಾದಮೇಲೆ ನಾಯಕನು ಸ್ವಯಂವರವನ್ನು ಸಾರಿದನು. ಸ್ವಯಂವರಕ್ಕೆ ಸೇರಿದ ರಾಜಕುಮಾರರಲ್ಲಿ ಬೆಳವಡಿಯ ಈಶಪ್ರಭುರಾಯನು ಜಯಶಾಲಿಯಾದನು. ಮಲ್ಲಮ್ಮಾಜಿಯ ವಿವಾಹ ಮಾಲೆಯು ಈಶಪ್ರಭು ಮಹಾರಾಯನ ಕೊರಳನ್ನಲಂಕರಿಸಿತು.

ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದೆಂಬಂತೆ ಬೆಳವಡಿಯು ಒಂದು ಸಣ್ಣ ಸಂಸ್ಥಾನವಾದರೂ ಯಾರಿಗೂ ತಲೆಬಾಗದೆ ತನ್ನ ಸತ್ವವನ್ನು ಕಾಯ್ದುಕೊಂಡಿತ್ತು. ಬೆಳವಡಿಯ ಪಟ್ಟ ಧ್ವಜವು ಸ್ವತಂತ್ರತೆಯಿಂದ ತಲೆಯೆತ್ತಿ ಮೆರೆಯುತ್ತಿದ್ದಿತು. ಆದರೆ ಆಕಾಶದಲ್ಲಿ ಉನ್ನತವಾಗಿ ಹಾರಾಡುತ್ತಿದ್ದ ಆ ಧ್ವಜವನ್ನು ಹಾಗೆಯೇ ಹಾರಿಸಿಬಿಡುವುದೋ ಎನ್ನುವಂತೆ ಭೀಕರವಾದ ಬಿರುಗಾಳಿಯೊಂದು ಬೀಸಿತು. ದಕ್ಷಿಣದ ವಿಜಯ ಯಾತ್ರೆಯಿಂದ ಮರಳುವಾಗ ಶಿವಾಜಿಯು ತನ್ನ ದಂಡಿನೊಡನೆ ಬೆಳವಡಿಯ ಬಳಿ ಬೀಡುಬಿಟ್ಟನು. ಈ ಸುದ್ದಿಯನ್ನು ತಿಳಿದು ಹಿಂದೂ ಜನರ ಶಿಷ್ಟಾಚಾರದ ಪದ್ಧತಿಯಂತೆ ಅತಿಥಿ ಸತ್ಕಾರದ ವ್ಯವಸ್ಥೆಗಾಗಿ ಈಶ್ವರ ಪ್ರಭುರಾಯನು ಏರ್ಪಾಡು ಮಾಡಿಸುವುದರಲ್ಲಿದ್ದನು. ಅಷ್ಟರಲ್ಲಿಯೇ ಒಂದು ಉದ್ಘಟನ ನಡೆದು ಆತಿಥ್ಯದ ಬದಲು ಯುದ್ಧದ ಸಿದ್ಧತೆಗಳು ನಡೆಯಬೇಕಾಯಿತು. ಶಿವಾಜಿಯ ದಂಡಿನವರು ಹಾಲಿನ ಸಲುವಾಗಿ ಬೆಳವಡಿಯ ಗ್ರಾಮದ ಸುತ್ತುಮುತ್ತಲಿನ ಆಕಳುಗಳನ್ನು ಹೊಡೆದುಕೊಂಡು ಹೋದರು. ಪ್ರಭುವಿನ ಅಪ್ಪಣೆಯಂತೆ ಅವುಗಳನ್ನು ಬಿಡಿಸಿಕೊಂಡು ಬರಲು ಹೋದ ಸೇನಾನಾಯಕನಿಗೆ ಮನ್ನಣೆ ದೊರೆಯಲಿಲ್ಲ. ಆಗ ಮಹಾರಾಣಿ ಮಲ್ಲಮ್ಮಾಜಿಯು ಸ್ವತಃ ತನ್ನ ಸ್ತ್ರೀ ಸೇನೆಯನ್ನು ತೆಗೆದುಕೊಂಡು ಹೋಗಿ ಮರಾಟರನ್ನು ಸೋಲಿಸಿ ವಿಜಯಶಾಲಿಯಾಗಿ ಮರಳಿ ಗ್ರಾಮ ಗ್ರಾಮಗಳಲ್ಲಿ ವಿಜಯ ಧ್ವಜವನ್ನು ಮೆರೆಯಿಸಿದಳು. ಕೆಚ್ಚೆದೆಯ ಕನ್ನಡತಿಯರ ಕಡುಗಲಿತನವನ್ನು ಕಂಡು ಶಿವಾಜಿ ಮಹಾರಾಜನು ಬೆರಗಾಗಿಹೋದನು. ಶಿವಾಜಿಯ ಈ ಅಪಜಯವೇ ಮುಂದೆ ಬೆಳವಡಿಯ ಕೋಟೆಗೆ ಮುತ್ತಿಗೆಬೀಳಲು ಮೂಲವಾಯಿತು.

ರಣಧೀರ ಪಟ್ಟವಂಶದ ರಾಜನಾದ ಈಶ್ವರಪ್ರಭುರಾಯನು ಕೋಟೆಯ ಬಾಗಿಲುಗಳನ್ನು ಇಕ್ಕಿಸಿ ಸಮರಕ್ಕೆ ಸಿದ್ಧನಾದನು. ಶಿವಾಜಿಯ ಸೇನೆ ಸುತ್ತುವರಿಯಿತು. ಬೆಳವಡಿಯ ಕೋಟೆಗೆ ಮುತ್ತಿಗೆ ಬಿದ್ದಿತು. ಇದೇನು ಮಹಾಕಾರ್ಯವೆಂದು ತಿಳಿದು ಅಲಕ್ಷತನದಿಂದಿದ್ದ ಶಿವಾಜಿಯ ಎಣಿಕೆ ತಪ್ಪಾಯಿತು. ಎಷ್ಟು ದಿನಗಳಾದರೂ ಕೋಟೆಯು ಕೈವಶವಾಗುವ ಲಕ್ಷಣಗಳು ಕಾಣಿಸಲಿಲ್ಲ. ಸ್ವಾತಂತ್ರ್ಯಪ್ರಿಯರ ಶೌರ್ಯದ ಮುಂದೆ ವಿಜಯೋನ್ಮಾದವು ಮುಗ್ಗುರಿಸಿತು. ಕೊನೆಗೆ ಕಪಟದಿಂದ ಒಳ

ನುಗ್ಗಬೇಕಾಯಿತು. ಆಗ ಬೆಳವಡಿಯವರಿಗೂ ಮರಾಟರಿಗೂ ಕೈಗೆ ಕೈ ಹತ್ತಿ ಘನ ಘೋರ ಕದನವಾಗಿ ಪ್ರಭು ಈಶಪ್ರಭುವಿಗೆ ಪ್ರಾಣಾಂತಿಕ ಘಾಯಗಳಾಗಲು ಮೃತ್ಯುಶಯ್ಯೆಯಲ್ಲೊರಗಿದನು. ಒಡೆಯನಿಲ್ಲದ ಸೈನ್ಯ ಪಡೆ ಕಂಗೆಟ್ಟು ಕಂಡತ್ತ ಓಡತೊಡಗಿತು. ಈ ವಾರ್ತೆ ತಿಳಿದೊಡನೆ ಮಲ್ಲಮ್ಮಾಜಿಯು ತನ್ನ ಚಿಕ್ಕ ಮಗುವನ್ನು ರಕ್ಷಕರಿಗೊಪ್ಪಿಸಿ ವೀರಾವೇಶದಿಂದ ರಣಾಂಗಣದತ್ತ ಧಾವಿಸಿದಳು. ತೊಟ್ಟಿಲು ತೂಗುತ್ತಿದ್ದ ಮಾತೆಯ ಕೈ ಖಡ್ಗವನ್ನು ತೊಟ್ಟಿತು. ರಾಣಿಯ ಆಗಮನದಿಂದ ಬೆಳವಡಿಯ ಭಟರಲ್ಲಿ ಮತ್ತೆ ಸ್ಫೂರ್ತಿಯು ಸಂಚಾರವಾಯಿತು. ಕಾಲ್ದೆಗೆದಿದ್ದ ಕನ್ನಡ ವೀರರು ಮತ್ತೆ ಕಾಲೂರಿದರು. ತುಸುಹೊತ್ತಿನಲ್ಲಿಯೇ ಶತ್ರುಗಳನ್ನು ಸದೆಬಡಿದು ಹೊಡೆದೋಡಿಸಿ ಕೋಟೆಯ ಬಾಗಿಲುಗಳನ್ನು ಭದ್ರಗೊಳಿಸಿ ಪತಿಯ ಬಳಿ ಸೇರಿದಳು. ರಾಣಿಯ ವಿಜಯದಿಂದ ವೀರಸ್ವರ್ಗಾರೋಹಣ ಮಾಡುವುದರಲ್ಲಿದ್ದ ರಾಯನಿಗೆ ಪರಮಾನಂದವಾಯಿತು. ರಾಜ್ಯದ ಸ್ವಾತಂತ್ರ್ಯವನ್ನು ಕಾಪಾಡುವಂತೆ ಹೇಳಿ ಹರಸಿ ಹರನಾಮಸ್ಮರಣೆಯೊಂದಿಗೆ ಪಯಣ ಬೆಳೆಸಿದನು. ಕನ್ನಡಿತಿಯ ಪರಾಕ್ರಮವನ್ನು ಮತ್ತೊಮ್ಮೆ ಶಿವಾಜಿಮಹಾರಾಜನು ಮನಗಂಡನು.

ಶಿವಾಜಿಗೆ ದಿಗ್ಭ್ರಮೆಯಾಯಿತು. ಹೆಣ್ಣಿಗೆ ಸೋತು ಸುಮ್ಮನಿರುವುದೆ? ಅದೂ ಬೇರಾದ ಕರ್ನಾಟಕದ ಒಂದು ಸಣ್ಣ ಸಂಸ್ಥಾನದಲ್ಲಿ! ಎಂದಿಗೂ ಇಲ್ಲ. ಮುತ್ತಿಗೆಯ ಕೆಲಸವು ಮತ್ತೆ ಮುಂದುವರಿಯಿತು. ಇಪ್ಪತ್ತೇಳು ದಿನಗಳು ಕಳೆದುವು. ಸಾಮಗ್ರಿಗಳ ಸಂಗ್ರಹವು ತೀರಿ ಹೋಯಿತು. ಕೋಟೆಯನ್ನು ಉಳಿಸಿಕೊಳ್ಳುವದು ಇನ್ನು ಸಾಧ್ಯವಿಲ್ಲವೆಂದು ಕಂಡುಬರಲು ಆ ವೀರರಮಣಿಯು ಕೋಟೆಯ ಬಾಗಿಲುಗಳನ್ನು ತೆಗೆದು ತನ್ನ ಅನುಯಾಯಿಗಳೊಡನೆ ಹೊರಬಂದು ಶಿವಾಜಿಯ ದಂಡಿನ ಮೇಲೆ ಬಿದ್ದು ಎದುರು ಬಂದವರನ್ನು ಸದೆಬಡಿದು ಮುನ್ನುಗ್ಗಿದಳು. ಸೋಲೆಂಬುದನ್ನು ಅರಿಯದ ಆ ಗೆಲವಿನ ರಾಣಿಯ ಧೈರ್ಯ ಗೆಲವು ಅಸಾಧ್ಯವೆಂದು ತೋರಿದಾಗಲೂ ಕುಗ್ಗಲಿಲ್ಲ. ಅದು ತನ್ನ ಆಳದಿಂದ ಹೊರಹೊಮ್ಮಿತು. ಮರಾಟರು ಮಲ್ಲಮ್ಮಾಜಿಯ ನಿಜ ರೂಪವನ್ನು ಕಂಡರು. ಅಂದು ಆಕೆಯ ವಿಲಕ್ಷಣವಾದ ವಿರಾಟ ಶೌರ್ಯವು ಸೂರೆಯಾಗಿ ಹೋಯಿತು. ಅಪಾರವಾದ ಸೇನಾಸಾಗರದೆದುರು ಈ ಹಿಡಿ ಜನರು

ಈಡೆ? ಹೊತ್ತು ಹೋದಂತೆ ಮಲ್ಲಮ್ಮಾಜಿಯ ಅನುಯಾಯಿಗಳು ಕಡಮೆ ಯಾಗತೊಡಗಿ ಕಡೆಗೆ ಕೇವಲ ಬೆಂಗಾವಲಿನವರು ಮಾತ್ರ ಉಳಿದರು. ಶಿವಾಜಿಯ ದಳವಾಯಿಯಾದ ದಾದಾಜಿಯು ಕುದುರೆಯ ಹಿಂಗಾಲನ್ನು ಕಡಿದು ಹಾಕಲು ರಾಣಿ ಇನ್ನಷ್ಟು ಅಸಹಾಯಳಾದಳು. ಆಗಲಾಕೂಡ ಪಾದಚಾರಿಣಿಯಾಗಿಯೇ ಅವಳು ಕಾದಲನುವಾದಳು. ಅದರೆ ಅಷ್ಟ ರಲ್ಲಿಯೇ ಅವಳಿಗೆ ತೀವ್ರಗಾಯಗಳಾಗಿ ಮೂರ್ಛಿತಳಾದಳು. ಆ ಅವಸ್ಥೆ ಯಲ್ಲಿಯೇ ದಾದಾಜಿಯು ಆಕೆಯನ್ನು ಸೆರೆ ಹಿಡಿದು ಡೋಲಿಯಲ್ಲಿ ಹಾಕಿ ಕೊಂಡು ಶಿವಾಜಿಯ ಡೇರೆಯತ್ತ ನಡೆದನು.

ಆ ವೀರ ರಾಣಿಯೊಡನೆ ಶಿವಾಜಿಯು ಉಚಿತ ಮರ್ಯಾದೆಯಿಂದ ನಡೆದುಕೊಂಡು ಮನ್ನಿಸಿದನು. ಉಭಯತ್ರರಲ್ಲಿಯೂ ಸನ್ಮಾನ್ಯ ಒಪ್ಪಂದ ವಾಯಿತು. ಬೆಳವಡಿಯ ಪ್ರಾಂತದ ಪ್ರತಿಯೊಂದು ಗ್ರಾಮದಲ್ಲಿಯೂ ಈ ಯುದ್ಧದ ಸ್ಮಾರಕವಾಗಿ ನಟ್ಟಿರುವ ವೀರಗಲ್ಲುಗಳನ್ನು ಈಗಲೂ ಕಾಣ ಬಹುದು. ಮುಂದೆ ತನ್ನ ಕಿರುಗೂಸಿನ ಪರವಾಗಿ ಮಲ್ಲಮ್ಮಾಜಿಯು ರಾಜ್ಯ ಸೂತ್ರಗಳನ್ನು ವಹಿಸಿ ಧರ್ಮದಿಂದ ಆಳಿ ಧರ್ಮರಾಜ್ಯವನ್ನು ಸ್ಥಾಪಿಸಿದಳು. ಸ್ತ್ರೀ ಸಮಾಜದ ಐಕ್ಯೋನ್ನತಿಗಾಗಿಯೂ ತನ್ನ ಆಳಿಕೆಯಲ್ಲಿ ಹಲವು ವಿಧದ ಕಾರ್ಯಗಳನ್ನು ಕೈಗೊಂಡಿದ್ದಳು. ಬೆಳವಡಿ ಯಲ್ಲಿ ಕಾರ್ತಿಕ ಶುದ್ಧ ಪಂಚಮಿಯ ದಿವಸ ನಡೆಯುತ್ತಿದ್ದ ಗೌರೀಮಹೋ ತ್ಸವವು ಅವುಗಳಲ್ಲೊಂದಾಗಿದ್ದಿತು. ಮಲ್ಲಮ್ಮಾಜಿಯು ಯಾತ್ರೆಗೆ ಹೋದ ಸಂಧಿಯನ್ನು ಸಾಧಿಸಿ ಬೆಳವಡಿಯ ಮೇಲೆ ಏರಿಬಂದಿದ್ದ ಸವಣೂರ ನವಾಬನಿಗೆ ಸೋಲುಂಟುಮಾಡಿ ಬುದ್ಧಿ ಕಲಿಸಿದಳು. ಮಂಗಳಗಟ್ಟಿಯ ಹತ್ತಿರ ಸಂಪೂರ್ಣವಾಗಿ ಸೋತು ನವಾಬನು ಪಲಾಯನಮಾಡಿದನು. ಇಂಥ ಅದ್ವಿತೀಯ ತೇಜ ಬೆರಿತಿದ್ದುದರಿಂದ ಕನ್ನಡ ರಾಜ್ಯಲಕ್ಷ್ಮಿಯ ಓಜಸ್ಸು ಅಂದು ಅಷ್ಟೊಂದು ಪ್ರಭಾವಶಾಲಿಯಾಗಿತ್ತು.

ಕೆಳದಿಯ ಚೆನ್ನಮ್ಮಾಜಿ—ಕ್ರಿ. ಶ. ೧೬೯೭.

ಕೆಳದಿಯ ಇಳಿಗಾಲದಲ್ಲಿಯೂ ತನ್ನ ಅಪ್ರತಿಹತವಾದ ಶೌರ್ಯ, ಅಪ್ರತಿಮ ಧೈರ್ಯ, ಅನುಪಮವಾದ ರಾಜನೀತಿ ಕೌಶಲ್ಯಗಳಿಂದ ಅದ ಕ್ಕೊಂದು ಹೊಸ ಕಳೆಯನ್ನು ಕೊಟ್ಟ ರಾಣಿ ಚೆನ್ನಮ್ಮಾಜಿ—ಓರ್ವ

ಕರ್ತವ್ಯಭ್ರಷ್ಟ ಪತಿಯ ಹಿಂದೂ ಸತಿಯು. ಪತಿತನಾಗಿ ಪತನದ ಕಂದರ ದಲ್ಲಿ ಬಿದ್ದು ತನ್ನೊಡನೆ ತನ್ನವರ ಸರ್ವಸ್ವವನ್ನೂ ಸೂರೆಗೈದರೂ ಏಕನಿಷ್ಠೆ ಯಿಂದ ತನ್ನ ಧರ್ಮ ಕಾಪಾಡಿಕೊಂಡು ಆತನ ಉನ್ನತಿಗಾಗಿ ಹೆಣಗು ವುದು ಹಿಂದೂ ಸತಿಯರ ವೈಶಿಷ್ಟ್ಯ. ಕೆಳದಿಯ ರಾಜ್ಯದ ಸಂಪತ್ಸಮೃದ್ಧಿ ಯನ್ನು ಬೆಳೆಸಿ "ಶಿವಪ್ಪನಾಯಕನ ಶಿಸ್ತು" ಎಂಬ ಭೂಕಂದಾಯ ಪದ್ಧತಿ ಯನ್ನು ಪ್ರಚಾರಕ್ಕೆ ತಂದು ತನ್ನ ಹೆಸರನ್ನು ಸ್ಥಿರವಾಗಿ ಉಳಿಸಿಕೊಂಡು ಹೋದ ಶಿವಪ್ಪನಾಯಕನ ತರುವಾಯ ಆ ರಾಜ್ಯದ ಪ್ರಭಾವವು ಕುಂದ ತೊಡಗಿತು. ಮೊದಲನೆಯ ಸೋಮಶೇಖರನಾಯಕನ ಆಳಿಕೆಯಲ್ಲಂತೂ ಗೊಂದಲವೇ ಎದ್ದುಹೋಯಿತು. ದುಷ್ಟರ ಸಂಗತಿಗೆ ಬಿದ್ದು ನೀತಿ ಬಾಹಿರನಾದ ಅವನಿಂದ ರಾಜ್ಯದಾಡಳಿತವು ಸುವ್ಯವಸ್ಥಿತವಾಗಿ ನಡೆಯ ದಂತಾಯಿತು. ಸುತ್ತಲೂ ವೈರಿಗಳ ಒತ್ತಡವಾದರೋ ಹೆಚ್ಚಾಗಿತ್ತು. ಇದೇ ಸಂಧಿಯನ್ನು ಸಾಧಿಸಿ ದೇಶದ್ರೋಹಿಗಳು ಮೋಸದಿಂದ ವಿಜಾ ಪುರದ ದಂಡನ್ನು ಬರಮಾಡಿಕೊಂಡರು. ದಂಡನಾಯಕನಾದ ಜಿನ್ನೋ ಪಂತನು ದ್ರೋಹಿಗಳ ಕಪಟ ತಂತ್ರಕ್ಕೆ ಮನಸೋತು ಸೋಮಶೇಖರ ನಾಯಕನನ್ನು ಕೊಲ್ಲಿಸಿಬಿಟ್ಟನು. ನಾಲ್ಕೂ ಕಡೆಗೆ ಹಾಹಾಕಾರವೆದ್ದಿತು. ವಾತಾವರಣವು ಪ್ರಕ್ಷುಬ್ಧವಾಯಿತು. ಐಕ್ಯದ ಕಟ್ಟು ಸಡಿಲಿಹೋಯಿತು. ಸಾಲದ್ದಕ್ಕೆ ವೈರಿಯು ಎದೆಯ ಮೇಲೆ ಏರಿ ಕೂತಿದ್ದಾನೆ. ಕೆಳದಿಯ ರಾಜ್ಯನೌಕೆಯು ಮುಳುಗ ತೊಡಗಿತು. ಅದಕ್ಕೆ ಗತಿ ಯಾರು ?

ಪತಿಯ ಮರಣದಿಂದ ಗತಿಗೆಟ್ಟು ಗಂಡಾಂತರಕ್ಕೊಳಗಾಗಿದ್ದ ಕೆಳದಿಯ ರಾಜ್ಯನೌಕೆಯನ್ನು ಮುಳುಗದಂತೆ ಕಾಯಲು ಮುಂದುವರಿ ದವಳು, ಧೀರೆ ಚೆನ್ನಮ್ಮಾಜಿ. ವೈಧವ್ಯದ ದುಃಖವನ್ನು ಬದಿಗೊತ್ತಿ ವಿಪತ್ತು ಗಳಿಗೆ ತಲೆಗೊಟ್ಟು ರಾಜ್ಯಸೂತ್ರಗಳನ್ನು ಕೈಯಲ್ಲಿ ತೆಗೆದುಕೊಂಡು ಉಗ್ರ ವಾದ ದಂಡೋಪಾಯಗಳಿಂದ ಅರಾಜಕತೆಯ ಬಂಡನ್ನು ಮುರಿದು ಹಾಕಿದಳು. ಕುಹಕಿಗಳ ಮಾತಿಗೆ ಕಿವಿಗೊಟ್ಟು ಅನ್ಯಾಯವಾಗಿ ತನ್ನ ಪತಿ ಯನ್ನು ಕೊಲ್ಲಿಸಿದ ಜಿನ್ನೋಪಂತನನ್ನು ಸದೆದಿಕ್ಕಿ ತಕ್ಕ ಶಾಸನವನ್ನು ಮಾಡಿದಳು. ಮೈಸೂರಿನ ಚಿಕ್ಕದೇವರಾಜ ಒಡೆಯರೊಡನೆ ಒಪ್ಪಂದ ಮಾಡಿಕೊಂಡು ಒಣ ಹಗೆತನವನ್ನು ತೆಗೆದುಹಾಕಿದಳು. ಚೆನ್ನಮ್ಮಾಜಿಯ ಚಟುವಟಿಕೆಗಳ ಮುಂದೆ ತಮ್ಮ ಆಟ ನಡೆಯದಿರಲು ಅಸಂತುಷ್ಟರಾದ

ವಿರೋಧಿಗಳು ಮತ್ತೊಂದು ಕುತಂತ್ರವನ್ನು ಹೂಡಿದರು. ಅರಮನೆಯ ಸಂಬಂಧಿಕನಾದ ಬೇರೊಬ್ಬನನ್ನು ಮುಂದೆ ಹಾಚಿ ಚೆನ್ನಮ್ಮಾಜಿಯ ಕೈಯಿಂದ ಆಡಳಿತವನ್ನು ತಪ್ಪಿಸಲು ಹಂಚಿಕೆಯನ್ನು ಹಾಕಿದರು. ಆದರೆ ಚತುರಳಾದ ಚೆನ್ನಮ್ಮಾಜಿಯು ಈ ಕುಚೋದ್ಯಗಳನ್ನೆಲ್ಲ ಹೇಳ ಹೆಸರಿಲ್ಲದಂತೆ ನಿರ್ನಾಮಮಾಡಿದಳು. ಕೆಳದಿಯ ರಾಜ್ಯಕ್ಕೆ ಚೆನ್ನಮ್ಮಾಜಿಯು ಸಮರ್ಥಳಾದ ರಾಣಿಯೆಂದು ಸರ್ವರೂ ಮನಗಂಡರು. ೧೬೭೭ರಲ್ಲಿ ಭುವನಗಿರಿಯ ಅರಮನೆಯಲ್ಲಿ ಅವಳಿಗೆ ಪಟ್ಟವಾಯಿತು. ಸೋಮಶೇಖರ ನಾಯಕನ ಪಟ್ಟದ ರಾಣಿ ಪಟ್ಟವೇರಿ ಅವನಿಂದ ಕಳೆದುಹೋಗಿದ್ದ ಕೆಳದಿಯ ಮಾನವನ್ನು ಮರಳಿ ಗಳಿಸಿಕೊಟ್ಟಳು. ಶಿವಪ್ಪನಾಯಕನ ತರುವಾಯ ಕೆಳದಿಯ ಇತಿಹಾಸದಲ್ಲಿ ಗಮನಾರ್ಹವಾದ ಸಂಗತಿಯೆಂದರೆ ಚೆನ್ನಮ್ಮಾಜಿಯ ಆಳಿಕೆಯೊಂದೆ.

ಸತ್ಯವಂತರ ಸತ್ವಪರೀಕ್ಷೆ, ಅವರ ದಿನಚರಿಯ ಮಾತು. ಸದ್ಧರ್ಮದ ಒರೆಗಲ್ಲಿಗೆ ಸರಿಬರಬೇಕಾದರೆ ಅವರ ಜೀವನ ಸ್ವರ್ಣಧರ್ಮ, ಸಂಕಟಗಳ ಧುಳ್ಳುರಿಯ ದಾಹವನ್ನು ಸಹಿಸಿಕೊಂಡು ಸುಪವಿತ್ರ ಕುಂದಣದಂತೆ ಪರಿಶುದ್ಧವಾಗಬೇಕು. ಕೆಳದಿಯ ರಾಜ್ಯವನ್ನು ಸುಸ್ಥಿರಗೊಳಿಸಿ ಸ್ವಸ್ಥಳಾಗುವ ಹೊತ್ತಿಗೆ ಚೆನ್ನಮ್ಮಾಜಿಯ ಎದುರು ಮತ್ತೊಂದು ವಿಷಮ ಸಮಸ್ಯೆ ಕಾಣಿಸಿಕೊಂಡಿತು. ಶಿವಾಜಿಯ ಎರಡನೆಯ ಮಗನಾದ ರಾಜಾರಾಮನು ಮೊಗಲರಿಂದ ತಲೆತಪ್ಪಿಸಿಕೊಂಡು ದಕ್ಷಿಣದತ್ತ ಓಡಿಹೋಗುತ್ತಿರುವಾಗ ದಾರಿಯಲ್ಲಿ ಕೆಳದಿಯ ಮರೆಹೊಕ್ಕನು. ರಾಜಾರಾಮನಿಗೆ ಆಶ್ರಯ ಕೊಡುವುದೆಂದರೆ ರಾಜ್ಯಕ್ಕೆ ಗಂಡಾಂತರವನ್ನು ಕೊಂಡುಕೊಂಡಂತೆಯೇ ಆಗುತ್ತಿತ್ತು. ಹಿಂದೂ ಸಾಮ್ರಾಜ್ಯದ ರಾಜಕುಮಾರನಿಗೆ ಆಶ್ರಯ ಕೊಡದಿರುವುದೆಂದರೆ ಹಿಂದೂ ಧರ್ಮ ಸಂರಕ್ಷಣೆಗಾಗಿ ಕರ್ನಾಟಕವು ಮಾಡುತ್ತ ಬಂದ ಬಲಿದಾನಕ್ಕೆ ಹೊಲ್ಲದು. ಶರಣು ಬಂದವನಿಗೆ ಮರಣವಿಲ್ಲೆಂಬ ಭಾರತೀಯ ಅಭಯ ವಾಕ್ಯಕ್ಕೆ ಸಲ್ಲದ ಮಾತು. ಒಂದೆಡೆ ತ್ಯಾಗ, ಸಮಾಧಿ, ಸ್ವರ್ಗ ; ಇನ್ನೊಂದೆಡೆ ಭೋಗ, ಸೌಖ್ಯ, ನರಕ. ರಾಣಿಯು ಬಹಳ ಹೊತ್ತು ಕರ್ತವ್ಯ ಮೋಹಗಳ ನಡುವೆ ಹೊಯ್ದಾಡಬೇಕಾಗಿರಲಿಲ್ಲ. ಮಂತ್ರಿ ಪರಿವಾರದೊಡನೆ ವಿಚಾರ ವಿನಿಮಯ ಮಾಡಿ ರಾಜಾರಾಮನಿಗೆ ಅಭಯವಿತ್ತು ಆತನನ್ನು ಸುರಕ್ಷಿತವಾಗಿ

ಆತನಿಚ್ಛೆಯಂತೆ ಚಂದಿಯ ಗಡಕ್ಕೆ ತಲುಪಿಸಿದಳು. ಆತನನ್ನು ಬೆನ್ನಟ್ಟಿ ಬಂದ ರಣಮುಸ್ತಖಾನನ ರಣಕೌಶಲ್ಯ ವ್ಯರ್ಥವಾಯಿತು. ಔರಂಗಜೇಬನ ಕ್ರೋಧ ಕಾಳ್ಗಿಚ್ಚಿನಂತೆ ಕೆಳದಿಯನ್ನು ಸುತ್ತುವರಿಯಿತು.

ಕೆಳದಿಯ ರಾಜ್ಯವನ್ನು ಧ್ವಂಸಮಾಡಲು ಔರಂಗಜೇಬನ ಅಪ್ಪಣೆಯಂತೆ ಅಜಮತಾರನು ಅಸಂಖ್ಯ ದಂಡಿನೊಡನೆ ಬಂದು ನುಗ್ಗಿದನು. ರಾಣಿಯ ಶೌರ್ಯ ಸಾಹಸಗಳು ಸುಸಜ್ಜಿತಸೇನೆಯ ಸ್ವರೂಪದಲ್ಲಿ ಅವನನ್ನು ಎದುರಿಸಿದುವು. ಬೀದರಿನಲ್ಲಿ ಭೀಕರವಾದ ಕದನ ನಡೆಯಿತು. ಕೆಳದಿಯವರ ಪ್ರತಿಭಟನೆಯ ಮುಂದೆ ಮೊಗಲರ ಪರಾಕ್ರಮ ನಡೆಯಲಿಲ್ಲ. ಅಬ್ಬರದಿಂದ ಉಬ್ಬಿ ಬಂದವರ ಮಬ್ಬು ಇಳಿದುಹೋಯಿತು. ತಾಯ್ನಾಡಿಗಾಗಿ ತಮ್ಮ ಪ್ರಾಣಗಳನ್ನೀಡಾಡಲು ಸಿದ್ಧರಾಗಿದ್ದ ರಾಣಿ ಮತ್ತು ಆಕೆಯ ರಾಜಪರಿವಾರದವರನ್ನು ಪರಾಭವಗೊಳಿಸಿ ಕೆಳದಿಯ ರಾಜ್ಯವನ್ನು ಪಾದಾಕ್ರಾಂತ ಮಾಡುವುದು ಬಾದಶಹನ ಕಡೆಯವರಿಗೆ ಸಾಧ್ಯವಾಗಲಿಲ್ಲ. ಸೋತು ಸಂಧಿಯನ್ನು ಮಾಡಿಕೊಂಡು ಬಂದ ದಾರಿಯನ್ನು ಹಿಡಿಯುವ ಹೊತ್ತಿಗೆ ಸಾಕು ಸಾಕಾಗಿ ಹೋಯಿತು. ಮುಂದೆ ಕೆಳದಿಯ ರಾಜ್ಯವು ಚೆನ್ನಮ್ಮಾಜಿಯ ಪರಿಪಾಲನೆಯಲ್ಲಿ ಸುರಕ್ಷಿತವಾಗಿ ಬಾಳಿತು. ಆಕೆಯ ಪರಾಕ್ರಮ ; ರಾಜನೀತಿ, ಚಾತುರ್ಯ ಇವುಗಳ ಕೀರ್ತಿ ಎಲ್ಲೆಲ್ಲಿಯೂ ಹರಡಿತು. ರಾಣಿಯ ಪ್ರತಿಭೆಯಿಂದ ರಾಜ್ಯದ ಜೀವನ ಜ್ಯೋತಿ ಆರುವ ಮುನ್ನ ಮತ್ತೊಮ್ಮೆ ಪ್ರದೀಪ್ತವಾಯಿತು. ಬಸಪ್ಪನಾಯಕನನ್ನು ದತ್ತು ತೆಗೆದುಕೊಂಡು ಚೆನ್ನಮ್ಮಾಜಿಯು ಒಳ್ಳೆಯ ವೈಭವದಿಂದ ರಾಜ್ಯವಾಳಿ ಮಾತೃವಾತ್ಸಲ್ಯದಿಂದ ಪ್ರಜಾಜನರನ್ನು ಪೋಷಿಸಿದಳು. ಅನೇಕ ಧರ್ಮ ಕಾರ್ಯಗಳನ್ನು ನಡೆಯಿಸಿದಳು. ಕೆಳದಿಯ ಪುಣ್ಯ ಪರಿಸಮಾಪ್ತವಾದಂತೆ ೧೬೯೭ರಲ್ಲಿ ಚೆನ್ನಮ್ಮಾಜಿಯು ಕೀರ್ತಿಶೇಷಳಾದಳು. ಜೀವಾತ್ಮವು ಪರಮಾತ್ಮನೊಡನೆ ಬೆರೆಯಿತು : ಸಾಗರದೊಡನೆ ಹನಿ ಬೆರತಂತೆ !

ಓಬಿ—ಕ್ರಿ. ಶ. ೧೭೬೧.

ಹೆಣ್ಣಿನ ಅಧಿಕಾರ ಕೇವಲ ಅಡುಗೆಯ ಮನೆಯ ಗಡಿಗೆ ಮಡಕೆಗಳ ವರೆಗೆ ಅಲ್ಲವೇ ? ಅವುಗಳ ವ್ಯಾವಹಾರಿಕ ಉಪಯೋಗದ ಮಟ್ಟಿಗೆ ಮಾತ್ರ ಅವಳ ಬುದ್ಧಿಕುಶಲತೆಯಲ್ಲವೇ ? ಅವುಗಳನ್ನು ರಕ್ಷಿಸುವುದೇ ಅವಳ

ಪರಮಾವಧಿಯ ಪರಾಕ್ರಮವಲ್ಲವೇ ? ಇದಲ್ಲದೆ ಇನ್ನೂ ಹಲವು ಬಗೆಯಾ
ಅವಳ ಕಾರ್ಯಕ್ಷೇತ್ರವನ್ನು ಕಡೆಗಣಿಸಿ ತನ್ನ ಪೌರುಷವನ್ನು ಮೆರೆಯಿಸುತ್ತ
ತಿರುಗುವ ಅಹಂಭಾವವೃತ್ತಿ ಭಾರತೀಯ ಸಮಾಜದಲ್ಲಿ ಬೇರೂರಿ ಬೆ
ಯುತ್ತ ಬಂದಿದೆ. ಆದರೆ ನಿಜವಾದ ಗುಣಗಳು ಬೆಳಕಿಗೆ ಬರಲು ರಾ
ಸಭೆಯೇನು ? ಸಾಧಾರಣ ಮನೆಯೇನು ? ಪಾಕ ಕಲೆಯೇನು ? ಪಾಂಡಿತ
ಲೀಲೆಯೇನು ? ಓಬಿ ಒಬ್ಬ ಸಾಮಾನ್ಯ ಹೆಂಗಸು. ಕಾವಲುಕಟ್ಟೆಯ
ಕಹಳೆಯವನ ಹೆಂಡತಿ. ಕತ್ತಿವರಸೆಗಳನ್ನು ಕಲಿತವಳಲ್ಲ. ಹುಸಿಗಾಳ
ಗಳನ್ನು ಆಡಿದವಳಲ್ಲ. ಓದುಬರೆಹಗಳನ್ನು ಬಲ್ಲವಳಲ್ಲ. ರಾಜಸಭೆಯನ
ಪ್ರವೇಶಿಸಿದವಳಲ್ಲ. ದೇಶಾಭಿಮಾನದ ಮಾತುಗಳನ್ನು ಬಾಯಿ ತುಂ
ಹೇಳಿದವಳಲ್ಲ. ಅಂಥವಳು ಕೂಡ ತನ್ನ ಗುಡಿಸಲಿನಲ್ಲಿದ್ದ ಒಂದು ಒನ
ಯನ್ನು ಎಳೆದುಕೊಂಡು ಚಿತ್ರದುರ್ಗದ ಕೋಟೆಯನ್ನು ಶತ್ರುಗಳಿಂ
ರಕ್ಷಿಸಿದಳೆಂಬ ಸಂಗತಿ ಮೇಲಿನ ಪ್ರತಿಪಾದನೆಗೆ ನಿದರ್ಶನವಾಗಿದೆ. ಅವಳ
ಹೆಣ್ಣಾದರೇನು ? ಅವಳು ಬೀರಿದ ಪರಾಕ್ರಮ, ತೋರಿದ ಶೌಯ
ಹೆಣ್ಣಲ್ಲ. ಸಮಾಜದ ಪತಿತ ಮನೋವೃತ್ತಿಯ ಪ್ರಕಾರ ಹೀನವಲ್ಲ. ಆ
ರೇನು ? ಗುಣವುಳ್ಳ ವ್ಯಕ್ತಿಗಳಿದ್ದರೂ ನಾಡಿನಲ್ಲಿ ಗುಣಗೌರವದ ಭಾವ
ತಲೆದೋರದೆ ಅವರ ಸರ್ವತೋಮುಖವಾದ ಅಭಿವೃದ್ಧಿಯಾಗಲಾರದು

ವಿಜಯನಗರದ ಸಾಮ್ರಾಜ್ಯ ಸೂರ್ಯನು ಅಸ್ತಾಚಲವನ್ನೈದಿ
ಮೇಲೆ ಸಂಧ್ಯಾಪ್ರಭೆಯಂತೆ ಚಿತ್ರವಿಚಿತ್ರವಾಗಿ ರಂಜಿಸಿದ ರಾಜವರ್ಗಗಳ
ಚಿತ್ರದುರ್ಗವೊಂದು. ಅದೊಂದು ಭದ್ರವಾದ ಪಾಳೆಯಗಾರ ಸಂಸ್ಥಾನವ
ಕನ್ನಡ ರಾಜ್ಯೇಶ್ವರಿಯ ಆ ಅಚ್ಚುಮೆಚ್ಚಿನ ದುರ್ಗಕ್ಕೆ ಪಾಳೆಯಗಾರರಾ
ದ್ದವರು ಕಚ್ಚೆದೆಯ ಕಡುಗಲಿಗಳಾದ ನಾಯಕರು. ಅವರು ಬಹು ಬಲಿಷ
ರಾಗಿದ್ದು ಅತ್ತ ಮರಾಟರನ್ನೂ ಇತ್ತ ಮುಸಲ್ಮಾನರನ್ನೂ ಪ್ರತಿಭಟಿಸುತ್ತ
ಶೌರ್ಯದಿಂದ ಬಹುಕಾಲ ಆಡಳಿತವನ್ನು ಸಾಗಿಸಿದರು. ಕನ್ನಡ ನಾಡಿ
ಇಳೆಗಾಲದಲ್ಲಿ ತಲೆಯೆತ್ತಿದ ಸಂಸ್ಥಾನದ ಆಡಳಿತ ಅದೆಷ್ಟು ನೆಮ್ಮದಿಯಿಂ
ಸಾಗಬಹುದು ? ಮೈಸೂರು ರಾಜಮನೆತನದಲ್ಲಿ ಅನಾಯಕತ್ವದ ಫ
ವಾಗಿ ಪ್ರಬಲಿಸಿದ ಹೈದರನು ತನ್ನ ಮಹತ್ವಾಕಾಂಕ್ಷೆಗೆ ಅಡ್ಡಬರುತ್ತಿ
ಈ ದುರ್ಗ ಸಂಸ್ಥಾನವನ್ನು ನಾಶಮಾಡಲು ಅನೇಕ ಬಗೆಯಾ
ಹೆಣಗಾಡಿದನು. ಕೆಲಕಾಲದವರೆಗೆ ಆತನ ಆಟವು ಸಾಗಲಿಲ್ಲವಾದರು

ಆವನು ತನ್ನ ಪ್ರಯತ್ನವನ್ನು ಬಿಡದೆ ಕಡೆಗೆ ಒಂದು ಪ್ರಚಂಡ ಸೈನ್ಯದೊಂದಿಗೆ ಬಂದು ಕೋಟೆಗೆ ಮುತ್ತಿಗೆಹಾಕಿದನು. ಕೋಟೆಯಾದರೂ ಅಭೇದ್ಯವಾಗಿತ್ತು. ಹೈದರನು ಎಷ್ಟು ಸಾಹಸಪಟ್ಟರೂ ಅದು ಬಗ್ಗಲೊಲ್ಲದು. ಆತನ ಮಹತ್ವಾಕಾಂಕ್ಷೆ ಮನಸ್ಸಿನ ಮಂಡಿಗೆಯಾಗುವ ಲಕ್ಷಣಗಳು ಕಾಣಿಸತೊಡಗಿದುವು. ಬೇಹುಗಾರರು ಸಂದಿಗೊಂದಿಗಳನ್ನು ಶೋಧಿಸಲಾರಂಭಿಸಿದರು. ಶೌರ್ಯದ ಕಟ್ಟು ಸಡಿಲಿ ಕಳ್ಳಮಾರ್ಗಾನ್ವೇಷಣೆಗೆ ಮೊದಲಾಯಿತು.

ಕೋಟೆಯ ಬೆಟ್ಟದ ಅರ್ಧಹಾದಿಗೆ ಒಂದು ಕಾವಲು ಕಟ್ಟೆಯಿದ್ದಿತು. ಇಲ್ಲಿಯೇ ಓಬಿಯ ಗಂಡ ಕಾವಲಿರುತ್ತಿದ್ದನು. ಶತ್ರುಗಳ ಸುಳಿವು ತಿಳಿದೊಡನೆಯೇ ಕಹಳೆಯೂದಿ ಎಚ್ಚರಿಕೆಯನ್ನು ಕೊಡುವುದು ಅವನ ಕೆಲಸವಾಗಿತ್ತು. ಬೇಹುಗಾರರು ತಮ್ಮ ನಿತ್ಯದ ನಿರೀಕ್ಷಣೆಯಲ್ಲಿ ತೊಡಗಿದಾಗ ಒಂದಾ ದಿನ ಒಬ್ಬ ಮೊಸರಿನವಳು ಬಂಡೆಯ ಬಿರುಕಿನೊಳಗಿಂದ ಒಳಗೆ ಹೋಗುವುದನ್ನು ಕಂಡು ಕೃತಕಾರ್ಯರಾದರು. ಮುಂದೇನು ತಡ? ಹೈದರನ ದಂಡಾಳುಗಳು ಆ ಹಾದಿಯಿಂದ ಮುನ್ನುಗ್ಗಲು ಪ್ರವೃತ್ತರಾದರು. ಅದೊಂದು ಇಕ್ಕಟ್ಟಿನ ಹಾದಿಯಾಗಿದ್ದು ಒಬ್ಬ ಮನುಷ್ಯನು ಮಲಗಿಕೊಂಡು ಹೊಟ್ಟೆ ಹೊಸೆಯುತ್ತ ಹೋಗಬೇಕಾಗುತ್ತಿತ್ತು. ಈ ಹಾದಿಯ ಆಚೆಯ ಒಳಮುಖದ ಬಳಿಯಲ್ಲಿಯೇ ಒಂದು ಸಿಹಿ ನೀರಿನ ಕೊಳವಿತ್ತು. ಈ ಕಳ್ಳಗಂಡಿಯಲ್ಲಿ ಸಾವಕಾಶವಾಗಿ ಸೈನಿಕರು ಪ್ರವೇಶಿಸುತ್ತಿರುವ ಹೊತ್ತಿಗೆ ಯೋಗವಶದಿಂದ ಕಾವಲುಗಾರನು ಅಲ್ಲಿರಲಿಲ್ಲ. ಊಟಕ್ಕಾಗಿ ತನ್ನ ಗುಡಿಸಲಿಗೆ ಹೋಗಿದ್ದನು. ಓಬಿ ಆತನಿಗೆ ಉಣ ಬಡಿಸಿ ನೀರಿಗೆಂದು ಕೊಳಕ್ಕೆ ಹೋದಳು. ಅಷ್ಟರಲ್ಲಿ ಅವಳಿಗೆ ಏನೋ ಸಪ್ಪಳವಾದಂತಾಗಿ ಕಿವಿಗೊಟ್ಟು ಆಲಿಸಿದ ಮೇಲೆ ಅದು ಹಗೆಗಳ ಸುಳಿಹು ಎಂಬುದನ್ನು ಅವಳು ಅರಿತುಕೊಂಡಳು. ಒಂದು ಕ್ಷಣದ ವಿಲಂಬವೂ ತನ್ನ ಪತಿಯ ಜೀವಕ್ಕೆ ಮತ್ತು ಚಿತ್ರದುರ್ಗದ ಭವಿಷ್ಯಕ್ಕೆ ಘಾತುಕವಾದುದೆಂಬುದನ್ನು ಮನಗಂಡ ಆ ಮಾನಿನಿಯು ಗುಡಿಸಲಿಗೆ ಓಡಿ ಒನಕೆಯನ್ನು ತೆಗೆದುಕೊಂಡು ಆ ಬಂಡೆಯ ಮಾರ್ಗದ ಬಾಯಿಗೆ ಬಂದು ಸಜ್ಜಾಗಿ ನಿಂತಳು.

ಆ ಕಂಡಿಯೊಳಗಿಂದ ದಂಡಾಳುವಿನ ತಲೆ ಹೊರಚಾಚುವುದೊಂದೇ ತಡ, ಓಬಿಯು ಒನಕೆಯ ಏಟಿನಿಂದ ವಧಿಸಿ ಈಚೆ ಎಳೆದುಹಾಕುತ್ತಿದ್ದಳು.

ಅವಳ ಈ ಖಂಡನ ಕಾರ್ಯವು ನಿರಂತರಗತಿಯಿಂದ ಒಂದೇ ಸಮನೆ ಸಾಗಿತ್ತು. ಪ್ರಳಯಕಾಲದ ಕಾಲಭೈರವಿಯ ರೂಪದಾಳಿದ ಓಬಿಯ ಒನಕೆಯ ಪ್ರಹಾರಕ್ಕೆ ಹೈದರನ ಇನ್ನೂರು ಮುನ್ನೂರು ಸೈನಿಕರ ತಲೆ ದಂಡವಾಯಿತು. ಆ ರೌದ್ರಾವೇಶದ ಭರದಲ್ಲಿ ಅವಳಿಗೆ ಮೈಮೇಲೆ ಪ್ರಜ್ಞೆಯೇ ಉಳಿಯಲಿಲ್ಲ. ಇತ್ತ ನೀರಿಗೆಂದು ಹೋದ ಹೆಂಡತಿಯ ದಾರಿ ಕಾಯ್ದು ಬೇಸತ್ತ ಕಾವಲುಗಾರನು ಹುಡುಕುತ್ತ ಕಟ್ಟೆಯ ಬಳಿ ಬಂದನು. ಹೆಂಡತಿಯು ಒಂದೇ ಸಮನೆ ಮಾಡುತ್ತಲಿದ್ದ ಈ ಸೈನಿಕ ಸಂಹಾರ ಚಿತ್ರವನ್ನು ಕಂಡು ಬೆರಗಾದನು. ತನ್ನ ಶೌರ್ಯ ಸಮಾಧಿಯಲ್ಲಿಯೇ ಮೈಮರೆತ್ತಿದ್ದ ಓಬಿ ಅವನನ್ನು ಗುರುತಿಸಲಿಲ್ಲ. ತನ್ನ ಕಣ್ಣೆದುರಿಗೆ ಒಂದೇ ಒಂದಾಗಿ ಕಾಣುತ್ತಿದ್ದ ಹಗೆಯ ರೂಪದಲ್ಲಿಯೇ ಆತನನ್ನು ಕಂಡು ಅವನನ್ನೂ ಹೊಡೆಯ ಹೋದಳು. ಅವನು ಹೇಗೋ ತಪ್ಪಿಸಿಕೊಂಡು ಹೋಗಿ ಕಹಳೆಯನ್ನೂದಿದನು. ದುರ್ಗದ ದಂಡಾಳುಗಳು ಓಡಿಬಂದರು. ಈ ಹೊತ್ತಿಗೆ ಮೇಲೇರಿ ಬಂದಿದ್ದ ಹೈದರನ ಸೈನಿಕರು ಓಬಿಯ ಮೇಲೆ ಬಿದ್ದು ಕಡಿದುಹಾಕಿದರು. ದೇಹದಲ್ಲಿ ಜೀವವಿರುವವರೆಗೆ ಜೀವದ ಹಂಗುದೊರೆದು ಕಾದಿದ ಓಬಿಯ ಆತ್ಮ ವೀರಸ್ವರ್ಗವನ್ನು ಪಡೆಯಿತು. ಆಕೆಯ ಪ್ರತಾಪದಿಂದ ಸೋತು ಹೈದರನು ಹಿಂದಿರುಗಲು ಚಿತ್ರದುರ್ಗದ ವಿಜಯವೇ ಅವಳಿಗೆ ತಿಲಾಂಜಲಿಯಾಯಿತು. ಅವಳಿಗೆ ತಕ್ಕ ಸನ್ಮಾನವನ್ನು ಸಲ್ಲಿಸುವ ಸೌಭಾಗ್ಯ ಮದಕರಿನಾಯಕನಿಗೆ ದೊರೆಯಲಿಲ್ಲ.

ಕಿತ್ತೂರ ಚೆನ್ನಮ್ಮ—ಕ್ರಿ. ಶ. ೧೮೨೪.

ವೀರರಾಣಿಯೆಂದು ಇಂದಿಗೂ ಕನ್ನಡಿಗರ ಮಾನಸ ಪಟಲದ ಮೇಲೆ ಮೂಡಿ ನಿಂತು ಸ್ಫೂರ್ತಿ ನೀಡುತ್ತಿರುವ ಕಿತ್ತೂರಿನ ಚೆನ್ನಮ್ಮನು ಕಾಗತಿಯ ದೇಸಾಯರ ಮಗಳು. ಅವಳ ಸೌಂದರ್ಯಕ್ಕೆ ಮನಸೋತು ಕಿತ್ತೂರಿನ ರಾಜವಂಶದಲ್ಲಿ ೧೧ನೆಯವನಾದ ಸುಪ್ರಸಿದ್ಧ ಮಲ್ಲಸರ್ಜನೆಂಬುವನು ವಿವಾಹವಾಗಿದ್ದನು. ಆತನಿಗೆ ಅವ್ವರುದ್ರವ್ವನೆಂಬ ಪ್ರಥಮ ಪತ್ನಿಯಿದ್ದಳು. ಮಲ್ಲಸರ್ಜನು ಕೇವಲ ಚನ್ನಮ್ಮನ ರೂಪವನ್ನು ಕಂಡಿದ್ದನು. ಆದರೆ ಅವಳು ಕೇವಲ ಸೌಂದರ್ಯದ ಖಣಿಯಾಗಿರಲಿಲ್ಲ. ಶೌರ್ಯ, ಸಾಹಸ, ರಾಜಕಾರಣಪಟುತ್ವ, ಚಟುವಟಿಕೆ, ಪ್ರಸಂಗಾವಧಾನ,

ಇವೇ ಮೊದಲಾದ ಅದ್ವಿತೀಯ ಗುಣಗಳಿಂದ ಹೆಚ್ಚು ಕಾಂತಿಗೊಂಡಿದ್ದಳು. ಕಿತ್ತೂರಿನ ತದನಂತರ ಇತಿಹಾಸವೇ ಇದಕ್ಕೆ ಸಾಕ್ಷಿಯಾಗಿದೆ. ಮಲ್ಲಸರ್ಜನನ ಮೃತ್ಯುವಿನ ತರುವಾಯ ಹಿರಿಯ ರಾಣಿಯ ಮಗನಾದ ಶಿವಲಿಂಗರುದ್ರಸರ್ಜ ಅಥವಾ ಬಾಪೂ ಸಾಹೇಬನು ಪಟ್ಟವೇರಿ ಏಳೆಂಟು ವರ್ಷ ರಾಜ್ಯಭಾರ ನಡೆಸಿದನು. ಆದರೆ ದುರ್ದೈವದಿಂದ ಕ್ಷಯರೋಗ ಪೀಡಿತನಾಗಿ ಆತನು ಕಾಲವಶನಾದನು. ಆತನ ತಮ್ಮಂದಿರಾದರೋ ಆತನಿಗಿಂತ ಮುಂಚೆಯೇ ಮೃತ್ಯುವಿಗೀಡಾಗಿದ್ದರು. ಚೆನ್ನಮ್ಮನಿಗಂತೂ ಮಕ್ಕಳಿರಲಿಲ್ಲ. ಹೀಗೆ ಸಂಸ್ಥಾನಕ್ಕೆ ಔರಸ ಸಂತತಿಯಿಲ್ಲದಂತಾಗಲು ಬಾಪೂ ಸಾಹೇಬನ ಮೃತ್ಯುಪೂರ್ವದಲ್ಲಿಯೇ ದತ್ತವಿಧಾನವು ನಡೆದು ಕರ್ತೃತ್ವಶಾಲಿನಿಯಾದ ಚೆನ್ನಮ್ಮನು ರಾಜ್ಯಸೂತ್ರಗಳನ್ನು ವಹಿಸಿದಳು. ವಿಧಿಯ ವಿಕಟ ಲೀಲೆ! ದೈವವು ಅಡ್ಡಬಾರದಿದ್ದರೆ ಕಿತ್ತೂರಿನ ಭಾಗ್ಯ ಬಹುಕಾಲ ಬೆಳಗಿ ಬೆಳಕನ್ನು ನೀಡಬಹುದಾಗಿದ್ದಿತು.

ಕಿತ್ತೂರಿನ ಭಾಗ್ಯಾಕಾಶದಲ್ಲಿ ಭೀಕರ ಧೂಮಕೇತು ಕಾಣಿಸಿಕೊಂಡಿತು. ಸವತಿಯರ ಸಂಬಂಧ ಸೌಹಾರ್ದ್ರತೆಯಿದ್ದರೂ ಸಂಸ್ಥಾನದ ಪ್ರಜೆಗಳಲ್ಲಿ ಐಕ್ಯತೆ ಇಲ್ಲವಾಯಿತು. ದ್ವೇಷದ ವಿಷವೃಕ್ಷವು ಬೇರೂರಲಾರಂಭಿಸಿತು. ಸಂಧಿಸಾಧಕರ ಸ್ವಾರ್ಥವು ವಿಷನೀರನ್ನೆರೆದು ಅದನ್ನು ಬೆಳೆಸಲಾರಂಭಿಸಿತು. ದತ್ತವಿಧಾನವು ಬಾಪೂ ಸಾಹೇಬನ ಕಾಲಕ್ಕೆ ಆಗಿರದೆ ಅವನ ಮೃತ್ಯುವಿನ ನಂತರ ಆತನ ಚಿಕ್ಕವಯಸ್ಸಿನ ವಿಧವೆಯು ಅದನ್ನು ಮಾಡಿಕೊಂಡಿರುವಳೆಂಬ ಆಶಯದ ವರದಿ ಸರಕಾರಕ್ಕೆ ಹೋಗಿ ಮುಟ್ಟಿತು. ಕಿತ್ತೂರಿನ ಆಡಳಿತದಲ್ಲಿ ಸರಕಾರದವರು ಕೈಹಾಕ ಬಯಸಿದರು. ಗವರ್ನರರಿಂದ ನಿರ್ಣಯವಾಗುವವರೆಗೆ ತಾನು ನಿಯಮಿಸಿದ ಅಧಿಕಾರಿಯ ನೇತೃತ್ವದಲ್ಲಿಯೇ ಎಲ್ಲ ಕಾರ್ಯಗಳೂ ಸಾಗಬೇಕೆಂಬರ್ಥದ ಪ್ರಕಟನೆಯು ಪೊಲಿಟಿಕಲ್ ಏಜಂಟನಾಗಿದ್ದ ಥ್ಯಾಕರೆ ಸಾಹೇಬನ ಕಡೆಯಿಂದ ಪ್ರಸಿದ್ಧವಾಯಿತು. ಸ್ವಾಭಿಮಾನಿಯಾದ ಚೆನ್ನಮ್ಮನಿಗೆ ಇದು ಸಹನವಾಗುವಂತಿರಲಿಲ್ಲ. ಸುದ್ದಿ ತಿಳಿದೊಡನೆ ಅವಳು ಗುರುಗಳನ್ನೂ ಸಾಮಂತ ಸರದಾರ ಮನ್ನೆಯರನ್ನೂ ಕರೆಯಿಸಿ ಆಪ್ತಾಲೋಚನೆಗೈದು ಪರಿಸ್ಥಿತಿಯನ್ನು ಎದುರಿಸಲೆಂದು ಸಮರಸನ್ನಾಹಕ್ಕೆ ತೊಡಗಿದಳು. ಅಷ್ಟರಲ್ಲಿಯೇ ಸಿವಿಲ್ ಸರ್ಜನನ ಅಭಿಪ್ರಾಯದ ಆಧಾರದ ಮೇಲಿಂದ

ದತ್ತವಿಧಾನದ ನಿಷ್ಕರ್ಷೆಯಾಗಿ ಅದು ಕೃತಕವಾಗಿರುವುದರಿಂದ ಅಗ್ರಾಹ್ಯ ವಾಗಿದೆಯೆಂಬ ನಿರ್ಣಯವು ಹೊರಬಿದ್ದಿತು. ಬೆಂಕಿಯಲ್ಲಿ ಎಣ್ಣೆಯನ್ನು ಸುರಿದಂತಾಯಿತು. ಸಾಮೋಪಾಯದ ಆಟ ನಡೆಯದಿರಲು ದಂಡೋ ಪಾಯದ ಪ್ರಥಮ ಪ್ರಯತ್ನವೆಂದು ಸಾಗಿಬಂದ ಸರಕಾರದ ಸೇನೆಗೆ ರಾಣಿಯ ಶೂರ ಸೈನಿಕರಿಂದ ರಣಸನ್ಮಾನ ದೊರೆಯಿತು. ಸೇನೆಯು ಸೋತು ಹಿಮ್ಮೆಟ್ಟಿತು. ಈ ಕ್ರಮವು ಕೆಲಕಾಲ ಹಾಗೆಯೇ ಸಾಗಿತ್ತಲ್ಲದೆ ಸಣ್ಣಪುಟ್ಟ ಯುದ್ಧಗಳು ನಡೆದೇ ಇದ್ದುವು. ಆಗ ಒಂದು ಸಂದರ್ಭ ದಲ್ಲಿ ಕೆಲವು ಆಂಗ್ಲ ಬಾಲಕರನ್ನು ಕಿತ್ತೂರಿನವರು ಸೆರೆಹಿಡಿದು ಕರ ದೊಯ್ದರು.

ರಾಣಿಯ ವೀರ ಹೃದಯವು ವಜ್ರದಂತೆ ಕಠೋರವಿದ್ದರೂ ಅಣು ರೇಣುಗಳಲ್ಲಿ ಭೂತ ದಯೆಯು ತುಂಬಿ ತುಳುಕುತ್ತಿದ್ದುದರಿಂದ ಅದು ಕುಸುಮಕ್ಕಿಂತಲೂ ಕೋಮಲವಾಗಿತ್ತು. ತನ್ನ ಸೈನಿಕರನ್ನೇ ಈ ಮಕ್ಕಳ ಸೆರೆಗಾಗಿ ಅಲ್ಲಗಳೆದು ಅವಳು ಆ ಬಾಲಕರನ್ನು ಮಕ್ಕಳೋಪಾದಿಯಲ್ಲಿ ನೋಡಿಕೊಂಡು, ಅವರನ್ನು ಕರೆದುಕೊಂಡು ಹೋಗುವಂತೆ ಪ್ರತಿಪಕ್ಷ ದವರಿಗೆ ಹೇಳಿ ಕಳುಹಿಸಿದಳು. ಅವಳ ಈ ಉದಾರತೆಯಿಂದ ಬೆರಗಾಗಿ ಸಂಧಾನದ ಪ್ರಯತ್ನಕ್ಕಾಗಿ ಶಾಂತಿ ಪತಾಕೆಯನ್ನು ಹಿಡಿದು ಥ್ಯಾಕರೇ ಸಾಹೇಬನು ಕಿತ್ತೂರಿಗೆ ಬಂದನು. ಆದರೆ ಅವನ ನಿಜವಾದ ಉದ್ದೇಶವನ್ನು ತಿಳಿಯದ ಕೋತ್ತಳದ ಕಾವಲುಗಾರನ ಗುಂಡಿಗೆ ಆಹುತಿಯಾಗಿ ಅವನು ಗತಪ್ರಾಣನಾದನು. ನಡೆದುಹೋದ ಈ ಅಚಾತುರ್ಯಕ್ಕಾಗಿ ಮರಮರನೆ ಮರುಗಿದರೂ ಕಿತ್ತೂರಿನ ಮಾನ ರಕ್ಷಣೆಗಾಗಿ ಹಗಲಿರುಳು ಹೆಣಗುತ್ತಿದ್ದ ಚೆನ್ನಮ್ಮನು ಎದೆಗುಂದದೆ ತನ್ನ ಕಾರ್ಯವನ್ನು ಮುಂದುವರಿಸಿದಳು. ಧಾರವಾಡದಿಂದ ಬಂದ ಸೇನಾಪಥಕವನ್ನು ಕಿತ್ತೂರಿನ ಬಲವು ಸರಿಸಮಾ ನತೆಯಿಂದ ಎದುರಿಸಿ ಜಯಶಾಲಿಯಾಯಿತು. ಓರ್ವ ಅಬಲೆಯ ಕೈಗೆ ಸಿಕ್ಕು ತನ್ನ ಸೇನೆಯು ಬವಣೆಗೊಂಡ ಸಮಾಚಾರವನ್ನು ತಿಳಿದು ಸಂತಪ್ತ ನಾದ ಚಾಪಲೆನ್ ಸಾಹೇಬನು ದೊಡ್ಡದಾದ ದಂಡಿನೊಡನೆ ಬಂದು ಕಿತ್ತೂರಿಗೆ ಮುತ್ತಿಗೆಹಾಕಿದನು. ಚೆನ್ನಮ್ಮನು ಆಗಲೂ ಬೆದರಲಿಲ್ಲ. ಅವಳು ಯಥಾಪ್ರಕಾರ ಪ್ರತಿಭಟನೆಯನ್ನು ತೋರಿಸಿದಳು. ಪರಾಕ್ರಮದ ಪ್ರತಿಸ್ಪರ್ಧೆಯಲ್ಲಿ ಅವಳು ಗೆಲ್ಲುತ್ತಿದ್ದಳೋ ಸೋಲುತ್ತಿದ್ದಳೋ ಗೊತ್ತಿಲ್ಲ.

ಆ ನಿರ್ಣಯದ ಮೊದಲೇ ಒಳಸಂಚಿನ ಉರಿ ಒಳಗೊಳಗೇ ಹೊತ್ತಲಾ ರಂಭಿಸಿತು.

ಮುಂದಾಳುಗಳ ಕೊಲೆಯಿಂದ ಅವರ ಸಮಯೋಚಿತ ಸಲಹೆಗೆ ಎರವಾದ ಜನತೆ ಕಂಗೆಟ್ಟಿತು. ಆಗಲೂ ಚೆನ್ನಮ್ಮ ಧೈರ್ಯಗೆಡಲಿಲ್ಲ. ಆದರೆ ವಿಧಿಯ ಲೀಲೆ ಇಲ್ಲಿಗೂ ತಡೆಯಲಿಲ್ಲ. ವಿಶ್ವಾಸಘಾತ ದಿಂದ ತೋಪುಗಳ ಕೆಲಸ ನಡೆಯದೇಹೋಯಿತು. ಪ್ರತಿಪಕ್ಷದ ಅಬ್ಬರದ ಮುಂದೆ ಚೆನ್ನಮ್ಮನ ಸಾಹಸ ವಿಫಲವಾಯಿತು. ಪ್ರತಿ ರೋಧವು ಅಶಕ್ಯವಾದ್ದರಿಂದ ಕೋಟೆಯ ಗೋಡೆಗಳು ಸಡಿಲತೊಡಗಿದುವು. ಸಾಮಗ್ರಿಯಿಲ್ಲದ ದಂಡಾಳುಗಳ ಶೌರ್ಯದಿಂದೇನೂ ಉಪಯೋಗ ವಾಗಲಿಲ್ಲ. ಕಿತ್ತೂರಿನ ರಾಜ್ಯದ ಮೇಲೆ ಪರಾಜಯದ ಪರದೆ ಬಿದ್ದು ಭಾರತದ ರಾಜಕೀಯ ರಂಗಮಂಟಪದಿಂದ ಅದು ಮರೆಯಾಯಿತು. ಕಿತ್ತೂರಿನ ಧ್ವಜವು ಕೆಳಗಿಳಿದು ಕೋಟೆಯ ಮೇಲೆ "ಯೂನಿಯನ್ ಜಾಕ್" ಹಾರಾಡ ತೊಡಗಿತು. ಕಿತ್ತೂರಿನ ಭಾಗ್ಯಲಕ್ಷ್ಮಿಯು ಬೈಲ ಹೊಂಗಲದಲ್ಲಿ ಸ್ಥಾನಬದ್ಧಳಾದಳು. ಕೆಚ್ಚೆದೆಯಿಂದ ವೈರಿಯೊಡನೆ ಹೋರಾಡಿದ ರಾಣಿ ಈ ಅಪಮಾನದ ಕಿಚ್ಚಿಗೆ ಈಡಾಗಲಿಲ್ಲ. ಕೆಲಕಾಲ ದಲ್ಲಿಯೇ ಅವಳು ಅಲ್ಲಿಯೇ ಲಿಂಗೈಕ್ಯಳಾದಳು. ಈ ನಶ್ವರ ದೇಹವನ್ನು ತೊರೆದು ಚಿರಶಾಂತಿಯನ್ನು ಪಡೆದಳು. ಅದು ಸಮಾಧಿಯೇ? ಅಲ್ಲ. ಸ್ತ್ರೀ ಸಮಾಜದ ಭಾಗ್ಯೋದಯ ಮಂದಿರದ ಅಸ್ತಿಭಾರಶಿಲೆಯದು. ಅಂಥ ಅಸಂಖ್ಯಾತ ಸಮಾಧಿಗಳನ್ನು ನಿರ್ಮಿಸಿ ಆ ಮಂದಿರಕ್ಕೆ ನೆಲಗಟ್ಟುಹಾಕು ವಷ್ಟು ತೇಜಸ್ಸು ಕನ್ನಡಿತಿಯರಲ್ಲಿ ತಲೆದೋರಿದುದೇ ಆದರೆ ಅಂದೇ ಸುದಿನ. ಅವರ ತೇಜವೇ ವೀರರಾಣಿ ಚೆನ್ನಮ್ಮನಿಗೆ ಸಲ್ಲಬೇಕಾದ ಶ್ರದ್ಧಾಂಜಲಿ.

ಭಾಗವತ ದಶಮಸ್ಕಂಧ

ಮೊದಲನೆಯ ಸಂಧಿ

ಸೂಚನೆ || ಅವನಿ ದುಷ್ಟ ಕ್ಷತ್ರಕುಲ ಭಾ |
ರವನು ಸೈರಿಸಲರಿಯದಬುಜೋ
ದ್ಭವಗೆ ಬಿನ್ನವಿಸಿದಳು ಬಲ್ಲಿದಮಾದ ಸುರಕಾರ್‍ಯಂ ||

ಶ್ರೀವರನು ಶಾಶ್ವತನಖಿಳ ವೇ
ದಾವಳೀ ಸಂಸ್ತುತ್ಯನಮಲ ಗು
ಣಾವಲಂಬನನಂಬುಜೋದ್ಭವ ಮುಖ್ಯ ಸುರವಂದ್ಯ
ದೇವದೇವನಶೇಷ ಧರಣೀ
ದೇವ ಗೋದ್ವಿಜ ರಕ್ಷಣಾರ್ಥ ಕೃ
ತಾವತಾರನು ಮಾಳ್ಕೆ ಯೋಗಕ್ಷೇಮವನು ನಮಗೆ || ೧ ||

ನತ ಸುರಾಸುರ ಮೌಳಿ ರತ್ನ
ಪ್ರತತಿ ಪರಿಣದ್ಧಾಂಘ್ರಿ ಕರುಣಾ
ಮೃತ ಮಹೋದಧಿ ಪರಮ ಶಕ್ತಿಲತಾವಿತಾನಾಢ್ಯ |
ಶ್ರುತಿಜನಾಯಾಭೀಷ್ಟ ಫಲಪೂ
ರಿತ ನಿಜಾಂಘ್ರಿಚ್ಛಾಯೆ ಗೌರೀ
ಪತಿ ಸುರದ್ರುಮವೀಗೆ ನಮಗಿಷ್ಟಾರ್ಥ ಸತ್ಫಲವ || ೨ ||

ವಿಘ್ನ ವಾರಿಧಿಗಾ ಘಟೋದ್ಭವ
ವಿಘ್ನ ಪನ್ನಗ ಕುಲಕೆ ಖಗಪತಿ
ವಿಘ್ನ ಕಾನನಕಾದವಾನಲ ವಿಘ್ನ ತಿಮಿರ ರವಿ |
ವಿಘ್ನ ಮೇಘಾವಳಿಗೆ ಮಾರುತ
ವಿಘ್ನವೆಂಬ ನಗಕ್ಕೆ ಘನಪವಿ
ವಿಘ್ನಗಜ ಪಂಚಾಸ್ಯನಿಷ್ಟಾರ್ಥವನು ನಮಗೀಗೆ || ೩ ||

ವರ ಚತುರ್ಮುಖ ಚಾರು ವದನಾಂ
ಬುರುಹ ವನ ನಿಜಹಂಸೆ ಪುಸ್ತಕ
ವರವನಭಯವನಕ್ಷಮಾಲೆಯ ನಿಜ ಕರಾಗ್ರದಲಿ ।
ಧರಿಸಿ ಮೆರೆವ ಲತಾಂಗಿ ಭಕ್ತರ
ನಿರದೆ ಪಾಲಿಪ ಹರಿಣ ದೃಶೆ ಪಂ
ಕರುಹ ಮುಖಿ ಪಾಲಿಸುಗೆ ವಾಚೋ ವಿಭವವನು ನಮಗೆ ॥೪॥

ಹೇಳಿದಿರಿ ನೀವೆನಗೆ ತಾನದ
ಕೇಳಿದೆನಲಾ ಸೋಮ ಸೂರ್ಯರ
ಪೀಳಿಗೆಯ ಭೂಪೋತ್ತಮರ ಪಾವನ ಚರಿತ್ರವನು ।
ಹೇಳಬೇಹುದು ತನಗೆ ಯದುಭೂ
ಪಾಲರನ್ವಯದೊಳಗೆ ಲಕ್ಷ್ಮೀ
ಲೋಲನವತರಿಸಿದ ಕಥೆಯನದನೆಂದನಾ ಭೂಪ ॥೫॥

ಅರಿಯರಜಭವ ಮುಖ್ಯರಾವನ
ನಿರುಗೆಯನು ವೇದಾಂತ ಕೋಟಿಗ
ಳೊರಲಿ ಕಾಣಿಸಲರಿಯವಾವನ ಪಾದ ಪಂಕಜವ ।
ಮರೆವಿಡಿದು ಮರ್ತ್ಯಾವತಾರದ
ಲುರುವ ದೈವವದೆಂತು ಜನಿಸಿದ
ತೆರನನೆಲೆ ಮುನಿನಾಥ ಕೃಪೆಮಾಡುವುದು ತನಗೆಂದ ॥೬॥

ಆವಸುಕೃತದ ಸಿದ್ಧಿಯೋ ಮೇ
ಣಾವ ತರದ ಸಮೃದ್ಧಿಯೋ ವಸು
ದೇವ ದೇವಕಿಯರಿಗೆ ಪೂರ್ವ ಭವಾಂತರಾರ್ಜಿತದ ।
ದೇವದೇವನನಖಿಳ ನಿಗಮ ಶಿ
ರೋ ವಿರಾಜಿತ ಪಾದ ಪದುಮನ
ನಾವ ಪರಿಯಲಿ ಭಜಿಸಿ ಮಗನನು ಪಡೆದರವರೆಂದ ॥೭॥

ಉದಿಸಿ ಯದುಕುಲದೊಳಗದಾವಂ
ಗದಲಿ ಮಾನುಷವೆನಿಪ ಕರ್ಮವ
ಪದುಮನಾಭನು ವಿರಚಿಸಿದನದನೆಲ್ಲವನು ತನಗೆ।
ವಿದಿತವೆನೆ ವಿಸ್ತರಿಸಿ ಕಾರು
ಣ್ಯದಲಿ ಕರುಣಿಪುದಾರು ನೀವ
ಲ್ಲದೆ ಮಹಾಬ್ಧಿ ನಿಮಗ್ನ ನಿಸ್ತಾರಕರದಾರೆಂದ ॥೮॥

ಇದೆಯಲಾ ಭವ ರೋಗಕೌಷಧ
ವಿದೆ ನಿವೃತ್ತಾಶೇಷ ತೃಷ್ಣರ
ಹೃದಯ ಕರ್ಷಣವಖಿಳ ಕರ್ಣಾಮೃತದ ಕಡಲುಗಡ।
ಇದನು ಕೇಳಿದೆನಿನ್ನು ಸಾಕೆಂ
ಬುದಿತ ಪಾತಕಿಗಳಿಗೆ ಗತಿಯಾ
ವುದೊ ಕೃತಘ್ನರಿಗಾತ್ಮಘಾತಕರಿಗೆ ಶಿವಾಯೆಂದ ॥೯॥

ಆವನೊಲವಿನ ಸಾರಥಿತ್ವದ
ನಾವೆಯಿಂದಸ್ಮತ್ಪಿತಾಮಹ
ನಾ ವಿಗಡ ಗುರುಭೀಷ್ಮ ನಕ್ರಾವಳಿ ಸುದುಸ್ತರದ।
ಓವ ಭಾರತ ಸೈನ್ಯ ಶರಧಿಯ
ನೋವದುತ್ತರಿಸಿದನಲಾ ತಾ
ನಾವ ಪರಿಯಲಿ ಮರವೆನಾ ಕುಲದೇವತೆಯನೆಂದ ॥೧೦॥

ಮತ್ತೆ ಗುರುಸುತನಸ್ತ್ರ ವಹ್ನಿಯ
ಕಿತ್ತಡದ ಕೋಪದಲಿ ತನುವಿದು
ಹೊತ್ತಿ ಹೊಗರುತ್ತಿರಲು ಚಕ್ರಾಯುಧನು ಮನವೊಲಿದು ।
ಇತ್ತೆರದ ನೃಪರನ್ವಯದ ನಿಜ
ಬಿತ್ತೆನಿಸಿದೆನ್ನಂಗವಿದನಾ
ಹೆತ್ತ ತಾಯುದರವನು ಹೊಕ್ಕೋವಿದನಲಾಯೆಂದ ॥೧೧॥

ಸಕಲ ಜೀವ ನಿಕಾಯ ಕರಣ
ಪ್ರಕರದಂತರ್ಮೂರ್ತಿ ಪುರುಷಾ
ತ್ಮಕನೆನಿಸಿ ಸಲಹುವನದಾವನಶೇಷ ಭುವನವನು।
ವಿಕರಿಸುತ ಹೊರಗಿರ್ದು ಕಾಲಾ
ತ್ಮಕನೆನಿಸಿ ಸಂಹರಿಸುವಖಿಳಾ
ತ್ಮಕನನೊಲ್ಲದ ಮರ್ತ್ಯರಿಗೆ ಗತಿಯಾವುದಕಟೆಂದ ॥೧೨॥

ಬಲ್ಲಹರ ಬಲ್ಲಹನೆ ನೀನೇ
ಬಲ್ಲೆ ಕರುಣಿಪುದೆನಗೆ ಲಕ್ಷ್ಮೀ
ವಲ್ಲಭನ ಲೀಲಾವತಾರ ಕಥಾಪ್ರಸಂಗವನು।
ನಿಲ್ಲದೀಮನವಾ ಮುಕುಂದನ
ಸಲ್ಲಲಿತ ಗುಣಗಣ ಸುಧಾಬ್ಧಿಯ
ಲಲ್ಲದಿತರ ಕಥಾನ್ವಥಾ ಕೂಪೋದಕದಲೆಂದ ॥೧೩॥

ಹಿಂದು ಜನ್ಮದಲಿಬ್ಬರುದರದ
ಲೊಂದಿ ಸಂಕರುಷಣನು ಜನಿಸಿದ
ನೆಂದಡತ್ಯದ್ಭುತವಲಾ ದೇವಕಿಗೆ ರೋಹಿಣಿಗೆ।
ನಂದನನು ತಾನಾದನೇತಕೆ
ತಂದೆಯರಮನೆಯಿಂದ ದೇವ ಮು
ಕುಂದನೈದಿದನುದಿಸಿ ನಂದನ ವಾಸದೆಡೆಗೆಂದ ॥೧೪॥

ಬಾಲಕೇಳಿಗಳೆಸೆಯಲಾನಂ
ದಾಲಯದಲೆನಿತ್ತು ದಿನ ಲಕ್ಷ್ಮೀ
ಲೋಲನಂದೊಲಿದಾಡಿದನು ವೃಂದಾವನಾಂತದಲೀ।
ಮೇಲೆ ತಾಯೊಡಹುಟ್ಟಿದ ಕ್ಷಿತಿ
ಪಾಲನಲ್ಲಾ ಕಂಸನಾತನ
ಕಾಲನನು ಕಾಣಿಸಿದನೆಂಬೀಮಾತದೇಕೆಂದ ॥೧೫॥

ಸಕಲ ಬಂಧುಗಳೊಡನೆ ವಿಶ್ವಾ
ತ್ಮಕನದಾವ ನಿವಾಸದಲಿ ಬಾ
ಲಕಿಯರೊಡನೆಸೆದಿರ್ದನೆನಿಬರು ಸತಿಯರಾತ್ಮಜರು।
ಪ್ರಕೃತಿ ಗುಣರಹಿತಾತ್ಮನವನಿಗೆ
ಸುಕೃತ ಫಲ ಕೈಗೂಡಲಿದ್ದನು
ಭಕುತವತ್ಸಲನೇಸುಕಾಲ ನಿಜೇಚ್ಛೆಯಿಂದೆಂದ ॥೧೬॥

ಆ ರಮಾವಲ್ಲಭನ ಲೀಲೋ
ದಾರ ಪುಣ್ಯಚರಿತ್ರವನು ಸಂ
ಸಾರ ಘೋರಾಹೀಂದ್ರ ವಿಷದಂಷ್ಟ್ರಾರ್ತಿಗೌಷಧವ।
ಕಾರುಣಿಕ ಕರುಣಿಸುವುದೆಲ್ಲವ
ನಾರು ನಿನ್ನಂತಿರಲು ಹರಿಗುಣ
ಚಾರು ಸುಧೆಯನು ಸೈಗರೆವ ಸಂಪನ್ನ ಗುಣರೆಂದ ॥೧೭॥

ಋಷಿಗಳರಸನೆ ನಿನ್ನಮುಖದಿಂ
ದೊಸರುವಚ್ಯುತ ಗುಣ ಕಥಾಮೃತ
ರಸವನಾಸ್ವಾದಿಸುವ ತನಗನಶನದ ದುಸ್ಸಹದ।
ಹಸಿವು ತೃಷೆಗಳು ಮುನಿವರನೆ ಬಾ
ಧಿಸಲು ತುಷ್ಟಿಯನೈದುತಿವೆ ತ
ನ್ನಸು ಮಹಾಮೃಷ್ಟಾನ್ನ ಭೋಜನಕಧಿಕಗುಣವೆಂದ ॥೧೮॥

ಮನವಿದಚ್ಯುತ ಗುಣ ಕಥಾಮೃತ
ವನಧಿಯೊಳಗೋಲಾಡುತಿರಲಾ
ಮುನಿಪ ಕರುಣಿಸು ನಿಜಪದೈಕಪರಾಯಣಂಗೆನಗೆ।
ತನುವಿನಾಯಸವಾವುದೆಂದಾ
ಜನಪನಾಮುನಿವರನ ಪದಯುಗ
ವನಜದಲಿ ಮೆಯ್ಯಿಕ್ಕಿ ಮುಳುಗಿದನಶ್ರುಪೂರದಲಿ ॥೧೯॥

ಶಿರವ ಹಿಡಿದೆತ್ತಿದನು ಮುನಿಪತಿ
ಕೇವಣದಲಿ ಮೈದಡವಿ ಕೇಳೆ
ನ್ನರಸ ಕೇಳೆಲೆ ಭಾಗ್ಯನಿಧಿ ಪರಹಿತಪರಾಯಣನೆ।
ಧರೆಯೊಳಾರೀ ನಿನ್ನ ಹೋಲುವ
ಪರಮ ವೈಷ್ಣವರೆನ್ನುತ ಕಲಿಮಲ
ಹರವೆನಿಪ ಕೃಷ್ಣಾವತಾರವನೊಲಿದು ವರ್ಣಿಸಿದ ॥೨೦॥

ವಸುಧೆ ದೈತ್ಯರ ಭಾರದಲಿ ತಲೆ
ಕುಸಿದು ಪಾತಾಳಕ್ಕೆ ಬೀಳುತ
ಬಸಿವ ಕಂಬನಿಧಾರೆಯಲಿ ಮೈನೆನೆದು ಬಡವಾಗಿ।
ಪಶುವಿನಾಕೃತಿಯಾಗಿ ತನು ಕಂ
ಪಿಸುತ ಕಂಡವರಕಟಕಟಯೆನೆ
ಬಿಸಜಸಂಭವನಲ್ಲಿಗೈದಿದಳೆರಗಿದಳು ಪದಕೆ ॥೨೧॥

ಬಿನ್ನವಿಸಿದಳು ದೈತ್ಯದಾನವ
ರೆನ್ನ ಮೇಲಮರಾಸುರಾಹವ
ಭಿನ್ನಗಾತ್ರರು ಜನಿಸಿ ದುಷ್ಟಕ್ಷತ್ರರೂಪದಲಿ।
ಬನ್ನಬಡಿಸುತ್ತಿದೆ ನಿಜಾಶ್ರಮ
ವರ್ಣಧರ್ಮಂಗಳನು ಬಾಧಿಸು
ತಿನ್ನು ನೀನೇ ಬಲ್ಲೆಯೆಂದಳು ತನ್ನ ದುಸ್ಥಿತಿಯ ॥೨೨॥

ಕೇಳಿದನು ಹೆಬ್ಬುಳ್ಯುಲನು ನೆರೆ
ದೋಲಗದ ಜನ ಬೆದರಲೆತ್ತಿದ
ನಾಲಿಸಿದನಾಳೋಚನೆಯ ಮಾಡಿದನು ಸುರರೊಡನೆ।
ಪಾಲಿಸುವಡಳವಲ್ಲವೆನುತಾ
ನೀಲಲೋಹಿತ ಶಕ್ರ ಯಮ ದಿಗು
ಪಾಲರೊಡನೈತಂದನಜನಿಂಗಡಲ ತಡಿಗಾಗಿ ॥೨೩॥

ಆ ಮಹಾಬ್ಧಿಯ ತಡಿಯುಲಮರ
ಸ್ತೋಮ ಸಹಿತಭಿನಮಿಸಿ ಭಕ್ತ
ಕ್ಷೇಮಧಾಮಗೆ ಪುಣ್ಯನಾಮಗೆ ನಿಗಮ ದುರ್ಗಮಗೆ।
ಸೋಮ ಸೂರ್ಯ ಕೃಶಾನುಕೋಟಿ ಎ
ರಾಮ ತೇಜೋನಿಧಿಯೆ ರಕ್ಷಿಸು
ಭೂಮಿಭಾರವನವಧರಿಸಿ ಕೃಪೆಮಾಳ್ಪುದೆಮಗೆಂದ ॥೨೪॥

ಪರಮಪುರುಷ ಪರೇಶ ಪರಮೇ
ಶ್ವರ ಪರಂಜ್ಯೋತಿ ಸ್ವರೂಪನೆ
ಪರಮ ಪರಮಾನಂದರೂಪನೆ ರೂಪವಿರಹಿತನೆ।
ಶರಣು ಹೊಕ್ಕೆವು ಕಾವುದೆಮ್ಮನು
ಧರೆಯ ಭಾರವ ಕಳೆದು ನಿಜ ಭ
ಕ್ತರಿಗೆ ನೆರೆನಿರ್ಭಯವ ಮಾಡುವುದೆಂದನಬುಜಭವ ॥೨೫॥

ಒರಲುತೈದಳೆ ಧರಣಿ ದೈತ್ಯರ
ಹೊರೆಗಳುಕಿ ಹೇರಾಳ ದುಗುಡದ
ಲಿರುವೆನೆಂದೆನಗೆಂದಡಾನೇಗುವೆನೆ ನಿರ್ಣಯುವ।
ಅರಿಯೆನಾನಿದಕೇನ ತನ್ನಲಿ
ಹರಿತ ಕಾರ‍್ಯವ ದೇವರಿಗೆ ತಾ
ನರುಹಿದೆನು ಕಾಲದಲಿ ತನಗಿನ್ನಿಲ್ಲ ಭಯವೆಂದ ॥೨೬॥

ಸೃಷ್ಟಿಗೆನ್ನನು ಸೃಜಿಸಿ ರಕ್ಷಿಸ
ಲಷ್ಟ ದಿಗುಪಾಲಕರ ನೀ ಬೆಳ
ಗಿಪ್ಪ ನಭದಲಿ ಚಂದ್ರ ಸೂರ್ಯರ ತಾರಕಾಗ್ರಹವ।
ನೆಟ್ಟನೀಜಗವೈದೆ ಕರುಣಾ
ದೃಷ್ಟಿಯಲಿ ಜೀವಿಸಿದುದಿನ್ನೆಗೆ
ಕೆಟ್ಟುದಿಂದಿನಲೊಡೆಯನವಧರಿಸುವುದು ಬಿನ್ನಪವ ॥೨೭॥

ದೆಸೆಗಳೆಸೆಯಲು ಕರ್ಣವಿವರದ
ಲಸುಪವನನೆನಲಕ್ಷಿಗಳು ರವಿ
ಶಶಿಗಳಾಸ್ಯದಲಗ್ನಿಯಮಕೂಟದಲಿ ಹುಬ್ಬುಗಳ।
ರಸನೆಯಲಿ ಪಾಶಾಯುಧನು ಭುಜ
ವಿಸರದಲಿ ದಿಗುಪಾಲರೆನಗಾ
ವಸತಿಗುಹ್ಯದಲೆನಲು ಜಗದಾತ್ಮಕನು ಸೇನಂದ ॥೨೮॥

ದೇವದೇವರ ನೇಮದಲಿ ರಾ
ಜೀವನಾಭನೆ ಸೃಜಿಸುವನು ಭುವ
ನಾವಳಿಯುನದ್ದುವನು ಹಣೆಗಿಚ್ಚಿನಲಿ ಹರನಿದಸು।
ಕಾವನಿಂದ್ರಾದಿಗಳ ಸೇನೇ
ಜೀವಭೂತನು ಜನಕೆ ನಿಮ್ಮಡಿ
ಗಾವು ಬಿನ್ನಹಮಾಳ್ಪದೇನಖಿಳಾತ್ಮಕಂಗೆಂದ ॥೨೯॥

ಅಭಯಹಸ್ತವತೋರಿ ಭುವನ
ಪ್ರಭುವೆ ರಕ್ಷಿಸಬೇಹುದೆಂದಾ
ತ್ರಿಭುವನೇಶ್ವರರೆರಗಿ ಕೈಗಳಮುಗಿದು ಬಿನ್ನೈಸೆ।
ನಿಭೃತಕಾರುಣ್ಯಾಬ್ಧಿ ಘನ ಸಂ
ನಿಭ ಗಭೀರೋಕ್ತಿಯಲಿ ಕೇಶವ
ನಭದಲಿದ್ದಂತೆಂದನಾ ಕಮಲಜಭವಾದ್ಯರಿಗೆ ॥೩೦॥

ಕೇಳಿದೆನು ತಾನೆಲ್ಲವನು ಧರೆ
ಯೂಳಿಗವನಂಜದಿರಿ ಧರಣಿಯ
ಮೇಲೆ ತಾನವತರಿಸಿದಪೆನುರುಗಾಧಿಪತಿಸಹಿತ।
ಕೋಲಲೋಚನೆ ಲಕ್ಷ್ಮಿಸಹಿತ ನೃ
ಪಾಲವೇಷಚ್ಛನ್ನ ದೈತ್ಯರ
ಸೀಳುವೆನು ಭಯಬೇಡೆನುತ್ತಡಗಿತು ನಭೋನಿನದ ॥೩೧॥

ಆಲಿಸುತ ವೈಯಿಕ್ಕಿ ಕಮಲಜ
ನೇಳುತಂದಿದನೆಂದನಮರರು
ಕೇಳಿವಿರೆ ಕಾರುಣ್ಯನಿಧಿ ಕರುಣಿಸಿದ ಮಾತುಗಳ |
ಪೇಳುವೆನು ನಿಮಗಾನು ಝುಡಿತಿಯು
ಲೇಳದಿರವನು ಮಾಡದೆಲ್ಲರು
ಮೌಳಿಗಳಲಾಂತೀಗಳಂತಿರೆ ಮಾಡಬೇಕೆಂದ ॥೩೨॥

ವಿದಿತವೆನೆ ವಸುದೇವನೆಂಬನ
ಸದನದಲಿ ಸಾಕ್ಷಾತ್ತುವಿಷ್ಣುವೆ
ಯದುಕುಲಾಮಲ ಕೈರವಾಕರ ಪೂರ್ಣಶಶಿಯೆನಿಸಿ |
ಉದಿಸಿದಪನಗ್ರಜನನಂತನು
ಪದುಮನಾಭಪ್ರಿಯಚಿಕೀರ್ಷೆಯ
ಉದಿಸಿದಪನೀ ಧರೆಗಭೀಷ್ಟಪ್ರದನು ತಾನೆನಿಸಿ ॥೩೩॥

ಎರಡನೆಯ ಸಂಧಿ

ವಸುದೇವ ದೇವಕೀ ವಿವಾಹ

ಸೂಚನೆ ॥ ದೇವಸನ್ನಿಭಮಹಿಮನಾ ವಸು
ದೇವನೆಸೆದನು ಮಧುರೆಯಲಿ ವರ
ದೇವಕೀದೇವಿಯ ವಿವಾಹದ ಪರಮ ವಿಭವದಲಿ ॥

ಅರಸಕೇಳಾಮಧುರೆಯೆಂಬಾ
ಪುರದೊಳಗೆ ದೇವಕನ ಮಗಳನು
ಪರಮ ಕನ್ಯಾರತ್ನವನು ದೇವಕಿಯನೊಂದು ದಿನ |
ಹರುಷದಿಂದೀಧರೆಯ ಜಂಗಮ
ಪುರುಷವೇಷ ಯದೂತ್ತಮನು ಪತಿ
ಕರಿಸಿದನು ವೈವಾಹಿಕದಲಂದೊಲಿದು ವಸುದೇವ ॥೧॥

ಅದುದುತ್ಸವವೇನನೆಂಬೆನು
ಯಾದವರ ಪುರದೊಳಗೆ ತಳಿತುದು
ಮೇದಿನೀಶ ಮಹಾವಿವಾಹ ವಿಧಾನವಿಸ್ತಾರ|
ಆದರದ ಹೂವಲಿಯ ರಚನೆಯು
ಬೀದಿಗಳ ಬಹುವಿಧ ವಿತಾನದ
ನಾದ ನಿರ್ಭರ ಬಹಳ ಭೇರೀವಾದ್ಯ ರಭಸದಲಿ ||೨||

ಕರಿ ತುರಗ ರಥ ಪಾದಚಾರಿಗ
ಳುರವಣಿಸಿ ಹೊರವಡಲು ರಥವನು
ವರವಧುಗಳೇರಿದರು ಬಹಳಚ್ಛತ್ರ ಚಾಮರದ|
ಭರವಲದ್ದುದು ಗಗನ ಸುರರಂ
ಬರವಲೊಯ್ಯಾರಿಸಲು ವೀಣಾ
ಮುರಜ ಶಂಖ ಧ್ವನಿ ಛಡಾಳಿಸಲೆಂಟುದಿಕ್ಕಿನಲಿ ||೩||

ಆ ರಥವನೊಡನೇರಿ ಕಂಸನು
ದಾರಮತಿ ತಂಗಿಯನು ಕಳುಹುತ
ಭೂರಿ ವಿಭವದಲಂದು ನಡೆದನು ಸಿಬ್ಬಣಿಗರೊಡನೆ|
ವೀರ ಮಾಗಧ ವಂದಿಗಳು ಕೈ
ವಾರಿಸಲು ಕಳಕಳದ ಪರಿಜನ
ವಾರಿಧಿಯ ಪರಮೋತ್ಸವದ ಸಂಭ್ರಮ ಸಮರ್ಥಿಸಿತು ||೪||

ಚಾರುಮಣಿ ರಚನೆಗೆಳು ಮೆರೆವಾ
ನೂರರು ದಿವ್ಯರಥಂಗಳನು ನಾ
ನೂರ ಭದ್ರಗಜಂಗಳನು ಹದಿನೆಂಟು ಸಾವಿರದ|
ಸಾರ ತುರಗಂಗಳನು ಮಗಳಿಗೆ
ಏರುವನುರಾಗದಲಿ ಕೊಟ್ಟನು
ದಾರಮತಿ ದಾಸೀ ಸಹಸ್ರವನುರುಗುಣಾನ್ವಿತರ ||೫||

ಕುದುರೆ ದಂಡಿಗಳಲ್ಲಿ ದಾಸಿಯ
ರೊದವಿದರು ಸಂಭ್ರಮದಲಂದೊ
ಪ್ಪಿದರು ಕೂಡೆ ಸಹಸ್ರ ಸಂಖ್ಯೆಯ ರಥದ ಬಳಸಿನಲಿ।
ಪದ ರಜದ ಪರಿವೇಷದಲಿ ಹೂ
ಳಿದುದು ನಭವೆಣ್ದೆಸೆಯ ಪರಿಜನ
ವುದಧಿ ಘೋಷದಲುಲಿಯೆ ವರವಧುಗಳನು ಪರಿವರಿಸಿ ॥೬॥

ಆ ಮಹೋತ್ಸವದೊಳಗೆ ಕಂಸ ಸ
ನಾಮನಾ ತಂಗಿಯನು ಮನ್ನಿಸು
ತಾ ಮಹಾರಥದೊಳಗೆ ವಾಘೆಯ ಪಿಡಿದು ಕುಳ್ಳಿರ್ದು।
ಪ್ರೇಮದಿಂದೆಸಗುತಿರೆ ಮೇಘ
ಸ್ತೋಮ ಮೊಳಗುವವೋಲು ವಿಭವ ವಿ
ರಾಮವಾಗಲು ನುಡಿದುದೊಂದು ಮಹಾ ನಭೋ ನಿನದ ॥೭॥

ಎಲವೊ ಕೇಳೆಲೆ ಕಂಸ ಖೂಳರ
ತಿಲಕ ತಂಗಿಯ ಮೋಹ ದಾವಾ
ನಳನ ಮೋಹವಿದರಿತುಕೊಳ್ಳೆಂಟನೆಯ ಗರ್ಭದಲಿ।
ನಳಿನನಾಭನು ಜನಿಸಿ ನಿನ್ನಯ
ತಲೆಯ ಮುರಿದಪನೆಂದು ನಭದಲಿ
ಮೊಳಗುವಂತಿರೆ ನುಡಿದಡಂಗಿದುದೊಂದು ಘನ ರಭಸ ॥೮॥

ಮಂಗಳದ ಬೆಳೆಗೈಯಲಕಟಕ
ಟಂಗರದ ಮಳೆಗರದ ತೆರನಾ
ಯ್ತಂಗದಲಿ ಭಯಹೊಯ್ದು ಖಳನದ ಕೇಳಿದಾಕ್ಷಣಕೆ।
ಕಂಗಳಲಿ ಕಿಡಿಗೆದರಿ ಫಡ ಫಡ
ತಂಗಿಯೋ ತನ್ನೊಡಲ ಕೇಡಿನ
ಸಿಂಗಿಯೋ ಸಾಲೆನುತ ಕೊಂಡನು ಝಡಿವುತಾಯುಧವ ॥೯॥

ಕೆಡೆಯೆನುತ ಬಾಲಕಿಯ ಮುಂದಲೆ
ವಿಡಿದು ಮದುವೆಯ ರಥದ ಹಲಗೆಯ
ಕೆಡೆಯೊಡೆದು ಕೊರಸಿಯು ಕೊರಳಿಗೆ ವೋಹುತಿರೆ ಕಂಡು।
ನಡುಗಿದನು ವಸುದೇವನಬಲೆಯು
ಕಡುನಿರೋಧ ಸ್ಥಿತಿಗೆ ಹೋಹೋ
ಕೆಡಿಸದಿರು ಕೊಲ್ಲದಿರೆನುತ್ತಡ್ಡವಿಸುತಿಂತೆಂದ ||೧೦||

ಕೊರಸಿಗೆ ಕೈಯೊಡ್ಡಿ ಕೇಳಿಲೆ
ವೀರ ವಿಪುಳ ಪರಾಕ್ರಮನೆ ನೀ
ಸಾರು ನೆನೆದುದಿದೇನು ವೈವಾಹಿಕ ಮಹೋತ್ಸವದ।
ಭಾಗವಣೆ ಲೇಸಾಯ್ತು ಹೆಂಗೊಲೆ
ವೀರರಿಗೆ ವೈಸಿರಿಯೆ ತಂಗಿಗೆ
ಪಾರಿತೋಷವೆ ಕೊರಳ ಖಡುಗದ ಧಾರೆಲೇಸೆಂದ ||೧೧||

ಕೊಂದವಗೆ ಕೊಲೆತಪ್ಪಲರಿವುದೆ
ತಂದೆ ಬರಿದೇ ಬಯಲ ಮಾತಿಗೆ
ಕೊಂದು ನೀನೇಕಿಳಿವೆ ನರಕಕೆ ಸಂಬಳವ ಘಳಿಸಿ।
ಹೊಂದಿದವರೇ ಮಗುಳೆ ಕೊಲುವರು
ಕೊಂದವರನಂತವರ ಕೈಯಲಿ
ಹೊಂದುವರು ಹಗೆ ಹಲವು ಜನ್ಮಾಂತರಕೆ ಬಿಡದೆಂದ ||೧೨||

ಹುಟ್ಟಿದಾಗಲೆ ಸಾವು ತಲೆಯಲಿ
ಕಟ್ಟಿಹುದು ಜೀವರಿಗೆ ವಿಧಿ ಬರೆ
ದಿಟ್ಟುದನು ಮೀರುವ ಸಮರ್ಥರದಾರು ತ್ರಿಜಗದಲಿ।
ಹುಟ್ಟಿದವರಿಗೆ ಸಾವು ತಪ್ಪದು
ನೆಟ್ಟನಿಂದೇಮೇಣು ಲೋಕದ
ಸೃಷ್ಟಿಕಾಲದ ಕಡೆಯಲಾಗಲಭಿಜ್ಞ ಮತವೆಂದ ||೧೩||

ಒಡಲಸಹಿತಲಿ ಕಂಸ ಸಾವಾ
ಗೊಡನೆಬಾರದು ಮನೆಯು ಮಕ್ಕಳು
ಮಡದಿಯುಂ ಮಾತೇಕೆ ಮಾಡಿದ ಕರ್ಮಜೀವರಿಗೆ |
ಒಡನೆ ಬಹುದು ಭವಾಂತರಂಗಳಿ
ಗೊಡರಿಸದಿರದು ಕಾರಣಾನ್ಯರಿ
ಗೆಡರನಸುವಿಂಗೆಂಬರರಿವುಳ್ಳವರು ಕೇಳೆಂದ ॥೧೪

ನಡೆವವರು ಮುಂದೊಂದು ಹೆಜ್ಜೆಯ
ನಿಡುತ ಹಿಂದಣಹೆಜ್ಜೆಯನು ನೆರೆ
ಸಡಿಲಿಸುವರಂತಂತೆ ದೇಹವ ಹಿಡಿದು ಹೋಹವನು |
ಬಿಡುವನೀಜೀವಾತ್ಮ ಕರ್ಮದ
ತೊಡಕಿನಲಿ ತನುಸಿಲುಕಿ ಹುಟ್ಟುತ
ಮಡಿವುತಿಹ ನಡೆವರಿಯದಲೆಯೆಲೆ ಕಂಸ ಕೇಳೆಂದ ||೧೫|

ಅರಿಯಲೀಸಳುಮಾಯೆ ಕನಸಿನ
ತೆರದಲೀ ಪೂರ್ವಾನುಭವವನು
ಮರಸುವಳು ವೈರಾಗ್ಯಜನಿಸದವೋಲು ಜೀವರನು |
ಅರಿದಡೀಭವಣಿಗೆಯ ದುಃಖವ
ನರಿದುಕೊಂಬರೆ ಮಗುಳೆ ವಿಷಯ
ಕ್ಕೆರಗಿ ಮಾನುಷ್ಯದಲಿ ಬರುದೊರೆವೋಗಿ ಕೇಳೆಂದ ||೧೬

ಎಲ್ಲಿಗೆಲ್ಲಿಗೆ ಮನವಿಡಪ್ರತಿ
ಮಲ್ಲವಿಹುದದು ದೈವಗತಿಯಿಂ
ದಲ್ಲಿಗಲ್ಲಿಗೆ ಬಳಿಸಲಿಸಿ ಕರಣೇಂದ್ರಿಯಂಗಳಿವು |
ನಿಲ್ಲದೊಡನೈದುವವು ಬಹುನಾ
ಯೋಲ್ಲಸಿತ ಭೌತಿಕ ಶರೀರವ
ನಲ್ಲಿಗಲ್ಲಿಗೆ ಹಿಡಿದು ಜನಿಸುವನಾತ್ಮ ನೋಡೆಂದ ||೧೭

ಜಲದ ಕೆಂಜಾದಿಗಳು ರವಿಮಂ
ಡಲಕೆ ತೋರ್ಪಂತನಲು ಕಾಷ್ಠಾ
ವಳಿಗಳಲಿತೋರ್ಪಂತೆ ತದ್ಗುಣಸಂಗಿಯೆಂದೆನಿಸಿ |
ಹೊಳೆದು ಕೆಡುವೀ ಕಾಯಕರಣಾ
ವಳಿಯ ವಿಷಯ ಭ್ರಾಂತಿ ತನಗೆಂ
ದಳಲುವನು ರಾಗಾನುಗತಿಯಲಿ ಜೀವನಿವನೆಂದ ||೧೮||

ದೇಹಿಯಿಂತದನರಿಯದೆಯೆ ಭೂ
ದ್ರೋಹವನು ನೆರೆಮಾಡಿ ಸುಗತಿಗೆ
ಬಾಹಿರನು ತಾನಾಗಿ ಕೆಡುವನು ಘೋರ ನರಕದಲಿ |
ದ್ರೋಹಿನೀಫಲತಪ್ಪದೆಂಬುದ
ನೂಹಿಸದೆ ಹೆಂಗೊಲೆಗೆ ಮನವನು
ಸಾಹಸಿಕ ನೀನೆಂತು ಮಾಡಿದೆ ತಂದೆ ಹೇಳೆಂದ ||೧೯||

ಮುನ್ನ ಭೂತದ್ರೋಹವನು ಸಂ
ಪನ್ನಮತಿ ನೀ ಮಾಡಿದುದರಿಂ
ದನ್ಯರಿಂದವೆ ಮರಣಭಯವೊದಗುವುದನರಿಯೆಂದ |
ಮುನ್ನು ಮರವೆಯಲಾದನರ್ಥವ
ನಿನ್ನು ಪತಿಕರಿಸುವರೆ ತಿಳಿಯೆಂ
ದುನ್ನತಾಮಳ ಕೀರ್ತಿ ನಿನಗಿದು ಯೋಗ್ಯವಲ್ಲೆಂದ ||೨೦||

ಕರುಣವಿಲ್ಲೆಲೆ ಪಾಪಿ ನಿನಗೀ
ತರುಣಿಯನು ಕೊಲುವಲ್ಲಿ ತಂಗಿಯು
ಕೊರಳನೋಡಾ ನಡುಗುತಿದೆ ಬೆವರಿಡುವ ಕಾಯದಲಿ |
ಹರಹರಾರಿದನೆನೆವರಿಂತಾ
ದರಿಸದೀ ಮದುವೆಯಲಿ ಮಂಗಳ
ವಿರಚನೆಯಲೀ ವೈಪರೀತ್ಯವಿದೇಕೆ ನಿನಗೆಂದ ||೨೧||

ಆರು ಹೇಳಿದರಾತ್ಮವಿದ್ಯೆಯ
ಸಾರವನು ನಿನಗಿದನು ನಿನ್ನೀ
ನಾರಿಗುಪದೇಶಿಸುವುದೊಡಲಿದು ನಿತ್ಯವಲ್ಲೆಂದು ।
ಆರು ಕೊಲುವರು ಕೊಲಿಸಿಕೊಂಬವ
ರಾರು ಸಾರೆಲವೆಲವೊ ಕೊಂದಡೆ
ಸಾರಲರಿಯದು ತನಗೆ ಪಾತಕವೆನುತ ಖಳ ಜರೆದ ॥೨೨॥

ಕೊಲ್ಲು ತನ್ನನು ಖಡುಗವನು ತೆಗೆ
ಕೊಲ್ಲದಿರು ಬಾಲಕಿಯನೇತಕೆ
ತಲ್ಲಣಿಸಿದಪೆ ಪಾಪಿ ಹೋಹೋ ಮಾಣುಮಾಣೆನಲು ।
ಮುಳ್ಳುಕಾಲಲಿ ಮುರಿದುಕಟಾ
ಹುಲ್ಲ ಸುಡುವರೆ ಸಾರೆಲವೊ ತಾ
ಬಲ್ಲೆನೆಲ್ಲವನೇಕೆ ನಿನಗೀಚಿಂತೆ ಹೋಗೆಂದ ॥೨೩॥

ಹಲವು ಪರಿಯಲಿ ನಾಲ್ಕುಪಾಯದ
ಬಳಕೆಯಲಿ ದುರ್ಬುದ್ಧಿಯನು ನೆರೆ
ತಿಳುಹಲರಿಯದೆ ನೊಂದಿ ಮನದೊಳಗಳಲಿ ಬಿಸುಸುಯ್ದು ।
ಗಳದಲಿಕ್ಕಿದ ಮೃತ್ಯುಪಾಶವ
ಗೆಲುವುದಾವುದುಪಾಯವೆನುತುಂ
ಮ್ಮಳಿಸಿ ತನ್ನೊಳಗೆಂದನಾ ವಸುದೇವನುತ್ತರವ ॥೨೪॥

ಬುದ್ಧಿಬಲವೆನಿತನಿತರಲಿ ನೆರೆ
ಬುದ್ಧಿವಂತರು ಕೊರಳಲಿಕ್ಕಿದ
ದುರ್ಧರದ ಪಾಶವನು ಗೆಲುವರು ಮೃತ್ಯುಸಂಜ್ಞಿಕದ ।
ಬುದ್ಧಿಗಿದುವೇ ಫಲವಲಾ ತ
ದ್ವೃದ್ಧಿಬಲದಲಿ ಹೋಗದಿರ್ದಡೆ
ಬುದ್ಧಿವಂತರಿಗಾವುಮಂಟಪರಾಧವಕಟೆಂದ ॥೨೫॥

ಕೊಡುವೆಸೀ ಮೃತ್ಯುವಿಗೆ ಮಕ್ಕಳ
ಮಡದಿಯನು ತಲೆಗಾವೆ ನಾನೀ
ಕಡುಕೃಪಣೆಯನನಾಥೆಯನು ಮೃತ್ಯುವಿನ ದೆಸೆಯಿಂದ ।
ಮಡದಿ ಸಾಯದೆ ತಾನು ಸಾಯದೆ
ಕಡುಗಲೀಖಳನಿವನು ಸಾಯದೆ
ಪಡೆದಸಾದಡೆ ಮಕ್ಕಳನು ತಾ ಕೊಡುವೆ ನಿನಗೆಂದ ॥೨೬॥

ಬಂದ ಮೃತ್ಯುವ ತಪ್ಪಿಸುವೆನಿದ
ನೊಂದು ಬಾರಿಗೆ ಬಾಲಕಿಗೆ ಮ
ತ್ತಿಂದು ಮೇಣದುಬರಲಿ ನಾಳೆಯೆ ಬರಲಿ ದೈವದಲಿ ।
ಎಂದು ಮನದಲಿ ತಿಳಿದು ನಿಶ್ಚಯ
ದಿಂದ ಜೀವಿತ್ತೊಡಲೊಳಗೆ ಕೃಪೆ
ಯಿಂದ ನಗುತವರೊಡನೆ ವರ ವಸುದೇವನಿಂತೆಂದ ॥೨೭॥

ನಿರ್ಣಯವ ಕೇಳಾದಡೆಲೆ ಸಂ
ಪನ್ನ ಗುಣವಾರಿಧಿಯೆ ಹೇಳೈ
ನಿನ್ನ ಕೊಲುವವರಾರು ಸತಿಯೋ ಮೇಣು ತತ್ಸುತನೋ ।
ನನ್ನಿ ನಿನಗಾನೊಂದುಪಾಯುವ
ಮುನ್ನಿಸುವಡಿದನೆಂಬೆನೆನಗು
ತ್ಪನ್ನರಾದಾತ್ಮಜರನೀವೆನು ನಿನ್ನ ವಶಕೆಂದ ॥೨೮॥

ವನಿತೆಗುದುಭವಿಸಿದರನೆಲ್ಲರ
ನಿನಗೆ ಕೊಡುವೆನು ಮಕ್ಕಳನು ನೃಪ
ವನಹಿಮಾಂಶುವೆ ಕೊಲ್ಲದಿರು ಹಗೆಯಲ್ಲ ಸತಿ ನಿನಗೆ ।
ಜನದ ನಗೆಗೆಡೆಯಾಗಬೇಡೆಂ
ದನು ನಯದಿ ಕೇಳೆನಲು ದುರ್ಮತಿ
ಮನದೊಳಗೆ ನೆರೆನಂಬಿಬಿಟ್ಟನು ಸತಿಯ ಮುಂದೆಲೆಯ ॥೨೯॥

ಕಳುಹಿ ಮರಳಿದನತ್ತಲಾ ಖಳ
ತಿಲಕನರಮನೆಗಿತ್ತಲಾ ನಿಜ
ಲಲನೆ ಸಹಿತೈದಿದನು ತನ್ನರಮನೆಗೆ ವಸುದೇವ ।
ಬಳಿಕ ಕಾಲಾಂತರಕೆ ಸತಿಮ
ಕ್ಕಳನು ನೆರೆದಂಡಕ್ಕೆ ಧನವನು
ಫಳಿಸುವಂತಳಲುತ್ತ ಪಡೆವಳು ಪಾವಕೋಪಮರ ॥೩೦॥

ಕೀರ್ತಿವಾನೆಂದೆಂಬ ತನ್ನಯ
ಪುತ್ರನನು ಮನದೊಳಗೆ ಮರುಗುತ
ಸತ್ಯಸಂಧನು ನುಡಿಯ ಪಾಲಿಸಲೆಂದು ವಸುದೇವ ।
ಮೃತ್ಯುವಿಗೆ ಕೊಳ್ಳೆನುತ ಕಂಸಂ
ಗಿತ್ತಡದನೀಕ್ಷಿಸುತೆ ತೂಗಿದನು
ತ್ತಮಾಂಗವನಕಟ ವಿಸ್ಮಿತನಾಗುತಿಂತೆಂದ ॥೩೧॥

ದೇವನೋ ತಕ್ಕಿಲ್ಲದಿಹ ವಸು
ದೇವ ನೀನಕಟಾತ್ಮ ವಿದ್ಯಾ
ಕೋವಿದರ ಕುಲದೈವವೋ ಶಿವ ಶಿವ ಮಹಾದೇವ ।
ಆವನಲಿ ದೊರಕೊಂಬುದೀ ಸ
ತ್ಯಾವಲಂಬನ ಧೈರ್ಯವೀ ದೃಢ
ಭಾವವೀಪರಿತೋಷವೀನಿರ್ವ್ಯಾಕುಲತೆಯೆಂದ ॥೩೨॥

ಕಂಡೆ ನಾನೀ ನಿನ್ನ ಸತ್ಯದ
ಗಂಡುಗಲಿತನದಿರವನೀತಕೆ
ಕೊಂಡುಹೋಗೀ ಶಿಶುವನಳಲಿಸಬೇಕೆ ತಂಗಿಯನು
ಚಂಡಿಯೇನುಳಿದೇಳು ಮಕ್ಕಳ
ಕೊಂಡು ಫಲವೆನೆನಗೆ ಕಾಲನ
ದಂಡವಹನೆಂಟನೆಯ ಗರ್ಭದ ಶಿಶುವಲಾಯೆಂದ ॥೩೩॥

ಎನಲು ಶಂಕಿಸಿ ಮನದೊಳಗೆ ಕಂ
ಸನನು ಮನ್ನಿಸಿ ಮಾತಿನಲಿ ಸೈ
ಯೆನುತ ಕಳುಹಿಸಿಕೊಂಡು ಬಂದನು ಮನೆಗೆ ವಸುದೇವ।
ವನಜಮುಖಿ ದೇವಕಿಗೆ ಮಕ್ಕಳು
ಜನಿಸಿದರು ಸುಖದುಃಖ ಹೇತುಗ
ಳೆನಿಸಲಾಪ್ತರು ಪಾಪಕರ್ಮಂಗಳವೊಲತಿಬಲರು ॥೩೪॥

ಒಂದು ದಿನ ಸುರನರಮಹೋರಗ
ಬೃಂದವಂದಿತ ಚರಣ ಕಮಲ
ದ್ವಂದ್ವನೆನಿಸುವ ನಾರದನು ಮಧುರಾ ಪುರಾಂತರಕೆ।
ಬಂದಡೀಕ್ಷಿಸುತಿದಿರುವಂದಭಿ
ವಂಧಿಸಲು ಕುಳ್ಳಿರ್ದು ಕಂಸಂ
ಗೆಂದನಮರರ ಗುಪಿತಗುಂಭಿತ ರಾಜಕಾರಿಯವ ॥೩೫॥

ಕುಶಲವೇ ನಿನಗಖಿಳ ಬಾಂಧವ
ನಿಕರಭೃತ್ಯಾಮಾತ್ಯವರ್ಗದ
ದೆಸೆಗೆ ಸುಖವೈ ಕ್ಷೇಮವೇ ಮಹಿಳಾಜನಂಗಳಿಗೆ।
ವಸುಧೆ ನಿಷ್ಕಂಟಕವೆ ನಿನಗಾ
ರೊಸವವರು ವೈರಿಗಳು ಬಲ್ಲೈ
ಮಸುಳದೈ ನೃಪನೀತಿಯೆಂದನು ನಾರದನು ನಗುತ ॥೩೬॥

ಇಲ್ಲ ಹಿತವರು ನಿನಗೆ ಕಾರಿಯ
ವಲ್ಲ ಹಗೆಯಾಹ ಸುರರು ಯಾದವ
ರೆಲ್ಲ ನೀನೇ ಕಾಲನೇಮಿ ಸುರಾರಿ ಪೂರ್ವದಲಿ।
ಬಲ್ಲೆನಾನಿದನರಿದವರು ಪೆರ
ರಿಲ್ಲ ದೇವಕಿಯುದರದಲಿ ಸಿರಿ
ವಲ್ಲಭನು ಸಂಜನಿಸಿದಪನಿದನರಿದುಕೊಳ್ಳೆಂದ ॥೩೭॥

ಬರಿದೆ ಸಾಯುದಿರಾರು ನೀನೆಂ
ದರಿಯುದೀ ಯಾದವರನಾರೆಂ
ದರಿಯುದೆನ್ನವರೆಂದು ನೆರೆ ವಿಶ್ವಾಸವನು ಮಾಡಿ ।
ಮರಸಿಗಂಟಲ ಕೊಯ್ದಪನು ಸಿರಿ
ಯೆರೆಯನಿಂದೀ ರಾಜಕಾರ್ಯವ
ನರಿತಿಹುದು ನಂದಾದಿ ಗೋಪರು ಸಹಿತ ಸುರರೆಂದ ॥೩೮॥

ಧರೆಯ ದುಷ್ಟ ಕ್ಷತ್ರರನು ಸಂ
ಹರಿಸಿ ಭೂಮಿಾ ಭಾರವನು ಪರಿ
ಹರಿಸಿ ಸುರರನು ರಕ್ಷಿಸಲು ಹರಿಯುದಿಸುತಿಹನೆಂದು ।
ಒರೆದು ಕಂಸಂಗೆಲ್ಲವನು ಮುನಿ
ಸರಿದನಂಬರ ಗತಿಯುಲತ್ತಲು
ಹೊರೆಗಳೆದ ಕಾಳೋರಗಂಗೆಣೆಯಾದನಮರಾರಿ ॥೩೯॥

ಎಲವೊ ಕರೆಕರೆ ಕಳ್ಳನನು ಕುಲ
ಗೆಡುಕ ವಸುದೇವನನು ಕಡಿ ಮು
ಕ್ಕಳನು ತರಹೇಳೆನುತ ಗದ್ದುಗೆ ವೊಯ್ದು ನಿಂದಿರ್ದು ।
ಲಲನೆ ಮುರುಗಲು ಶಿಶುಗಳಾರನು
ಶಿಲೆಯೊಳಪ್ಪಳಿಸಿದನು ಸೆರೆಸಂ
ಕಲೆಗಳಿಗೆ ವಸುದೇವ ದೇವಕಿಯರನು ನೂಕಿಸಿದ ॥೪೦॥

ತಂದೆಯನು ಸಂಕಲೆಯೊಳಿಟ್ಟಾ
ಮಂದಮತಿ ಯಾದವರು ಸುರರೆಂ
ದಂದು ಮೊದಲಾಗಖಿಳ ಮಿತ್ರ ಸಗೋತ್ರ ಬಾಂಧವರ ।
ವೃಂದವನು ಪರಿಭವಿಸಿ ಪಶು ಧನ
ಮಂದಿರವನಪಹರಿಸಿ ಬಾಧಿಸ
ಲಂದು ದೇಶತ್ಯಾಗವನು ಮಾಡಿದುದು ಜನನಿವಹ ॥೪೧॥

ಮತ್ತೆ ಮಾಗಧ ಚೈದ್ಯ ಧರಣೀ
ಪುತ್ರಮುರ ಬಾಣಾಸುರಾದಿ ಖ
ಳೋತ್ತಮ ಕ್ಷಿತಿಪಾಲಬಲವನು ನೆರಹಿ ಬೆಂಬಲಕೇ ।
ತುತ್ತುಗೊಂಬೆನು ಯಾದವರನೆನು
ತತ್ಯಧಿಕರೋಷಾನುಬಂಧವ
ಬಿತ್ತಿ ಬೆಳೆವುತ್ತಿರ್ದನಾ ನಿಜಬಂಧುವರ್ಗದಲಿ ॥೪೨॥

ಅರಸ ಕೇಳಿಂತಾರು ಮಕ್ಕಳು
ಸರಸಿಜಾನನೆಗುದಿಸಿ ಕಾಲನ
ಪುರಕೆ ಸಲಲಂವೇಳನೆಯ ಗರ್ಭದಲಿ ದೇವಕಿಗೆ ।
ಹರುಷ ಶೋಕಪ್ರದವೆನಲು ಗೋ
ಚರಿಸಿತಾ ಸಾಕ್ಷಾತ್ತು ಧರಣೀ
ಧರನೆನಿಪ ಶೇಷಾವತಾರನನಂತನಾಜ್ಞೆಯಲಿ ॥೪೩॥

ಸಕಲ ಭುವನೇಶ್ವರನು ಸಕಲಾ
ತ್ಮಕನು ಕಂಡನು ಕಂಸ ಭಯವನು
ಸಕತಿಯೆನಿಸುವ ಮಾಯೆಗಾಜ್ಞಾಪಿಸಿದನಿದನೊಲಿದು ।
ಚಕಿತ ಗರ್ಭವನೊಯ್ವುದಾ ದೇ
ವಕಿಯರಿಯದಂತಿರಲು ವರ ಬಾ
ಲಕಿಯ ರೋಹಿಣಿಯುದರದಲಿ ತಂದಿರಿಸು ಹೋಗೆಂದ ॥೪೪॥

ದುಷ್ಟ ಕಂಸಾಸುರ ಕುಲಾಧಮ
ನಟ್ಟುಳಿಗೆ ನಿಲಲಾರದುರೆ ಕಂ
ಗೆಟ್ಟು ದೆಸೆ ದೆಸೆಗೋಡಿ ವಸುದೇವನ ವಧೂನಿವಹ ।
ನೆಟ್ಟನಡಗಿರಲವರೊಳತ್ಯು
ತ್ಕೃಷ್ಟ ರೋಹಿಣಿಯೆಂಬಳೈದಳೆ
ಸೃಷ್ಟಿ ಭೂಮಿಕ ನಂದಗೋಕುಲದೊಳಗೆ ಹೋಗೆಂದ ॥೪೫॥

ಬಳಿಕ ತಾನೇ ದೇವಕಿಯ ಬಸು
ರೊಳಗೆ ತನಾಗೊಂಡವನಿ ಭಾರವ
ಕಳೆಯಲುದುಭವಿಸಿದಪೆನರಿ ಸಂದೇಹವಿಲ್ಲಿದಕೆ |
ಇಳಿದು ನೀನಾನಂದಗೋಪನ
ಲಲನೆಯಲಿ ಸಂಜನಿಸು ಜೀವಾ
ವಳಿಗೆ ಜೀವಿಕೆಯಾಗು ತನಗೆಯು ತಂಗಿಯಾಗೆಂದ ॥೪೬॥

ದೇವಿ ಪೂಜಿಸಿಕೊಂಡು ನರರಿಂ
ಗೀವುದಿಷ್ಟಾರ್ಥವನು ಬಲಿಯಂ
ನಾವಳಿಯಲಾರಾಧಿಸಲಿ ಜನವೆಲ್ಲಮಾರೆನಿನ್ನಂ |
ಪಾವನ ಸ್ಥಾನದಲಿ ಬಹುನಾ
ಮಾವಳಿಗಳಿಂತೆಸೆದು ಧರೆಯಲಿ
ಜೀವರಿಗೆ ಜಯವಿಜಯಸೌಖ್ಯ ಸಮೃದ್ಧಿಕರಿಯೆನಿಸಿ ॥೪೭॥

ಭುವನವಂದಿತೆ ದುರ್ಗೆ ಜಯ ವೈ
ಷ್ಣವಿ ಕುಮುದೆ ಚಂಡಿಕೆ ಪರಾಂಬಿಕೆ
ಪರಮಮಾಧವಿ ಮಾಯೆ ಶಾರದೆ ಕೃಷ್ಣೆ ಶಿವೆಯೆಂದು |
ದಿವಿಜವರನುತೆ ಕಾಳಿ ಕನ್ಯಾ
ಪ್ರವರೆ ನಾರಾಯಣಿಯೆನಲ್ಕಂ
ತವನಿಯಲಿ ವಿಖ್ಯಾತನಾಮವ ಪಡೆವು ರಂಜಿಸುನೀ ॥೪೮॥

ಫಣಿಪತಿಯೆ ನೀನೊಯ್ದಿರಿಸಿ ರೋ
ಹಿಣಿಯ ಜಠರಾಂತದಲಿ ಸಂಕರು
ಷಣನೆನಿಪ್ಪಭಿಧಾನ ಬಲ್ಲಿದನಾಗಿ ಬಲನೆಂದು |
ಗುಣವನಧಿ ಜಗತೀ ಮನೋಹರ
ಗುಣದಿಲೆಸೆವುದು ರಾಮವೆಸರಲಿ
ಗಣಿಸದಿರು ಹೋಗೆಂದೆನುತ ಮಾಯೆಯನು ಬೀಳ್ಕೊಟ್ಟ ॥೪೯॥

ದೇವದೇವನ ಬೆಸನ ಮಾಯಾ
ದೇವಿ ತಲೆಯಲಿ ಧರಿಸಿ ಪದದಲಿ
ಭೂರಿ ಬಲವಂದೇ ಹಸಾದವೆನುತ್ತ ಬೀಳ್ಕೊಂಡು |
ದೇವಕಿಯ ಜಠರದಲನಂತನ
ಸೋವದೊಯ್ದಿರಿಸಿದಳು ರೋಹಿಣಿ
ದೇವಿಯುದರದಲಾಕ್ಷಣದೊಳಾಳ್ದನ ನಿರೂಪದಲಿ ||೫೦||

ಪ್ರಭುಲಿಂಗಲೀಲೆ

ಗತಿ-೨.

ಮಾಯಾದೇವಿಯ ಬಾಲ್ಯ

ಚಿತ್ತವಿಸುವುದು ಸಕಲ ಶಿವಭ
ಕ್ತೋತ್ತಮರು ಮುಂದಣ ಕಥಾ ಸ
ದ್ಬಿತ್ತರವನಮರಾದ್ರಿಗೋಪ್ಪುವ ತೆಂಕ ದಿಕ್ಕಿನಲಿ ।
ಸತ್ಯದಲಿ ಸದ್ಭಕ್ತಿಯಲಿ ಸ
ದ್ವೃತ್ತಿಯಲಿ ಸಚ್ಚರಿತವಲಿ ಸಂ
ಪತ್ತಿನಲಿ ಸಲೆ ಸೊಗಸಿ ಬೆಳುವಲ ದೇಶ ಮೆಱೆದಿಹುದು ॥೧॥

ಅದರೊಳವನೀ ಕಾಂತೆಗೊಪ್ಪುವ
ವದನವೋ ಶೃಂಗಾರ ಸಾರದ
ಸದನವೋ ಸೊಬಗಿನ ಸುಮಾನದ ಸುಖದ ನೆಲೆವೀಡೊ ।
ಸುದತಿ ರತ್ನಗಳೊಗೆವ ಚೆಲುವಂ
ಬುಧಿಯೊ ಪೇಳೆನೆ ಸಕಲ ಸೌರಂ
ಭದಲಿ ಸೊಗಸಿಹುದಲ್ಲಿ ಬನವಸೆಯೆಂಬ ಪಟ್ಟಣವು ॥೨॥

ಆವ ಕಾಲದಲಾದಡೆಯು ಫಲ
ವೀವುತಿಹ ಪನಸುಗಳು ನೇಱಿಲು
ಮಾವು ದಾಡಿಮ ತೆಂಗು ನಾರಂಗಾದಿ ತರುಲತೆಯ ।
ತೀವಿ ಚರಿಸುವ ಶುಕ ಪಿಕ ಭ್ರಮ
ರಾವಳಿಯ ನಾನಾ ವಿಧದ ಶೋ
ಭಾವಹವೆ ತಾನಾದುದಾ ಬನವಸೆಯಲುದ್ಯಾನ ॥೩॥

ಕೇರಿ ಕೇರಿಯ ತಳಿರಿಡಿದ ಗುಡಿ
ತೋರಣಂಗಳ ಪರಿಮಳಿಸುತಿಹ
ಸಾರಣೆಯ ಕಾರಣೆಯು ಗಂಧೋದಕದ ಚಳೆಯಗಳ ।
ಸೌರಭದ ಪೂವಲಿಗಳಲಿ ಶಿಂ
ಗಾರಿಸಿದ ಬೀದಿಗಳ ಸೊಬಗಿನ
ಸಾರದಲಿ ಸಮನಿಸಿದುದತಿ ಸೌರಂಭ ಬನವಸೆಯ ॥೪॥

ವೇದಶಾಸ್ತ್ರಾಗಮ ಪುರಾಣವ
ನೋದುವಾ ದನಿಯಿಂದ ಕಳನೊಳು
ಕಾದಿ ಗಲಿದತಿ ಬಳರ ಕೈವಾರಿಸುವ ದನಿಯಿಂದ ।
ಬೀದಿ ಬೀದಿಗಳಲ್ಲಿ ವಿಗಡ ವಿ
ರೋಧ ಮದಗಜತತಿಯ ಬೃಂಹಿತ
ನಾದದಲಿ ಕಳಕಳತೆನೆತ್ತಿಹುದಾಗಳಾ ಪುರವು ॥೫॥

ನುಡಿದು ಜಾಣರು ಸಕಲ ಶಬ್ದವ
ನಡೆದು ಜಾಣರು ನಿಖಿಳ ರೀತಿಯ
ಕುಡಲು ಜಾಣರು ಕುಂದದಂತಿರಲರ್ಥಿಗರ್ಥವನು ।
ಪೊಡವಿಗಿದು ಪೊಸತೆಂಬ ಜನಪದ
ವಿಡಿದು ಕಿಕ್ಕಿರಿದಿರ್ದ ಬನವಸೆ
ಗೊಡೆಯನಾಗಿರುತಿರ್ಪನಾ ಮಮಕಾರ ಭೂಪಾಲ ॥೬॥

ಆರುಬಣ್ಣಿಸಬಲ್ಲರಾ ಮಮ
ಕಾರನೃಪನ ಮಹಾಪ್ರತಾಪನ
ಶೂರತೆಯ ಸಾಹಸವನಾತನ ಸಕಲ ಗುಣ ಗಣವ ।
ಧಾರಿಣಿಯೊಳಪ್ರತಿಮನಾಗಿ ಉ
ದಾರತೆಯಲಿರುತಿರ್ಪನಾತಗೆ
ನಾರಿಯಾಗಿಹಳೊಬ್ಬ ಮಾನಿನಿ ಮೋಹಿನೀದೇವೀ ॥೭॥

ಕುಸುಮಬಾಣನೊ ರತಿಯೊ ಮೇಣಾ
ಶಶಿಯೊ ರೋಹಿಣಿದೇವಿಯೋ ಮೇ
ಣೆಸೆವ ಸುರಪನೊ ಶಚಿಯೊ ಮೇಣ್ ಪುರುಷೋತ್ತಮನೊ ಸಿರಿಯೊ।
ಹೆಸರಿಡಲು ಹವಣಿಲ್ಲವೆಂಬೊಂ
ದಸಮ ಸಮ್ಮೇಳದ ಸಗಾಢದ
ಬೆಸುಗೆಯಲಿ ಮಮಕಾರನೃಪ ಮೋಹಿನಿಯರೆಸೆದಿಹರು ॥೮॥

ಅವರು ಮಕ್ಕಳ ಬಯಸಿ ಭರದಲಿ
ವಿವಿಧ ಗೌರೀವ್ರತವು ಮೊದಲಾ
ದವನು ನಾನಾ ಶಕ್ತಿ ದೇವತೆಯರ ಸಮೂಹವನು।
ಶಿವಪದ ಪ್ರಾಂತವನು ಸಾರದೆ
ಕವಲುವಟ್ಟೆಗಳಲ್ಲಿ ಜಡದೈ
ವವನು ಮಿಗೆ ಮಮಕಾರನೃಪ ಮೋಹಿನಿಯರರ್ಚಿಪರು ॥೯॥

ಭಾವಿಸಲು ಮಮಕಾರ ಮೋಹಿನಿ
ದೇವಿಯರ ಬಸಿಱನಲಿ ವರ ರಾ
ಜೀವಲೋಚನೆ ಚಿತ್ತರಂಜನೆ ಸಕಲ ಸಂಪನ್ನೆ।
ದೇವ ದಾನವ ಮಾನವರುಗಳ
ಡಾವಣಿಯ ದನ ಮಾಡಿ ಕಟ್ಟುವ
ಭಾವೆ ಮಾಯಾದೇವಿ ಹುಟ್ಟಿದಳಖಿಳ ವಿಭವದಲಿ ॥೧೦॥

ಇತ್ತಲಿಂತೀ ಮಾಯೆ ಹುಟ್ಟಿದ
ಡತ್ತಲಖಿಳ ಬುಧ ಪ್ರಜಂಗಳ
ಚಿತ್ತಗಳು ಪಲ್ಲಟಿಸಿ ಆಶಾಪಾಶವೆಗ್ಗಳಿಸಿ।
ಮುತ್ತು ನರೆತಿಹ ಜೀವ ಜಾಳರಿ
ಗೆತ್ತಿ ಕಾಮ ಗ್ರಹ ವಿಕಾರಂತೆ
ಮುತಿ ಮುರುಟಿಸುತಿರ್ದುದೇನೆಂದೆಂಬೆನಚ್ಚರಿಯ ॥೧೧॥

ಊರ ತೊಱೆದಡವಿಯೊಳು ಗಂಗಾ
ತೀರದೊಳು ಗಿರಿಗಹ್ವರಂಗಳ
ಘೋರತರ ಗುಹೆಗಳೊಳು ಜಲ ಪಂಚಾಗ್ನಿ ಮಧ್ಯದೊಳು ।
ಧೀರ ಮುನಿಗಳು ದಿಟ್ಟ ಸಿದ್ಧರು
ದಾರ ಯೋಗೀಶ್ವರರು ಭಯದಲಿ
ಭೋರನೆದೆಗುಂದಿದರು ಮಾಯೆಯ ಜನನ ಕಾಲದಲಿ ॥೧೨॥

ಚಿತ್ತ ಬಿದಿರಿಡಿದಿರ್ದ ತರುಲತೆ
ಹುತ್ತಬೆಳೆದ ಸಮಾಧಿವಂತರ
ಚಿತ್ತಸಂಚಲವಾಗಿ ನೆನಹಿನನೇಮ ನೆಲೆಗೆಡಲು ।
ಎತ್ತಣಿಂದೀ ಮಾಯೆ ಹುಟ್ಟಿತೆ
ನುತ್ತೆ ಚಿಂತಾಕ್ರಾಂತರಾಗಿರೆ
ಸತ್ಯನಿಧಿ ದುರ್ವಾಸನಾ ಪ್ರಸ್ತಾವದಲಿ ಸುಳಿದ ॥೧೩॥

ವಿನಯಮಿಗೆ ಬಳಿಕರ್ಘ್ಯಪಾದ್ಯಾ
ಸನಗಳಿಂ ಸತ್ಕರಿಸಿ ಮುದದಲಿ
ತನತನಗೆ ಸಾಧಕರು ಸಿದ್ಧರು ವರ ತಪೋಧನರು ।
ಇನಿತು ಕಾಲದೊಳಿಲ್ಲದೀಗಳು
ಮನಸು ಸಂಚಲವಾದುವೆಮಗೆಂ
ದೆನುತ ಪೇಳಿದರವರುಗಳು ದುರ್ವಾಸ ಮುನಿಪತಿಗೆ ॥೧೪॥

ಹೂಣಿಸಿಯೆ ಹುರಿಗೊಂಡು ನಱೆ ಗೀ
ರ್ವಾಣರೆಲ್ಲರ ಮುಂದೆ ಮಿಗೆ ರು
ದ್ರಾಣಿ ತನ್ನಯ ತಾಮಸಾಂಗದ ಮಾಯೆಯನು ಕಳುಹೆ ।
ಮಾಣದಿಳೆಯೊಳು ಜನಿಸಿ ಬಂದಳು
ಕಾಣರೇ ಬಳಿಕಲಿ ಸಮಾಧಿ
ಪ್ರಾಣಿಗಳಿಗೆಲ್ಲಿಯದು ತರಹರವೆಂದನಾ ಮುನಿಪ ॥೧೫॥

ಅಲ್ಲದಿರ್ದಡೆ ನಮಗಿದೆತ್ತಣ
ತಲ್ಲಣವು ಬರಲೇನು ಕಾರಣ
ವಿಲ್ಲ ನಿಮ್ಮ ನಿರೂಪವಿದು ದಿಟವೆನುತ ಮುನಿನಿಕರ ।
ಒಳ್ಳಿತಾಯಿತು ನೀವು ಕೃಪೆಯಿಂ
ದಿಲ್ಲಿಗೆಯ್ತಂದದು ನಿಮಿತ್ತದ
ಲೆಲ್ಲ ಸಂಶಯವಳಿದುದೆಂದರು ಮುನಿಗಳಾತಂಗೆ ॥೧೬॥

ಮತ್ತೆಮಾಣದೆ ಕೇಳಿದರು ಮುನಿ
ಪೋತ್ತಮರು ದುರ್ವಾಸ ಮುನಿಯನು
ಚಿತ್ರವಿಸು ತನ್ಮಾಯೆ ಹುಟ್ಟಿದಳೇನು ಕಾರಣವು ।
ಎತ್ತಣದು ಸಾಂಗತ್ಯ ನಮಗೀ
ಬಿತ್ತರವನಱಿಪೆಂದಡವರಿಗೆ
ತಥ್ಯವನು ವರ ಮುನಿಗಳಿಗೆ ದುರ್ವಾಸನಿಂತೆಂದ ॥೧೭॥

ಮಾತು ಮಾತಿನೊಳೋಲಗದಲಗ
ಜಾತೆ ಶಿವನೊಳು ಗೋಷ್ಠಿಮಾಡುತ
ಲಾತನನು ನಿಜರೂಪ ಕೇಳಿದಡಲ್ಲಮಪ್ರಭುವ ।
ಭೂತಳದೊಳಱಿದಲ್ಲಿ ತಿಳಿಯೆನೆ
ಭೂತನಾಥನು ಬಳಿಕ ಪಾರ್ವತಿ
ಪ್ರೀತಿಯಿಂದಟ್ಟಿದಳು ನಿಜ ತಾಮಸದ ಮಾಯೆಯನು ॥೧೮॥

ಇದುವೆ ಕಾರಣ ಮಾಯೆ ತಾ ಹು
ಟ್ಟಿದಳು ಬಳಿಕಿನ್ನಾರಿಗಾದಡೆ
ವಿದಿತವಾಗಿಹುದಲ್ಲಮಪ್ರಭು ಲಿಂಗ ಸಂಗವನು ।
ಹೃದಯದೊಳು ಹುರಿಗೊಳಿಸುವಡೆ ಬಳಿ
ಕದರ ಮಹಿಮೆಯನೇನ ಹೇಳುವೆ
ಸದಮಲ ಸ್ವಾತಂತ್ರ್ಯ ನಿಜವಹರೆಂದನಾ ಮುನಿಪ ॥೧೯॥

ಎಂದು ಪೇಳ್ದೆಲ್ಲರಿಗೆ ಮನದ ತ
ಮಂಧವನು ಪರಿಹರಿಸಿ ಬಳಿಕಾ
ನಂದದಲಿ ದುರ್ವಾಸಮುನಿ ಹೋದನು ನಿಜಾಶ್ರಮಕೆ ।
ಅಂದು ಮೊದಲಾಗವರುಗಳು ಮನ
ಬಂದ ಪರಿಯಲಿ ಭಕ್ತಿಯುಕ್ತಿಗ
ಳಿಂದ ಸಾಧಿಸುತಿರ್ದರೆಮ್ಮಯ ಗುರು ಗುಹೇಶ್ವರನ ॥೨೦॥

ಮತ್ತೆ ಮುದದಲಿ ತಮ್ಮ ತಮ್ಮಯ
ಚಿತ್ತದೊಳಗಲ್ಲಮನ ನೆನವುತ
ಸತ್ತ್ವ ಸುಳಿಯದೆ ಮುನ್ನಿನಂತಿರ್ದರು ತಪೋಧನರು ।
ಇತ್ತಲೀ ಮಮಕಾರನೆಂಬ ನೃ
ಪೋತ್ತಮನ ಸುಕುಮಾರಿ ಮಿಗೆ ಬೆಳೆ
ವುತ್ತಲಿರ್ದಳು ಘಳಿಗೆ ಸಂಖ್ಯೆಗೆ ಸಕಲ ಸುಖದಿಂದ ॥೨೧॥

ಶಿಶುವ ನೋಡಿದ ಕಣ್ಗೆ ಮಾಯವೆ
ಮುಸುಕುವುದು ಮನಮೆಚ್ಚುವುದು ಮೋ
ಹಿಸುವುದೀಪರಿ ಜನನಿ ಜನಕಾದ್ಯರುಗಳೆಲ್ಲರಿಗೆ ।
ವಸುಮತೀ ಪತಿ ಬಳಿಕಲತಿ ಸಂ
ತಸದೊಳಾತ್ಮಜೆಗಖಿಳ ವಿಭವದಿ
ಹೆಸರನಿಟ್ಟನು ಮಾಯೆಯೆಂಬ ನವೀನ ನಾಮವನು ॥೨೨॥

ಹಲಗೆ ಮಾಣಿಕದೊಟ್ಟಿಲಲಿ ಮ
ಗ್ಗುಲಿಸಿ ಮಲಗಿ ನಿರೀಕ್ಷಿಸುತ ಮಾ
ರ್ಪೊಳೆವ ತನ್ನನೆ ಕಂಡು ನಲಿವುತ ನಗುತ ಕೈದುಡುಕಿ ।
ಸೆಳೆದು ತೆಗೆದಡೆ ಬಾರದಿರಲಾ
ನೆಳಲನೊದೆವುತ ಕಾಲಗೆಜ್ಜೆಗ
ಳುಲುಹನಾಲಿಪ ಮಾಯೆ ಮೆಱೆದಳು ಬಾಲಲೀಲೆಯಲಿ ॥೨೩॥

ಆಡಿಸುವ ದಾದಿಯರ ಸೈಗೆಯ
ಲಾಡಿ ಪರಿದಪ್ಪಪ್ಪೆನ ತ್ರಲಿ
ಓಡಿ ಬಂದಮರ್ದಪ್ಪಿ ಮೇಲುದ ಸೆಱಗಿನೊಳಗಡಗಿ |
ನೋಡುತಲಿ ದಾ ಎನುತ ಕೈ ಮು
ದ್ದಾಡಿ ಮುಂದಲೆವಿಡಿದು ಕುಣಿ ಕುಣಿ
ದಾಡಿ ಸೌಖ್ಯವನೀವುತಿರ್ದಳು ಮಾಯೆ ಮೋಹಿನಿಗೆ ॥೨೪॥

ಒಮ್ಮೆ ಮಮಕಾರಾವನೀಪನ
ನೊಮ್ಮೆ ಮೋಹಿನಿದೇವಿಯನು ಮ
ತ್ತೊಮ್ಮೆ ತನ್ನುವನಾಡಿಸುವ ತರುಣಿಯರ ತಂಡವನು |
ಹೆಮ್ಮೆಗೊಳಿಸುತ ಸುಖಮುಖವ ಹೊಱ
ಹೊಮ್ಮಿಸುತ ನೆಱೆ ಬಾಲಲೀಲೆಯ
ಸೊಮ್ಮ ಸೂಱೆಯ ಕೊಡುತಲಿರ್ದಳು ಮಾಯೆ ಮೋಹಿನಿಗೆ ॥೨೫॥

ಬೀಱುತಿರ್ದಳು ಮುದ್ದು ತನವನು
ಹೇಱುತಿರ್ದಳು ಸಕಲ ಚೆಲುವನು
ತೋಱುತಿರ್ದಳು ಜಗದ ಜಂಗುಳಿಗಾಡು ಪೊಲನಾಗಿ |
ಸೂಱುತಿರ್ದಳು ಸಕಲ ಸೊಬಗನು
ಮೀಱುತಿರ್ದಳು ದಿನ ದಿನಕೆ ಕಳೆ
ಯೇಱುತಿರ್ದಳು ಮಾಯೆ ವಿವಿಧ ವಿಲಾಸ ವೃತ್ತಿಯಲಿ ॥೨೬॥

ಹಿಡಿ ಹಿಡಿದು ಕೊಂಡರ್ತಿಯಲಿ ಬೆಂ
ಬಿಡದೆ ಶಿಕ್ಷಾಚಾರ್ಯತನದಲಿ
ಜಡಿದು ಝುಂಕಿಸಿ ಮುದ್ದುತನಮಿಗೆ ಮಾಯೆ ತನ್ನಂತೆ |
ನಡೆಯ ಕಲಿಸಿದಳಂಚೆವಿಂಡಿಗೆ
ನುಡಿಯ ಕಲಿಸಿದಳರಗಿಳಿಗೆ ಸರ
ವಿಡಲು ಕಲಿಸಿದಳಾಕೆ ತನ್ನರಮನೆಯ ಕೋಗಿಲೆಗೆ ॥೨೭॥

ಆಕೆ ಕನ್ಯಾ ಮಾಡದೊಳು ನಾ
ನಾ ಕುಶಲ ಶಾಸ್ತ್ರವನು ವಿದ್ಯಾ
ನೀಕವನು ಪರಿಚರಿಸಿ ಪರಿಣತೆಯಾಗಿ ಸುಖದಿಂದ ।
ಆ ಕುಮಾರಿಕೆ ಇರುತಿರಲು ಬಳಿ
ಕಾ ಕಳಾನಿಧಿ ನೃಪತಿ ಮಾಯೆಗೆ
ಬೇಕೆನುತಲಾಳಾಪಿಸಿದ ಮದುವೆಯನು ಮನದೊಳಗೆ ||೨೮||

ಇರುತಿರಲು ಮಮಕಾರ ಭೂವಿಾ
ಶ್ವರನ ವಿಮಲಾನ್ವಯಕೆ ನೆಟ್ಟನೆ
ಗುರುವೆನಿಪಹಂಕಾರನೆಂಬಾಚಾರ್ಯನೆಯ್ತಂದು ।
ಅರಸ ಮಾಡುವ ವಂದನೆಯನಾ
ದರಣೆಯನು ಕೈಕೊಳುತ ಕೇಳಿದ
ಕರುಣದಿಂದಲಿ ಭೂಮಿಪನ ಸುಕ್ಷೇಮ ಕುಶಲವನು ||೨೯||

ಕೇಳಿ ಹರುಷಿತನಾದನಾ ಭೂ
ಪಾಲಕನ ಸುಕ್ಷೇಮ ಕುಶಲವ
ನಾಲಿಸುತಲವನಿಪನ ಕೆಲದ ಕುಮಾರಿಯನು ಕಂಡು ।
ಆ ಲತಾಂಗಿಯ ರೂಪು ರೇಖಾ
ಜಾಳವನು ಚೆನ್ನಾಗಿ ತಿಳಿದು ಕೃ
ಪಾಳು ನಿಶ್ಚೈಸಿದನು ಕಾರಣ ಕನ್ಯೆಯಿವಳೆಂದು ||೩೦||

ಫಲಿತ ಚೂತದ ಮರನ ಸಿರಿ ಕೋ
ಗಿಲೆಗೆ ನೆಟ್ಟನೆ ಹಾಲು ಹಂಸೆಗೆ
ಲಲಿತ ಕುಸುಮದ ಕಂಪು ತುಂಬಿಗೆ ಸವಿಯನೀವಂತೆ ।
ಉಳಿದ ಖಗ ಕಡದುಂಬಿಗಳಿಗೆ ಸುಖ
ವಳವಡುವುದೆ ಸದಾ ಶಿವಂಗೀ
ಲಲನೆಯಲ್ಲದೆ ನರರಿಗುಚಿತವೆ ಭೂಪ ಕೇಳೆಂದ ||೩೧||

ಶಿವನೆ ಪತಿಯಹನೆಂದು ನೀವ್ ಚಿ
ತ್ರವಿಸಿದಿರಿ ಆ ಶಿವನು ದಿಟ ಮಾ
ನವ ಶರೀರಿಗಳಿಗೆ ಸುಸಾಧ್ಯನೆ ದೇವ ಪೇಳೆನಲು |
ಶಿವನು ಶಿವಭಕ್ತಿಯನು ಸಲೆ ಮಾ
ಡುವರಿಗವರವರಿಚ್ಛೆಯನು ಸಲಿ
ಸುವನು ಸತ್ಯವಿದೆಂದನೊಲಿದಾಚಾರ್ಯ ಶಿಷ್ಯಂಗೆ ||೩೨||

ಎನುತ ಸಂಭ್ರಮದಿಂದ ಮಾಯಾಂ
ಗನೆಗೆ ಉಪದೇಶವನು ಮಾಡಿದ
ಡನುಕರಿಸಿ ಮಾಡುತ್ತಲಿರ್ದಳು ಭಕ್ತಿಯನು ಬಳಿಕ |
ಜನಪತಿಯೆ ಸುಖದಿಂದಲಿರಿ ಎಂ
ದೆನುತಹಂಕಾರಾರ್ಯ ಬೀಳ್ಕೊ
ಟ್ಟನುಗತಿಯುಲೆಯ್ದಿದನು ತನ್ನಯ ನಿಜ ನಿವಾಸವನು ||೩೩||

ಧರಣಿಪಾಲಕನಿತ್ತ ಸುಖದಿಂ
ದಿರುತಲಿರ್ದನು ಈ ಕುಮಾರಿತಿ
ಹರುಷದಿಂದಲಿ ನಿತ್ಯ ನೇಮವ ಹಿಡಿದು ಛಲದಿಂದ |
ಪುರಕೆ ಘಟಿಕಾ ಸ್ಥಾನವೆನಿಸುವ
ಪರಮ ಸಿದ್ಧಿಯ ಸೀವ ಮಧುಕೇ
ಶ್ವರನ ಪೂಜಿಸುತಿರ್ದಳಿನಿಯನ ಬಯಸಿ ಭಕ್ತಿಯಲಿ ||೩೪

ಅಷ್ಟವಿಧದರ್ಚನೆಗಳಿಂದುಭ
ಯಾಷ್ಟ ವಿಧದುಪಚಾರದಿಂದಲ
ಭೀಷ್ಟವೆನಿಸುವ ನಿಜಮನೋವಲ್ಲಭನ ಬಯಕೆಯಲಿ |
ಶ್ರೇಷ್ಠವೆನಿಸುವ ಮಧುಕನಾಥನ
ತುಷ್ಟಿವಡುವಂತರ್ಚಿಸಿದಳೀ
ಸೃಷ್ಟಿಯೊಳು ಸಾಂಗದಲಿ ಮಾಯಾದೇವಿ ಮನವೊಲಿದು ||೩೫||

ಸುಗ್ಗಿ ಬರುತಿದೆ

೧

ಅಡಿಯ ಗಜ್ಜೆ ನಡುಗೆ ಹೆಜ್ಜೆಯಿಡುತ ಸುಗ್ಗಿ ಬರುತಿದೆ
ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ

ಕಣಿವೆಯಿಳಿದು ತೆವರಸೇರಿ
ತರುಗಳಲ್ಲಿ ತಳಿರ ಹೇರಿ
ಹೊಸತು ಜೀವ ಕಳೆಯ ಬೀರಿ
ಸುಗ್ಗಿ ಮೂಡುತಿರುವುದು
ಬನದ ಬಿನದದಿನಿದು ನಿನದ ಮನದೊಳಾಡುತಿರುವುದು

೨

ಬಂಡನುಂಡು ದುಂಬಿವಿಂಡು ಹಾಡುತಿಹವು ಹಾರುತ
ಮತ್ತ ಮಧುಮಾಸವಿದು ಬನ್ನಿರೆಂದು ಸಾರುತ

ಜಾರುತಿಹುದು ಮಾಗಿ ಚಳಿ
ಕುಸುಮಿಸಿರುವ ಲತೆಗಳಲಿ
ಮೊರೆಯುತಿಹವು ಸೊಕ್ಕಿದಳಿ
ಮುಕ್ತ ಜೀವಸಂಪದಿ
ಉಲಿಯೆ ಪಿಕ ಗಳಪೆ ಶುಕ ಸುಗ್ಗಿ ಬಂದಿತಂಪದಿ

೩

ಮಾಮರಂಗಳಲಿ ವಿಹಂಗ ತತಿಯ ನಿಸ್ವನಂಗಳಿಂ
ತಳಿರ ಸೊಂಪನಲರ ಜೊಂಪನಾಂತ ಬನ ಬನಂಗಳಿಂ

ನಲಿವ ಪಚ್ಚೆಯುಡೆಯನುಟ್ಟು
ಅರಳಿದರಳುಗಳನು ತೊಟ್ಟು
ಹಿಮದ ಮಣಿಯ ಮಾಲೆಯಿಟ್ಟು
ತಣಿದು ಸೋಲಿ ಕಣ್ಮನಂ
ಕರೆವಳೋವಿ ಬನದ ದೇವಿ ತನ್ನ ಸುಗ್ಗಿಯಾಣ್ಮನಂ

೪

ಹಾರಿ ಮೊರೆವ ಜಾರಿ ಹರಿವ ತೊರೆಯ ತಂಪು ದಡದೊಳು
ಮೇಲೆ ಭಾನು ತೇಲೆ ನಾನು ಕುಳಿತು ಮರದ ಬುಡದೊಳು
ತಿರೆಯ ಸಿರಿಯ ನೋಡುತಿರುವೆ
ಕುರಿತು ಹಾಡ ಹಾಡುತಿರುವೆ
ಸೊಬಗಿನೊಡನೆ ಕೂಡುತಿರುವೆ
ಕರಗಿ ಮುಳುಗಿ ತೇಲುತ
ತೊರೆದ ಗಂಡನೆದುರುಗೊಂಡ ಕೋಮಲೆಯನು ಹೋಲುತ

೫

ತುರುಗಳೆಲ್ಲ ಮೇಯೆ ಗೊಲ್ಲ ಬಸಿರಿ ಮರದ ನೆಳಲಲಿ
ಮಲಗಿಸಿಹನು ಮಧುವನವನು ಮುದವನುಲಿವ ಕೊಳಲಲಿ
ನಿಂತು ಮೇವ ಮರೆತು ಬಿಟ್ಟು
ಕಿವಿಯನೆರಡ ನೆಟ್ಟಗಿಟ್ಟು
ಗೊಲ್ಲನೆಡೆಗೆ ದಿಟ್ಟಿಯಿಟ್ಟು
ಬರೆದ ಚಿತ್ರದಂದದಿ
ಗವಿಗಳೆಲ್ಲ ಸವಿಯ ಸೊಲ್ಲನಾಲಿಸಿಹವು ಚಂದದಿ

೬

ಗಿರಿಗಳಿರಾ, ತೊರೆಗಳಿರಾ, ಎಲೆ ವಿಹಂಗಮಗಳಿರಾ,
ತರುಗಳಿರಾ, ಬನಗಳಿರಾ, ಮಗಮಗಿಪ ಸುಮಗಳಿರಾ
ಸೊಬಗೆ ನನ್ನಿ ಎಂದು ಸಾರಿ
ನನ್ನಿಯೆ ಸೊಬಗೆಂದು ತೋರಿ
ಸೊಗದ ಸೊದೆಯ ತಿರೆಗೆ ಬೀರಿ
ಒಲ್ಮೆ, ಸೊಬಗು, ಸೊಗದಲಿ
ಪರಮ ಪುರುಷನಮಲ ಹರುಷವಿಹುವ ಸಾರಿ ಜಗದಲಿ

೭

ಮಧುವೆ ಬಾರ! ಮುದವ ತಾರ! ನೀನೆ ದೇವದೂತನು!
ಸರದ ಚಿಂತೆ ಮರೆಯುವಂತೆ ಕಳುಹುವನು ವಿಧಾತನು
ಬುವಿಯ ಸಿಂಗರಿಸುತ ಬಾರ!
ಪರದ ಬೆಳಕನಿಳೆಗೆ ತಾರ!
ಸೊಬಗೆ ಶಿವನು ಎಂದು ಸಾರ!
ಬಾರ ಶಕ್ತಿದಾಯಕ!
ಹಳೆತ ಕೂಡಿ ಹೊಸತು ಮಾಡಿ ಬಾರೆಲೆ ಋತುನಾಯಕ!

ನಾಡಿನ ಹಾಡು

ತಾರೆಗಳು ಮೇಳವಿಸಿ ಬಂದು ಬಿಟ್ಟಿಹ ಬೀಡು ನಮ್ಮ ಕನ್ನಡದ ನಾಡು
ತಾರೆಗಳ ಒಡಹುಟ್ಟು, ತಾರೆಗಳ ಒಡನಾಡಿ ನಮ್ಮ ಕನ್ನಡದ ಹಾಡು.
ಭೂಪತಿಯು ಕವಿಯಾಗಿ ಕವಿ ಚಮೂಪತಿಯಾಗಿ ಮೆರೆದಿರುವ ನಮ್ಮ ನಾಡು,
ಪತಿಯಿಲ್ಲದವಳಂತೆ ಗತಿಯಿಲ್ಲದಾಗಿಹುದು, ಹೀನವಾಗಿಹುದು ನೋಡು!
ಧವಲಗಿರಿ ಗಂಗೆಯನು ಆಮಂತ್ರಿಸಲು ನಡೆದ ನಮ್ಮ ಕನ್ನಡದ ತಾಯಿ!
ಕಳೆದುಕೊಂಡಿಹಳಿಂದು ಕೃಷ್ಣೆಗಿಹ ಸೌಹಾರ್ದವನ್ನು ಸಹ; ಇಲ್ಲ ಬಾಯಿ!
ಸಾಮ್ರಾಜ್ಯಗಳನಾಳಿ ಮೆಯ್ಯುಂಡ ಕನ್ನಡರು ಹೆಸರಾದ ಸಾಹಸಿಗರು—
ಕೊಳೆಯುತಿಹರಲ್ಲೇನೊ! ಅಲ್ಲಲ್ಲಿ ಈಗಾಗಿ ಹೊರಮನೆಯ ಬಾಣಸಿಗರು
ಸುಲಿದ ಹಣ್ಣಂತೆ ಮಧು ಮಧುರವಾಗಿಹ ನುಡಿಯುಸುರಿದ ಹೆಣ್ಣಿಹುದು ನೋಡು!

ಸಲಿಗೆಯನು ಬೆಳೆಸುತ್ತ ಸುಲಿಗೆಯನು ಮಾಡಿದರು ಕನ್ನಡಕೆ ಬಂತು ಕೇಡು
ಗ್ರೀಷ್ಮಕಿಹ ಮುಂಬೆಳಗು ಸಹ ತೋರುತಿಹುದೀಗ ಮುಂಗಾರ ಸಂಜೆಯಂತೆ.
ಭೀಷ್ಮರಂತಹ ಸುತರ ತಾಯಿ ಚಿಂತೆಯಲಿಹಳು ವಿಧವೆಯಿಹ ಬಂಜೆಯಂತೆ.
ಚಿಂತೆಯಾ ಬೆಂತರವು ಬೇಡವ್ವ ನಲ್ದಾಯಿ! ಈ ನಿನ್ನ ಅಧರದಲ್ಲಿ
ಮುತ್ತೊಂದು ಕಾಣುವುದು ದೇವನಿತ್ತಿಹುದಿಂದು ಮತ್ತೆ ನಿನ್ನುದರದಲ್ಲಿ
ಬೆಳಗುವುದು ಹೊಸಹುಟ್ಟು, ಬರಲಿಹನು ಸುಕುಮಾರ, ಬರಲಿಹನು ಪರಮ ಪುರುಷ!

ಪುಲಿಕೇಶಿ ಮಾಧವರ ಬರವಿನಂತಾದೀತು ಮತ್ತಿನ್ನು ನಿನ್ನ ಹರುಷ!
ಅವನೊಂದು ಹೆಜ್ಜೆಯದು ಬಿಜ್ಜೆ, ಪದಸಂಪದವು, ಇನ್ನೊಂದು ಮುಕ್ತಿ-ಪದವು!
ಒಂದಡಿಯು ಬಿಡುಗಡೆಯು, ಇನ್ನೊಂದು ಹತ್ತುಗಡೆ-ಇಂತಿಹುದು ಅವನ ಒದವು.
"ಕಣ್ಗೆ ಕಾಮನರಕ್ಷೆ, ಬೆನ್ಗೆ ಭೀಮನರಕ್ಷೆ, ಮುಂಗೈ ಮುರಾರಿರಕ್ಷೆ"
ಎಂದು ಸಂತಸವುಕ್ಕಿ ಒರೆಯುತಿದೆ ಹಾಲಕ್ಕಿ, ಹೇಳುವೆನು ನಿನ್ನ ಸಾಕ್ಷಿ!
ನಿನ್ನ ಬೇಸರ ಬೇನೆ ಬಲುಹಿರಿದು ನಲ್ದಾಯಿ! ಪಡೆವ ಫಲವದಕು ಹಿರಿದು.
ಬಾಳೋಣ ಏಳಿನ್ನು! ಅರಸಾಗಿ ಆಳೋಣ! ಮನೆ ಮಾರುಕರನ್ನು ಮುರಿದು!
ನಿನ್ನ ನಗೆಯೋ ಬೆಳ್ಳಿ, ನಿನ್ನ ಮೊಗ ಚಂದ್ರಮನು, ನಿನ್ನ ಮಗ ಸೂರ್ಯನಿರಲಿ!
ನಿನ್ನವರನುದ್ಧರಿಸಿ ಮನುವಂಶವನು ಹರಸಿ ಬೆಳಗುತಿಹ ಆರ್ಯನಿರಲಿ!

ಓ! ಹಿಮಾಲಯ

ಓ ! ಹಿಮಾಲಯ ಪರ್ವತಾಧೀಶ ಘನ ಮಹಿಮ
ಏನೆಂದು ಬಣ್ಣಿಸಲಿ ನಿನ್ನ ಹಿರಿಮೆಯನು

ಗಗನ ಚುಂಬಿತ ನಿನ್ನ ಗಿರಿಶಿಖರ
ಸಗ್ಗಿಗರ ನಿಚ್ಚಣಿಗೆ !
ಆ ಗೌರಿಶಂಕರವು ಕಾಂಚನಗಂಗ
ಇಂದ್ರಕೀಲವು ಮೇಣು! ॥೧॥

ಜಗವ ಪಾಲಿಪ ನಿನ್ನ ನದಿಸುತೆಯರು
ಭಾರತದ ಪಾವನ ಪ್ರಾಣನಾಡಿಗಳು ;
ಆ ಗಂಗೆ ಸಿಂಧು ಬ್ರಹ್ಮ ಪುತ್ರಿಯರು
ಪಾವನಾತ್ಮಕ ಶೀಲಸಂಪನ್ನೆಯರು ಚನ್ನೆಯರು ॥೨॥

ನಿನ್ನ ಗಿರಿಗಹ್ವರವು ಮುನಿ ಜನದ ಮಂದಿರವು
ನಿನ್ನೊಳಿಹ ಔಷಧಿಗಳೆಮ್ಮ ಸಂಜೀವನವು
ನಿನ್ನಮಳ ಸೌಂದರ್ಯ ಕವಿ ಬ್ರಹ್ಮನೌದಾರ್ಯ
ನಿನ್ನಮರ ಗಾಂಭೀರ್ಯ ಸೃಷ್ಟಿ ಮಾತೆಯ ಧೈರ್ಯ ॥೩॥

ನಿನ್ನ ಸತಿಪಿತೃಗಳತಿ ಮನಶ್ಶಾಂತಿ
ನಿನ್ನಸುತೆ ಜಗಕೆ ಆದಿಮ ಮಾತೆ
ನಿನ್ನಸುತ ಇಂದ್ರಗಂಜದ ಖ್ಯಾತ
ನಿನ್ನಳಿಯ ಪರಮೇಶ ಎಂದೆಂದಿಗೂ ಅಳಿಯ ॥೪॥

ಓ ! ಹಿಮಾಲಯ ಪರ್ವತಾಧೀಶ ಘನ ಮಹಿಮ
ಏನೆಂದು ಬಣ್ಣಿಸಲಿ ನಿನ್ನ ಹಿರಿಮೆಯನು

ಇಮ್ಮಡಿ ಪುಲಿಕೇಶಿ

ಕನ್ನಡರ ದೊರೆಯೆ ಚಾಲುಕ್ಯ ಕೇಸರಿಯೆ
ಕೀರ್ತಿವನಿತೆಯ ಪತಿಯೆ ಪುಲಿಕೇಶಿ ದೊರೆಯೆ

ಗಂಗ ಕಾದಂಬ ಕೇರಳ ಚೋಳ ಪಾಂಡ್ಯರನು
ಭಂಗಿಸಿದೆ ನಿಜಭುಜ ಪರಾಕ್ರಮದೆ ನೀನು
ಗಂಗೆ ಗೋದಾವರಿಯ ನಾಡೆಲ್ಲವನು ಜಯಿಸಿ
ತುಂಗ ಯಶವನು ಪಡೆದೆ ಭಾರತೇಶ್ವರನೇ ||೧||

ಹರ್ಷವರ್ಧನ ನೃಪನ ನರ್ಮದೆಯ ತೀರದೊಳು
ಹರ್ಷವಡಗಿಸಿ ಜಯಿಸಿ ಸಮರದೊಳು ನೀನು
ಆರ್ಯ ದ್ರಾವಿಡ ದೇಶಗಳಿಗೆಲ್ಲ ನೀನೋರ್ವ
ಧೈರ್ಯನಿಧಿ ಹಿರಿಯರಸನೆನಿಸಿ ರಾಜಿಸಿದೆಯ ||೨||

ಹೀವನತ್ಸಾಂಗನೆಂದೆಂಬ ಚೀಣರ ಸಾಧು
ಭೂವಿನುತ ನಿನ್ನ ಸದ್ಗುಣ ರಾಶಿಗಳನು
ಕೋವಿದರು ತಲೆದೂಗುವಂತೆ ಬರೆದಿರ್ಪನೈ
ಆವನೆಣೆ ನಿನಗೆಮ್ಮ ರಾಷ್ಟ್ರಪುರುಷರೊಳು ||೩||

ಪಾರಶಿಕ ನೃಪನೊಡನೆ ಕೆಳತನವ ಕೈಗೊಂಡು
ದೂರದೇಶಂಗಳೊಳು ಕನ್ನಡರ ಯಶವ
ವೀರಿದಯ್ ಕೆಚ್ಚೆದೆಯ ಅಚ್ಚಕನ್ನಡಿಗ ನೀಮ್
ಶೂರ ಧೀರ ಒಡೆಯ ಪುಲಿಕೇಶಿದೊರೆಯೇ ||೪||

ಕನ್ನಡರ ಕಲಿತನವ ಮುನ್ನ ಜಗಕರುಹಿದಯ್
ಕನ್ನಡಾಂಬೆಯ ಕುವರ ಬುಧಜನರ ಮುಕುರ
ಕನ್ನಡದ ಕೀರ್ತಿಯದು ಭಾರತದಿ ಬೆಳಗಿತಯ್
ನಿನ್ನಿಂದ ಪುಲಕೇಶಿ ದೊರೆಯೆ ವರಮತಿಯೆ ||೫||

ಹೆಮ್ಮರ

ಕುಗ್ಗಿ ಕಂಗೆಟ್ಟು ಎದೆಕುಸಿದು ಕುಳಿತೆಯೇಕಿಂತು ಮಗುವೆ?
ಎದೆಗಾವ ಕಗ್ಗತ್ತಲಿಟ್ಟು ಮುಸುಕಿತ್ತು? ಯಾವದುಳು ಕಣ್ಣಿಂಗೆ
[ಮರೆಯಾಯಿತು?

ನಿನ್ನ ಕುಲ ಮನೆ ಮಾನ ನಾಲ್ಕುದಿಕ್ಕಿಗು ಚೆದರಿ
ತುಳಿವವರ ಕಾಲದೂಳಾದುದೇನು?

ಇದ್ದ ಪುರುಳನು ಕಿತ್ತು ಮೈಸುಲಿದು ಕೈಸುಲಿದು
ಸೆರೆಗಿಟ್ಟು ಧನಿ ಚಲವನುಂಬನೇನು?

ಬಾಳ್ಗೆ ದಿಕ್ಕಾಗಿದ್ದ ತಂದೆ ತಾಯ್ ಸತಿ ಸುತರು
ಒಂಟಿ ತಬ್ಬಲಿಗೈಸಿ ಸರಿವರೇನು?

ಹುಟ್ಟಿಬೆಳೆದಿಹ ಮತದ ಧರ್ಮ ದೇವರ ನಚ್ಚು
ಮುರಿದು ಊರೆಯುಡರ್ವು ತಪ್ಪಿತೇನು?

ತಿಳಿವು ಬೆಳಕನು ಹಾಯ್ಸಿ ನಗು ತರಿಸಿ ಸೊಗವುಣಿಸಿ
ಮನಕೆ ವೈಶಾಲ್ಯವನು ತಂದ ಎಲ್ಲಾರು

ಇದು ಸತ್ಯವಿದು ಧರ್ಮ ಇದು ನಿತ್ಯವಿದು ವೀರ
ಇದುವೆ ಸ್ವಾತಂತ್ರ್ಯವೆಂದು ಬೋಧನೆಯಿತ್ತು

ಇದಕೆ ಬಾಳಲುಬೇಕು ಇದನು ಬೆಳೆಸಲುಬೇಕು
ಇದಕಾಗಿ ಶಕುತಿಯನು ಮಸೆಯಬೇಕೆಂದವರು

ನುಡಿವ ತಪ್ಪಿಗೆ ಕೆಲರು ನುಡಿವನಲ್ಲೆಂದು ಕೆಲರು
ಏತಕೋ ಹೀಗಾದನೆಂದು ಕೆಲರು—

ಎಲ್ಲಾರು, ಎಲ್ಲಾರು, ಮನಮುಚ್ಚಿ ಮೊಗತಿರುಗಿ
ಕೊರೆವ ಮೌನದಿ ನಿನ್ನ ತೊರೆಯುತಿಹರೇನು?

ಸಂತೈಸಿಕೊಳು, ಮಗುವೆ, ತರುವ ಕಾಲವು ತರಲು
ತೊರೆಯಿಸುವ ಕಾಲದಲಿ ಎಲ್ಲ ತೋರುವುದು.

ಬರುವಾಗ ತೊರೆವಾಗ ಇರುವಾಗ ಬಿಡುವಾಗ
ನಡೆವುದಕೆ ಸಾಕ್ಷಿಯಾಗಿ ಬಾಳ್ವುದೇ ಹಿರಿದು—

ಸೋಲ್ಗೆ ಕುಗ್ಗದೆ ಹರುಷಿಸದೆ ಗೆಲ್ಲಕ್ಕೆ
ನಿನ್ನ ಸತ್ವವ ಬಲಿಸಿ ಮೆರೆವುದೇ ನಿನತು—
ಎಂದು ಋಷಿಗಳು ನುಡಿದ ನುಡಿಯನೊಂದನು ನೆಮ್ಮಿ
ನೀಕಾಂಬ ಸತ್ಯಕ್ಕೆ ನಡೆಯುವುದು ನಿನತು—
ಇಂದನಾದರ ಹೊರಿಸಿ ನುಡಿಸದೆಯೆ ಕೊಲುವವರು
ಮುಂದಕ್ಕೆ ಕಳೆಯಹರು ನಿನ್ನ ನೆಲೆಗೆ;
ಹಿಂದಾದ ಮಾಳ್ಕೆಯದು ಕಠಿನವಾಯಿತ್ತೆಂದು
ಬೆಂದು ತಾಪದಲವರಿ ನೆರವೀವರು.
ಅಲ್ಲಿ ನೋಡದೊ ಮರನ, ಬೆಟ್ಟದುದಿಯಲಿ ನಟ್ಟು
ನಿಡುನಿಂತು ಬಾನ್ಗೆತ್ತಿ ತಲೆಯ ತೂಗುತಿದೆ.
ಕಲ್ಲು ನೆಲದಲಿ ಮೊಳೆತು ಬುಡವೂರಿ ತಾಳ್ಬಲಿಸಿ
ಕೋಡುಬಂಡೆಯ ಮೆಟ್ಟಿ ನೇರ ಬೆಳೆಯುತಿದೆ ;
ಸುತ್ತಲಿನ ಪಾಷಾಣ ಕಾರ್ಪಣ್ಯವನು ಸೀಳಿ
ಸಸಿತನದರಿಷ್ಟಗಳ ನೀಗಿ ಚಿಗುರಿ
ವಿಷವಾತ ಭೀತಿಗಳ ಎಡರುಗಳ ಕುತ್ತಗಳ
ಚೀಡೆಗಳ ಪೀಡೆಗಳನೆಲ್ಲ ದಾಟುತ್ತೆ
ಬಲಿತ ಹೆಮ್ಮರನದೆಗೊ ಕಾಣುತಿದೆ ನೋಡು !
ಎಂಟುದಿಕ್ಕಿನ ಗಾಳಿ ಬೀಸಿ ಕೆಣಕಿರಲದನು
ಸರಿಸದಲಿ ಗಡಸಿನಲಿ ಹಿರಿಮೆಯಲಿ ಗರುವದಲಿ
ತೊನೆಯುವುದು ಋತುನೇಮಿ ಗಾಳಿಮಳೆ ಸಹಿಸು
ಮುಗಿಲು ಮಳೆ ಮಂಜುಗಳು ಮುಬ್ಬುಗಳು ವರ್ಷಗಳು
ಇರಿತಗಳು ಕೊರೆತಗಳು ಬಳಲಿಸವು ಅದನು.
ನೋಳ್ಪವರ ಕಣ್ತುಂಬಿ ಹರಡುತಿದೆ ಏಳುತಿದೆ
ಮೇಲೆ ಸಗ್ಗಕೆ ತಲೆಯನೆತ್ತಿ ಚಾಚಿ—
ಗರುಡ ಗಿಡುಗರು ಮಾತ್ರ ಮರಿಗಳಿಗೆ ಗೂಡುಗಳ
ಕಟ್ಟಿ ತೂಗುವರಲ್ಲಿ ಉಯ್ಯಲೆಯನು ;

ಬಯಲು ಬಾನಿಗೆ ಸೊಕ್ಕಿ ಬಲಿತ ರೆಕ್ಕೆಯ ಹರಹಿ
ಚಿಮ್ಮಿ ಈಸುತೆ ಕಡಲಿನಂತಗಳಾಚೆ, ಆಚೆ,
ಬಿರುಸುಗಾಳಿಗೆ ಕನಲಿ ಉಕ್ಕಿದ್ದ ಅಲೆಮಾಲೆ-
ಯಬ್ಬರದವಾನವನು ತೋರುತ್ತಲಾಚೆ.
ನೂರು ಯೋಜನ ಪಯಣ ಮಾಡಲಿಹ ಹಕ್ಕಿಗಳು
ಆಗೊಂದು ಈಗೊಂದು ಬಂದು ತಂಗುವುವಲ್ಲಿ ವಿಶ್ರಾಂತಿಗೆ.
ಏರ ಶಾಖೆಗಳೇರಿ ತುದಿಯಿಂದ ಸುತ್ತಲಿನ
ಸೌಭಾಗ್ಯವಳೆಯುವರು ಕಣ್ದಣಿವವರೆಗು;
ಇಂದ್ರನೀಲಾಕಾಶದೊಡಲಲ್ಲಿ ಹುದುಗಿರುವ
ತಾರೆಗಳ ಜೀವಗಳ ಗತಿಯನಳೆಯುವರು;
ದಿವ್ಯ ಮರ್ಮಗಳರಿತು ದೇವರಿಗು ಮಿಗಿಲಾದ
ಸತ್ಯ ಧರ್ಮದ ಕೀರ್ತಿ ವಿವರವರಿಯುವರು.
ಯುಗಯುಗಕೆ ತಕ್ಕಂತೆ ಬೆಳೆ ಬಾಳು ತಳೆವಂತೆ
ಸವಿಗೊಂಡು ಹೊಂಬಾಳೆ ಗೊನೆಗಳಿಡುವಂತೆ
ಕರೆಯ ದಿಸೆಯುಂಚಿನಲಿ ಸಂಚಲಿಸಿ ಮಿನುಗುತಿಹ
ಕಡಲಲೆಯ ಮುಚ್ಚಟೆಗೆ ಮೈಗೊಡುವದು—
ಮರನು ಹಿರಿಮೆ ಪತಾಕೆಯೆತ್ತಿ ದಿಕ್ಕಿಗೆ ಹಿಡಿದು
ಸಹ್ಯಾದ್ರಿಶಿಖರಗಳ ಪುಳಕಗೊಳಿಸುತಿದೆ.
ಬೆಳಗು ಸಂಜೆಗಳಲ್ಲಿ ತೊಳತೊಳಗಿ ಮಿರುಮಿರುಗಿ
ಗಿರಿಗೆ ಮಕುಟವ ಕಟ್ಟಿ ಆಳುತ್ತಿದೆ;
ಅಕ್ಷುಬ್ಧ ಜಲನಿಧಿಯುವಾಕ್ತ ಗಂಭೀರನದು
ಇಂದು ನಾಳೆಗು ಎಮಗೆ ಗುರುವಾಗಿದೆ.
ಅವರವರ ಆತ್ಮವನು ಅವರೆ ಬಲಿಸಲಬೇಕು
ಅವರ ಆಕೃತಿ ಮೂರ್ತಿ ತಿದ್ದಿಕೊಳಬೇಕು;
ಅವರವರ ದರ್ಶನಕೆ ಸಲ್ಲುವಾದರ್ಶಗಳ
ನೇಮಗಳ ಹೊತ್ತವರೆ ಸಾಧಿಸಲುಬೇಕು

ಕಲೆಯಿಲ್ಲ ಕುಲವಿಲ್ಲ ಕೆಳೆಯಿಲ್ಲ ಪದವಿಲ್ಲ
ಇಹಪರದಹಂಕಾರವೊಂದಿಲ್ಲ ಸಾಧನಗಳೆದುರು.

ತನ್ನ ಧರ್ಮವ ತಾನು ಅಪ್ಪಿಕೊಂಡೆತ್ತುತ್ತೆ
ಅಳುಕದೆಯೆ ಬಳುಕದೆಯೆ ಅಡಿಯಿಡಲುಬೇಕು.

ಸೋಲು ನೋವನು ನುಂಗಿ ಕಲ್ಲೆದೆಯ ಮಿದುಗೈದು
ಸಹನೆ ಕರುಣೆಗಳಮೃತವೆರೆಯುತಿರಬೇಕು.

ಬೆಳಕು ನೆಳಲುಗಳಂತೆ ಏಳ್ಗೆ ಬೀಳೆನ್ನುತ್ತೆ
ಮನವ ಸಮತೆಗೆ ಹೂಡಿ ನಲಿಯುತಿರಬೇಕು —

—ತಾಳಿಕೊಳ್ಳಲುಬೇಕು ಏನೆಲ್ಲವನು, ಮಗುವೆ,
ತಿರುಳ ಬಲಿಸಲು ಬೇಕು ಹಿರಿಬಾಳನೇಸುವವರು.

ರಂಜದ ಹೂವು

ಅಕ್ಕ ನೋಡಿಹಿರೇನು ನಮ್ಮ ಕಾಡಿನೊಳಿರುವ
ಹೂವುಗಳಲಿದು ಒಂದು ಹೊಸರಂಜನೆಸಳು
ಮಿಕ್ಕ ಹೂವಂತಲ್ಲ ಚಿಕ್ಕ ಹೂವಿದು ನೋಡಿ
ಚುಕ್ಕೆವೊಲು ಮಿನುಗುವುದು ಬಲುಮುದ್ದು ಚೆನ್ನು ||೧||

ಹಳ್ಳದಲಿ ಹೊಲದಲ್ಲಿ ಕಾಡು ಕಣಿವೆಗಳಲ್ಲಿ
ಮಲೆಮೇಲೆ ಮನೆಮುಂದೆ ಎಲ್ಲೆಡೆಗಳಲ್ಲಿ
ರಂಜದರಳನು ಸುರಿದ ರಂಜದೆಸಳಿನ ಮರವೆ
ರಂಜಿಸುವುದೆಮ್ಮೂರ ಮಲೆನಾಡಿನಲ್ಲಿ. ||೨||

ಕೋಮಲತೆಯೊಳು ಸುಮವು ಪಾರಿಜಾತಕೆ ಸಮವು
ಬಾಡುವುದು ಮಾಸುವುದು ಎಲ್ಲ ಅದರಂತೆ
ನಯ ವಿನಯ ನೀತಿಗಳ ಕಲಿಸಲೆಂದೇ ದೇವ -
ನಿವುಗಳನು ಸೃಷ್ಟಿಸಿರಬಹುದೆಮ್ಮ ಮುಂದೆ. ||೩||

ರಂಜಕಿಂತಲು ಪಾರಿಜಾತ ನವಿರೆನಬಹುದು.
ಆದರಿಂತೆನೆ ರಂಜ ನನ್ನೊಡನೆ ಮುನಿದು
ಮಲೆನಾಡಿಗಿನ್ನೊಮ್ಮೆ ಹೋದಂದು ಕೇಳಬಹು -
ದಿಂತೆಂದುದನ್ಯಾಯುವಲ್ಲವೇ ಎಂದು. ||೪||

ಅದರಿಂದಲೀಬಗೆಯ ಬೆಡಗು ಮಾತಿನ ಬಿಂಕ
ಸಲ್ಲದೆಮ್ಮಾಸುಮಕೆ ಎನಲು ಹೆಚ್ಚೇಕೆ ?
ಇದ್ದಂತೆ ಹೇಳುವೆನು ಹಳ್ಳಿ ಹುಡುಗಿಯ ಮುದ್ದು
ಹೂವಾಗಿ ರಂಜಿಸುವುದೀ ರಂಜದಲ್ಲಿ ||೫||

ಮಲ್ಲಿಗೆಯ ಪೆಂಪಿಲ್ಲ ಕೇವಗೆಯ ಕಂಪಿಲ್ಲ
ಚೆಂಗುಲಾಬಿಯು ರಂಗಿನೆಸಳಿದಕೆ ಇಲ್ಲ
ಕುಮುದ ತಾವರೆಗಳಿಗೆ ಹೋಲಿಸುವುದಳವಲ್ಲ
ದೇವಲೋಕದ ಸುಮದ ಹಿರಿಯತನವಿಲ್ಲ ||೬||

ಮಿಕ್ಕವರ ಹೆಸರುಗಳ ಹಿರಿತನವು ನಮಗೇಕೆ ?
ಕೇಳಿದರೆ ಕೀರ್ತಿ ಕಾಮಿನಿಯಲ್ಲವೇಕೆ.
ಸಪ್ತರ್ಷಿಮಂಡಲವನುಳಿದು ಚುಕ್ಕೆಗಳೇನು
ಬೆಳಗಲಾರವೆ ಹೇಳಿ ಹೂವಿದಂತೆ. ||೭||

ಮಲೆನಾಡ ಹುಡುಗಿಯರ ಪ್ರೇಮದರಳಿದು ರಂಜ
ಅಲ್ಲಿದನು ಆರಿಸುವುದೇ ಒಂದು ಆಟ
ಮನೆಮನೆಯ ಮಡದಿಯರ ಜಡೆಗಿಡುವೆ ಶೃಂಗಾರ
ದೊರೆವುದಿಲ್ಲಿದನುಳಿದು ಬೇರೊಂದು ನೋಟ ||೮||

ನಮ್ಮ ಹೂವಿದು ಅಕ್ಕ ನೋಡಿ ಮುದ್ದಿಡಿರಿದನು
ಅಕ್ಕರೆಯೊಳಿದನಾಯ್ದು ನೀಂ ಮುಡಿದುಕೊಳ್ಳಿ.
ನಾಗರಿಕರಂತಲ್ಲ ; ನಾಚು ಮದುಮಗಳಿವಳು ;
ನಿಮ್ಮ ನೇರಕೆ ತಿದ್ದಿ ಸರಿಮಾಡಿಕೊಳ್ಳಿ. ||೯||

ಕಿರಿದೆಂದು ಹಳಿಯದಿರಿ ಹಿರಿದೆಂದು ಹೊಗಳದಿರಿ
ಇಂತಿಳಿಕೆ ಗೈಯುವುದು ನಮಗೆ ತರವಲ್ಲ
ಚಿತ್ರಚೈತ್ರೋತ್ತಮವನ ನಿರ್ಮಿಸಿದ ದೇವರಿಗೆ
ಕಿರಿದು ಹಿರಿದುಗಳೆಂಬ ಭೇದವಿಲ್ಲ. ||೧೦||

ಕವಿ ಕಾವ್ಯ ವಿಚಾರ ಮತ್ತು ಛಂದಸ್ಸು

I—ಗದ್ಯಭಾಗ

ಶ್ರೀಮದ್ರಾಮಾಯಣ :—ವಾಲ್ಮೀಕಿಯು ಸಂಸ್ಕೃತದಲ್ಲಿ ಬರೆದಿರುವ ರಾಮಾಯಣವು ಆದಿಕಾವ್ಯವೆನಿಸಿಕೊಂಡಿದೆ.

ಈ ಮಹಾಕಾವ್ಯವನ್ನು ಶ್ರೀಮಾನ್ ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯರು ತಿಳಿಗನ್ನಡದಲ್ಲಿ ಗದ್ಯಕಾವ್ಯವನ್ನಾಗಿ ಪರಿವರ್ತಿಸಿದರು. ಇವರು ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಭಾಗವತ ಕಥಾಭಾಗವನ್ನು ಇವರು ಕನ್ನಡದಲ್ಲಿ ಅನುವಾದಮಾಡಿದ್ದಾರೆ. ಈ ರಾಮಾಯಣವು ಬಾಲಕಾಂಡ, ಅಯೋಧ್ಯಾಕಾಂಡ, ಅರಣ್ಯಕಾಂಡ, ಕಿಷ್ಕಿಂಧಾಕಾಂಡ, ಸುಂದರಕಾಂಡ ಮತ್ತು ಯುದ್ಧಕಾಂಡಗಳೆಂಬ ಆರು ಭಾಗಗಳುಳ್ಳದಾಗಿ, ರಾಮಲಕ್ಷ್ಮಣರ ಅಮಾನುಷ ಶೌರ್ಯವೂ ಗುಣಗಳೂ ಈ ಕಾವ್ಯದಲ್ಲಿ ಪ್ರತಿಪಾದಿತವಾಗಿರುವುವು. ಬಾಲಕಾಂಡದಲ್ಲಿ ರಾಮಾದಿಗಳ ಜನನ ಮತ್ತು ಬೆಳವಣಿಗೆ ವಿದ್ಯಾಭ್ಯಾಸಗಳ ಕತೆಯೂ ಸೀತಾಸ್ವಯಂವರ ಕಥಾಭಾಗವೂ ವರ್ಣಿತವಾಗಿವೆ.

ಭಾರತ ವೀರಮಹಿಳೆಯರು :—ಇದನ್ನು ಬರೆದವರು ಶ್ರೀಮತಿ ಸೌ॥ ಸರಸ್ವತೀದೇವಿ ಗೌಡರ ಅವರು. ಇವರು ಕನ್ನಡನಾಡಿನಲ್ಲಿ ಪ್ರಸಿದ್ಧರಾದ ಲೇಖಿಕೆಯರಾಗಿದ್ದಾರೆ. ಶ್ರೀಮತಿಯವರು ತಮ್ಮ ಸ್ವಂತ ಅನುಭವದಿಂದ ಸಮಾಜವನ್ನೂ ಸಂಸ್ಕೃತಿಯನ್ನೂ ವಿಮರ್ಶಿಸ ತೊಡಗಿದ್ದಾರೆ. ಲೇಖನ ಕಲೆಯಲ್ಲಿ ಚೆನ್ನಾಗಿ ನುರಿತ ಮಹಿಳೆಯರಾಗಿದ್ದಾರೆ. ಈ ಗ್ರಂಥದಲ್ಲಿ ಅವರು ಇತಿಹಾಸದಿಂದ ಸ್ಮರಣೀಯ ಜೀವನ ಚಿತ್ರಗಳನ್ನು ಆಯ್ದು ತೆಗೆದು ನಾಡಿಗೆ ಒಂದು ಮಹೋನ್ನತಿಯ ಸಂದೇಶವನ್ನು ಸಾರಲು ಬಯಸಿದ್ದಾರೆ. "ಹಿಂದೂ ಕಾಯಿದೆಯೂ ಸ್ತ್ರೀ ಧನವೂ" ಎಂಬುದು ಇವರ ಇನ್ನೊಂದು ಗ್ರಂಥವಾಗಿರುವುದು.

II—ಪದ್ಯಭಾಗ

ಭಾಗವತ

ಕನ್ನಡ ಭಾಗವತವನ್ನು ರಚಿಸಿದ ನಿತ್ಯಾತ್ಮ ಶುಕಯೋಗಿಯ ಹೆಸರು ಚಾಟು ವಿಟ್ಠಲನಾಥನು. "ಇದು ಸದಾನಂದಾಖ್ಯಯೋಗಿಯ ತೊದಲನುಡಿ" ಎಂದು ಈ ಕವಿ ಹೇಳಿಕೊಳ್ಳುವುದರಿಂದ ಈತನಿಗೆ ಸದಾನಂದ ನೆಂಬ ಮತ್ತೊಂದು ಹೆಸರೂ ಇತ್ತೆಂದು ಕಾಣುತ್ತದೆ. ಈತನು ಶುಕ ಮಹರ್ಷಿ ಸಂಸ್ಕೃತದಲ್ಲಿ ಬರೆದಿರುವ ಭಾಗವತದ ಕಥಾಭಾಗವನ್ನು ಕನ್ನಡ ದಲ್ಲಿ ಭಾಮಿನೀಷಟ್ಪದಿಯಲ್ಲಿ ರಚಿಸಿದ್ದಾನೆ. ಈತನ ಭಾಮಿನೀಷಟ್ಪದಿಯು ಕುಮಾರವ್ಯಾಸ ಮೊದಲಾದ ಇತರ ಕವಿಗಳ ಷಟ್ಪದಿಯಂತೆ ಸರಳವಾಗಿರು ವುದಿಲ್ಲ. ಈತನ ಕಾವ್ಯವು ಗಹನವಾದ ವಿಚಾರಗಳನ್ನು ಬೋಧಿಸುವುದರ ಮೂಲಕ ಜನಪ್ರಿಯವಾಗಿರುವುದು.

ಕಥೆ

ಭೂದೇವಿಯು ರಾಕ್ಷಸ ಸ್ವರೂಪರಾದ ದುಷ್ಟ ಕ್ಷತ್ರಿಯರ ಬಾಧೆ ಯಿಂದ ಮನನೊಂದು ಗೋರೂಪವನ್ನು ಧರಿಸಿ ಬ್ರಹ್ಮನ ಬಳಿಗೆ ಹೋಗಿ ಎಲ್ಲೆಲ್ಲಿ ನೋಡಿದರೂ ದುರ್ಜನರ ದುರಾಚಾರಗಳಿಂದ ಸಜ್ಜನರಿಗೆ ವಿಪತ್ತೊ ದಗಿರುವುದೆಂದೂ ವರ್ಣಾಶ್ರಮಧರ್ಮಗಳು ಭಂಗಹೊಂದುತ್ತಿರುವು ವೆಂದೂ ಕಣ್ಣೀರು ಸುರಿಸುತ್ತಾ ನಮ್ರ ಭಾವದಿಂದ ಪ್ರಾರ್ಥಿಸಿಕೊಂಡಳು. ಈ ಮೊರೆಯನ್ನು ಕೇಳಿ ಬ್ರಹ್ಮನು ಕನಿಕರಗೊಂಡು ಭೂದೇವಿಯನ್ನೂ ಇತರ ದೇವತೆಗಳನ್ನೂ ತನ್ನೊಡನೆ ಕರೆದುಕೊಂಡು ಕ್ಷೀರಸಮುದ್ರ ತೀರಕ್ಕೆ ಹೋಗಿ ಅಲ್ಲಿ ಶ್ರೀಮನ್ನಾರಾಯಣನನ್ನು ಕುರಿತು ಬಗೆಬಗೆಯಾಗಿ ಸ್ತೋತ್ರ ಮಾಡಿ ಭೂದೇವಿಗೊದಗಿರುವ ಕಷ್ಟಗಳನ್ನು ಪರಿಹರಿಸಬೇಕೆಂದು ಬೇಡಿ ಕೊಂಡನು. ಆಗ ಸ್ವಲ್ಪಹೊತ್ತಿನಲ್ಲಿಯೇ ದುಷ್ಟಶಿಕ್ಷಣ, ಶಿಷ್ಟರಕ್ಷಣ ಮಾಡು ವುದಕ್ಕೋಸ್ಕರ ಶ್ರೀಮನ್ನಾರಾಯಣನು ಭೂಲೋಕದಲ್ಲಿ ಅವತರಿಸುವುದಾಗಿ

ಆಕಾಶವಾಣಿಯು ಕೇಳಿಸಿತು. ಅನಂತರ ಬ್ರಹ್ಮನು ದೇವತೆಗಳನ್ನು ಕುರಿತು ನೀವೆಲ್ಲರೂ ಯದುಕುಲದಲ್ಲಿ ಹುಟ್ಟಿ ಆ ಶ್ರೀಮನ್ನಾರಾಯಣನಿಗೆ ಸಹಾಯಕರಾಗಬೇಕೆಂದು ತಿಳಿಸಿದನಂತರ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು. ಶ್ರೀಕೃಷ್ಣನೂ, ಆದಿಶೇಷನ ಅವತಾರವಾದ ಬಲರಾಮನೂ ಯದುವಂಶದಲ್ಲಿ ಅವತರಿಸಿದರು. ವಿಷ್ಣು ಮಾಯೆಯೂ ಕೂಡ ಭೂಲೋಕದಲ್ಲಿ ಲೋಕೋದ್ಧಾರ ಕಾರ್ಯದಲ್ಲಿ ಸಹಾಯಕಳಾದಳು. ಮಧುರಾಪುರದಲ್ಲಿ ಶೂರರಾಜನೆಂಬ ಗುಣಶಾಲಿಯಾದ ಯಾದವನಿದ್ದನು. ಈತನಿಗೆ ಯೋಗ್ಯನೂ ಉದಾತ್ತಧ್ಯೇಯವುಳ್ಳವನೂ ಆದ ವಸುದೇವನೆಂಬ ಮಗನಿದ್ದನು. ಈ ವಸುದೇವನಿಗೆ ಕಂಸನ ತಂಗಿಯಾದ ದೇವಕಿಯನ್ನು ಕೊಟ್ಟು ವಿವಾಹವಾಗಿದ್ದಿತು. ವಸುದೇವ ದೇವಕಿಯರ ವಿವಾಹ ಮಹೋತ್ಸವ ಕಾಲದಲ್ಲಿ ದೇವಕಿಯ ಎಂಟನೆಯ ಗರ್ಭದಲ್ಲಿ ಜನಿಸುವ ಮಗನಿಂದ ಕಂಸನಿಗೆ ಮರಣಪ್ರಾಪ್ತವಾಗುತ್ತದೆ-ಎಂದು ಆಕಾಶವಾಣಿಯು ಕೇಳಿಸಿತು. ಆಗ ಕಂಸನು ಕೋಪಗೊಂಡು, ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು ಅವರಲ್ಲಿ ಹುಟ್ಟುವ ಮಕ್ಕಳನ್ನು ಕೊಲ್ಲುತ್ತ ಬಂದನು. ಏಳನೆಯ ಬಾರಿ ದೇವಕಿಯು ಗರ್ಭವನ್ನು ಧರಿಸಿದ್ದಾಗ ವಿಷ್ಣು ಆ ಗರ್ಭವನ್ನು ವಸುದೇವನ ಮತ್ತೊಬ್ಬ ಪತ್ನಿಯಾದ ರೋಹಿಣಿಯ ಗರ್ಭದಲ್ಲಿರಿಸಿದನು. ಈ ರೀತಿಯಾಗಿ ರೋಹಿಣಿಯಿಂದ ಜನಿಸಿದವನೇ ಬಲರಾಮನು. ಮತ್ತೊಮ್ಮೆ ದೇವಕಿ ಗರ್ಭಿಣಿಯಾಗಿ ನವಮಾಸಗಳು ತುಂಬಿದ ಬಳಿಕ ಶ್ರಾವಣ ಮಾಸದ ಕೃಷ್ಣಾಷ್ಟಮೀ ರೋಹಿಣಿ ನಕ್ಷತ್ರದಲ್ಲಿ ವಿಷ್ಣುವು ಭೂಲೋಕದಲ್ಲಿ ಅವತರಿಸಿದನು. ಹೀಗೆ ಶ್ರೀಕೃಷ್ಣನು ಭೂಲೋಕದಲ್ಲಿ ಅವತರಿಸಿ ದುಷ್ಟನಿಗ್ರಹ ಶಿಷ್ಟಪರಿಪಾಲನೆಯನ್ನು ಮಾಡಿದನು. ಕಂಸನೇ ಮೊದಲಾದ ನೀಚರನ್ನೆಲ್ಲಾ ಸದೆಬಡಿದು ಲೋಕಕಲ್ಯಾಣವನ್ನುಂಟುಮಾಡಿದನು.

ಪರೀಕ್ಷಿದ್ರಾಜನು ವ್ಯಾಸಮಹರ್ಷಿಯ ಪುತ್ರ ಶುಕಮಹರ್ಷಿಯನ್ನು ಕುರಿತು ಶ್ರೀಕೃಷ್ಣನು ನಿಜಾಂಶ ಸಂಭೂತನಾದ ಬಲರಾಮನೊಡನೆ ಯಾದವ ವಂಶದಲ್ಲಿ ಅವತರಿಸಿ ಮಾಡಿದ ಲೋಕಕಲ್ಯಾಣಕಾರಕ ವಿಚಾರಗಳನ್ನು ಹೇಳಬೇಕೆಂದು ಪ್ರಾರ್ಥಿಸಿಕೊಳ್ಳಲು ಆ ಶುಕಮುನಿಯು ಶ್ರೀಕೃಷ್ಣನ ದಿವ್ಯ ಚರಿತ್ರಗಳನ್ನು ಹೇಳಿದನು.

ಪ್ರಭುಲಿಂಗಲೀಲೆ

ಪ್ರಭುಲಿಂಗಲೀಲೆ (ಮಾಯಾದೇವಿಯ ಬಾಲ್ಯ) : ಇದನ್ನು ಬರೆದ ಕವಿಯು ಚಾಮರಸನು. ಈತನು ವೀರಶೈವ ಮತದವನು. ಈತನ ಕಾಲವು ಸುಮಾರು ಕ್ರಿ. ಶ. 1460 ಎಂದು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ. ಕಾವ್ಯವನ್ನು ಬರೆದಿರುವ ರೀತಿಯು ಅಪೂರ್ವವಾಗಿರುವುದು. ಲಲಿತವಾದ ಭಾಮಿನೀಷಟ್ಪದಿಯಲ್ಲಿ ರಚಿಸಿರುವನು. ಶೈಲಿಯು ಸರಳವಾಗಿಯೂ ಇಂಪಾಗಿಯೂ ಇರುವುದು.

ಕಥಾ ಭಾಗ :—ರಜತಾಚಲದಲ್ಲಿ ಒಂದಾನೊಂದು ದಿನ ವಿಶ್ವರೂಪನಾದ ಪರಮೇಶ್ವರನು ಸಿಂಹಾಸನನಲ್ಲಿ ಮಂಡಿಸಿದ್ದಾನೆ. ವಾಮಭಾಗದಲ್ಲಿ ಲೋಕಮಾತೆಯಾದ ಪಾರ್ವತಿಯೂ ಪೀಠದಲ್ಲಿ ಮಂಡಿಸಿದ್ದಾಳೆ. ಆ ಸಮಯದಲ್ಲಿ ಪರಮೇಶ್ವರಿಯು ತನ್ನ ಪತಿಯನ್ನು ಕುರಿತು "ಶಿವನೆ, ನಿನ್ನೊಡ್ಡೋಲಗದೊಳೊಪ್ಪುವ ಮಹಾಘನಮಹಿಮರೆಲ್ಲರೂ ಭವಕೆ ಬಾರದೆ ನಿತ್ಯ ಸುಖದಿಂದಿಪ್ಪರೋ ಅಥವಾ ಇವರಿಗೂ ನೆಲೆಯಿಲ್ಲವೊ" ಎಂದು ಕೇಳಿದಳು. ಆಗ ಶಿವನು ನಾಮರೂಪ ಕ್ರಿಯೆಗಳನ್ನು ಗೆಲ್ಲಬಲ್ಲವರಿಗೆ ಮಾತ್ರ ನಿತ್ಯ ಸುಖವೆಂದೂ, ಆದಕ್ಕಾಗಿ ಭೂಮಿಯಲ್ಲಿ ಮಾನವ ಶರೀರದಿಂದ ಜನಿಸಿ ಸಾಧನೆಮಾಡಬೇಕೆಂದು ಹೇಳುವನು. "ಹಾಗಾದರೆ ಭೂಲೋಕದಲ್ಲಿ ಇದನ್ನು ಬೋಧಿಸುವ ಗುರುವಾರು?" ಎಂದು ಕೇಳಲು, ಭಗವಂತನು ನಿರಹಂಕಾರ ಮತ್ತು ಸುಜ್ಞಾನಿಗಳಿಗೆ ಮಗನಾಗಿ ಹುಟ್ಟಿದ ಅಲ್ಲಮನೇ ಆ ಗುರುವೆಂದೂ ಆತನು ಅನುಪಮನೆಂದೂ ತಿಳಿಸುವನು. ಆಗ ಪಾರ್ವತಿಯು ಅಲ್ಲಮನನ್ನು ತಾನು ವಶಮಾಡಿಕೊಂಡು ನಿಜ ತತ್ವವನ್ನು ತಿಳಿಯುವುದಾಗಿ ಶಪಥಮಾಡಿ ತನ್ನ ತಾಮಸ ಗುಣದ ಮೂರ್ತಿಯಾದ ಮಾಯೆಯನ್ನು ಆ ಕೆಲಸಕ್ಕೆ ನಿಯಮಿಸುವಳು.

ಬೆಳವಲನಾಡಿನ ರಾಜಧಾನಿಯಾದ ಬನವಸೆಯಲ್ಲಿ ಮಾಯೆಯು ಮಮಕಾರನೃಪ ಮೋಹಿನೀದೇವಿಯರಿಗೆ ಮಗಳಾಗಿ ಜನಿಸಿದಳು. ಮಾಯೆಯು ಜನಿಸಿದ ಕೂಡಲೇ ವೃದ್ಧರೂ ಯೋಗನಿರತರೂ ಆದ ಮುನಿಗಳಿಗೆಲ್ಲ ಚಿತ್ತವಿಕಾರವಾಯಿತು. ಇದನ್ನು ತಿಳಿದು ಋಷಿಗಳೆಲ್ಲರೂ ಈ ಮಾಯೆ ಎತ್ತಣಿಂದ ಬಂದಳೋ ತಮ್ಮ ತಪಸ್ಸಿಗೆ ಭಂಗವುಂಟಾಯಿ

ತೆಂದು ಗೋಳಾಡುವ ಸಮಯಕ್ಕೆ ಸರಿಯಾಗಿ ದೂರ್ವಾಸ ಮಹರ್ಷಿಗಳು ಬಂದು ಕೈಲಾಸದಲ್ಲಿ ಪಾರ್ವತೀ ಪರಮೇಶ್ವರರಿಗಾದ ಸಂಭಾಷಣೆಯನ್ನೂ ಪಾರ್ವತಿಯ ಶಪಥವನ್ನೂ ಭೂಮಿಯಲ್ಲಿ ಮಾಯೆಯು ಜನನವಾಗಿರುವು ದನ್ನೂ ತಿಳಿಸಿ ಅಲ್ಲಮಪ್ರಭು ನಾಮಸ್ಮರಣವು ಮಾಯಾಮೋಹ ಗುಣಗಳ ನ್ನಡಗಿಸುವುದೆಂದು ಉಪದೇಶಮಾಡಿ ತೆರಳುವನು.

ಆಧುನಿಕ ಕವಿತೆಗಳು

ಆಧುನಿಕ ಕವಿಗಳು ಹೊಸ ಛಂದಸ್ಸಿನಲ್ಲಿ ಭಾವಗೀತೆಗಳನ್ನು ರಚಿಸಿ ದ್ದಾರೆ. ಇವರು ಗಣ, ಪ್ರಾಸ ಮೊದಲಾದುವುಗಳ ನಿಯಮಗಳನ್ನು ಸಂದರ್ಭಕ್ಕೆ ತಕ್ಕಹಾಗೆ ಮಾರ್ಪಡಿಸಿಕೊಂಡು ಕವನಗಳನ್ನು ರಚಿಸಿರುವರು. ಕೆಲವು ಕವನಗಳಲ್ಲಿ ಅಂತ್ಯಪ್ರಾಸವು ಕಂಡುಬರುವುದು. ಮತ್ತೆ ಕೆಲವು ಗಳಲ್ಲಿ ಮಧ್ಯಭಾಗದಲ್ಲಿ ಪ್ರಾಸವು ಕಂಡುಬರುವುದು. ಆದಿಪ್ರಾಸವು ಇರ ಬೇಕೆಂಬ ನಿರ್ಬಂಧವಿರುವುದಿಲ್ಲ.

ಸುಗ್ಗಿ ಬರುತಿದೆ

ಇದನ್ನು ಕು. ವೆಂ. ಪು. ಇವರ "ಕೊಳಲು" ಎಂಬ ಕವನ ಸಂಗ್ರಹ ದಿಂದ ತೆಗೆದುಕೊಂಡಿದೆ.

ಕು. ವೆಂ. ಪು. ಎಂಬುದು ಶ್ರೀಮಾನ್ ಕೆ. ವಿ. ಪುಟ್ಟಪ್ಪನವರ ಕಾವ್ಯನಾಮ. ಇವರು ಈಗ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರೊಫೆಸರಾಗಿದ್ದಾರೆ. ಇವರು ಅನೇಕ ಭಾವಗೀತೆಗಳನ್ನೂ ದೊಡ್ಡ ದೊಡ್ಡ ಕಥನ ಕವನಗಳನ್ನೂ ನಾಟಕಗಳನ್ನೂ ಕಾದಂಬರಿಗಳನ್ನೂ, ಜೀವನ ಚರಿತ್ರೆಗಳನ್ನೂ ಬರೆದಿದ್ದಾರೆ. ಆಧುನಿಕ ಕವಿಗಳಲ್ಲಿ ಇವರು ಸುಪ್ರಸಿದ್ಧ ರಾಗಿದ್ದಾರೆ. ಗದ್ಯದಲ್ಲಿ ಕಾದಂಬರಿ, ಸಣ್ಣ ಕಥೆಗಳು, ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮೊದಲಾದುವುಗಳನ್ನು ಬರೆದಿದ್ದಾರೆ. ಇವಲ್ಲದೆ ನವಿಲು, ಪಾಂಚಜನ್ಯ, ಯಮನಸೋಲು, ರಕ್ತಾಕ್ಷಿ, ಮಲೆನಾಡಿನ ಚಿತ್ರಗಳು ಇವು ಇವರ ಕೃತಿಗಳಲ್ಲಿ ಕೆಲವು.

ಸುಗ್ಗಿಯಕಾಲದಲ್ಲಿ ಎಲ್ಲಿ ನೋಡಿದರೂ ಗಿಡಮರಗಳು ಫಲಭರಿತ ವಾಗಿರುವುವು. ಜನರೆಲ್ಲರು ಸ್ವರ್ಗಸುಖವೇ ಭೂಮಿಗೆ ಬಂದಿದೆಯೋ ಎನ್ನುವ ಹಾಗೆ ಸಂತೋಷಪಡುವರು. ಆ ವಸಂತಕಾಲದಲ್ಲಿ ಮಾವಿನ ಮರಗಳು

ಚಿಗುರಿ ಫಲಭರಿತವಾಗಿ ಸಂತೋಷವನ್ನೀಯುತ್ತಿರುವುವು. ಪಕ್ಷಿಗಳು ಸಂತೋಷದಿಂದ ಧ್ವನಿಮಾಡುತ್ತಿರುವುವು—ದುಂಬಿಗಳು ಮಧುರವಾದ ಹೂಗಳ ಪರಿಮಳವನ್ನು ಪಾನಮಾಡಿ ಝೇಂಕರಿಸುತ್ತಿರುವುವು. ಎಂದೂ ಒಂದುಕಡೆ ಗೊಲ್ಲನು ಕೊಳಲನ್ನೂದಿ ಗೋವುಗಳನ್ನು ಎಚ್ಚರಿಸುವುದಾಗಿಯೂ ವರ್ಣಿಸಿರುವರು. ಒಟ್ಟಿನಲ್ಲಿ ಸುಗ್ಗಿಯ ಕಾಲವು ಸರ್ವವಿಧದಿಂದಲೂ ಆನಂದವನ್ನುಂಟುಮಾಡತಕ್ಕದ್ದಾಗಿರುವುದು. ಪ್ರಕೃತಿಯು ಸೊಬಗನ್ನು ಬೀರಿ ನೋಟಕನ ಕಣ್ಮನಗಳನ್ನು ಸೆಳೆಯುವುದು: ಈ ವಿಷಯಗಳು ಈ ಕವನದಲ್ಲಿ ನಿರೂಪಿತವಾಗಿವೆ.

ನಾಡಿನ ಹಾಡು

ಇದನ್ನು ರಚಿಸಿದವರು ಶ್ರೀಮಾನ್ ವಿನಾಯಕ ಕೃಷ್ಣ ಗೋಖಲೆ, ಬಿ.ಎ. (ಆರ್ಕ್ಸನ್) ಅವರು. ಈ ಕವನವನ್ನು ಸಾಹಿತ್ಯ ಪರಿಷತ್ತಿನಿಂದ ಪ್ರಕಟವಾದ "ಕನ್ನಡದ ಬಾವುಟ" ಎಂಬುದರಿಂದ ತೆಗೆದುಕೊಂಡಿದೆ. ಇವರು ಆರ್ಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಓದಿ, ಬಿ.ಎ. ಪ್ರಶಸ್ತಿಯನ್ನು ಪಡೆದಿರುವರು. ಇವರು ಆಂಗ್ಲ ಭಾಷೆಯಲ್ಲಿಯೂ ಕನ್ನಡ ಭಾಷೆಯಲ್ಲಿಯೂ ನಿಪುಣರಾಗಿದ್ದಾರೆ. ಪ್ರಸಿದ್ಧರಾದ ಸಾಹಿತಿಗಳಾಗಿದ್ದಾರೆ. ಇವರು ಇಜ್ಜೋಡು, ಸಮುದ್ರದಾಚೆಯಿಂದ—ಎಂಬ ಕಾದಂಬರಿಗಳನ್ನೂ ಕಲೋಪಾಸಕ, ಪಯಣ, ತ್ರಿವಿಕ್ರಮ, ಆಕಾಶಗಂಗೆ ಎಂಬ ಗ್ರಂಥಗಳನ್ನೂ ರಚಿಸಿದ್ದಾರೆ.

ಕನ್ನಡನಾಡು ಅನೇಕ ಸುಪ್ರಸಿದ್ಧರಾದ ಕವಿಗಳಿಗೂ ಸೇನಾಪತಿಗಳಿಗೂ, ರಾಜ ಮಹಾರಾಜರುಗಳಿಗೂ ಆಶ್ರಯವಾಗಿದ್ದಿತೆಂದೂ, ಕನ್ನಡಿಗರು ಭರತಖಂಡದಲ್ಲಿ ಪ್ರಸಿದ್ಧರಾಗಿ ಬಾಳಿದವರೆಂದೂ, ವಿದ್ಯೆ, ಐಶ್ವರ್ಯ, ಕಲೆ ಮೊದಲಾದುವುಗಳಲ್ಲಿ ಅಸದೃಶರಾಗಿ ಬಾಳಿ ಕಾಲಧರ್ಮವಶದಿಂದ ಹೀನಸ್ಥಿತಿಗೆ ಬಂದು ಇತರ ನಾಡಿನವರ ಅಧೀನಕ್ಕೊಳಗಾಗಿ ಗೋಳಾಡುತ್ತಿರುವುದನ್ನು ಕರುಣಾಜನಕ ರೀತಿಯಲ್ಲಿ ವರ್ಣಿಸಿರುವರು. ಅಲ್ಲದೆ ಪ್ರಕೃತಿ ನಿಯಮದಂತೆ ಉಚ್ಚ ದೆಸೆಯು ಪ್ರಾಪ್ತವಾಗಿ ಕನ್ನಡಿಗರು ಮುಂದುವರಿಯುವ ಸಮಯವು ಪ್ರಾಪ್ತವಾಗಿರುವುದು. ಕನ್ನಡಮಾತೆಯ ಮಕ್ಕಳೆಲ್ಲರೂ ಒಟ್ಟುಗೂಡಿ ಮಾತೆಯ ದುಃಖವನ್ನು ನಿವಾರಿಸಿ, ಎಲ್ಲೆಲ್ಲಿಯೂ

ಕನ್ನಡಿಗರ ಕೀರ್ತಿಯು ಬೆಳ್ಳಿ, ಚಂದ್ರ, ಸೂರ್‍ಯರಂತೆ ಬೆಳಗುವಂತೆ ಮಾಡೋಣವೆಂದು ಕನ್ನಡಿಗರನ್ನು ನಲ್ನುಡಿಗಳಿಂದ ಎಚ್ಚರಿಸುವರು.

ಓ! ಹಿಮಾಲಯ ಮತ್ತು ಪುಲಿಕೇಶಿ

ಈ ಕವನಗಳನ್ನು ರಚಿಸಿದವರು ಆಸ್ಥಾನ ವಿದ್ವಾನ್ ಕೀರ್ತನಕೇಸರಿ ಶ್ರೀಮಾನ್ ಬಿ. ಶಿವಮೂರ್ತಿ ಶಾಸ್ತ್ರಿಗಳು. ಇವರು ಕನ್ನಡನಾಡಿನ ಪ್ರಸಿದ್ಧ ಮುಂದಾಳುಗಳು, ಭಾಷಣಕಾರರು, ಕೀರ್ತನಕಾರರು ಮತ್ತು ಗ್ರಂಥ ಕರ್ತರು. ಶರಣಸಾಹಿತ್ಯ, ಸ್ವತಂತ್ರಕರ್ಣಾಟಕ ಪತ್ರಿಕೆಗಳ ಸಂಪಾದಕರೂ ಆಗಿರುತ್ತಾರೆ. ಕನ್ನಡಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಪ್ರಕಟವಾಗು ತ್ತಿರುವ ' ಕನ್ನಡ ನುಡಿ ' ಸಂಪಾದಕರಾಗಿದ್ದರು. ಮೈಸೂರು ಸಂಸ್ಥಾನದ ಪತ್ರಿಕಾಕರ್ತರ ಸಂಘದ ಉಪಾಧ್ಯಕ್ಷರಾಗಿರುತ್ತಾರೆ. ಕರ್ನಾಟಕ ಏಕೀ ಕರಣಕ್ಕಾಗಿ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಇವರ ಸಂಪಾದಕತ್ವ ದಲ್ಲಿ ಅನೇಕ ಕನ್ನಡ ಮತ್ತು ಸಂಸ್ಕೃತ ಗ್ರಂಥಗಳು ಪ್ರಕಟವಾಗುತ್ತಿವೆ.

" ಹಿಮಾಲಯವು ಆಕಾಶವನ್ನು ಮುಟ್ಟುತ್ತಿರುವಂತೆ ಎತ್ತರ ವಾಗಿದ್ದು, ದೇವತೆಗಳು ಭೂಲೋಕಕ್ಕೆ ಬಂದು ಪುನಃ ಸ್ವರ್ಗಲೋಕಕ್ಕೆ ಹೋಗಲು ಏರ್ಪಡಿಸಿಕೊಂಡಿರುವ ಮೆಟ್ಟಲುಗಳೋ ಎನ್ನುವಂತಿರುವ ಗೌರೀಶಂಕರ, ಕಾಂಚನಗಂಗ ಇಂದ್ರಕೀಲಪರ್ವತಗಳ ಶಿಖರಗಳಿಂದಕೂಡಿ ಅನೇಕ ಮೃಗಪಕ್ಷಿಗಳಿಗೂ, ನದಿಗಳಿಗೂ ಆಶ್ರಯವಾಗಿರುವುದಲ್ಲದೆ ನಾನಾ ವಿಧ ಔಷಧಿಗಳಿಂದ ತುಂಬಿ ಮನೋಹರವಾಗಿರುವುದು. ಈ ಪರ್ವತ ರಾಜನ ಮಗ ಮೈನಾಕನು ಇಂದ್ರನಿಗೂ ಹೆದರದೆ ಧೈರ್‍ಯದಿಂದಿರುವನೆಂದೂ ಅಳಿಯ ಪರಮೇಶ್ವರನು ಎಂದೆಂದಿಗೂ ಶಾಶ್ವತನಾಗಿರುವನೆಂದೂ ಮಗಳು ಪಾರ್ವತಿಯು ಲೋಕಮಾತೆಯಾಗಿರುವಳೆಂದೂ ಹೃದಯಂಗಮವಾಗಿ ವರ್ಣಿಸಿರುವರು.

ಕನ್ನಡಿಗರ ದೊರೆಯಾದ ಇಮ್ಮಡಿ ಪುಲಿಕೇಶಿ ಭರತಖಂಡದ ಎಲ್ಲ ಪ್ರದೇಶಗಳನ್ನೂ ಜಯಿಸಿ ಪ್ರಸಿದ್ಧನಾಗಿದ್ದನು. ಹರ್ಷವರ್ಧನನನ್ನು ನರ್ಮದಾನದಿಯ ತೀರದಲ್ಲಿ ಜಯಿಸಿ ಪ್ರಸಿದ್ಧಿಯನ್ನು . ಪಡೆದನು. ಚೀಣಾದೇಶದ ಸಾಧುವಾದ ಹ್ಯೂಯನತ್ಸಾಂಗನೆಂಬುವನು ಪುಲಿಕೇಶಿಯ

ರಾಜನೀತಿ ನೈಪುಣ್ಯವನ್ನೂ ಪರಾಕ್ರಮವನ್ನೂ ಕೊಂಡಾಡಿದನು. ಭರತ ಖಂಡದ ಹೊರನಾಡುಗಳಾದ ಪಾರ್ಶಿಸ್ಥಾನ ಚೀಣಾದೇಶ ಮೊದಲಾದುವುಗಳಲ್ಲಿ ಕನ್ನಡಿಗರ ಕೀರ್ತಿಯನ್ನು ಹೆಚ್ಚಿಸಿದನು.

ಹೆಮ್ಮರ

ಇದು ಶ್ರೀಮಾನ್ ವಿ. ಸೀತಾರಾಮಯ್ಯ, ಎಂ. ಎ. ಅವರು ಬರೆದ ಕವನ. ಇದನ್ನು 'ನೆಳಲು–ಬೆಳಕು' ಎಂಬ ಕವನ ಸಂಗ್ರಹದಿಂದ ಆರಿಸಿದೆ. ಇವರು ಮೈಸೂರು ಮಹಾರಾಜರವರ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದಾರೆ. ಹಣ ಪ್ರಪಂಚ, ಸೊಹ್ರಾಬ್ ರುಸ್ತುಂ ಮೊದಲಾದುವು ಇವರ ಇತರ ಗ್ರಂಥಗಳು. ಇವರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆಯಾದ ಪ್ರಬುದ್ಧ ಕರ್ನಾಟಕದ ಸಂಪಾದಕರಾಗಿದ್ದರು.

ಕವಿಗಳು ಈ ಕವನದಲ್ಲಿ ಮಾನವನು ಕಷ್ಟ ಬಂದಿತೆಂದು ಕುಗ್ಗದೆ, ಸುಖ ಬಂದಿತೆಂದು ಹಿಗ್ಗದೆ ಒಂದೇ ರೀತಿಯಾಗಿರಬೇಕೆಂದೂ ಕೆಲವರು ಐಶ್ವರ್ಯವಿದ್ದ ಕಾಲದಲ್ಲಿ ಸ್ನೇಹದಿಂದ ವರ್ತಿಸಿ, ಬಡತನ ಬಂದಾಗ ಅಗಲಿ ಹೋಗುವವರಾಗಿರುವರು—ಈ ನಡವಳಿಕೆಯು ಸರಿಯಾದುದಲ್ಲವೆಂದೂ ಸೋಲು ಗೆಲುವುಗಳನ್ನು ಲಕ್ಷಿಸದೆ ಧೈರ್ಯದಿಂದಿರಬೇಕೆಂದೂ ಬೋಧಿಸಿ, ಹೆಮ್ಮರವು ಯಾವ ರೀತಿಯಲ್ಲಿ ಹಗಲು ರಾತ್ರಿಗಳೆನ್ನದೆ ತಗ್ಗು ದಿಣ್ಣೆಗಳೆನ್ನದೆ, ಬಿರುಗಾಳಿ, ಗುಡುಗು, ಸಿಡಿಲು ಮೊದಲಾದುವುಗಳಿಗೆ ಹೆದರದೆ ಒಂದೇ ರೀತಿಯಾಗಿ ಇದ್ದ ಸ್ಥಳದಲ್ಲಿಯೇ ಇದ್ದು ಮಳೆಗಾಲ, ಚಳಿಗಾಲ, ಬಿಸಿಲುಗಾಲಗಳಲ್ಲಿಯೂ ಒಂದೇ ರೀತಿಯಾಗಿ ಸಂತೋಷದಿಂದಲೂ ಧೈರ್ಯದಿಂದಲೂ ಇರುವುದೋ ಹಾಗೆಯೇ ಮನುಷ್ಯನು ಎಲ್ಲ ಕಾಲಗಳಲ್ಲಿಯೂ ಎಲ್ಲೆಡೆಗಳಲ್ಲಿಯೂ ಧೈರ್ಯದಿಂದಲೂ ಸತ್ಯವಂತನಾಗಿಯೂ ನಡೆಯಬೇಕೆಂಬುದನ್ನು ಸರಳವಾದ ನುಡಿಯಲ್ಲಿ ಹಾಡಿದ್ದಾರೆ.

ರಂಜದ ಹೂ

ಇದು 'ರಾಗಿಣಿ' ಎಂಬ ಕವನಸಂಗ್ರಹದಿಂದ ಆರಿಸಲ್ಪಟ್ಟಿರುವುದು. ಇದನ್ನು ಬರೆದವರು ಶ್ರೀಮಾನ್ ಎಸ್. ವಿ. ಪರಮೇಶ್ವರಭಟ್ಟ, ಎಂ.ಎ., ಅವರು. ಇವರು ಶಿವಮೊಗ್ಗ ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ

ಕನ್ನಡದ ಅಧ್ಯಾಪಕರಾಗಿದ್ದಾರೆ. ಇವರು ನವೀನ ರೀತಿಯಲ್ಲಿ ಸರಳ ವಾಗಿಯೂ ಜನಪ್ರಿಯವಾಗಿಯೂ ಇರುವ ಕವನಗಳನ್ನು ಬರೆದಿರುತ್ತಾರೆ. ಗಗನಚುಕ್ಕಿ, ಮೇಘ ದೂತ, ಅಕ್ಕಮಹಾದೇವಿ, ಋತುಸಂಹಾರ ಮೊದಲಾದುವು ಇವರ ಇತರ ಗ್ರಂಥಗಳಾಗಿರುವುವು.

ರಂಜದ ಹೂ—ಮಲೆನಾಡಿನ ಎಲ್ಲ ಪ್ರದೇಶಗಳಲ್ಲಿಯೂ ಕಂಡು ಬರುವುದು. ಎಲ್ಲ ಜನರೂ ಈ ಹೂವನ್ನು ಪ್ರೀತಿಸುವರು. ಸ್ತ್ರೀಯರೆಲ್ಲರೂ ಈ ಹೂವನ್ನು ಮುಡಿದುಕೊಳ್ಳುವರು. ಪಾರಿಜಾತದಂತೆ ಮೃದುವಾಗಿಲ್ಲ ವೆಂದೂ ಕೇದಗೆಯಂತೆ ಸುವಾಸನೆ ಇಲ್ಲವೆಂದೂ ಗುಲಾಬಿಯಂತೆ ದಳಗಳಿಲ್ಲ ವೆಂದೂ ನಿಂದಿಸದೆ ಎಲ್ಲರೂ ಒಂದೇ ರೀತಿಯಲ್ಲಿ ಅದನ್ನು ಗೌರವಿಸುವರು. ಸೃಷ್ಟಿಕರ್ತನಾದ ದೇವರಿಗೆ ಭಿನ್ನಭಾವಗಳಿಲ್ಲದೆ ಎಲ್ಲರನ್ನೂ ಒಂದೇ ರೀತಿ ಯಾಗಿ ಪ್ರೀತಿಸುವಂತೆ ಮಾನವರೆಲ್ಲರೂ ದೇವರ ಎದುರಿನಲ್ಲಿ ಒಂದೇ ರೀತಿ ಯಾಗಿರುವುದರಿಂದ ಎಲ್ಲರೂ ಸಹೋದರಭಾವದಿಂದ ನಡೆದುಕೊಳ್ಳ ಬೇಕೆಂಬ ತತ್ವವನ್ನು ಪ್ರತಿಪಾದಿಸಿರುವರಲ್ಲದೆ, ಸಪ್ತರ್ಷಿಮಂಡಲದ ನಕ್ಷತ್ರ ಗಳ ಸಹಾಯವಿಲ್ಲದೆ ಇತರ ನಕ್ಷತ್ರಗಳೇ ಆಕಾಶದಲ್ಲಿ ಬೆಳಗುತ್ತಿರುವಂತೆ, ಪಾರಿಜಾತ, ಮಲ್ಲಿಗೆ ಮೊದಲಾದ ಇತರ ಹೂಗಳ ಸಹಾಯವಿಲ್ಲದಿದ್ದರೂ ರಂಜದ ಹೂ—ಪ್ರಕಾಶಿಸಲು ತಕ್ಕ ಸೌಂದರ್ಯವನ್ನು ಪಡೆದಿರುವುದೆಂದು ವರ್ಣಿಸಿರುವರು.

ಛಂದಸ್ಸು

ಕಾವ್ಯವು ಗದ್ಯ ಪದ್ಯಾತ್ಮಕವಾಗಿದೆ. ಛಂದೋನಿಯಮಕ್ಕೊಳ ಪಟ್ಟ ಶಬ್ದ ಸಮೂಹಕ್ಕೆ ಪದ್ಯವೆಂದೂ ಅದಿಲ್ಲದಿರುವುದಕ್ಕೆ ಗದ್ಯ ವೆಂದೂ ಹೆಸರು. ವಿಸ್ತಾರವಾದ ವಿಷಯವನ್ನು ಸಂಗ್ರಹಿಸಿ ಹೇಳಲೂ ವಿಷಯಗಳನ್ನು ಸುಲಭವಾಗಿ ಜ್ಞಾಪಕವಲ್ಲಿಡಲೂ ಪದ್ಯವು ಬಹಳ ಅನುಕೂಲವಾದದು. ಈ ಪದ್ಯರಚನೆಯ ವಿಷಯವನ್ನು ತಿಳಿಸುವ ಶಾಸ್ತ್ರಕ್ಕೆ ಛಂದಶ್ಶಾಸ್ತ್ರವೆಂದು ಹೆಸರು. ಪಾದವುಳ್ಳುದು ಪದ್ಯ. ಪಾದಗಳಿಗೆ ಗಣ

ಮತ್ತು ಪ್ರಾಸಾದಿ ನಿಯಮಗಳುಂಟು. ಕೆಲವು ನಿಯಮಗಳಿಗನುಸಾರವಾಗಿ ವಿಂಗಡಿಸಿದ ಅಕ್ಷರಗಳ ಅಥವಾ ಮಾತ್ರೆಗಳ ಗುಂಪಿಗೆ ಗಣವೆಂದು ಹೆಸರು. ಅದು ವರ್ಣಗಣ, ಮಾತ್ರಾಗಣವೆಂದು ಎರಡು ವಿಧ. ಅಕ್ಷರಗಳ ಸಂಖ್ಯಾನಿಯಮಕ್ಕೊಳಪಟ್ಟುದು ವರ್ಣಗಣ. ಮಾತ್ರೆಗಳ ಸಂಖ್ಯಾನಿಯಮಕ್ಕೊಳಪಟ್ಟುದು ಮಾತ್ರಾಗಣ. ಅಕ್ಷರಗಣಗಳಲ್ಲಿ ಮೂರು ಮೂರು ಅಕ್ಷರಗಳಿಗೆ ಒಂದು ಗಣವೆಂದು ಹೆಸರು. ಇವು ವೃತ್ತಗಳಲ್ಲಿ ಪ್ರಚಾರದಲ್ಲಿರುವುವು. ಯಗಣ, ಮಗಣ, ತಗಣ, ರಗಣ, ಜಗಣ, ಭಗಣ, ನಗಣ, ಸಗಣ—ಎಂದು ಅಕ್ಷರಗಣಗಳು ಎಂಟು. ಮಾತ್ರಾಗಣವನ್ನು ಮಾತ್ರೆಗಳಿಂದ ತಿಳಿಯಬೇಕು. ಲಘುವಿಗೆ ಒಂದು ಮಾತ್ರೆಯೆಂದೂ ಗುರುವಿಗೆ ಎರಡು ಮಾತ್ರೆಗಳೆಂದೂ ಸಂಕೇತ. ಈ ಮಾತ್ರಾಗಣಗಳಿಂದ ಷಟ್ಪದಿ, ರಗಳೆ, ಸಾಂಗತ್ಯ ಮೊದಲಾದುವುಗಳು ರಚಿತವಾಗಿವೆ.

ಷಟ್ಪದಿ :—ಆರು ಪಾದಗಳುಳ್ಳ ಪದ್ಯಕ್ಕೆ ಷಟ್ಪದಿ ಎಂದು ಹೆಸರು. ಷಟ್ಪದಿಗಳು ಮೂರು, ನಾಲ್ಕು, ಐದು ಮಾತ್ರೆಗಳಿಂದ ಕೂಡಿರುತ್ತವೆ. ಗಣಗಳ ಬೇರೆ ಬೇರೆ ವಿನ್ಯಾಸದಿಂದ ಷಟ್ಪದಿಗಳಲ್ಲಿ ಶರ, ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಕ ಎಂಬ ಆರು ಪ್ರಭೇದಗಳುಂಟಾಗುವುವು. ಇವುಗಳಲ್ಲೆಲ್ಲಾ ೧, ೨, ೪, ೫ ನೆಯ ಪಾದಗಳು ಒಂದು ಸಮನಾಗಿಯೂ ೩, ೬ ನೆಯ ಪಾದಗಳು ಒಂದು ಸಮನಾಗಿಯೂ ಇರುತ್ತವೆ. ೧, ೨, ೪, ೫ ನೆಯ ಪಾದಗಳಲ್ಲಿರುವುದಕ್ಕೆ ಒಂದೂವರೆಯಷ್ಟು ಮಾತ್ರೆಗಳೂ ಮತ್ತು ಒಂದು ಗುರುವೂ ೩, ೬ ನೆಯ ಪಾದಗಳಲ್ಲಿರುತ್ತವೆ.

ಕನ್ನಡ ಭಾಗವತ ಮತ್ತು ಪ್ರಭುಲಿಂಗಲೀಲೆಗಳು ಭಾಮಿನೀಷಟ್ಪದಿಯಲ್ಲಿ ರಚಿತವಾಗಿವೆ. ಭಾಮಿನೀಷಟ್ಪದಿಯ ೧, ೨, ೪, ೫ ನೆಯ ಪಾದಗಳಲ್ಲಿ ೧೪ ಮಾತ್ರೆಗಳು. ೩, ೬ ನೆಯ ಪಾದಗಳಲ್ಲಿ ೧೪+೭+೨ = ೨೩ ಮಾತ್ರೆಗಳು ಇರುತ್ತವೆ. ಈ ಪಾದಗಳು ಮೂರು ಮಾತ್ರೆಗಣದ ತರುವಾಯ ನಾಲ್ಕು ಮಾತ್ರೆಗಣ ಬರುವಂತೆ ಇರುತ್ತವೆ.

ಉದಾಹರಣೆ :—

ಭಾಗವತ

ಶ್ರೀ ವ | ರನುಶಾ | ಶ್ವತನ | ಖಿಳವೇ |
ದಾವ ಳೀಸಂ ಸ್ತುತ್ಯ | ನಮಲಗು |
ಣಾವ | ಲಂಬನ | ನಂಬು | ಜೋದ್ಭವ | ಮುಖ್ಯ | ಸುರವಂದ್ಯ |
ದೇವ | ದೇವನ | ಶೇಷ | ಧರಣೀ |
ದೇವ | ಗೋದ್ವಿಜ | ರಕ್ಷ | ಣಾರ್ಥಕೃ |
ತಾವ | ತಾರನು | ಮಾಳ್ಕೆ | ಯೋಗ | ಕ್ಷೇಮ | ವನುನಮ | ಗೆ

ಪ್ರಭುಲಿಂಗಲೀಲೆ

ಚಿತ್ತ | ವಿಸುವುದು | ಸಕಲ | ಶಿವಭ |
ಕ್ತೋತ್ತ | ಮರುಮಂ | ದಣಕ | ಥಾಸ
ದ್ವೃತ್ತ | ರವನಮ | ರಾದ್ರಿ | ಗೊಪ್ಪುವ | ತೆಂಕ | ದಿಕ್ಕಿನ | ಲಿ
ಸತ್ಯ | ದಲಿಸ | ದ್ಭಕ್ತಿ | ಯಲಿಸ
ದ್ವೃತ್ತಿ | ಯಲಿಸ | ಚ್ಚರಿತ | ದಲಿಸಂ
ಪತ್ತಿ | ನಲಿಸಲೆ | ಸೊಗಸಿ | ಬೆಳುವಲ | ದೇಶ | ಮೆರೆದಹು | ದು |

ಸುಗ್ಗಿ ಬರುತಿದೆ

ಈ ಕವನದಲ್ಲಿ ಏಳು ಪದ್ಯಗಳಿವೆ. ಪ್ರತಿ ಪದ್ಯದಲ್ಲಿಯೂ ಏಳು ಪಾದಗಳಿವೆ. ಇದರಲ್ಲಿ ಮೂರು ಮಾತ್ರೆಯ ಗಣಗಳನ್ನು ಉಪಯೋಗಿಸ

ಲಾಗಿದೆ. ಪ್ರತಿ ಪದ್ಯದಲ್ಲಿಯೂ ೧, ೨ ಮತ್ತು ೭ ನೆಯ ಪಾದಗಳಲ್ಲಿ ಮೂರು ಮಾತ್ರೆಯ ಎಂಟುಗಣಗಳೂ ; ೩, ೪, ೫ ಮತ್ತು ೬ ನೆಯ ಪಾದಗಳಲ್ಲಿ ಮೂರು ಮಾತ್ರೆಯ ನಾಲ್ಕು ಗಣಗಳೂ ಇವೆ. ಕೆಲವು ಪಾದಗಳಲ್ಲಿ ಸಂದರ್ಭಾನುಸಾರವಾಗಿ ಕೆಲವು ಅಕ್ಷರಗಳನ್ನು ದೀರ್ಘವಾಗಿ ಎಳೆದು ಓದುವುದರ ಮೂಲಕ ಅದನ್ನು ಮೂರು ಮಾತ್ರೆಯ ಗಣಗಳನ್ನಾಗಿ ಮಾಡಬೇಕು. ಈ ಕ್ರಮವು ತ್ರಿಪದಿ, ಸಾಂಗತ್ಯ ಮೊದಲಾದ ಹಾಡು ಗಬ್ಬಗಳಲ್ಲಿ ರೂಢಿಯಲ್ಲಿದೆ. ಈ ಕವಿತೆಯ ಮೊದಲನೆಯ ಪದ್ಯದ ರಚನೆಯು ಹೀಗಿದೆ :—

೩ ೩ ೩ ೩ ೩ ೩ ೩*
ಅಡಿಹು | ಗೆಜ್ಜೆ | ನಡುಗೆ | ಹೆಜ್ಜೆ | ಯಿಡುತ | ಸುಗ್ಗಿ | ಬರುತದೆ
೩ ೩* ೩ ೩* ೩ ೩ ೩ ೩*
ಸುಗ್ಗಿ | ಬರೆ | ಹಿಗ್ಗಿ | ತೆರೆ | ಸಗ್ಗ | ಸೊಗವ | ತರುತ | ದೆ
೩ ೩ ೩ ೩
ಕಣಿವೆ | ಯಿಳಿಸು | ತಮರ | ನೇರ
೩ ೩ ೩ ೩
ತರುಗ | ಳಲ್ಲಿ | ತಳಿರ | ಹೇರ
೩ ೩ ೩ ೩
ಹೊಸತು | ಜೀವ | ಕಳೆಯ | ಬೀರ
೩ ೩ ೩ ೩*
ಸುಗ್ಗಿ | ಮೂಡು | ತರುವು | ದು
೩ ೩ ೩ ೩ ೩ ೩ ೩ ೩*
ಬನದ | ಬನದ | ದನಿದು | ನಿನದ | ಮನದೊ | ಳಾಡು ತಿರುವು | ದು

ಸೂಚನೆ :—* ಈ ಗುರುತು ಹಾಕಿರುವ ಕಡೆ ಅಕ್ಷರಗಳನ್ನು ದೀರ್ಘವಾಗಿ ಎಳೆದು ಓದಬೇಕೆಂದು ಭಾವಿಸಬೇಕು.

ಮೇಲಿನ ಪದ್ಯದಲ್ಲಿ ಮೊದಲ ಎರಡು ಪಾದಗಳಲ್ಲಿಯೂ ಮಧ್ಯದ ಮೂರು ಪಾದಗಳಲ್ಲಿಯೂ ಕೊನೆಯ ಎರಡು ಪಾದಗಳಲ್ಲಿಯೂ ಅಂತ್ಯಪ್ರಾಸವಿರುವುದನ್ನು ನೋಡಬಹುದು.

ನಾಡಿನ ಹಾಡು

ಇದರಲ್ಲಿ ೨೪ ಪಾದಗಳಿವೆ. ಪ್ರತಿ ಎರಡೆರಡು ಪಾದಗಳಲ್ಲಿಯೂ ಅಂತ್ಯ ಪ್ರಾಸವಿದೆ. ಪ್ರತಿ ಪಾದದಲ್ಲಿಯೂ ಆರು ಗಣಗಳಿವೆ. ಇವುಗಳನ್ನು ಐದು ಮಾತ್ರೆಯ ೫ ಗಣ+ಆರು ಮಾತ್ರೆಯ ಒಂದು ಗಣ=೬ ಗಣಗಳಾಗಿ ವಿಭಾಗಿಸಬಹುದು. ಆದರೆ ೬ ಮಾತ್ರೆಯ ಗಣವನ್ನು ಮೂರು ಮೂರು ಮಾತ್ರೆಯ ಎರಡು ಗಣಗಳನ್ನಾಗಿ ಮಾಡುವುದು ಚೆನ್ನ. ಈ ಹಾಡಿನ ಛಂದಸ್ಸನ್ನು ಇಂಗ್ಲೀಷ್ ಭಾಷೆಯ Hexameter (ಆರು ಗಣದ ಪಾದ) ಎಂಬ ಛಂದೋವಿಭಾಗಕ್ಕೆ ಹೋಲಿಸಬಹುದು. ಈ ಪದ್ಯದ ಮೊದಲಿನ ಎರಡು ಪಾದಗಳ ಸ್ವರೂಪವನ್ನು ಕೆಳಗೆ ಕೊಡಲಾಗಿದೆ. ಇದರಂತೆ ಎಲ್ಲ ಪಾದಗಳೂ ರಚಿತವಾಗಿವೆ.

೫	೫	೫	೫	೫	೩	೩
ತಾರೆಗಳು	ಮೊಳವಿಸಿ	ಬಂದು ಬಿ	ಟ್ಟಹ ಬೀಡು	ನಮ್ಮ ಕ	ನ್ನಡದ	ನಾಡು

೫	೫	೫	೫	೫	೩	೩
ತಾರೆಗಳ	ಒಡಹುಟ್ಟು	ತಾರೆಗಳ	ಒಡನಾಡಿ	ನಮ್ಮ ಕ	ನ್ನಡದ	ಹಾಡು

ಸೂಚನೆ :— ಇಲ್ಲಿ ಕೊನೆಯ ಗಣವನ್ನು ಮೂರು ಮಾತ್ರೆಯ ಎರಡು ಗಣಗಳನ್ನಾಗಿ ಮಾಡಿದೆ

ಓ ಹಿಮಾಲಯ ಮತ್ತು ಇಮ್ಮಡಿ ಪುಲಿಕೇಶಿ

ಇದು ಹಾಡುಗಬ್ಬ. ಮಾತ್ರಾ ಗಣಗಳಿಂದಲೇ ಕೂಡಿದ್ದರೂ ಹಾಡುವಾಗ ತಾಳಲಯಗಳಿಗನುಸಾರವಾಗಿ ಪದಗಳನ್ನು ಎಳೆಯಬಹುದು ಅಥವಾ ಕುಗ್ಗಿಸಬಹುದು. ಈ ವಿಷಯವನ್ನು ಉಪಾಧ್ಯಾಯರು ತರಗತಿಗಳಲ್ಲಿ ಬೋಧಿಸಬಹುದು.

ಹೆಮ್ಮರ

ಸೀಸ ಪದ್ಯದ ಒಂದು ಮಾದರಿಯೆನ್ನಬಹುದು. ಇದನ್ನು ಶ್ರೀಮಾನ್ ಡಿ. ವಿ. ಗುಂಡಪ್ಪನವರು ಬರೆದಿರುವ ಬೇಲೂರಿನ ಶಿಲಾಬಾಲಿಕೆಯರು ಎಂಬ ಕವನಕ್ಕೆ ಹೋಲಿಸಬಹುದು. ಇದು ಮಾತ್ರಾಗಣಗಳಿಂದ ಕೂಡಿರುವ ಹೊಸ ಛಂದಸ್ಸಿನಿಂದ ರಚಿತವಾಗಿದೆ. ಸಾಧಾರಣವಾಗಿ ಮೊದಲನೆಯ ಪಾದದಲ್ಲಿ ಐದು ಮಾತ್ರೆಗಳುಳ್ಳ ನಾಲ್ಕು ಗಣಗಳೂ, ಎರಡನೆಯ ಪಾದದಲ್ಲಿ ಐದು ಮಾತ್ರೆಯ ಮೂರು ಗಣಗಳೂ ಒಂದು ಗುರುವೂ ಇವೆ.

ಉದಾಹರಣೆ :—

ನಿನ್ನ ಕುಲ | ಮನೆಮಾನ | ನಾಲ್ಕರ | ಕ್ಕಿಗು ಹೆದರ |
ತುಳಿವವರ | ಕಾಲಧೂ | ಳಾದುದೇ | ನು |

ಕೆಲವು ಕಡೆ ಪದ್ಯರಚನೆಯ ಸ್ವರೂಪ ಹೀಗಿದೆ.

೫ ೫ ೫ ೫
ಬರುವಾಗ | ತೊರೆವಾಗ | ಇರುವಾಗ | ಬಿಡುವಾಗ |
೫ ೫ ೫ ೩
ನಡೆವುದಕೆ | ಸುಖಿಯಾಗಿ | ಬಾಳ್ವುದೇ | ಹಿಡಿದು |

ರಂಜದ ಹೂ

ಇದು ಹೊಸ ಛಂದಸ್ಸಿನಲ್ಲಿ ಬರೆಯಲ್ಪಟ್ಟಿರುವುದು. ನಾಲ್ಕು ಪಾದಗಳಿಗೆ ಒಂದು ಪದ್ಯದಂತೆ ವಿಂಗಡವಾಗಿರುವುದು. ಚೌಪದಿಯ ರೀತಿಯಲ್ಲಿರುವುದು.

ಉದಾಹರಣೆ :—

ಅಕ್ಕನೋ | ಡಿಹರೇನು | ನಮ್ಮ ಕಾ | ಡನೊಳಿರುವ |
ಹೂವುಗಳ | ಲಿದುಒಂದು | ಹೊಸರಂಜ | ದೆಸಳು |
ಮಿಕ್ಕಹೂ | ವಂತಲ್ಲ | ಚಿಕ್ಕಹೂ | ವಿದುನೋಡಿ |
ಚಿಕ್ಕೆವೊಲು | ಮಿನುಗುವುದು | ಬಲುಮುದ್ದು | ಚೆನ್ನು.

ಈ ಪದ್ಯದಲ್ಲಿ ಒಂದು ಮತ್ತು ಮೂರನೆಯ ಪಾದಗಳಲ್ಲಿ ೫ ಮಾತ್ರೆಗಳ ೪ ಗಣಗಳಿವೆ. ೨, ೪ನೆಯ ಪಾದಗಳಲ್ಲಿ ೫ ಮಾತ್ರೆಯ ೩ ಗಣಗಳೂ ೩ ಮಾತ್ರೆಯ ೧ ಗಣವೂ ಇರುವುವು. ಉಳಿದ ಪದ್ಯಗಳು ಇದೇ ಕ್ರಮದಲ್ಲಿರುವುವು.

ಗಾಂಧೀಜಿ

ಹೊಳೆ ಎಷ್ಟು ದೊಡ್ಡದಾದರೇನು? ಅದರ ಮೂಲ ತುಂಬ ಚಿಕ್ಕದು; ಒಂದು ಸಣ್ಣ ಹಳ್ಳದಂತೆ. ಆದರೆ ಅದು ನಮ್ರವಾಗಿ ಮುಂಬರಿದಂತೆಲ್ಲ ಅಕ್ಕಪಕ್ಕದಿಂದ ಬಂದ ಹಳ್ಳಕೊಳ್ಳಗಳ ನೀರನ್ನೆಲ್ಲ ಒಳಕೊಂಡು ಹಿರಿದಾಗುತ್ತಾ ಹೋಗುತ್ತದೆ. ಹಿರಿದಾದಂತೆಲ್ಲ ಅದು ತನ್ನ ಕೊನೆಯ ಗುರಿಯಾದ ಸಾಗರದ ಕಡೆಗೆ ಧಾವಿಸುತ್ತದೆ. ತನ್ನ ದಾರಿಗೆ ಅಡ್ಡಬಂದ ಬೆಟ್ಟಗುಡ್ಡಗಳನ್ನು ವಿನಯದಿಂದ ಬಳಸಿಯೋ ಕೆಚ್ಚಿನಿಂದ ಕೊಚ್ಚಿಯೋ ಮುಂದೆನುಗ್ಗಿ ದಾರಿಮಾಡಿಕೊಂಡು, ತನ್ನ ಒಳಗೆ ಬರುವ ಉಪನದಿಗಳನ್ನೆಲ್ಲ ಎದೆಗಪ್ಪಿಕೊಂಡು, ಬಯಸಿದವರಿಗೆ ಸಾಧ್ಯವಾದ ರೀತಿಯಲ್ಲಿ ನೆರವು ನೀಡುತ್ತಾ ತನ್ನ ಹೆಗ್ಗುರಿಯ ಕಡೆಗೆ ಒಮ್ಮನಸ್ಸಿನಿಂದ ಮುಂದುವರಿದು ಮಹತ್ತಾಗಿ ಸಾಗಿ ತುದಿಗೆ ಮಹಾಸಾಗರದಲ್ಲಿ ಐಕ್ಯವಾಗುತ್ತದೆ.

ಹಾಗೆಯೆ ಮನುಷ್ಯರೆಲ್ಲರೂ ಹುಟ್ಟುವಾಗ ಸರ್ವಸಾಮಾನ್ಯರಂತಿರುತ್ತಾರೆ. ಅವರಲ್ಲಿ ಹಿರಿಯ ಚೇತನದ ಮಗು ತಾನು ಬೆಳೆದು ದೊಡ್ಡವನಾದಂತೆಲ್ಲ ಲೋಕಾನುಭವದಿಂದ ಅರಳುತ್ತಾ ಅರಳುತ್ತಾ ತನ್ನ ಬದುಕಿನ ಹೂವನ್ನು ಭಗವಂತನಿಗೆ ಅರ್ಪಿಸುವ ಹಿರಿಯ ಗುರಿಯನ್ನಿಟ್ಟುಕೊಂಡು ವಿನೀತನಾಗಿ ಸೇವಾತತ್ಪರನಾಗಿ ಸತ್ಯವಂತನಾಗಿ ಬಾಳು ಸಾಗಿಸಿ ಮಹಾತ್ಮನಾಗಿ ಅಮರನಾಗುತ್ತಾನೆ. ಹಾಗೆ ಮಹಾತ್ಮರಾದವರಲ್ಲಿ ನಮ್ಮ ಗಾಂಧೀಜಿ ಒಬ್ಬ ಹಿರಿಯವ್ಯಕ್ತಿ.

ಬಾಲ್ಯ ಮತ್ತು ವಿದ್ಯಾರ್ಥಿದಶೆ

ಕರಮಚಂದ ಗಾಂಧಿ ಪೋರಬಂದರು ಸಂಸ್ಥಾನದ ದಿವಾನರಾಗಿದ್ದರು. ಪೋರಬಂದರು ಗುಜರಾತು ಪ್ರಾಂತದ ಕಾಥೇವಾಡ ಪ್ರದೇಶದ ಸಂಸ್ಥಾನಗಳಲ್ಲಿ ಒಂದಾಗಿತ್ತು. ಕರಮಚಂದ ಗಾಂಧಿ ಸತ್ಯವಂತರಾಗಿದ್ದರು. ಇವರ ಮಡದಿ ಪುತಲಿಬಾಯಿ ಶೀಲವಂತೆ; ಸಾಧ್ವಿ. ಈ ಸುಚರಿತರಾದ ತಂದೆ ತಾಯಿಗಳಿಗೆ ಕೊನೆಯ ಮಗ ಮೋಹನದಾಸ ಕರಮಚಂದ ಗಾಂಧಿ.

ಮೋಹನದಾಸನ ಬಾಲ್ಯ ಪೋರಬಂದರಿನಲ್ಲಿಯೂ, ಆಮೇಲೆ ತಂದೆ ಕರಮಚಂದ ಗಾಂಧಿ ರಾಜಕೋಟೆ ಸಂಸ್ಥಾನದ ದಿವಾನರಾದಾಗ

ರಾಜಕೋಟೆಯಲ್ಲಿಯೂ ಕಳೆಯಿತು. ಈತ ವಿದ್ಯಾರ್ಥಿಯಾಗಿದ್ದಾಗ ಒಳ್ಳೆಯ ಹುಡುಗ ಎನಿಸಿಕೊಂಡಿದ್ದ. ತನ್ನ ವ್ಯಾಸಂಗವನ್ನೆಂದೂ ನಿರ್ಲಕ್ಷಿಸಿದವನಲ್ಲ. ತನ್ನ ಉಪಾಧ್ಯಾಯರಿಗೆ ಎಂದೂ ಸುಳ್ಳು ಹೇಳಲಿಲ್ಲ. ಎಂದೂ ಅವರಿಗೆ ಮೋಸ ಎಣಿಸಲಿಲ್ಲ. ಶಾಲೆಯಿಂದ ಅವನಿಗೆ ದೊರೆಯುತ್ತಿದ್ದ ಯೋಗ್ಯತಾಪತ್ರಗಳಲ್ಲಿ ಅವನ ನಡತೆಯ ವಿಷಯದ ಪ್ರಶಂಸೆ ಇದ್ದೇ ಇರುತ್ತಿತ್ತು. ಜೊತೆಗೆ ಅವನ ಸಭ್ಯತೆಗಾಗಿ ಮೆಚ್ಚುಗೆಯ ವೇತನವೂ ದೊರೆಯುತ್ತಿತ್ತು.

ಅವನು ಬಾಲ್ಯದಿಂದಲೂ ಹೇಗೆ ಸತ್ಯವಾಗಿ ನಡೆದುಕೊಳ್ಳುತ್ತಿದ್ದನೆಂಬುದಕ್ಕೆ ಒಂದು ಉದಾಹರಣೆ. ಒಮ್ಮೆ ಪರೀಕ್ಷೆ ನಡೆಸಲು ಶಾಲಾಧಿಕಾರಿಗಳು ಬಂದರು. ಅವರು ವಿದ್ಯಾರ್ಥಿಗಳಿಗೆ ಉಕ್ತಲೇಖನ ಬರೆಯಿಸುತ್ತಿದ್ದಾಗ ಮೋಹನದಾಸ ಇಂಗ್ಲಿಷಿನ "ಕೆಟಲ್" ಶಬ್ದ ಬರೆಯುವುದರಲ್ಲಿ ತಪ್ಪಿದ. ಈ ತಪ್ಪು ಉಪಾಧ್ಯಾಯರಿಗೆ ಗೊತ್ತಾಯಿತು. ಪಕ್ಕದ ಹುಡುಗನನ್ನು ನೋಡಿ ತಿದ್ದಿಕೊಳ್ಳುವಂತೆ ಅವರು ಮೋಹನದಾಸನಿಗೆ ಸಂಜ್ಞೆ ಮಾಡಿದರು. ಆದರೆ ಹಾಗೆ ತನ್ನ ತಪ್ಪು ಮುಚ್ಚಿಕೊಳ್ಳಲು ಮೋಹನದಾಸನಿಗೆ ಮನಸ್ಸು ಇರಲಿಲ್ಲ.

ಮೋಹನದಾಸ ಎಷ್ಟು ಒಳ್ಳೆಯವನಾಗಿದ್ದರೂ ಸಹವಾಸದೋಷದಿಂದ ತನ್ನ ವಿದ್ಯಾರ್ಥಿದಶೆಯಲ್ಲಿ ಮುಗ್ಗರಿಸಬೇಕಾಯಿತು. ಇತರರು ಬೀಡಿ ಚುಟ್ಟ ಸೇದಿ ಮೂಗು ಬಾಯಿಂದ ಹೊಗೆ ಕಾರುವುದು ನೋಡಿ ಅವನಿಗೆ ತಾನೂ ಹಾಗೆ ಮಾಡಬೇಕೆನಿಸಿತು. ಕದ್ದು ಬೀಡಿ ಸಿಗರೇಟು ಸೇದಲು ಪ್ರಾರಂಭಿಸಿದ. ಅವನ ಗೆಳೆಯನೊಬ್ಬ ಮಾಂಸ ತಿನ್ನುವಂತೆ ಪ್ರೇರಿಸಿದ. ಗಾಂಧೀ ಮನೆತನದವರು ಬನಿಯ ಜಾತಿಗೆ ಸೇರಿದವರು; ವೈಷ್ಣವರು ; ಮದ್ಯ ಮಾಂಸ ಅವರಿಗೆ ನಿಷೇಧ. ಆದ್ದರಿಂದ ಮಾಂಸ ಭಕ್ಷಣೆ ಕಳ್ಳತನದಲ್ಲಿ ನಡೆಯಬೇಕಾಯಿತು. ಆದರೆ ಈ ದುರಭ್ಯಾಸ ಬಹಳ ದಿನ ನಡೆಯಲಿಲ್ಲ. ತಾನು ತಂದೆತಾಯಿಗಳಿಗೆ ಮೋಸಮಾಡುತ್ತಿರುವೆನೆಂದೂ ತಪ್ಪುದಾರಿ ಹಿಡಿಯುತ್ತಿರುವೆನೆಂದೂ ಮೋಹನದಾಸನಿಗೆ ಅರಿವಾಯಿತು. ಕೂಡಲೆ ಸಂಕಟಪಟ್ಟುಕೊಂಡು ತನ್ನ ತಪ್ಪನ್ನೆಲ್ಲ ಒಪ್ಪಿಕೊಂಡು ಪಶ್ಚಾತ್ತಾಪಪಟ್ಟು ಇನ್ನು ಮುಂದೆ ಎಂದೆಂದಿಗೂ ಅಸತ್ಯವಾಗಿ ನಡೆಯುವುದಿಲ್ಲವೆಂದು ಭರವಸೆಕೊಟ್ಟು ಒಂದು ಕಾಗದ ಬರೆದು ತನ್ನ

ತಂದೆಗೆ ಒಪ್ಪಿಸಿದ. ತಂದೆ ಅದನ್ನು ನೋಡಿ ಮೌನವಾಗಿ ಮರುಗಿ ಕಣ್ಣಲ್ಲಿ ನೀರು ತಂದುಕೊಂಡರು. ಆದರೂ ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟ ಮಗನ ಭವಿಷ್ಯದ ವಿಷಯದಲ್ಲಿ ನಿಶ್ಚಿಂತರಾದರು.

ಮೋಹನದಾಸನಿಗೆ ಪುರಾಣಪುಣ್ಯಕಥೆಗಳಲ್ಲಿ ಅಭಿರುಚಿ ಹೆಚ್ಚು. ತನ್ನ ರಾಜ್ಯ, ಭೋಗಭಾಗ್ಯಗಳನ್ನೆಲ್ಲ ಕಳೆದುಕೊಂಡಾದರೂ ಸತ್ಯವನ್ನು ಪಾಲಿಸಿದ ಹರಿಶ್ಚಂದ್ರನ ಕಥೆ ಆತನಿಗೆ ಆದರ್ಶವಾಯಿತು. ಮುಪ್ಪಿನ ತಂದೆತಾಯಿಗಳ ಸೇವೆಯಲ್ಲಿ ತನ್ನ ಸುಖವನ್ನು ಮರೆತಿದ್ದ ಶ್ರವಣನ ಕಥೆಯೂ ಆತನಿಗೆ ಮೆಚ್ಚಿಕೆಯಾಯಿತು.

ವಾಡಿಕೆಯಾಗಿದ್ದ ಬಾಲ್ಯವಿವಾಹ ಪದ್ಧತಿಯನ್ನೆ ಅನುಸರಿಸಿ; ಹದಿಮೂರು ವರ್ಷ ವಯಸ್ಸಿನಲ್ಲಿದ್ದಾಗ, ಹಿರಿಯರು ಮೋಹನದಾಸನಿಗೆ ಮದುವೆ ಮಾಡಿಬಿಟ್ಟರು. ಮೋಹನದಾಸ ಸಂಯಮಿಯಾಗಿ ಬೆಳೆದುದರಿಂದ ಬಾಲ್ಯವಿವಾಹದ ಕೆಟ್ಟ ಪರಿಣಾಮ ಅವನಿಗಾಗಲಿಲ್ಲ. ಮೆ.ಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಹದಿನೆಂಟನೆಯ ವಯಸ್ಸಿನಲ್ಲಿ ಉಚ್ಚಶಿಕ್ಷಣಕ್ಕೆ ಅವನನ್ನು ವಿಲಾಯಿತಿಗೆ ಕಳುಹಿಸಬೇಕೆಂದು ಅವರಣ್ಣ ಯೋಚಿಸಿದರು. ಅಷ್ಟರಲ್ಲಿ ಅವರ ತಂದೆ ತೀರಿಕೊಂಡಿದ್ದರು. ತಾಯಿ ಮಗನೆಲ್ಲಿ ಕೆಟ್ಟದಾರಿ ಹಿಡಿದುಬಿಡುವನೊ ಎಂದು ಹೆದರಿ ವಿಲಾಯಿತಿಗೆ ಕಳುಹಿಸಲು ಹಿಂಜರಿದರು. ಆದರೆ, ಮದ್ಯ ಸೇವಿಸುವುದಿಲ್ಲ, ಮಾಂಸ ತಿನ್ನುವುದಿಲ್ಲ, ಹೆಂಗಸರೊಡನೆ ಕೆಟ್ಟ ಸಹವಾಸ ಮಾಡುವುದಿಲ್ಲ ಎಂದು ಮೋಹನದಾಸ ಭರವಸೆಕೊಟ್ಟು ವ್ರತ ತೊಟ್ಟಮೇಲೆ ಪ್ರಯಾಣಮಾಡಲು ಅನುಮತಿಸಿದರು. ಆದರೆ ಜಾತಿಯವರು ಮತಾಚಾರವನ್ನನುಸರಿಸಿ ವಿಲಾಯಿತಿ ಪ್ರಯಾಣ ಕೂಡದೆಂದರು. ಅರ್ಥವಿಲ್ಲದ ಆಚಾರವನ್ನು ನಿರ್ಲಕ್ಷಿಸಿ ಮೋಹನದಾಸ ವಿಲಾಯಿತಿಗೆ ಪ್ರಯಾಣ ಮಾಡಿದ.

ವಿಲಾಯಿತಿಯ ಬದುಕಿನ ಸೊಗಸು ತಳುಕುಗಳು ಮೋಹನದಾಸನ ಮನಸ್ಸನ್ನು ಕೊಂಚ ಸಡಿಲಗೊಳಿಸಿದವು. ಆದರೆ ಅಂತಹ ಯಾವ ತರವಲ್ಲದ ದುಂದುವೆಚ್ಚದ ಪದ್ಧತಿಗಳಿಗೂ ಬಲಿಬೀಳದೆ, ಸಂಯಮಿಯಾದ ಬ್ರಹ್ಮಚಾರಿಯಾಗಿದ್ದು ವ್ಯಾಸಂಗ ಮಾಡಿದ. ಓದಿನ ಜತೆಗೆ ಅಲ್ಲಿನ ಉತ್ತಮ ವ್ಯಕ್ತಿಗಳ ಸಹವಾಸ ಬೆಳೆಸಿದ. ಧಾರ್ಮಿಕ ಗ್ರಂಥಗಳನ್ನು ಅಧ್ಯಯನ ಮಾಡಿದ. ಭಗವದ್ಗೀತೆಯನ್ನು ಚೆನ್ನಾಗಿ ಓದಿ ಮನನ ಮಾಡಿದ.

ಎಡ್ವಿನ್ ಆರ್ನಾಲ್ಡರು ಬರೆದ "ಏಷ್ಯದ ಜ್ಯೋತಿ" (Light of Asia) ಎಂಬ ಗ್ರಂಥವನ್ನು ಪಠಿಸಿ, ಬುದ್ಧನ ದಿವ್ಯಜೀವನವನ್ನು ತಿಳಿದುಕೊಂಡ. ಹೀಗೆ ಮೂರು ವರ್ಷಗಳನ್ನು ವಿಲಾಯಿತಿಯಲ್ಲಿ ಕಳೆದು ಬ್ಯಾರಿಸ್ಟರ್ ಪದವೀಧರನಾಗಿ ಸ್ವದೇಶಕ್ಕೆ ಹಿಂತಿರುಗಿದ.

ಇನ್ನುಮುಂದೆ ಮೋಹನದಾಸ ಕರಮಚಂದ ಗಾಂಧಿಯನ್ನು "ಗಾಂಧೀಜಿ" ಎಂದು ನಮಗೆ ಪರಿಚಿತವಾದ ಹೆಸರಿನಿಂದ ಕರೆಯುತ್ತೇವೆ.

ವ್ಯಕ್ತಿ

ಇಷ್ಟರಲ್ಲಾಗಲೆ ಗಾಂಧೀಜಿಗೆ ಮಾನವಜೀವನದ ಶ್ರೇಷ್ಠತೆ ಸಮಾಜ ಸೇವೆಯಲ್ಲಿದೆ ಎಂಬುದು ಮನದಟ್ಟಾಗಿತ್ತು. ಯಾವ ವೃತ್ತಿಯನ್ನೆ ಅವಲಂಬಿಸಲಿ ಅದರಲ್ಲಿ ಸತ್ಯಸಂಧನಾಗಿರಬೇಕಾದರೆ ಸೇವಾದೀಕ್ಷೆಯನ್ನು ಕೈಗೊಳ್ಳಬೇಕು ಎಂಬುದು ಗೊತ್ತಾಗಿತ್ತು. ಬ್ಯಾರಿಸ್ಟರಾಗಿದ್ದು ಹಾಗೆ ಜೀವನ ನಡೆಸಲು ನಿರ್ಧರಿಸಿ ಬೊಂಬಾಯಿಯಲ್ಲಿ ಆಫೀಸು ತೆರೆದರು. ಅಲ್ಲಿ ಅವರ ಕೆಲಸ ತೃಪ್ತಿಕರವಾಗಿ ನಡೆಯಲಿಲ್ಲ. ಬೊಂಬಾಯಿ ಬಿಟ್ಟು ರಾಜಕೋಟೆಗೆ ಹೋಗಿ ನೆಲಸಿದರು. ಅಲ್ಲಿ ವಕೀಲಿ ಕೆಲಸವೇನೊ ಉತ್ತಮವಾಗಿ ನಡೆಯುತ್ತಿತ್ತು. ಆದರೆ ಇಂಗ್ಲಿಷರ ಆಶ್ರಯದಲ್ಲಿ ನಡೆಯುತ್ತಿದ್ದ ಸರಕಾರದ ಅಧಿಕಾರಿಗಳು ನೀತಿನಿಯಮಗಳನ್ನು ನಿರ್ಲಕ್ಷಿಸಿ ನ್ಯಾಯ ಅನ್ಯಾಯಗಳ ಲಕ್ಷವಿಲ್ಲದೆ ದರ್ಪದಿಂದ ವರ್ತಿಸುತ್ತಿದ್ದರು. ಅವನ್ನೆಲ್ಲ ಸಹಿಸಿಕೊಂಡು ನಿಜವಾಗಿ ಬಾಳುವುದು ದುಸ್ಸಾಧ್ಯವಾಯಿತು. ಜೀವನ ಬೇಸರಿಕೆಯನ್ನುಂಟುಮಾಡಿತು. ಏನು ಮಾಡುವುದೆನ್ನೂ ತೋಚದಾಯಿತು. ಆ ವಾತಾವರಣದಿಂದ ದೂರವಾದರೆ ಸಾಕು ಎನ್ನಿಸಿತು. ಈ ಸ್ಥಿತಿಯಲ್ಲಿರುವಾಗ ದಕ್ಷಿಣ ಆಫ್ರಿಕದಲ್ಲಿ ವ್ಯಾಪಾರ ನಡೆಸುತ್ತಿದ್ದ ದಾದಾ ಅಬ್ದುಲ್ಲಾ ಕಂಪೆನಿಯವರಿಂದ ಆಫ್ರಿಕಕ್ಕೆ ಬರಬೇಕೆಂದು ಕರೆ ಬಂತು. ಆಫ್ರಿಕದಲ್ಲಿ ನಡೆಯುತ್ತಿದ್ದ ತಮ್ಮ ಒಂದು ದೊಡ್ಡ ಮೊಕದ್ದಮೆಯಲ್ಲಿ ತಮ್ಮ ವಕೀಲರಿಗೆ ಸಹಾಯಕ ವಕೀಲರಾಗಿರುವಂತೆ ಆ ಕಂಪೆನಿಯವರು ಇವರನ್ನು ಕೇಳಿದ್ದರು. ಗಾಂಧೀಜಿ ಸಂತೋಷದಿಂದ ಅದಕ್ಕೆ ಒಪ್ಪಿ ಆಫ್ರಿಕಕ್ಕೆ ಹೊರಡಲು ಸಿದ್ಧರಾದರು.

ಆಫ್ರಿಕದಲ್ಲಿ

ಗಾಂಧೀಜಿ ಹಡಗು ಹತ್ತಿ ಆಫ್ರಿಕಕ್ಕೆ ಪ್ರಯಾಣ ಬೆಳಸಿದರು. ಅವರು ಆಫ್ರಿಕದ ನೆಟಾಲಿನಲ್ಲಿ ಹಡಗು ಇಳಿದಕೂಡಲೆ ಅಲ್ಲಿ ಭಾರತೀಯರನ್ನು ಫರಂಗಿಯವರು ಎಷ್ಟು ಹೀನಾಯವಾಗಿ ಕಾಣುತ್ತಿದ್ದರೆಂಬುದು ಗೊತ್ತಾಯಿತು. ಆಫ್ರಿಕದಲ್ಲಿ ನೆಲೆಸಿದ್ದ ಭಾರತೀಯರಲ್ಲಿ ಮೂರು ಬಗೆಯವರಿದ್ದರು. ವ್ಯಾಪಾರ ಮಾಡಿಕೊಂಡು ಹಣ ಗಳಿಸುತ್ತಿದ್ದ ಜನರದು ಒಂದು ವರ್ಗ. ಈ ವ್ಯಾಪಾರಿಗಳಲ್ಲಿ ಮತ್ತಿತರ ಸಣ್ಣಪುಟ್ಟ ಆಫೀಸುಗಳಲ್ಲಿ ಗುಮಾಸ್ತರಾಗಿದ್ದವರದು ಒಂದು. ಮೂರನೆಯದು ಐದುವರ್ಷ ಫರಂಗಿಯವರ ತೋಟಗಳಲ್ಲಿ ಕೆಲಸಮಾಡಲು ಕರಾರು ಮಾಡಿಕೊಂಡು ಹೋಗಿದ್ದ ಜನರದು. ಅಲ್ಲಿನ ಫರಂಗಿಯವರು ಇವರನ್ನೆಲ್ಲ ಒಟ್ಟಿಗೆ ಕೂಲಿಯವರೆಂದೇ ಕರೆಯುತ್ತಿದ್ದರು. ಗಾಂಧೀಜಿಯನ್ನೂ ಕೂಲಿ ಲಾಯರು ಎಂದು ಕರೆದರು.

ಆಫ್ರಿಕಕ್ಕೆ ಬಂದ ಎರಡು ಮೂರು ದಿನದಲ್ಲೆ ಗಾಂಧೀಜಿ ಸ್ವತಃ ತೊಂದರೆಗೆ ಒಳಗಾಗಬೇಕಾಯಿತು. ಒಂದು ದಿನ ಇವರು ಡರ್ಬನಿನ ನ್ಯಾಯಾಸ್ಥಾನಕ್ಕೆ ಹೋದರು. ನ್ಯಾಯಾಧೀಶರು ಇವರಿಗೆ ತಲೆಯಿಂದ ಪೇಟ ತೆಗೆಯಲು ಹೇಳಿದರು. ಗಾಂಧೀಜಿಗೆ ಅದು ಅವಮಾನವೆನಿಸಿ ಹಾಗೆ ಮಾಡದೆ ಹೊರಗೆ ಬಂದುಬಿಟ್ಟರು. ಈ ಪ್ರಸಂಗದ ಮೇಲೆ ಪತ್ರಿಕೆಗಳಲ್ಲಿ ವಾದ ವಿವಾದ ನಡೆದು, ಗಾಂಧೀಜಿ ಆಫ್ರಿಕದ ಬಹುಮಂದಿಗೆ ಪರಿಚಿತರಾದರು. ಸಾಮಾನ್ಯವಾಗಿ ಅಲ್ಲಿನ ಫರಂಗಿಯವರೆಲ್ಲ ಇವರನ್ನು ವಕ್ರದೃಷ್ಟಿಯಿಂದ ನೋಡತೊಡಗಿದರು. ಇಷ್ಟಕ್ಕೇ ಗಾಂಧೀಜಿ ತೊಂದರೆಯಿಂದ ಪಾರಾಗಲಿಲ್ಲ.

ದಾದಾ ಅಬ್ದುಲ್ಲಾ ಸೇಠರ ಮೊಕದ್ದಮೆ ಪ್ರಿಟೋರಿಯದಲ್ಲಿ ನಡೆಯುತ್ತಿತ್ತು. ಗಾಂಧೀಜಿ ಅಲ್ಲಿಗೆ ಹೋಗಬೇಕಾಗಿ ಬಂತು. ಮೊದಲನೆಯ ದರ್ಜೆಯ ಟಿಕೆಟ್ಟು ಕೊಂಡು ರೈಲಿನಲ್ಲಿ ಕುಳಿತರು. ಗಾಡಿ ಮ್ಯಾರಿಟ್ಸ್ ಬರ್ಗಿಗೆ ಬಂದಾಗ ಫರಂಗಿ ಪ್ರಯಾಣಿಕನೊಬ್ಬ ಹತ್ತಿದ. ಗಾಂಧೀಜಿಯನ್ನು ನೋಡಿ ಅವನಿಗೆ ಅಸಮಾಧಾನವಾಯಿತು. ಕೂಡಲೆ ಇಳಿದು ಹೋಗಿ ಆ ನಿಲ್ದಾಣದ ಅಧಿಕಾರಿಯನ್ನು ಕರೆತಂದು ಗಾಂಧೀಜಿಯನ್ನು ಆ ಗಾಡಿಯಿಂದ ಇಳಿಸುವಂತೆ ಹೇಳಿದ. ಆ ಅಧಿಕಾರಿ ಗಾಂಧೀಜಿಗೆ

ಇಳಿಯಲು ಹೇಳಿದಾಗ, ಮೊದಲನೆಯ ದರ್ಜೆಯ ಟಿಕೆಟ್ ತೋರಿಸಿ, ಆ ಗಾಡಿಯಲ್ಲಿ ಪ್ರಯಾಣಮಾಡಲು ತಮಗೆ ಹಕ್ಕಿದೆಯೆಂದೂ ಇಳಿಯುವುದಿಲ್ಲ ವೆಂದೂ ತಿಳಿಸಿದರು. ಆದರೆ ಅವರ ನ್ಯಾಯವಾದ ವಾದವನ್ನು ಕೇಳುವ ವರು ಯಾರು? ಪೊಲೀಸಿನವರು ಬಂದು ಸಾಮಾನನ್ನೆಲ್ಲ ಗಾಡಿಯಿಂದ ಹೊರಗೆ ಹಾಕಿದರು, ಗಾಂಧೀಜಿಯನ್ನೂ ಹೊರಗೆಳೆದರು. ಗಾಡಿ ಹೊರಟು ಹೋಯಿತು. ಗಾಂಧೀಜಿಗೆ ಸಹಿಸಲಾರದ ಅವಮಾನವಾಯಿತು. ಕೂಡಲೆ ಆಫ್ರಿಕವನ್ನು ಬಿಟ್ಟು ಹೋಡಬೇಕೆಂದುಕೊಂಡರು. ಆಫ್ರಿಕ ಬಿಟ್ಟರೆ ಈ ವರ್ಣದ್ವೇಷದಿಂದ ತಾವೊಬ್ಬರು ಪಾರಾಗಬಹುದು, ಆದರೆ ಲಕ್ಷಾಂತರ ಭಾರತೀಯರ ಪಾಡೇನು! ಇದಕ್ಕೆ ಹೆದರಿ ಓಡಿದರೆ ಹೇಡಿಯಾಗುವುದಲ್ಲದೆ ತಮ್ಮ ಕರ್ತವ್ಯಕ್ಕೆ ವಿಮುಖರಾದಂತಾಗುತ್ತದೆ. ಅಲ್ಲಿದ್ದೇ ಬಂದ ತೊಂದರೆ ಯನ್ನೆಲ್ಲ ಎದುರಿಸಿ ಅವಮಾನವನ್ನೆಲ್ಲ ಅನುಭವಿಸಿ ಈ ವರ್ಣದ್ವೇಷವನ್ನು ತೊಡೆಯಬೇಕು; ಭಾರತೀಯರು ತಲೆಯೆತ್ತಿ ಬದುಕುವಂತೆ ಮಾಡಲು ಹೆಣಗಬೇಕು.—ಈ ನಿರ್ಧಾರಕ್ಕೆ ಬಂದು ಗಾಂಧೀಜಿ ಮತ್ತೊಂದು ಗಾಡಿ ಯಲ್ಲಿ ಪ್ರಯಾಣ ಬೆಳಸಿದರು. ಆದರೆ ಇನ್ನೂ ಆ ಪ್ರಯಾಣದ ಕಷ್ಟ ಮುಗಿದಿರಲಿಲ್ಲ. ಚಾರ್ಲ್ಸ್‌ಟೌನಿಂದ ಜೋಹಾನ್ಸ್‌ಬರ್ಗ್‌ವರೆಗೆ ಕುದುರೆ ಗಾಡಿಯಲ್ಲಿ ಪ್ರಯಾಣ ಮಾಡಬೇಕಾಗಿತ್ತು. ಆ ಗಾಡಿಯ ಮೇಲಧಿಕಾರಿ ಗಾಂಧೀಜಿಯನ್ನು ಒಳಗೆ ಕೂಡಗೊಡಿಸದ ಗಾಡಿ ಹೊಡೆಯುವವನ ಪಕ್ಕ ದಲ್ಲಿ ಸ್ಥಳ ಕೊಟ್ಟನು. ಗಾಂಧೀಜಿ ಈ ಅವಮಾನವನ್ನು ಸಹಿಸಿಕೊಂಡು ಅಲ್ಲೇ ಕೂತರು. ಆಮೇಲೆ ಆ ಅಧಿಕಾರಿಗೆ ಗಾಡಿಯವನ ಪಕ್ಕದಲ್ಲಿ ಕೂಡಬೇಕೆನಿಸಿತು. ಆಗ ಗಾಂಧೀಜಿಗೆ ಕೆಳಗೆ ಕಾಲಿಡುವಲ್ಲಿ ಕೂರುವಂತೆ ಹೇಳಿದ. ಗಾಂಧೀಜಿ ಅದು ಸಾಧ್ಯವಿಲ್ಲ ಎಂದರು. ಸರಿ, ಈ "ಕೂಲಿ ಲಾಯರು" ಹೀಗೆ ಹೇಳಿದ್ದು ಆ ಫರಂಗಿಯವನಿಗೆ ರೇಗಿ ಹೋಯಿತು. ಫಟೀರೆಂದು ಕೆನ್ನೆಗೆ ಎರಡು ಬಿಗಿದ, ಕೈಹಿಡಿದು ಸೆಳೆದ. ಆದರೆ ಗಾಂಧೀಜಿ ಕೈಮುರಿದರೂ ಹಿಡಿತ ಬಿಡುವುದಿಲ್ಲವೆಂಬ ದೃಢನಿಶ್ಚಯದಿಂದ ಗಾಡಿಯ ಕಂಬಿ ಹಿಡಿದು ಅವನ ಹೊಡೆತಕ್ಕೆ ಮೈ ಒಡ್ಡಿದರು. ಆ ಫರಂಗಿ ಯವನು ಇನ್ನೂ ರೇಗಿ ಬಯ್ಯುತ್ತಲೇ ಇದ್ದ. ಅದುವರೆಗೂ ಸುಮ್ಮನೆ ನೋಡುತ್ತಿದ್ದ ಇತರ ಫರಂಗಿ ಪ್ರಯಾಣಿಕರಿಗೆ ಮನಕರಗಿತೇನೋ! ಆ ಅಧಿಕಾರಿಯನ್ನು ತಡೆದರು. ಹೀಗೆ ತಾನು ಮೇಲು, ಅವನು ಕೀಳು

ಎಂಬ ಫರಂಗಿಯವರ ವರ್ಣದ್ವೇಷದ ಹಾವಳಿಯನ್ನೆದುರಿಸಿ ಪ್ರಯಾಣ ಮಾಡಿ ಗಾಂಧೀಜಿ ಪ್ರಿಟೋರಿಯ ತಲುಪಿದರು.

ಗಾಂಧೀಜಿ ಆಫ್ರಿಕಕ್ಕೆ ಹೋದದ್ದು ಅಬ್ದುಲ್ಲಾ ಸೇಠರ ಮೊಕದ್ದಮೆಗಾಗಿ. ಆ ಮೊಕದ್ದಮೆಯ ವಾದಿ ಪ್ರತಿವಾದಿಗಳಿಬ್ಬರೂ ಬಂಧುಗಳು. ಹೀಗೆ ಹೋರಾಡಿ ದ್ವೇಷಾಸೂಯೆ ಬೆಳೆಸಿಕೊಂಡು ಹಾಳಾಗುತ್ತಿರುವುದು ಅವರಿಗೆ ಸರಿದೋರಲಿಲ್ಲ. ಏನಾದರೂ ಮಾಡಿ ಆ ಇಬ್ಬರು ಬಂಧುಗಳಿಗೂ ರಾಜಿಮಾಡಿಸಿ ಸ್ನೇಹ ಬೆಳಸಬೇಕೆಂದು ನಿರ್ಧರಿಸಿದರು. ಆ ಇಬ್ಬರೊಡನೆಯೂ ಮಾತಾಡಿ ರಾಜಿಗೆ ಒಪ್ಪಿಸಿದರು. ರಾಜಿಯಾದುದರಿಂದ ಆ ಇಬ್ಬರು ಬಂಧುಗಳಿಗೂ ನೆಮ್ಮದಿ ದೊರಕಿತು. ಗಾಂಧೀಜಿಗೆ ಆನಂದವಾಯಿತು. ಅವರು ವಕೀಲರಾಗಿದ್ದಷ್ಟು ದಿನವೂ ಹಾಗೆಯೇ ತನ್ನ ಕಕ್ಷಿಗಳ ಹಿತವನ್ನೇ ಮುಖ್ಯವಾಗಿಟ್ಟುಕೊಂಡೆ ಕೆಲಸ ಮಾಡಿದ್ದಾರೆ. ಸುಳ್ಳು ವ್ಯವಹಾರ ಒಂದನ್ನೂ ಅವರು ಮುಟ್ಟಲಿಲ್ಲ.

ಗಾಂಧೀಜಿ ಆಫ್ರಿಕಕ್ಕೆ ಹೋದ ಕೆಲಸ ಮುಗಿದಿತ್ತು. ಭಾರತಕ್ಕೆ ಹೋಗಲು ಅಣಿಮಾಡಿಕೊಳ್ಳುತ್ತಿದ್ದರು. ಆದರೆ ಇನ್ನೂ ಕೆಲಕಾಲ ಇದ್ದು ತಮ್ಮ ಹಕ್ಕುಬಾಧ್ಯತೆಗಳನ್ನು ಸಾಧಿಸಲು ಮಾರ್ಗದರ್ಶಕರಾಗಬೇಕೆಂದು ಅಲ್ಲಿ ನೆಲಸಿದ್ದ ಭಾರತೀಯರು ಗಾಂಧೀಜಿಯನ್ನು ಕೇಳಿಕೊಂಡರು. ಗಾಂಧೀಜಿ ಒಪ್ಪಿ ಅಲ್ಲೇ ವಕೀಲವೃತ್ತಿ ನಡೆಸಿಕೊಂಡು ಸಾರ್ವಜನಿಕ ಸೇವೆಯನ್ನು ಕೈಕೊಂಡರು. ಅಲ್ಲಿ ನೆಲಸಿದ್ದ ಭಾರತೀಯರ ಹಕ್ಕುಬಾಧ್ಯತೆಗಳ ಸಾಧನೆಗೆ ನ್ಯಾಯಮಾರ್ಗದಲ್ಲಿ ಚಳವಳಿ ಪ್ರಾರಂಭಿಸಿದರು.

ಸ್ವಲ್ಪ ಕಾಲವಾದ ಮೇಲೆ ತನ್ನ ಹೆಂಡತಿ ಮಕ್ಕಳನ್ನು ಕರೆದುಕೊಂಡು ಹೋಗಲು ಭಾರತಕ್ಕೆ ಬಂದರು. ಇಲ್ಲಿ ಪತ್ರಿಕೆಗಳ ಸಂಪಾದಕರನ್ನೂ ಸಾರ್ವಜನಿಕ ಮುಖಂಡರನ್ನೂ ಕಂಡು ಮಾತಾಡಿ ದಕ್ಷಿಣ ಆಫ್ರಿಕದ ಭಾರತೀಯರಲ್ಲಿ ಹೆಚ್ಚು ಆಸಕ್ತಿ ವಹಿಸುವಂತೆ ಮಾಡಿದರು. ದಕ್ಷಿಣ ಆಫ್ರಿಕದಲ್ಲಿ ಫರಂಗಿಯವರು ಭಾರತೀಯರಿಗೆ ಕೊಡುತ್ತಿದ್ದ ಕಿರುಕುಳದ ವಿಷಯ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಯಿತು. ಅದು ಭಾರತ ಸರ್ಕಾರದ ಮತ್ತು ಸಾರ್ವಜನಿಕರ ತಲೆಗೆ ಹಿಡಿಯುವಷ್ಟರ ಮಟ್ಟಿನ ಪ್ರಾಮುಖ್ಯತೆ ಪಡೆಯಿತು. ಈ ಸಮಾಚಾರ ದಕ್ಷಿಣ ಆಫ್ರಿಕಕ್ಕೂ ಮುಟ್ಟಿ ಅಲ್ಲಿನ ಫರಂಗಿಯವರ ತಲೆ ಕೆಡಿಸಿತು.

ಇಷ್ಟಾದ ಮೇಲೆ ಗಾಂಧೀಜಿ ತಮ್ಮ ಹೆಂಡತಿ ಮಕ್ಕಳೊಡನೆ ಮತ್ತೆ ಆಫ್ರಿಕಕ್ಕೆ ಹೊರಟರು. ದಕ್ಷಿಣ ಆಫ್ರಿಕದ ಫರಂಗಿಯವರು ಗಾಂಧೀಜಿ ತಮ್ಮ ವೈರಿ ಎಂದು ತಪ್ಪಾಗಿ ತಿಳಿದುಕೊಂಡಿದ್ದರು. ಗಾಂಧೀಜಿ ಹಡಗು ಇಳಿದರೊ ಇಲ್ಲವೊ ಫರಂಗಿಯವರ ಗುಂಪೊಂದು ಅವರನ್ನು ಸುತ್ತಿ ಹೊಡೆದು ಬಡಿದು ಕೊಲ್ಲಲು ಯತ್ನಿಸಿತು. ಆದರೆ ಅದೃಷ್ಟವಶಾತ್ ಇವರಿಗೆ ಪರಿಚಿತರಾಗಿದ್ದ ಪೊಲೀಸ್ ಅಧಿಕಾರಿಯೊಬ್ಬರ ಹೆಂಡತಿ ನೆರವಿಗೆ ಬಂದುದರಿಂದ ಬದುಕಿದರು. ಗಾಂಧೀಜಿ ತಮಗಾದ ಅವಮಾನಕ್ಕಾಗಿ ವ್ಯವಹಾರ ಹೂಡಲು ಇಷ್ಟಪಡಲಿಲ್ಲ. ಆಫ್ರಿಕದಲ್ಲಿ ಇವರ ಮೇಲೆ ಜನ ಎಷ್ಟೋ ಸಾರಿ ಕೈಮಾಡಿದ್ದಾಗೆ. ಆದರೂ ಇವರು ಅದಕ್ಕಾಗಿ ದೂರು ಹೂಡಲಿಲ್ಲ. ಇದರಿಂದ ಅವರ ವೈರಿಗಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮವಾಯಿತು.

ಗಾಂಧೀಜಿ ಆಫ್ರಿಕದಲ್ಲಿ ನೆಲಸಿದುದು ಸಾರ್ವಜನಿಕ ಕೆಲಸಗಳಿಗಾಗಿ. ಭಾರತೀಯರ ಹಕ್ಕುಬಾಧ್ಯತೆಗಳಿಗಾಗಿ ಚಳವಳಿ ನಡೆಸಬೇಕಾಯಿತು. ಇದಕ್ಕಾಗಿ ನೆಟಾಲ್ ಇಂಡಿಯನ್ ಕಾಂಗ್ರೆಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆದರೂ ಆಫ್ರಿಕದ ಭಾರತೀಯರ ಹಿತದ ಒಂದೊಂದು ಕೆಲಸಕ್ಕೂ ಗಾಂಧೀಜಿಯೆ ದುಡಿಯಬೇಕಾಯಿತು. ಅವರು ಜನರ ಸೇವೆಯಲ್ಲೇ ಮಗ್ನರಾದರು. ಆತ್ಮಸಾಕ್ಷಾತ್ಕಾರ ಹೊಂದಿ ದೇವರ ಸಾನ್ನಿಧ್ಯವನ್ನು ಪಡೆಯುವುದು ಸೇವೆಯ ಮೂಲಕವೆ ಎಂಬ ನಂಬಿಕೆ ಅವರಿಗಿದ್ದುದರಿಂದ ಸೇವಾಧರ್ಮದೀಕ್ಷೆ ಹೊತ್ತರು. ಆ ಮೂಲಕ ಸತ್ಯವನ್ನೂ ಈಶ್ವರನನ್ನೂ ಅರಸುವುದರಲ್ಲಿ ತೊಡಗಿದರು. ವಿಶ್ವಪ್ರೇಮದ ಅಮಿತಶಕ್ತಿ ಅವರಿಗೆ ಚೆನ್ನಾಗಿ ಮನವಟ್ಟಾಯಿತು.

ಈ ದೃಷ್ಟಿಯಿಂದ ರಾಜಕೀಯ ಸುಧಾರಣೆಗಿಂತಲೂ ಸಾಮಾಜಿಕ ಮತ್ತು ವ್ಯಕ್ತಿಯ ಸುಧಾರಣೆ ಮುಖ್ಯವಾಯಿತು. ಜನರು ತಮ್ಮ ತಪ್ಪನ್ನು ತಿದ್ದಿಕೊಂಡು ನೇರವಾದರೆ ಆಗ ಒಟ್ಟಿನ ಹಿತದಲ್ಲಿ ಕೆಲಸ ಮಾಡಲು ಶಕ್ತರಾಗುತ್ತಾರೆಂಬುದನ್ನು ಜನರ ಮನಸ್ಸಿಗೆ ಹಿಡಿಸಬೇಕಾಯಿತು. ಹೀಗೆ ಮಾಡಲು ಗಾಂಧೀಜಿ ನಾನಾ ಮುಖವಾಗಿ ದುಡಿದರು; ಇಂಡಿಯನ್ ಒಪಿನಿಯನ್ (ಭಾರತಾಭಿಪ್ರಾಯ) ಎಂಬ ಪತ್ರಿಕೆಯನ್ನು ಹೊರಡಿಸಿದರು. ಅಲ್ಲಿಯ ಭಾರತೀಯರು ಗಾಂಧೀಜಿಯನ್ನು ತಮ್ಮ ಬಂಧುವೆಂದು

ನಂಬಿದ್ದರು. ಅವರನ್ನು ಎಲ್ಲರೂ "ಅಣ್ಣ" ಎಂದೇ ಕರೆಯುತ್ತಿದ್ದರು. ಜನರನ್ನು ಹದಮಾಡುವುದರ ಜೊತೆಗೆ ತಾವೂ ಕೂಡ ಸತ್ಯಾನ್ವೇಷಣೆಯಲ್ಲಿ ತೊಡಗಿದರು. ಎಲ್ಲ ಮತಗಳ ತತ್ವಗಳನ್ನೂ ತಿಳಿದರು. ಹಿಂದೂ ಧರ್ಮವನ್ನು ಚೆನ್ನಾಗಿ ಅರಿತುಕೊಂಡರು. ಇತರ ಎಲ್ಲ ಧರ್ಮತತ್ವಗಳೂ ಹಿಂದೂಧರ್ಮವನ್ನು ಪುಷ್ಟೀಕರಿಸುವುದನ್ನು ಕಂಡರು ಸಾಗರ ನದಿಗಳನ್ನೆಲ್ಲ ತನ್ನೊಳಗೆ ಸೇರಿಸಿಕೊಳ್ಳುವಂತೆ ಎಲ್ಲ ಧರ್ಮತತ್ವಗಳನ್ನೂ ಸ್ವೀಕರಿಸಿ ಅವನ್ನ ತನ್ನದನ್ನಾಗಿ ಮಾಡಿಕೊಳ್ಳುವ ವೈಶಾಲ್ಯ ಹಿಂದೂ ಧರ್ಮದಲ್ಲಿದ್ದುದನ್ನು ಅರಿತರು.

ಎಷ್ಟೇ ನಯವಿನಯದಿಂದ ನಡೆದುಕೊಂಡರೂ, ಎಷ್ಟೇ ನ್ಯಾಯವಾಗಿ ವರ್ತಿಸಿದರೂ ಆಫ್ರಿಕದ ಫರಂಗಿಯರು ಅಲ್ಲಿನ ಭಾರತೀಯರನ್ನು ಹೀನಾಯವಾಗಿ ಕಾಣುತ್ತ ಬಂದರು. ಒಂದಲ್ಲ ಒಂದು ವಿಧದಲ್ಲಿ ಅವರಿಗೆ ತೊಂದರೆ ಕೊಡುತ್ತಿದ್ದರು. ಅಲ್ಲಿಂದ ಓಡಿಸುವುದಕ್ಕಾಗಿಯೆ ಅವರ ಮೇಲೆ ತಲೆಗಂದಾಯ ಹೇರಿದರು. ಕ್ರೈಸ್ತರೀತಿಯಲ್ಲದೆ ಬೇರೆ ಧರ್ಮಕ್ಕನುಸಾರವಾಗಿ ಆದ ಮದುವೆಗಳೆಲ್ಲ ಕಾನೂನಿಗೆ ವಿರುದ್ಧ ಎಂದು ಸಾರಿದರು. ಈ ಎಲ್ಲ ಅವಾಂತರಗಳಿಂದ ತಪ್ಪಿಸಿಕೊಳ್ಳಲು ಭಾರತೀಯರು ಬಿರುಸಾದ ಹೋರಾಟ ನಡೆಸಬೇಕಾಯಿತು.

ಅಲ್ಲಿನ ಫರಂಗಿಯರಿಗೆ ಧನ ಬಲವಿತ್ತು. ಸಂಖ್ಯಾ ಬಲವಿತ್ತು. ಶಸ್ತ್ರಾಸ್ತ್ರ ಬಲವಿತ್ತು. ಜೊತೆಗೆ ಅವರದೇ ಸರ್ಕಾರ. ಅಲ್ಲಿನ ಭಾರತೀಯರಿಗಾದರೊ ಯಾವ ಬಲವೂ ಯಾವ ಬೆಂಬಲವೂ ಇರಲಿಲ್ಲ. ಹೀಗೆ ಅಸಮಾನವಾದ ಈ ಎರಡು ಪಕ್ಷಗಳಲ್ಲಿ ನಡೆಯುವ ಹೋರಾಟ ಯಾವ ತರಹದ್ದಾಗಬೇಕು? ಅಲ್ಲದೆ ಮದ್ದುಗುಂಡುಗಳ ಸಹಾಯದಿಂದ ಕೊಲೆ ಸುಲಿಗೆಗಳನ್ನು ನಡೆಸಿದರೆ ಜಯಲಭಿಸುತ್ತಿತ್ತೊ ಇಲ್ಲವೊ! ಆ ಮಾತಿರಲಿ; ದ್ವೇಷಾಸೂಯೆ ಹೆಚ್ಚುತ್ತಿತ್ತು. ವೈರ ವೈರವನ್ನು ತರುತ್ತದೆ. ಆದ್ದರಿಂದ ಗಾಂಧೀಜಿ ಪ್ರೇಮದಿಂದಲೇ ಹೋರಾಡುವ ಹಾದಿ ಹಿಡಿದರು. ಇತರರ ತಪ್ಪಿಗಾಗಿ ಸತ್ಯದ ಮಾರ್ಗದಲ್ಲಿ ತಾವು ಕಷ್ಟವನ್ನನುಭವಿಸುವುದೇ ಆ ದಾರಿ; ಎದುರಾಳಿಗೆ ಹಿಂಸೆಯುನ್ನುಂಟುಮಾಡುವ ಭಾವನೆಯೇ ಇಲ್ಲ. ಎದುರಾಳಿಯ ಹೃದಯಪರಿವರ್ತನೆಯಾಗಿ ಅವನೂ ಸ್ನೇಹಿತನಾಗುವನು. ಆಗ ಇಬ್ಬರ ಸಂಬಂಧ ಸಮರಸವಾಗುವುದು. ಈ ನವೀನ ದೃಷ್ಟಿ

ಯಿಂದ ಗಾಂಧೀಜಿ ಅಹಿಂಸಾಮಾರ್ಗದಲ್ಲಿ ಸತ್ಯಾಗ್ರಹದ ಚಳವಳಿಯನ್ನು ಹೂಡಿದರು. ಸಾವಿರಾರು ಮಂದಿ ಭಾರತೀಯರು ಶಾಂತರೀತಿಯಿಂದ ಜೈಲು ಸೇರಿದರು. ಲಾಠಿ ಹೊಡೆತ ಗುಂಡಿನ ಏಟಿತಗಳನ್ನನುಭವಿಸಿದರು. ಈ ಹೊಸ ವಿಧಾನದಿಂದ ಆ ಸರ್ವಶಕ್ತಿಯುತ ಸರಕಾರ ಸೋತಿತು. ಕೊನೆಗೆ ಗಾಂಧೀಜಿಯೊಡನೆ ಒಪ್ಪಂದ ಮಾಡಿಕೊಂಡಿತು.

ಆಫ್ರಿಕದಲ್ಲಿ ಗಾಂಧೀಜಿ ಮಾಡಬೇಕೆಂದಿದ್ದ ಕೆಲಸ ಮುಗಿಯಿತು. ಅಲ್ಲಿನ ಭಾರತೀಯರೆಲ್ಲರಿಂದ ಬೀಳ್ಕೊಂಡು ಸ್ವದೇಶಕ್ಕೆ ಹಿಂತಿರುಗಿದರು. ಜನಸೇವೆಯೆ ಜನಾರ್ದನ ಸೇವೆಯೆಂದು ಸೇವಾದೀಕ್ಷೆಯನ್ನು ಹೊತ್ತ ಈ ವಿಶ್ವಬಂಧುವನ್ನು ಭಾರತದೇಶ ಮಹಾತ್ಮನೆಂದು ಕರೆದು ಸ್ವಾಗತಿಸಿತು.

ಭಾರತದಲ್ಲಿ

ಇಷ್ಟರಲ್ಲಾಗಲೆ ಭಾರತದಲ್ಲಿ ಧಾರ್ಮಿಕ ಭೂಮಿಕೆಯಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಸಾಧನೆ ನಡೆಸಿದ್ದರು. ಅವರ ಶಿಷ್ಯ ಸ್ವಾಮಿ ವಿವೇಕಾನಂದರು ಸನಾತನಧರ್ಮದ ನಿಜತ್ವವನ್ನು ಜನರ ಮನಸ್ಸಿಗೆ ತಂದಿದ್ದರು. ಸಮಾಜ ಸುಧಾರಣಾದೃಷ್ಟಿಯಿಂದ ಸ್ವಾಮಿ ದಯಾನಂದ ಸರಸ್ವತಿ ದುಡಿದಿದ್ದರು. ರಾಜಕೀಯವಲಯದಲ್ಲಿ ಬಾಲಗಂಗಾಧರ ತಿಲಕ, ಗೋಪಾಲಕೃಷ್ಣ ಗೋಖಲೆ ಮುಂತಾದವರು ಸಾಹಸಪಟ್ಟಿದ್ದರು. ಈ ಎಲ್ಲ ಕಾರ್ಯದಿಂದ ದೇಶ ಹದಗೊಂಡಿತ್ತು. ಆಗ ಈ ಎಲ್ಲ ಶಕ್ತಿಗಳಿಂದ ಕೂಡಿದ ಒಬ್ಬ ಮಹಾನಾಯಕ ಭಾರತಕ್ಕೆ ಬೇಕಾಗಿತ್ತು. ಮಹಾತ್ಮಾ ಗಾಂಧಿಯಲ್ಲಿ ಅಂಥ ನಾಯಕ ದೊರೆತ.

ಭಾರತದಲ್ಲಿ ಮಾಡಬೇಕಾಗಿದ್ದ ಸಾರ್ವಜನಿಕ ಕಾರ್ಯ ವಿಪುಲವಾಗಿತ್ತು. ಭಾರತದ ಸೇವೆ ಗಾಂಧೀಜಿಗೆ ಅಯಾಚಿತವಾಗಿ ಬಂದಿತ್ತು. ಸೇವೆಯಲ್ಲಿಯೇ ಅವರಿಗೆ ಆನಂದ. ಜೊತೆಗೆ ವಿಶ್ವಶಾಂತಿಗೆ ಸತ್ಯ ಮತ್ತು ಪ್ರೇಮದಿಂದ ಕೂಡಿದ ಅಹಿಂಸಾಧರ್ಮ ಒಂದೇ ದಾರಿ ಎಂಬ ನಂಬಿಕೆಯಿತ್ತು. ಅದರ ಪ್ರಯೋಗ ಆಫ್ರಿಕದಲ್ಲಿ ನಡೆದಿತ್ತು. ಆದರೆ ಅದು ವಿಶ್ವವನ್ನೇ ಆವರಿಸಬೇಕಾಗಿದ್ದರೆ ಭಾರತ ಅದನ್ನು ಬೆಳಗಬೇಕಾಗಿದ್ದಿತು. ಭರತಖಂಡ ಬ್ರಿಟಿಷರ ಆಳ್ವಿಕೆಯಿಂದ ಬಳಲಿಹೋಗಿತ್ತು. ದಾಸ್ಯ ಶೃಂಖಲೆ ಹರಿಯುವ ವಿಧಿಯಿರಲಿಲ್ಲ. ಜೊತೆಗೆ ಪ್ರಚಲಿತ ಹಿಂದೂ

ಧರ್ಮದಲ್ಲಿದ್ದ ಮೂಢಾಚಾರಗಳೆಲ್ಲ ಅಳಿದು ಈ ಧರ್ಮ ಶುದ್ಧವಾಗಬೇಕಾಗಿದ್ದಿತು. ಇಷ್ಟು ಅಗಾಧವಾದ ಕೆಲಸವನ್ನು ಕೈಕೊಳ್ಳುವ ಮೊದಲು ರಾಷ್ಟ್ರದಲ್ಲೆಲ್ಲ ಪ್ರವಾಸಮಾಡಿ ಪ್ರಾಂತ ಪ್ರಾಂತದ ಜನರ ಪರಿಚಯಮಾಡಿಕೊಂಡರು. ಆಮೇಲೆ ಅಹಮದಾಬಾದಿನಲ್ಲಿ ಒಂದು ಆಶ್ರಮ ತೆಗೆದು ಅದಕ್ಕೆ "ಸತ್ಯಾಗ್ರಹಾಶ್ರಮ" ಎಂದು ಹೆಸರಿಟ್ಟರು. ಅಲ್ಲಿ ನೆಲಸಿದರು. ತಾವಾಗಲೇ ತಿಳಿದುಕೊಂಡು ತಮ್ಮ ಜೀವನದಲ್ಲಿ ಅನುಷ್ಠಾನಕ್ಕೆ ತಂದಿದ್ದ

"ಎಲ್ಲರ ಮಂಗಳದಲ್ಲಿಯೆ ತನ್ನ ಮಂಗಳವೂ ಅಡಗಿದೆ. ಕಾರ್ಯದಲ್ಲಿ ಹೀನೋಚ್ಚ ಭೇದವಿಲ್ಲ. ನ್ಯಾಯಾಧೀಶನ ಕಸಬೂ ಕಸಗುಡಿಸುವವನ ಕಸಬೂ ಸಮಾನವಾದುವು. ಅವೆರಡೂ ಸಮಾಜದ ಹಿತಕ್ಕಾಗಿ ನಡೆಯುತ್ತವೆ. ದುಡಿಯುವವನ ಬದುಕೇ, ಶ್ರಮಜೀವನದ ಬಾಳೇ ಹಿರಿದಾದ ಬಾಳು. ಕೆಲಸಮಾಡದವನು ಬದುಕಿರಲು ಅರ್ಹನಲ್ಲ"

ಕರ್ಮಯೋಗವೆಂದು ಹೆಸರಾದ ಈ ತತ್ವ ಜನರ ಮನಸ್ಸಿನಲ್ಲಿ ನೆಲೆಗೊಂಡು ಅವರ ಬದುಕಿನಲ್ಲಿ ಅದು ಅನುಷ್ಠಾನಕ್ಕೆ ಬರಲು ವ್ಯವಸ್ಥೆಗೊಳಿಸಿದರು.

ಇಷ್ಟರಲ್ಲಿ ಬೀಹಾರ ಪ್ರಾಂತದ ಚಂಪಾರಣ್ಯದಲ್ಲಿ ರೈತರು ಅಲ್ಲಿಯ ಜಮೀನ್‌ದಾರರ ಸುಲಿಗೆಗೆ ಸಿಕ್ಕಿ ಪರಿತಪಿಸುತ್ತಿದ್ದ ಸುದ್ದಿ ಗಾಂಧೀಜಿಗೆ ಗೊತ್ತಾಯಿತು. ಆ ರೈತರು ತಮ್ಮ ನೆರವಿಗೆ ಗಾಂಧೀಜಿಯನ್ನು ಕರೆದರು. ಗಾಂಧೀಜಿ ಅಲ್ಲಿಗೆ ಹೋಗಿ ನಿಜಸ್ಥಿತಿಯನ್ನು ತಿಳಿದುಕೊಳ್ಳುತ್ತಿರುವಷ್ಟರಲ್ಲಿ ಆ ಪ್ರಾಂತ ಸರಕಾರ, ಜಮೀನುದಾರರ ಮಾತು ಕೇಳಿ, ಅವರು ಆ ಪ್ರಾಂತ ಬಿಟ್ಟುಹೋಗಬೇಕೆಂದು ಅಪ್ಪಣೆಮಾಡಿತು. ಆದರೆ ಗಾಂಧೀಜಿ ಅಲ್ಲಿಗೆ ಹೋಗಿದ್ದುದು ಜನತಾ ಮತ್ತು ರಾಷ್ಟ್ರಸೇವಾದೃಷ್ಟಿಯಿಂದ. ಅವರು ಇನ್ನೂ ವಿಷಯ ಸಂಗ್ರಹಣೆಯಲ್ಲಿದ್ದರೇ ಹೊರತು ಸರ್ಕಾರದ ಮೇಲೆ ಯಾವ ವಿರೋಧವನ್ನೂ ಕಟ್ಟಿರಲಿಲ್ಲ. ಅಲ್ಲದೆ ಕಷ್ಟದಲ್ಲಿರುವವರಿಗೆ ಸೇವೆ ಸಲ್ಲಿಸಲು ಬಂದು, ಅದು ನೆರವೇರದ ಹೊರತು ಅಲ್ಲಿಂದ ಸರಿಯಲು ಅವರು ಒಪ್ಪಲಿಲ್ಲ. ಸರಕಾರ ಅವರನ್ನು ಸೆರೆಹಿಡಿಯಿತು. ಆದರೆ ಅಷ್ಟರಲ್ಲಿ ತನ್ನ ತಪ್ಪನ್ನು ತಿದ್ದಿಕೊಂಡು ಅವರನ್ನು ಬಿಡುಗಡೆ ಮಾಡಿತು.

ಗಾಂಧೀಜಿ ಆಮೇಲೆ ಅಲ್ಲಿಯ ಸ್ಥಿತಿಗತಿಗಳನ್ನು ತಿಳಿದು ಸರ್ಕಾರದೊಡನೆ ನೇರವಾದ ವ್ಯವಹಾರ ನಡೆಸಿದರು. ಆ ಸರ್ಕಾರ ಸತ್ಯವನ್ನರಿತು ನ್ಯಾಯವಾಗಿ ವರ್ತಿಸಿತು. ಇವರಿಂದ ಶತಮಾನದಿಂದ ಅನ್ಯಾಯದ

ಹೊಡೆತಕ್ಕೆ ಸಿಕ್ಕಿದ್ದ ರೈತರು ಅದರಿಂದ ಮುಕ್ತರಾದರು. ಜಮೀನುದಾರರ ದಬ್ಬಾಳಿಕೆ ಕೊನೆಗಂಡಿತು. ಅಂದಿನವರೆಗೂ ತುಳಿತಕ್ಕೆ ಸಿಕ್ಕಿದ್ದ ರೈತರು ತಲೆಯೆತ್ತಿಕೊಂಡರು. ಚಂಪಾರಣ್ಯದ ಸತ್ಯಾಗ್ರಹದ ಸಮಯದಲ್ಲೇ ಮಹದೇವ ದೇಸಾಯಿ, ಬಾಬು ರಾಜೇಂದ್ರ ಪ್ರಸಾದ ಮೊದಲಾದ ದೇಶಭಕ್ತರು ಇವರ ಪ್ರಭಾವಕ್ಕೆ ಸಿಕ್ಕಿ, ಅನುಯಾಯಿಗಳಾದರು.

ಚಂಪಾರಣ್ಯದ ಕೆಲಸ ಮುಗಿಯಿತು ಅನ್ನುವಷ್ಟರಲ್ಲಿ ಅಹಮದಾಬಾದಿನ ಗಿರಣಿ ಕೂಲಿಗಾರರು ತಮ್ಮ ಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳಲು ನೆರವು ನೀಡಬೇಕೆಂದು ಗಾಂಧೀಜಿಯನ್ನು ಕೇಳಿಕೊಂಡರು. ಗಾಂಧೀಜಿ ಅಹಮದಾಬಾದಿಗೆ ಬಂದು ಕೂಲಿಗಾರರ ಸಮಸ್ಯಾಪರಿಹಾರಕ್ಕೆ ತೊಡಗಿದರು. ಆಗಲೇ ವಲ್ಲಭಭಾಯಿ ಪಟೇಲ್ ಇವರ ನೆರವಿಗೆ ಬಂದದ್ದು. ಗಾಂಧೀಜಿ ಗಿರಣಿ ಮಾಲೀಕರೊಡನೆ ಮಾತನಾಡಿ ಕೂಲಿಗಾರರ ನ್ಯಾಯವಾದ ಬೇಡಿಕೆಗಳನ್ನು ನೆರವೇರಿಸಿಕೊಡುವಂತೆ ಕೇಳಿದರು. ಆದರೆ ಮಾಲೀಕರು ಒಪ್ಪಲಿಲ್ಲ. ಆದ್ದರಿಂದ ಅಹಿಂಸಾ ಮಾರ್ಗದಲ್ಲಿ ದೃಢ ನಿಶ್ಚಯದಿಂದ ಮುಷ್ಕರ ಹೂಡಲು ಗಾಂಧೀಜಿ ಕೂಲಿಗಾರರಿಗೆ ಸಲಹೆ ಕೊಟ್ಟರು. ಮುಷ್ಕರವೇನೊ ಪ್ರಾರಂಭವಾಯಿತು. ಆದರೆ ಕೂಲಿಗಾರರೆಲ್ಲರಿಗೂ ಕೊನೆಯವರೆಗೆ ಮುಷ್ಕರ ನಡೆಸುವ ನಿಶ್ಚಯವಿರಲಿಲ್ಲ. ಆ ದೃಢತೆಯನ್ನು ಅವರಲ್ಲಿ ತರಲು ಗಾಂಧೀಜಿ ಉಪವಾಸ ವ್ರತ ಕೈಗೊಂಡರು. ಕೊನೆಗೆ ಗಿರಣಿ ಮಾಲೀಕರು ಸಂಧಾನಕ್ಕೆ ಬಂದು ಕೂಲಿಗಾರರೊಡನೆ ಒಪ್ಪಂದ ಮಾಡಿಕೊಂಡರು.

ಅಹಮದಾಬಾದಿನ ಕೂಲಿಗಾರ ಸಮಸ್ಯೆ ಬಗೆ ಹರಿಯಿತು. ಗುಜರಾತಿನ ಖೇಡಾ ಜಿಲ್ಲೆಯಲ್ಲಿ ಮಳೆ ಬೀಳದೆ ಬೆಳೆಯಾಗದೆ ಕ್ಷಾಮ ಬಂದು ರೈತರು ಕಂದಾಯ ಕೊಡಲೂ ಅಶಕ್ತರಾಗಿದ್ದರು. ಅಲ್ಲಿಗೆ ಹೋಗಿ ಅವರಿಗೆ ದಾರಿ ತೋರಬೇಕೆಂದು ಕರೆ ಬಂತು. ಗಾಂಧೀಜಿ ಖೇಡಾ ಜಿಲ್ಲೆಗೆ ಹೋದರು. ಅಲ್ಲಿಯೂ ಸತ್ಯಾಗ್ರಹ ಚಳವಳಿ ನಡೆದು ಸರ್ಕಾರಕ್ಕೂ ರೈತರಿಗೂ ಒಪ್ಪಂದವಾಯಿತು.

ಹೀಗೆ ಕೆಲಸದ ಮೇಲೆ ಕೆಲಸ ಬಿದ್ದು ಗಾಂಧೀಜಿ ಬಳಲಿದರು. ಖಾಯಿಲೆಬಿದ್ದು ಹಾಸಗೆ ಹಿಡಿದರು. ಆದರೇನು? ದೇಶಸೇವೆಗಾಗಿ ತಮ್ಮನ್ನೇ ಅರ್ಪಿಸಿಕೊಂಡಿದ್ದ ಗಾಂಧೀಜಿಗೆ ಬಿಡುವೆಲ್ಲಿ!

೧೯೧೪ರಲ್ಲಿ ಪ್ರಾರಂಭವಾಗಿ ೧೯೧೮ರಲ್ಲಿ ಮುಗಿದ ಮೊದಲನೆಯ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಭಾರತೀಯರು ತುಂಬ ಸಹಾಯ ನೀಡಿದರು. ಯುದ್ಧ ಮುಗಿದ ಮೇಲೆ ಭಾರತಕ್ಕೆ ಸ್ವಾತಂತ್ರ್ಯ ಲಭಿಸುವುದೆಂದು ನಂಬಲಾಗಿತ್ತು. ಗಾಂಧೀಜಿ ಕೂಡ ಬ್ರಿಟಿಷರ ಪರವಾಗಿದ್ದರು. ಆದರೆ ೧೯೧೯ರಲ್ಲಿ ರೌಲತ್ ವರದಿಯಂತೆ ಭಾರತೀಯರಿಗೆ ಇದ್ದಬದ್ದ ಸ್ವಾತಂತ್ರ್ಯವನ್ನೂ ಮೊಟಕುಮಾಡುವ ಸುಧಾರಣೆ ಬಂತು. ಇದು ಗಾಂಧೀಜಿಗೆ ಅಸಹನೀಯವಾಯಿತು. ಮುಂದೇನು ಮಾಡಬೇಕೆಂದು ಯೋಚಿಸಿ ಜನತೆಯನ್ನು ಎಚ್ಚರಗೊಳಿಸಲೋಸುಗ ೧೯೧೯ನೆಯ ಏಪ್ರಿಲ್ ೬ನೇ ದಿನ ದೇಶದಾದ್ಯಂತವೂ ಹರತಾಳ ಆಚರಿಸಬೇಕೆಂದು ಗೊತ್ತು ಮಾಡಿದರು. ಎಲ್ಲೆಲ್ಲೂ ಯಶಸ್ವಿಯಾಗಿ ಹರತಾಳ ನಡೆಯಿತು. ಇದರಿಂದ ಸರಕಾರದ ತಲೆ ಕೆಟ್ಟಿತು. ಅದು ದಬ್ಬಾಳಿಕೆಯನ್ನು ಹರಿಯಬಿಟ್ಟಿತು. ಎಲ್ಲೆಲ್ಲೂ ಲಾಠಿ ಹೊಡೆತ ಆಯಿತು. ಗುಂಡು ಹಾರಿಸಿ ಜನರ ಕೊಲೆಯಾಯ್ತು. ಅಮೃತಸರದ ಜಲಿಯನ್‌ವಾಲಾ ಬಾಗಿನಲ್ಲಿ ಪ್ರಚಂಡ ಹತ್ಯಾಕಾಂಡವೇ ನಡೆದುಹೋಯಿತು. ಈ ವಿಷಯವನ್ನೆಲ್ಲ ಪ್ರಪಂಚಕ್ಕೆ ವಿಶದೀಕರಿಸಲೋಸುಗ, ಸತ್ಯಾಗ್ರಹದ ಹಾದಿಯನ್ನು ತಪ್ಪದಂತೆ ಜನರಲ್ಲಿ ತಿಳುವಳಿಕೆಯನ್ನು ಹರಡಲೋಸುಗ, "ನವಜೀವನ" ಮತ್ತು "ಯಂಗ್ ಇಂಡಿಯಾ" ಪತ್ರಿಕೆಗಳನ್ನು ಗಾಂಧೀಜಿ ಹೊರಡಿಸಿದರು.

ಗಾಂಧೀ ಯುಗ

ಇಷ್ಟರಲ್ಲಾಗಲೆ ಜನತೆಗೆ ಗಾಂಧೀಜಿ ಚೆನ್ನಾಗಿ ಪರಿಚಿತರಾಗಿದ್ದರು. ಅವರು ದೇಶದ ಹೃದಯವನ್ನು ಸಂಪೂರ್ಣವಾಗಿ ಪ್ರತಿಬಿಂಬಿಸುವ ಶಕ್ತಿ ಪಡೆದಿದ್ದರು. ದೇಶದ ಕಷ್ಟ ಸುಖಗಳಲ್ಲಿ ಭಾಗಿಯಾಗಿ ಜನರಲ್ಲಿ ನೆಚ್ಚು ಕೆಚ್ಚನ್ನು ತುಂಬಿ ಮಾರ್ಗದರ್ಶಕರಾಗಿ ಅವರನ್ನು ಗುರಿಯ ಕಡೆ ನಡೆಸಬಲ್ಲ ನಾಯಕರಾಗಿದ್ದರು. ಎಲ್ಲಿ ನೋಡಲಿ "ಮಹಾತ್ಮಾ ಗಾಂಧೀಕಿ ಜೈ" ಎಂಬ ಧ್ವನಿ ನಭೋಮಂಡಲವನ್ನು ತುಂಬುತ್ತಿತ್ತು. ದೇಶದ ಸ್ವಾತಂತ್ರ್ಯ ಸಾಧನೆಗಾಗಿ ೧೮೮೫ರಲ್ಲಿ ಉದ್ಭವಿಸಿ ಬೆಳೆದುಬಂದಿದ್ದ ಅಖಿಲ ಭಾರತ ರಾಷ್ಟ್ರ ಮಹಾಸಭೆಯ ಸೂತ್ರ ಕೂಡ ಗಾಂಧೀಜಿಯ ಕೈಗೆ ಬಂತು. ಜವಾಹರಲಾಲ ನೆಹರು, ಮೋತೀಲಾಲ ನೆಹರು, ಡಾ|| ಅನ್ಸಾರಿ, ಲಜಪತರಾಯ್ ಮೊದಲಾದ ಮಹಾ ನಾಯಕರೆಲ್ಲ ಅವರನ್ನು ಅನುಸರಿಸಿ

ದರು. ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಗೆ ಹೊಸ ರೂಪೂ ನವ ಚೇತನವೂ ಬಂದುವು. ಗಾಂಧೀಜಿಯ ನಾಯಕತ್ವದಲ್ಲಿ ಅಹಿಂಸಾತ್ಮಕವಾಗಿಯೇ ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸುವ ನೀತಿಯನ್ನು ರಾಷ್ಟ್ರ ಮಹಾಸಭೆ ಒಪ್ಪಿತು.

ರಾಷ್ಟ್ರ ಗಾಂಧೀಜಿಯ ನಾಯಕತ್ವವನ್ನು ಒಪ್ಪಿತೊ ಇಲ್ಲವೊ ಕೂಡಲೆ ಜನರ ರೀತಿನೀತಿಗಳಲ್ಲಿ ಬದಲಾವಣೆ ಆಗ ತೊಡಗಿ ಅವರ ಬಾಳಿನಲ್ಲಿ ಸರಳತೆ ಮೂಡಿತು. ಉಡುಪಿನಲ್ಲಿ ಸರಳತೆ ಎದ್ದು ಕಾಣುತ್ತಿತ್ತು. ತಾವೆಲ್ಲಿ ತಪ್ಪುನಡೆದು ತಮ್ಮ ನಾಯಕನ ಮನಸ್ಸನ್ನೋಯಿಸುವಂತಾದೀತೊ ಎಂಬ ಎಚ್ಚರಿಕೆ ಜನರಲ್ಲಿ ನೆಲಸಿತು. ಗಾಂಧೀಜಿ ಜನತೆಯ ಮುಂದೆ ಹಲವು ರಚನಾತ್ಮಕ ಕಾರ್ಯಕ್ರಮಗಳನ್ನಿಟ್ಟರು. ಖಾದಿಯ ಉತ್ಪತ್ತಿ ಮತ್ತು ಧಾರಣೆಯಿಂದ ದೇಶದಿಂದ ಹೊರಗೆ ಹೋಗುತ್ತಿದ್ದ ನೂರಾರು ಕೋಟಿ ರೂಪಾಯಿಗಳು ದೇಶದಲ್ಲಿ ಉಳಿಯುವುದು; ಬಟ್ಟೆಯಿಲ್ಲದೆ ಅರೆ ಬತ್ತಲೆಯಿರುವ ಲಕ್ಷಾಂತರ ಜನಕ್ಕೆ ಮೈ ತುಂಬ ಬಟ್ಟೆ ಒದಗುವಂತಾಗುವುದು; ಜೊತೆಗೆ ಪರಾವಲಂಬನ ತಪ್ಪುವುದು; ಈ ಅರಿವು ಜನರಿಗುಂಟಾಗಿ ಚರಕ ತಿರುಗಿಸಿ ನೂಲುವುದು ನಿತ್ಯಕರ್ಮವಾಯಿತು. "ಹೊಲೆಯ! ಮುಟ್ಟಬೇಡ" ಎಂಬ ಅಸ್ಪೃಶ್ಯ ಭಾವನೆ ಮಹಾಪಾಪವೆಂದು ಕಂಡಿತು. ಕೂಡಲೆ ಅದರ ನಿವಾರಣೆಗೆ ಯತ್ನ ನಡೆಯಿತು. ಹಿಂದೂ ಧರ್ಮಕ್ಕೆ ಅಂಟಿಬಂದ ಆ ಕಳಂಕವನ್ನು ತೊಡೆಯಲು ಜನ ಅಗತ್ಯವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಗಾಂಧೀಜಿ ಶ್ರಮಿಸಿದರು. ಗ್ರಾಮಪುನರುಜ್ಜೀವನ ಕೆಲಸ ಕೂಡ ಪ್ರಾರಂಭವಾಯಿತು. ಭರತಖಂಡ ಹಳ್ಳಿಗಳ ರಾಷ್ಟ್ರ. ಹಳ್ಳಿಗಳೇ ಅದರ ಆಧಾರ. ಆದರೆ ಅವು ದಿನೇ ದಿನೇ ಅಧೋಗತಿಗಿಳಿಯುತ್ತಿದ್ದರೂ ಸರ್ಕಾರ ಮತ್ತು ಸಾರ್ವಜನಿಕರು ಅವನ್ನು ನಿರ್ಲಕ್ಷಿಸಿದ್ದರು. ಗಾಂಧೀಜಿ ಆ ತಪ್ಪನ್ನು ತೋರಿಸಿಕೊಟ್ಟು ಎಲ್ಲರೂ ಗ್ರಾಮೋದ್ಧಾರ ಕಾರ್ಯದಲ್ಲಿ ಉತ್ಸಾಹಿಗಳಾಗುವಂತೆ ಪ್ರೇರಿಸಿದರು. ಹೀಗೆ ನಾನಾ ಮುಖಗಳಲ್ಲಿ ರಚನಾತ್ಮಕ ಕಾರ್ಯಕ್ರಮಗಳೇರ್ಪಟ್ಟು ಜನರು ಸ್ವಾತಂತ್ರ್ಯಗಳಿಸಲು ಶಕ್ತಿಗಳಿಸಿದರು.

ಇಷ್ಟಾದರೂ ಬ್ರಿಟಿಷ್ ಸರ್ಕಾರ ಭಾರತವನ್ನು ತನ್ನ ಆಡಳಿತದಿಂದ ಮುಕ್ತಮಾಡುವಂತಿರಲಿಲ್ಲ. ಅದಕ್ಕಾಗಿ ೧೯೨೧ರಲ್ಲಿ "ಅಸಹಕಾರ"

ಚಳವಳಿ ಪ್ರಾರಂಭವಾಯಿತು. ಎಲ್ಲೆಲ್ಲೂ ದಸ್ತಗಿರಿಗಳು ಕೊನೆ ಮೊದಲಿಲ್ಲದೆ ನಡೆದು ನಿರಂಕುಶವಾಗಿ ಶಿಕ್ಷೆ ವಿಧಿಸಲ್ಪಟ್ಟವು. ಸಾವಿರಾರುಗಟ್ಟಲೆ ದೇಶಭಕ್ತರು ನಾನಾ ಜೈಲುಗಳಲ್ಲಿ ಬಂದಿಗಳಾದರು. ಒಂದು ವರ್ಷ ಚಳವಳಿ ನಡೆದಮೇಲೆ ಚಳವಳಿಯಲ್ಲಿ ಹಿಂಸೆ ತಲೆದೋರಿದ್ದರಿಂದ ಗಾಂಧೀಜಿಯೆ ಅದನ್ನು ನಿಲ್ಲಿಸಿದರು. ಆಗ ಸರ್ಕಾರ ಅವರನ್ನು ದಸ್ತಗಿರಿ ಮಾಡಿ ೬ ವರ್ಷ ಶಿಕ್ಷೆ ವಿಧಿಸಿ ಸೆರೆಯಲ್ಲಿಟ್ಟಿತು. ಅಲ್ಲಿ ಅವರು ಅಸ್ವಸ್ಥರಾದುದರಿಂದ ೧೯೨೪ ರಲ್ಲಿ ಅವರ ಬಿಡುಗಡೆಯಾಯಿತು. ಮತ್ತೆ ಜನರಲ್ಲಿ ಶಕ್ತಿ ತುಂಬಲು ರಚನಾತ್ಮಕ ಕೆಲಸದ ಕಡೆ ಜನರ ಮನಸ್ಸನ್ನು ಸೆಳೆದರು. ಗ್ರಾಮೋದ್ಧಾರ ಕಾರ್ಯದಲ್ಲಿ ಮತ್ತು ಸತ್ಯಜೀವನದಲ್ಲಿ ಜನರು ಆಸಕ್ತರಾಗುವಂತೆ ಮಾಡಲು ಮೊದಲು ಗಾಂಧೀಜಿ ಹಿಂದೂಸ್ಥಾನದಲ್ಲಿ ದೀರ್ಘಪ್ರವಾಸ ಕೈಗೊಂಡರು. ಇವರು ಹೋದೆಡೆಯಲ್ಲೆಲ್ಲ ಜನರು ದೂರವನ್ನಾಗಲಿ ಶ್ರಮವನ್ನಾಗಲಿ ಲಕ್ಷ್ಯಮಾಡದೆ ತಂಡ ತಂಡವಾಗಿ ಬಂದು ನೆರೆದು ಭಾರತ ಭಾಗ್ಯವಿಧಾತನ ದರ್ಶನಪಡೆದು ಆತನ ದಿವ್ಯವಾಣಿಯನ್ನು ಕೇಳಿ ಕೃತಾರ್ಥರಾದರು. ಎಲ್ಲೆಲ್ಲೂ ಜನರಲ್ಲಿ ನವಚೇತನ ಉದಯವಾಯಿತು.

ಗಾಂಧೀಜಿಯ ಮುಂದಾಳುತನದಲ್ಲಿ ದೇಶ ಬಹುಮಟ್ಟಿಗೆ ಎಚ್ಚತ್ತಿತು. ರೈತರ ಸಂಘ, ಯುವಜನ ಸಭೆ ಮುಂತಾದ ವಿವಿಧ ಸಂಸ್ಥೆಗಳು ರಾಷ್ಟ್ರದಲ್ಲಿ ಹುಟ್ಟಿಕೊಂಡು, ಜನತೆಯಲ್ಲಿ ರಾಜಕೀಯ ವಿಷಯದಲ್ಲಿ ಒಂದು ಬಗೆಯ ಉತ್ಸಾಹವೂ ಅಭಿಲಾಷೆಯೂ ಮೂಡಿ ಎಲ್ಲ ಕಡೆಯೂ ಚಟುವಟಿಕೆ ಎದ್ದು ಕಾಣುತ್ತಿತ್ತು. ಜನಜಂಗುಳಿಯಲ್ಲಾದ ಈ ಎಚ್ಚರಿಕೆ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ತಕ್ಕಮಟ್ಟಿಗೆ ದಾರಿಯಾಯಿತು.

ಹೀಗೆ ಜನತೆಯಲ್ಲಿ ಶಕ್ತಿ ತುಂಬಿದಾಗ ದೇವ ವೈದ್ಯನಾದ ಧನ್ವಂತರಿಯಂತೆ ಜನತೆಯ ನಾಡೀಸ್ಪಂದನವನ್ನು ಅರಿಯಬಲ್ಲ ಗಾಂಧೀಜಿ ಅದು ಸಕಾಲವೆಂಬುದನ್ನು ಗ್ರಹಿಸಿ ಮತ್ತೆ ಸತ್ಯಾಗ್ರಹ ಚಳವಳಿಯನ್ನು ಆರಂಭಮಾಡಿದರು. ೧೯೩೦ರಲ್ಲಿ ಜನ ಬೇಕುಬೇಕಾದಂತೆ ಉಪ್ಪು ತಯಾರುಮಾಡಿಕೊಳ್ಳಲು ಅಡ್ಡಿಯಾಗಿದ್ದ ಸರಕಾರದ ಕಾನೂನನ್ನುಲ್ಲಂಘಿಸಿ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿತು. ಗಾಂಧೀಜಿಯೆ ಸಬರಮತಿ ಆಶ್ರಮದಿಂದ ಉಪ್ಪು ಮಾಡಲು ೮೦ ಮೈಲಿ ದೂರದ ಕಡಲಿಗೆ

ಕಾಲು ನಡಿಗೆಯಲ್ಲಿ ಹೊರಟರು. ಅವರನ್ನು ಬೇಕಾದಷ್ಟು ಜನ ಹಿಂಬಾಲಿಸಿದರು. ಗಾಂಧೀಜಿ ಮಾಡಿದ ಉಪ್ಪನ್ನು ಪವಿತ್ರವಸ್ತುವೆಂದು ಸಾವಿರಾರು ರೂಪಾಯಿ ಕಾಣಿಕೆ ಸುರಿದು ಪಡೆದರು. ಎಲ್ಲೆಲ್ಲೂ ಚಳವಳಿ ನಾನಾ ರೂಪದಲ್ಲಿ ಆರಂಭವಾಯಿತು. ಗಾಂಧೀಜಿಯ ನಾಯಕತ್ವದಲ್ಲಿ ದೇಶದ ಸ್ತ್ರೀ ಪುರುಷರು ದೇಶದ ಹಿತಕ್ಕಾಗಿ, ಜನತೆಯ ಮೇಲ್ಮೆಗಾಗಿ, ಸುಖವನ್ನು ತ್ಯಜಿಸಿ, ಕಷ್ಟ ಸಂಕಟಗಳನ್ನು ಅನುಭವಿಸುತ್ತಿರುವಾಗ ಹಲವು ಭಾರತೀಯರು ಬ್ರಿಟಿಷ್ ಸರಕಾರದ ಅತಿಥಿಗಳಾಗಿ ಇಂಗ್ಲೆಂಡಿಗೆ ಹೋಗಿ ಭಾರತದ ಜನತೆ ನಿರಾಕರಿಸಿದ್ದ ಚಕ್ರಗೋಷ್ಠಿಯಲ್ಲಿ ಭಾಗವಹಿಸಿ ಬ್ರಿಟಿಷರಿಗೆ ತಮ್ಮ ಸಹಕಾರ ನೀಡುತ್ತಿದ್ದರು. ಆ ಚಕ್ರಗೋಷ್ಠಿ ನಿಷ್ಫಲವಾಯಿತು.

ಆಮೇಲೆ ಆಗಿನ ವೈಸರಾಯರು ಲಾರ್ಡ್ ಇರ್ವಿನ್‌ರವರು ಗಾಂಧೀಜಿಯವರೊಡನೆ ಸಂಧಾನ ನಡೆಸಿ ಅವರು ಚಕ್ರಗೋಷ್ಠಿಯಲ್ಲಿ ಭಾಗವಹಿಸುವಂತೆ ಮಾಡಿದರು. ಎರಡನೆಯ ಗೋಷ್ಠಿ ಏರ್ಪಾಡಾಯಿತು. ಆದರೆ ಆಗಿನ ಬ್ರಿಟಿಷ್ ಸರಕಾರದ ಉದ್ದೇಶ ಭಾರತೀಯರನ್ನು ಸೋಲಿಸಬೇಕೆಂದಿದ್ದುದರಿಂದ ಆ ಗೋಷ್ಠಿಯೂ ನಿಷ್ಫಲವಾಯಿತು. ಗಾಂಧೀಜಿ ಲಂಡನ್ನಿನಿಂದ ಬರಿಗೈಯಲ್ಲಿ ಹಿಂದಿರುಗಿದರು. ಅವರು ಭಾರತ ತಲಪಿದೊಡನೆ ಅವರನ್ನು ಹಿಡಿದು ಸೆರೆಯಲ್ಲಿಟ್ಟರು. ಮತ್ತೆ ಚಳವಳಿ ಪ್ರಾರಂಭವಾಯಿತು.

ಜೈಲಿನಲ್ಲಿಯೂ ಗಾಂಧೀಜಿ ದೇಶದ ಹಿತಚಿಂತನೆಯಲ್ಲಿಯೆ ಇದ್ದರು. ಬ್ರಿಟಿಷ್ ಸರಕಾರ ಹಿಂದೂ ಮುಸ್ಲಿಂ ಭೇದಭಾವನೆಯನ್ನು ತಂದಿದ್ದುದಲ್ಲದೆ ಹಿಂದುಗಳಿಂದ ಪಂಚಮ ವರ್ಗದವರನ್ನು ಒಡೆಯುವ ಹವಣಿಕೆಯಿಂದ ಅವರಿಗೆ ಪ್ರತ್ಯೇಕ ಚುನಾವಣೆ ಎಂದು ಸಾರಿದರು. ಈ ಅನ್ಯಾಯವನ್ನು ಅಳಿಸಬೇಕೆಂದು ಗಾಂಧೀಜಿ ಆಮರಣಾಂತ ಉಪವಾಸ ಹಿಡಿದರು. ಅಸ್ಪೃಶ್ಯತಾ ನಿವಾರಣೆಗಾಗಿ ತಾವೇ ಬಲಿಯಾಗಲು ಸಿದ್ಧರಾದರು. ಆದರೆ ಸರಕಾರ ಪ್ರತ್ಯೇಕ ಚುನಾವಣೆಯನ್ನು ಕಡತದಿಂದ ತೆಗೆದು ಹಾಕಿತು. ಗಾಂಧೀಜಿಯ ಉಪವಾಸ ನಿಂತಿತು. ಅಂದಿನಿಂದ ಗಾಂಧೀಜಿ ಅಸ್ಪೃಶ್ಯರೆನಿಸಿಕೊಂಡಿದ್ದವರನ್ನು ಹರಿಜನ—ದೇವರಜನ—ರೆಂದು ಕರೆದು ಅವರ ಉದ್ಧಾರಕ್ಕೆ, ಹಿಂದೂಧರ್ಮದಿಂದ ಅಸ್ಪೃಶ್ಯತಾ ಕಳಂಕ

ವನ್ನು ತೊಡೆಯಲು ಕೊನೆಯತನಕ ಹೆಣಗಿದರು. ಆ ಉದ್ದೇಶದಿಂದಲೆ "ಹರಿಜನ" ಎಂಬ ಪತ್ರಿಕೆಯನ್ನು ಹೊರಡಿಸಿದರು. ದೇಶದಲ್ಲೆಲ್ಲಾ ಪ್ರವಾಸ ಕೈಗೊಂಡರು. ಅದರಿಂದ ಹಿಂದೂಜನ ಅಸ್ಪೃಶ್ಯತಾ ಭಾವನೆಯಿಂದ ಅದುವರೆಗೂ ತಾವು ಗಳಿಸಿದ್ದ ಪಾಪದಿಂದ ವಿಮುಕ್ತರಾಗಲು ಹವಣಿಸಿದರು.

ಮೊದಲಿಂದಲೂ ಗಾಂಧೀಜಿಗೆ ಭರತಖಂಡದ ೬೦,೦೦೦ ಹಳ್ಳಿಗಳಲ್ಲಿ ನೆಲಸಿ ತಮ್ಮ ಹೀನಸ್ಥಿತಿಯನ್ನು ಹೇಳಿಕೊಳ್ಳಲಾರದೆ ಅರೆಹೊಟ್ಟೆ ತಿಂದು ಮೂಕ ಪ್ರಾಣಿಗಳಂತೆ ದುಡಿಯುವ ಜನರ ಉದ್ಧಾರದಲ್ಲಿ ಆಸಕ್ತಿ. ಆ ಕೆಲಸವನ್ನು ಮುಂಬರಿದ ಜನ ಮತ್ತು ಸರಕಾರಗಳು ಕೈಗೊಳ್ಳುವಂತೆ ಮಾಡಲು ೧೯೩೬ರಲ್ಲಿ ಮಧ್ಯಪ್ರಾಂತದ ವರ್ಧಾದ ಬಳಿ ಸೇವಾಗ್ರಾಮದಲ್ಲಿ ನೆಲಸಿ ಅಲ್ಲಿಂದಲೇ ಎಲ್ಲ ಕಾರಭಾರವನ್ನೂ ನಡಸತೊಡಗಿದರು. ಅದರಿಂದ ೧೯೩೭ರಿಂದ ಪ್ರಾಂತಾಡಳಿತಕ್ಕೆ ಬಂದ ಕಾಂಗ್ರೆಸ್ ಸರಕಾರಗಳು ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಆಸಕ್ತಿ ವಹಿಸುವಂತಾಯಿತು.

ಆದರಿನ್ನೂ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿರಲಿಲ್ಲ. ಪಾರತಂತ್ರ್ಯದ ನೊಗದ ಭಾರ ಬಲವಾಗಿಯೆ ಇತ್ತು. ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಮೊದಮೊದಲು ಆ ಯುದ್ಧದಲ್ಲಿ ಭಾರತಕ್ಕೆ ಯಾವ ಸಂಬಂಧವೂ ಇರಲಿಲ್ಲ. ಆದರೂ ಬ್ರಿಟಿಷರು ಭಾರತೀಯರ ಸಮ್ಮತಿಯಿಲ್ಲದೆ ಈ ದೇಶವನ್ನು ಯುದ್ಧಕ್ಕೆಳೆದರು. ಗಾಂಧೀಜಿ ಸ್ವತಃ ಯುದ್ಧಕ್ಕೆ ವಿರೋಧಿ. ಪ್ರಪಂಚದಲ್ಲಿ ಎಲ್ಲಿಯೆ ಆಗಲಿ ಮನುಷ್ಯ ಮನುಷ್ಯನನ್ನು ಕೊಲ್ಲುವ ಭಾವನೆಯಿರುವವರೆಗೆ ಮಾನವ ಸಂಸ್ಕೃತನಾದಂತಲ್ಲ. ಒಂದು ಹಿಂಸಾತ್ಮಕ ಯುದ್ಧ ಮತ್ತೊಂದು ಯುದ್ಧಕ್ಕೆ ಕಾರಣವಾಗುತ್ತದೆ. ಆದ್ದರಿಂದ ಜನರು ಒಬ್ಬರನ್ನೊಬ್ಬರು ಪ್ರೇಮದಿಂದ ಗೆಲ್ಲುವಂತೆ ಮಾಡಬೇಕು. ಇದು ಗಾಂಧೀ ವಾದ. ಅದಕ್ಕನುಸಾರವಾಗಿ ಯುದ್ಧವಿರೋಧವಾಗಿ ಚಳವಳಿ ಆರಂಭಿಸಿದರು. ೧೯೪೨ರ ಆಗಸ್ಟ್ ೮ ರಂದು ಅಖಿಲಭಾರತ ಕಾಂಗ್ರೆಸ್ ಸಮಿತಿ ಬೊಂಬಾಯಿಯಲ್ಲಿ ಸೇರಿತು. ಬ್ರಿಟಿಷರು ಭಾರತ ಬಿಟ್ಟು ಹೋಗಬೇಕೆಂದು ನಿರ್ಣಯಿಸಿತು. ಹಾಗಾಗದಿದ್ದರೆ ಕೈಗೊಳ್ಳಬೇಕಾದ ಕಾರ್ಯಕ್ರಮದ ಹೊಣೆಯನ್ನು ಗಾಂಧೀಜಿಗೆ ವಹಿಸಿತು. ಅಂದಿನ ರಾತ್ರಿಯೇ ಸರಕಾರ ಗಾಂಧೀಜಿಯನ್ನೂ ಮತ್ತಿತರ ನಾಯಕ ಮಹಾನಾಯಕರನ್ನೂ ಸೆರೆ ಹಿಡಿಯಿತು. ದೇಶದ ಜನ

ಇದನ್ನು ಸಹಿಸಲಾರದೆಹೋದರು. ತಮಗೆ ತಾವೇ ನಾಯಕರಾಗಿ ಹಿಂಸೆ ಅಹಿಂಸೆ ಎಲ್ಲ ಮಾರ್ಗದಲ್ಲೂ ಸರಕಾರವನ್ನು ವಿರೋಧಿಸಿದರು. ಯುದ್ಧಕ್ಕಾಗಿ ಸನ್ನಾಹಮಾಡಿಕೊಂಡಿದ್ದ ಸರಕಾರ ಸಹ ಜನರನ್ನು ಹುಚ್ಚಾಬಟ್ಟೆ ಹಿಂಸಿಸಿತು. ಕೊಲೆ, ಲೂಟಿ, ಸುಲಿಗೆ, ನಿರಂಕುಶವಾಗಿ ನಡೆದುವು. ಆದರೆ ಜನ ಧೃತಿಗೆಡಲಿಲ್ಲ.

ಗಾಂಧೀಜಿಯ ಮತ್ತೊಂದು ದೇಹದಂತಿದ್ದ ಅವರ ಕೆಲಸವನು ಹಂಚಿಕೊಂಡು ನಡೆಸುತ್ತಿದ್ದ ಅವರ ಪಟ್ಟಶಿಷ್ಯ ಮಹದೇವ ದೇಸಾಯಿ ಜೈಲಿನಲ್ಲಿ ಕಾಲವಾದರು. ತಮ್ಮ ಜೀವನದಲ್ಲೆಲ್ಲ ಒಡನಾಡಿಯಾಗಿದ್ದು, ಕಷ್ಟ ಸುಖಗಳಲ್ಲಿ ಭಾಗಿಯಾಗಿದ್ದು, ಕೈಗೊಂಡ ಎಲ್ಲ ಕಾರ್ಯಗಳಲ್ಲೂ ನೆರವು ನೀಡಿದ್ದ ಸಹಧರ್ಮಿಣಿ ಕಸ್ತೂರಿ ಬಾಯನ್ನು ಗಾಂಧೀಜಿ ಕಳೆದುಕೊಂಡರು. ಆದರೂ ಅನಾಸಕ್ತರಾದ ಆ ಕರ್ಮಯೋಗಿ ಕರ್ತವ್ಯ ಕರ್ಮದಿಂದ ವಿಮುಖರಾಗಲಿಲ್ಲ. ಜೈಲಿನೊಳಗಿಂದಲೆ ಸರಕಾರದೊಡನೆ ವ್ಯವಹರಿಸಿ ಅದರ ತಪ್ಪನ್ನು ತಿದ್ದಲು ಪ್ರಯತ್ನಿಸಿದರು.

ಬ್ರಿಟಿಷರ ಆಳ್ವಿಕೆ ಕೊನೆಗಾಣುತ್ತಿತ್ತು. ಮೂರು ವರ್ಷಗಳ ಮೇಲೆ ಸರಕಾರ ಗಾಂಧೀಜಿ ಮತ್ತು ಇತರ ನಾಯಕರನ್ನು ಬಿಡುಗಡೆ ಮಾಡಿತು. ಅವರೊಡನೆ ಸಂಧಾನದ ಮೇಲೆ ಸಂಧಾನ ನಡೆಸಿತು. ಅದರ ಫಲವಾಗಿ ಕಾಂಗ್ರೆಸ್ ಮುಸ್ಲಿಂ ಲೀಗಿನೊಡನೆ ರಾಷ್ಟ್ರದ ಆಡಳಿತವನ್ನು ವಹಿಸಿತು. ಆದರೆ ಇನ್ನೂ ದೇಶದ ಅನಿಷ್ಟ ಕಳೆದಿರಲಿಲ್ಲ. ಮೊದಲಿನಿಂದಲೂ ತಾವು ಬೇರೆ ಎಂದುಕೊಂಡು ಬಂದಿದ್ದ ಮುಸ್ಲಿಮರು ಆಗಲೂ ವಕ್ರವಾಗಿ ವರ್ತಿಸಿದರು. ಕೊನೆಗೂ ದೇಶಕ್ಕೆ ಪೂರ್ಣ ಸ್ವಾತಂತ್ರ್ಯ ಬಂದುದು ಮುಸ್ಲಿಮರಿಗಾಗಿ ಭಾರತವನ್ನು ಇಬ್ಭಾಗ ಮಾಡಿದ ಮೇಲೆಯೇ.

ಅಂತೂ ಸ್ವರಾಜ್ಯ ಸಾಧನೆಯಾಯಿತು. ಮಹಾತ್ಮಾ ಗಾಂಧೀಜಿ ಮೂವತ್ತು ವರ್ಷಗಳ ಕಾಲ ಅವ್ಯಾಹತವಾಗಿ ದೇಶವನ್ನು ಅಹಿಂಸಾ ಮಾರ್ಗದಲ್ಲಿ ನಡೆಸಿದುದರ ಫಲವಾಗಿ ರಕ್ತ ಚೆಲ್ಲದೆ ಸ್ವಾತಂತ್ರ್ಯ ಸಾಧನೆಯಾಯಿತು. ಆದರೆ ದೇಶದ ದುರದೃಷ್ಟ. ಆಳರಸರು ಬಿತ್ತಿದ್ದ ಹಿಂದೂ ಮುಸ್ಲಿಂ ವಿಷಬೀಜ ಬೆಳೆದು ಫಲ ಕೊಟ್ಟಿತು. ಕಲ್ಕತ್ತದಲ್ಲಿ ಪಾಕಿಸ್ಥಾನ ದಿನಾಚರಣೆಯಿಂದ ಪ್ರಾರಂಭವಾದ ಗಲಭೆ ಉಲ್ಬಣಾವಸ್ಥೆಗೊಂಡು ಹಿಂದೂ

ಮುಸಲ್ಮಾನರು ಒಬ್ಬರ ಕೊರಳಿಗೆ ಒಬ್ಬರು ಕತ್ತಿ ಇಟ್ಟರು. ಬಂಗಾಳದ ನವಖಲಿಯ ಮುಸಲ್ಮಾನರು ಹುಚ್ಚೆದ್ದು ಹಿಂದೂ ಜನರನ್ನು ಸಾವಿರಗಟ್ಟಲೆ ಕೊಲೆ ಮಾಡಿದರು, ಸುಟ್ಟರು, ಇರಿದರು, ಮಾನಭಂಗಮಾಡಿದರು. ಇದು ಅಲ್ಲಿ ಕಷ್ಟಕ್ಕೀಡಾದ ಬಿಹಾರಿಗಳನ್ನು ಕೆರಳಿಸಿತು. ಬಿಹಾರಿನಲ್ಲಿ ಅವರು ಮುಸಲ್ಮಾನರ ಹತ್ಯಾಕಾಂಡವನ್ನು ನಡೆಸಿದರು. ಅದರ ಪ್ರತೀಕಾರ ಪಂಜಾಬಿನಲ್ಲಿ ಗುರುತರವಾಗಿ ತಲೆದೋರಿತು. ಹೀಗೆ ಭಾರತ ಭೂಮಿ ಯಾದವೀ ಕಲಹದ ರಕ್ತದಿಂದ ತೊಯ್ದು ಕೆಸರಿನಲ್ಲಿದ್ದಾಗ ಅಷ್ಟು ದಿನವೂ ಅಹಿಂಸಾ ಮಾರ್ಗದಲ್ಲಿ ಬ್ರಿಟಿಷ್ ಸಾಮ್ರಾಜ್ಯವನ್ನು ಎದುರಿಸಿ, ಸೋಲಿಸಿದ್ದ ದೇಶನಾಯಕರು ಕಣ್ಣೀರಿಡುತ್ತ ಸ್ವರಾಜ್ಯ ದೇವಾಲಯಕ್ಕೆ ೧೯೪೭ನೆಯ ಆಗಸ್ಟ್ ೧೫ರ ನಡುರಾತ್ರಿಯಲ್ಲಿ ಪ್ರವೇಶಿಸಿದರು. ಭಾರತಮಾತೆ ಸಾಮ್ರಾಜ್ಞಿಯಾಗಿ ಮೆರೆದಳು.

ಈ ಸ್ವಾತಂತ್ರ್ಯ ಸಂಭ್ರಮ ದೆಹಲಿಯಲ್ಲಿ ವೈಭವದಿಂದ ನಡೆಯು ತ್ತಿದ್ದಾಗ, ಜನರೆಲ್ಲ ಸಂತೋಷದಲ್ಲಿ ಮೆರೆಯುತ್ತಿದ್ದಾಗ ಗಾಂಧೀಜಿ ನವಖಲಿ ಪ್ರದೇಶದಲ್ಲಿ ನೊಂದವರನ್ನು ಸಂತೈಸುತ್ತ, ತಮ್ಮ ಆತ್ಮ ಬಲದಿಂದ ದುರಾಚಾರಿಗಳನ್ನು ಒಲಿಸಿಕೊಳ್ಳುತ್ತ ಪಾದಚಾರಿಯಾಗಿ, ಏಕಾಕಿಯಾಗಿ ಊರಿಂದೂರಿಗೆ ಯಾತ್ರೆ ಹೊರಟದ್ದರು.

ಆ ಯಾತ್ರೆಯ ಫಲವಾಗಿ ನವಖಲಿಯಲ್ಲಿ ಶಾಂತಿ ನೆಲಸಿತು. ಅಲ್ಲಿಂದ ಬಿಹಾರಿಗೆ ಹೋಗಿ, ಕಲ್ಕತ್ತೆಗೆ ಬಂದು ಶಾಂತಿ ತಂದರು. ದೆಹಲಿಗೆ ಹೋಗಿ ಶಾಂತಿ ಸಮಾಧಾನ ತರಲು ದುಡಿದರು. ಪಾಕಿಸ್ಥಾನದಲ್ಲಿ ನೊಂದವರನ್ನು ಸಂತೈಸಲು ಹೊರಡಬೇಕೆಂದಿದ್ದರು. ಆದರೆ ಅಷ್ಟರಲ್ಲಿ ಮುಸಲ್ಮಾನರು ಇಷ್ಟು ಹಿಂಸೆಕೊಟ್ಟರೂ ಅವರ ಮೇಲೆ ಸೇಡು ತೀರಿಸಿ ಕೊಳ್ಳಲು ಗಾಂಧೀಜಿ ಅವಕಾಶ ಕೊಡಲಿಲ್ಲವೆಂದು ಕೆಲವರು ಉನ್ಮತ್ತ ರಾದರು. ೧೯೪೮ನೆಯ ಜನವರಿ ೩೦ನೆಯ ದಿನ ಶುಕ್ರವಾರ ಸಂಜೆ ೫ ಗಂಟೆ ಸಮಯದಲ್ಲಿ ಭರತಖಂಡದ ರಾಜಧಾನಿಯಲ್ಲಿ ಪ್ರಾರ್ಥನಾ ಸಭೆಯಲ್ಲಿ ಮೆದುಳುಗೇಡಿ ಯಾವನೊ ತಲೆತಿರುಕ ಹಿಂದೂ ಯುವಕ ನೊಬ್ಬನು ಗುಂಡಿಕ್ಕಿ ಗಾಂಧೀಜಿಯ ದೇಹವನ್ನು ಕೊಂದನು. ಹೇ ರಾಮ್! ಹೇ ರಾಮ್ ! ಎನ್ನುತ್ತ ಮಹಾತ್ಮಾ ಗಾಂಧೀಜಿ ಅಮರರಾದರು.

ಉಪಸಂಹಾರ

ಮಾನವನ ಅನಾಚಾರ ಹೆಚ್ಚುತ್ತ ಬಂದು ಧರ್ಮಕ್ಷೋಭೆ ಆಗಾಗ್ಗೆ ಸಂಭವಿಸುತ್ತದೆ. ಹೀಗಾದಾಗ ಧರ್ಮದ ಉದ್ಧಾರಕ್ಕಾಗಿ ಶ್ರಮಿಸಿ ಮಾರ್ಗದರ್ಶಕರಾಗುವ ಗಾಂಧೀಜಿಯಂತಹ ಮಹಾತ್ಮರನ್ನು ಗೀತೆ ಅವತಾರ ಪುರುಷರು ಎಂದು ಹೇಳುತ್ತದೆ. ಇಂಥವರ ಪಂಕ್ತಿ ಶ್ರೀರಾಮಚಂದ್ರ, ಶ್ರೀಕೃಷ್ಣ, ಬುದ್ಧದೇವ, ಯೇಸುಕ್ರಿಸ್ತ, ಸಾಕ್ರಿಟೀಸ್, ಮಹಾತ್ಮಾ ಗಾಂಧಿ ಮೊದಲಾದವರಿಂದ ಶೋಭಿಸುತ್ತಿದೆ. ಆದಿಯಿಂದಲೂ ಬೆಳೆದು ಬಂದ ಈ ಪಂಕ್ತಿಯಲ್ಲಿ ಈಗ ಕೊನೆಯ ರನ್ನವಣಿಯಾಗಿ ಮೆರೆಯುತ್ತಿದ್ದಾರೆ ಗಾಂಧೀಜಿ.

ಗಾಂಧೀಜಿ ಭಾರತಕ್ಕಾಗಿ, ವಿಶ್ವಕ್ಕಾಗಿ ನಾನಾ ಮುಖದಲ್ಲಿ ಸಾಧನೆ ನಡೆಸಿದ್ದಾರೆ, ಆದರ್ಶ ಸಾಧಿಸಿದ್ದಾರೆ. ಅವರು ಸಾಧಿಸಿ ನಮಗಾಗಿ ಬಿಟ್ಟಿರುವ ಎಲ್ಲ ಆದರ್ಶವನ್ನೂ ಮೀರಿ ನಿಂತಿದೆ, ಅವರ ದಿವ್ಯ ಜೀವನ. ಅದು ಮಾನವ ಕೋಟಿಗೆ ನಂದಾದೀವಿಗೆಯಾಗಿದೆ. ಮಾನವನು ಅದೆಷ್ಟೇ ಸಾಧಾರಣನಾಗಿರಲಿ ಸತ್ಯದ ದಾರಿಯಲ್ಲಿ ಬಾಳು ಸಾಗಿಸಿದರೆ ಅಮರನಾಗಬಹುದು ಎಂಬುದನ್ನು ಗಾಂಧೀಜಿ ತಾವು ಹಾಗೆ ಬದುಕಿ ತೋರಿದ್ದಾರೆ. ಆ ದಾರಿ ಸ್ವರ್ಗವನ್ನು ಮರ್ತ್ಯಕ್ಕೆ ಇಳಿಸಬಲ್ಲ ಚಿನ್ನದ ದಾರಿ.

ಶಬ್ದಾರ್ಥಕೋಶ

ಗದ್ಯಭಾಗ

ಅ

ಅಗ್ನಿಹೋತ್ರ-ಅಗ್ನಿಯನ್ನು ವೇದೋಕ್ತ ರೀತಿಯಲ್ಲಿ ಪೂಜಿಸುವುದು.

ಅಂಕುಶ - ಆನೆಗಳನ್ನು ನಡೆಯಿಸುವುದಕ್ಕಾಗಿ ಉಪಯೋಗಿಸುವ ಆಯುಧ.

ಅಂಶ-ಭಾಗ

ಅವತರಣ-ಕೆಳಗಿಳಿಯುವುದು

ಅಗ್ರಮರ್ಯಾದೆ-ಮೊದಲು ಗೌರವಿಸುವುದು.

ಅನುಗ್ರಹ-ದೊಡ್ಡವರು ಚಿಕ್ಕವರಲ್ಲಿ ತೋರಿಸುವ ದಯೆ

ಅಂತಃಕರಣ-ಮನಸ್ಸು

ಅಚೇತನ-ಪ್ರಾಣವಿಲ್ಲದ

ಅನುರೂಪ-ಉಚಿತ, ತಕ್ಕ

ಅನುಚರ-ಸೇವಕ, ಹಿಂಬಾಲಕ

ಅನಲ-ಬೆಂಕಿ

ಅನಂತಾತ್ಮ-ದೇವರು

ಅದ್ಭುತ-ಆಶ್ಚರ್ಯಕರವಾದ

ಅನರ್ಥ-ಕೇಡು

ಅಧ್ಯಾಪನ-ಬೋಧಿಸುವುದು

ಅಪರಾಧ-ತಪ್ಪು

ಅಭಯ-ಭಯಪಡಬೇಡವೆಂದು ಧೈರ್ಯಗೊಳಿಸುವುದು

ಅನುಮತಿ-ಒಪ್ಪಿಗೆ

ಅದಿತಿ-ಇಂದ್ರನ ತಾಯಿ

ಅಮೋಘ-ಶ್ರೇಷ್ಠವಾದ

ಅಶ್ವಿನೀ ದೇವತೆಗಳು-ಒಬ್ಬರನ್ನೊಬ್ಬರು ಯಾವಾಗಲೂ ಅಗಲದೆ ಇರುವ ಸಹೋದರರಿಗೆ ಇವರನ್ನು ಹೋಲಿಕೆ ಕೊಡುವರು. ಇವರು ದೇವವೈದ್ಯ ಸಹೋದರರು.

ಅರ್ಧಾಂಗಿ-ಧರ್ಮಪತ್ನಿ (ಮದುವೆಯಾದ ಹೆಂಡತಿ).

ಅರ್ಹ-ಯೋಗ್ಯ

ಅಸ್ತಾಚಲ-ಸೂರ್ಯ ಮುಳುಗುವ ಬೆಟ್ಟ (ಪಶ್ಚಿಮ ಪರ್ವತ).

ಅಪರಾಹ್ಣ - ಮಧ್ಯಾಹ್ನವಾದ ಮೇಲಿನ ಕಾಲ

ಅಳವು-ಶಕ್ತಿ

ಅಸ್ತ್ರಶಸ್ತ್ರ-ಮಂತ್ರಪೂರ್ವಕವಾಗಿ ಬಿಡುವ ದೈವಿಕವಾದ ಶಕ್ತಿಯುಳ್ಳ ಬಾಣ.

ಶಸ್ತ್ರ- ಆಯುಧಗಳು

ಅಡಗು-ಮರೆಯಾಗು

ಅಕ್ಷೌಹಿಣಿ-21870 ಆನೆಗಳು ಅಷ್ಟೇ ರಥಗಳು (21870). 65610 ಕುದುರೆಗಳು, 109357 ಕಾಲಾಳುಗಳು ಇರುವ ಚತುರಂಗ ಸೈನ್ಯವು.

ಅನುಪಮ-ಅಸದೃಶವಾದ

ಅಂಕುರಿಸು-ಮೊಳಕೆಯಾಗು

ಅಚ್ಚುಮೆಚ್ಚು-ಹೆಚ್ಚಾದ ಪ್ರೀತಿ

ಅಪಾಯ-ಕೇಡು

ಅಸ್ತಂಗತ-ಅಸ್ತಸಾಗು, ಮುಳುಗು

ಅಸಿಧಾರೆ-ಕತ್ತಿಯಬಾಯಿ-ಅಲಗು

ಅನುದಿನ-ಪ್ರತಿದಿನ

ಅರ್ಹನು-ತಕ್ಕವನು, ಯೋಗ್ಯನು

ಅಹಂಮನ್ಯಭಾವ-ತಾನೇ ಹೆಚ್ಚೆಂದು ಭಾವಿಸುವುದು.

ಅಶಕ್ಯ-ಅಸಾಧ್ಯವಾದ

ಅಂತರ-ವ್ಯತ್ಯಾಸ

ಆ

ಆಗ್ನೇಯಾಸ್ತ್ರ- ಅಗ್ನಿದೇವನಿಂದ ಕೊಡಲ್ಪಟ್ಟ ಬಾಣ (ಬೆಂಕಿಬಾಣ)

ಆಗಮನ-ಬರುವಿಕೆ

ಆಸನ-ಪೀಠ, ಗದ್ದುಗೆ

ಆರ್ತತೆ-ದುಃಖ

ಅಂತರ್ಯ-ಮನಸ್ಸು ; ರಹಸ್ಯ

ಆಧಾರ-ಆಶ್ರಯ

ಆಹ್ಲಾದ-ಸಂತೋಷ
ಆಗ್ರಹ-ಕೋಪ
ಆಸರ-ಸಹಾಯ
ಆಮಂತ್ರಣ-ಬರಬೇಕೆಂದು ಹೇಳಿ ಕಳುಹಿಸುವುದು
ಆನಂದಬಾಷ್ಪ-ಸಂತೋಷದ ಕಣ್ಣೀರು
ಆಮುಷ್ಮಿಕ-ಪರಲೋಕಸುಖ, ಮೋಕ್ಷಸುಖ
ಆಹ್ನಿಕ-ನಿತ್ಯಕರ್ಮಗಳು
ಆವಳಿ-ಸಮೂಹ
ಆಪತ್ತು-ಕಷ್ಟ
ಆಪೋಶನ-ಕುಡಿಯುವುದು
ಆಮೂಲಾಗ್ರ-ಮೊದಲಿನಿಂದ ಕೊನೆಯವರೆಗೆ
ಆಶ್ವಾಸನ-ಮಾತುಕೊಡು

ಇ

ಇತಿಹಾಸ-ಚರಿತ್ರೆ
ಇಂಗಿತ-ಮನೋಭಿಪ್ರಾಯ
ಇಂದ್ರಿಯನಿಗ್ರಹ-ಕಣ್ಣು, ಕಿವಿ, ಮೊದಲಾದ ಪಂಚೇಂದ್ರಿಯಗಳನ್ನು ಜಯಿಸುವುದು.
ಇಷ್ಟಾರ್ಥ-ಬಯಸಿದ ವಸ್ತು

ಈ

ಈಡಾಡು-ಬಿಡು, ಬಿಸುಡು

ಉ

ಉಪಕ್ರಮಿಸು-ಪ್ರಾರಂಭಿಸು
ಉಪಕೃತ-ಉಪಕಾರವನ್ನು ಹೊಂದಿದ
ಉಭಯತರು-ಎರಡು ಕಡೆಯವರು
ಉದ್ಧಟತನ-ಅಹಂಕಾರ

ಋ

ಋಜುಗತಿ-ನೇರವಾದ ದಾರಿ
ಋತ್ವಿಕ್ಕುಗಳು-ಯಜ್ಞಕರ್ಮದಲ್ಲಿ ಒಂದೊಂದು ಭಾಗವನ್ನು ವಹಿಸುವ ವೈದಿಕರು.
ಋಣ-ಸಾಲ

ಎ

ಎಡರು-ಕಷ್ಟ
ಎದೆಗಾರ್ತಿ-ಧೈರ್ಯಶಾಲಿನಿ
ಎಣೆಯಿಲ್ಲದ-ಸಮಾನವಿಲ್ಲದ

ಏ

ಏಕಾಕಿ-ಒಬ್ಬನು , ಒಂಟಿ

ಒ

ಒಡಮೂಡು-ಪ್ರತ್ಯಕ್ಷವಾಗು
ಒಡೆತನ-ಅಧಿಕಾರ
ಒಡಹುಟ್ಟಿದವರು-ಸಹೋದರರು

ಓ

ಓಲೆ-ಕಾಗದ

ಕ

ಕಪಟ-ಮೋಸ
ಕರಣ-ಇಂದ್ರಿಯಗಳು
ಕುಸುಮ-ಹೂ
ಕಾಕುತ್ಸ್ಥ-ರಾಮ
ಕುಹಕಿ-ನೀಚ
ಕಂದರ-ಗುಹೆ
ಕುಂದಣ-ಚಿನ್ನ
ಕಿಂಕರ-ಆಳು
ಕಳವಳ-ದುಃಖ
ಕೂಟಸ್ಥ-ಮೂಲಪುರುಷ
ಕ್ರೋಧಾಗ್ನಿ-ಕೋಪವೆಂಬ ಬೆಂಕಿ
ಕಂಟಕಪ್ರಾಯ-ಮುಳ್ಳಿನಂತೆ ತೊಂದರೆ ಕೊಡುವ.
ಕೆನ್ನೀರು-ರಕ್ತ
ಕಳಂಕ-ದೋಷ

ಖ

ಖ್ಯಾತಿಹೊಂದಿದ-ಪ್ರಸಿದ್ಧಿಯನ್ನು ಪಡೆದ

ಗ

ಗಂಭೀರಸ್ವಭಾವ - ಮನಸ್ಸಿನ ಭಾವಗಳನ್ನು ಸುಲಭವಾಗಿ ಹೊರಗೆ ತೋರ್ಪಡಿಸದಿರುವುದು

ಗೋಚರಿಸು-ಕಾಣುವುದು
ಗೊಂದಲ-ತೊಂದರೆ
ಗೈರಿಕ-ಧಾತು ವಿಶೇಷ (ಕೆಂಪುಲೋಹ)

ಘ

ಘೋರರೂಪ - ಭಯಂಕರವಾದ ಆಕಾರ
ಘಾತಕ-ಹಿಂಸೆಮಾಡುವವನು

ಚ

ಚರಾಚರ-ಚಲಿಸುವ ಮತ್ತು ಚಲಿಸದಿರುವ ಪ್ರಾಣಿವರ್ಗ, ಸಸ್ಯವರ್ಗ ಮೊದಲಾದುವು.
ಚತುರ-ಜಾಣ
ಚತುರೋಪಾಯ-ಸಾಮ, ದಾನ, ಭೇದ, ದಂಡ.

ಜ

ಜ್ವಲಿಸು-ಪ್ರಕಾಶಿಸು, ಉರಿ
ಜಾಹ್ನವಿ-ಗಂಗಾನದಿ
ಜಲಸೇಚನ-ನೀರನ್ನು ಎರಚುವುದು
ಜ್ಞಾನವೃದ್ಧ-ಹೆಚ್ಚು ತಿಳುವಳಿಕೆಯುಳ್ಳವನು.
ಜಾತರೂಪ-ಚಿನ್ನ
ಜ್ಯೇಷ್ಠ-ಹಿರಿಯ

ತ

ತಂತ್ರ-ಯುಕ್ತಿ
ತ್ವರೆಪಡು-ಆತುರಗೊಳ್ಳುವುದು
ತಾರತಮ್ಯ-ಹೆಚ್ಚು ಕಡಮೆ
ತಾಯ್ನಾಡು-ಹುಟ್ಟಿದ ದೇಶ
ತಪನ-ಸೂರ್ಯ
ತತ್ತರಿಸು-ಭಯದಿಂದ ನಡುಗುವುದು
ತೀವ್ರಗತಿ-ವೇಗವಾದ ನಡಿಗೆ

ದ

ದರ್ಭೆಯ ಪವಿತ್ರ-ದರ್ಭೆಹುಲ್ಲಿನಲ್ಲಿ ಮಾಡಿದ ಉಂಗುರ.
ದಳ್ಳುರಿ-ದೊಡ್ಡ ಬೆಂಕಿ
ದಹಿಸು- ಸುಡು
ದಾರುಣ-ಭಯಂಕರವಾದ
ದುಷ್ಕರ-ಕಷ್ಟವಾದುದು
ದೈತ್ಯ-ದಿತಿಯ ಮಕ್ಕಳು (ರಾಕ್ಷಸರು)

ಧ

ಧರ್ಮಜ್ಞ-ಧರ್ಮವನ್ನು ತಿಳಿದವನು
ಧನುರ್ಧಾರಿ-ಬಿಲ್ಲನ್ನು ಹಿಡಿದವನು
ಧುರೀಣತ್ವ-ಮುಂದಾಳುತನ
ಧ್ವಜ-ಒಂದು ಗೊತ್ತಾದ ಗುರುತುಳ್ಳ ಬಾವುಟ
ಧಿಕ್ಕರಿಸು-ತಿರಸ್ಕರಿಸು, ಅಲ್ಲಗಳೆ
ಧ್ಯಾನಮಗ್ನ-ಧ್ಯಾನದಲ್ಲಿ ಆಸಕ್ತನಾಗಿರುವುದು
ಧೈರ್ಯಸ್ಥೈರ್ಯ-ಹೆದರದೆ ಧೈರ್ಯದಿಂದ ಮನಸ್ಸು ಚಲಿಸದೆ ಇರುವುದು.

ನ

ನರಳು-ಹಿಂಸೆಪಡು
ನರಶ್ರೇಷ್ಠ-ಮನುಷ್ಯರಲ್ಲಿ ಉತ್ತಮನಾದವನು.
ನರಪಾಲ-ರಾಜ
ನಿಗ್ರಹಿಸು-ಶಿಕ್ಷಿಸು, ನಾಶಮಾಡು
ನಿಶ್ಚಲ-ಕದಲದಂತಿರುವ
ನಿರ್ಮೂಲವಾಗು-ಸಂಪೂರ್ಣ ನಾಶವಾಗು
ನಿವಾಸ-ಮನೆ
ನೆರವು-ಸಹಾಯ

ಪ

ಪತಾಕೆ-ಬಾವುಟ
ಪರಾಕ್ರಮ-ಶಕ್ತಿ
ಪದಾತಿ-ಕಾಲಾಳು
ಪರಿಜನರು-ಸೇವಕರು, ಆಳುಗಳು
ಪರಿಗ್ರಹಿಸು-ಸ್ವೀಕಾರಮಾಡು, ತೆಗೆದುಕೋ
ಪರಚಕ್ರ-ಶತ್ರುರಾಜರ ಸಮೂಹ
ಪಶ್ಚಾತ್ತಾಪ-ದುಃಖ
ಪರಾಭವ-ಸೋಲು

ಪ್ರಸನ್ನ–ಕೋಪವನ್ನು ಬಿಟ್ಟು ಶಾಂತವಾದ
ಪುತ್ರ–ಮಗ
ಪುತ್ರಕಾಮೇಷ್ಟಿ–ಮಗನಾಗಬೇಕೆಂದು ಮಾಡುವ ಯಾಗ.
ಪಾದಚಾರಿ–ಕಾಲುನಡಿಗೆಯಲ್ಲಿ ಸಂಚಾರ ಮಾಡುವವನು
ಪಣ–ಜೂಜಿನಲ್ಲಿ ಒಡ್ಡುವ ವಸ್ತುಗಳು
ಪಂಚಾಗ್ನಿ ತಪಸ್ಸು – ನಾಲ್ಕು ಕಡೆಯಲ್ಲಿಯೂ ಅಗ್ನಿಯನ್ನಿಟ್ಟು ಮೇಲೆ ಸೂರ್ಯನು ತಪಿಸುತ್ತಿರುವಾಗ ನಡುವೆ ನಿಂತು ಮೇಲ್ಮುಖವಾಗಿ ತಪಸ್ಸು ಮಾಡುವುದು.
ಪ್ರತ್ಯಕ್ಷ–ಎದುರಿನಲ್ಲಿ ಕಾಣುವುದು
ಪ್ರಾಜ್ಞ–ಜ್ಞಾನಿ ; ತಿಳಿದವನು

ಬ

ಬತ್ತಳಿಕೆ–ಬಾಣಗಳನ್ನಿಡುವ ಚೀಲ
ಬಹಿರಿಂದ್ರಿಯ–ಹೊರಗಿನ ಕಣ್ಣು ಕಿವಿ ಮೂಗು ಮೊದಲಾದ ಅವಯವಗಳು
ಬಲಿದಾನ–ಪರರ ಹಿತಕ್ಕಾಗಿ ತನ್ನ ಸುಖವನ್ನು ಬಿಡುವದು.
ಬೆಸಕೊಳ್ಳು–ಬೇಡು ; ಪ್ರಾರ್ಥಿಸು

ಭ

ಭಸ್ಮ–ಬೂದಿ
ಭಕ್ಷಿಸು–ತಿನ್ನು
ಭ್ರಾತೃ–ಸಹೋದರ
ಭಾವಿಸು–ಯೋಚನೆ ಮಾಡು
ಭದ್ರಪೀಠ–ಮಂಗಳಕರವಾದ ಗದ್ದುಗೆ
ಭೂತ–ಪ್ರಾಣಿ

ಮ

ಮರುಕ–ಕನಿಕರ, ದಯೆ
ಮಹತ್ವಾಕಾಂಕ್ಷೆ–ಪ್ರಸಿದ್ಧಿಯನ್ನು ಪಡೆಯಬೇಕೆಂಬ ಹಂಬಲ, ಆಸಕ್ತಿ
ಮರುತ–ವಾಯು
ಮಹೋತ್ಪಾತ–ದೊಡ್ಡದಾದ ಕೆಡುಕನ್ನು ಸೂಚಿಸುವ ಚಿಹ್ನೆಗಳು (ಮಹಾನ್ + ಉತ್ಪಾತ)
ಮಂದಹಾಸ–ಮೆಲ್ಲಗೆ ನಗುವುದು (ಮುಗುಳ್ನಗೆ)
ಮೇಷ–ಟಗರು ; ಕುರಿ
ಮೌಢ್ಯ–ಮಂದಬುದ್ಧಿ
ಮಿಗಿಲು–ಹೆಚ್ಚು

ಯ

ಯಥೋಚಿತ–ಉಚಿತವಾದ ರೀತಿ
ಯಜ್ಞ–ದೇವತೆಗಳನ್ನು ಪ್ರೀತಿಗೊಳಿಸುವ ವೇದೋಕ್ತ ಕರ್ಮ
ಯಶಸ್ವಿ–ಹೆಸರುವಾಸಿಯನ್ನು ಪಡೆದವನು
ಯೋಗ್ಯ–ಶ್ರೇಷ್ಠವಾದ ಗುಣವುಳ್ಳವನು

ರ

ರಣಭೈರವಿ–ಯುದ್ಧದಲ್ಲಿ ಭೈರವನಂತೆ ಪರಾಕ್ರಮದಿಂದ ಕಾದುವವಳು
ರಾಹುಗ್ರಸ್ತ–ರಾಹುವಿನಿಂದ ಆಕರ್ಷಿಸಲ್ಪಟ್ಟ
ರಾಜ್ಯಾಂಗ–ಸ್ವಾಮಿ, ಅಮಾತ್ಯ, ರಾಷ್ಟ್ರ, ಕೋಶ, ದುರ್ಗ, ಯೋಧ, ಮಿತ್ರ
ರಣಭೇರಿ–ಯುದ್ಧದಲ್ಲಿ ಬಾರಿಸುವ ನಗಾರಿ

ಲ

ಲೋಕಪಾವನಿ–ಲೋಕವನ್ನು ಪವಿತ್ರ ಮಾಡುವ

ವ

ವತ್ಸ–ಮಗ
ವರಿಸು–ಪ್ರೀತಿಸು
ವರ್ತಮಾನ–ಸುದ್ದಿ
ವಾಲಖಿಲ್ಯ–ಬ್ರಹ್ಮನ ಬಾಲದಿಂದ ಹುಟ್ಟಿದವರು
ವೃಷಭಧ್ವಜ–ಶಿವ
ವಿಘ್ನ–ತೊಂದರೆ
ವಿಫಲ–ಪ್ರಯೋಜನವಿಲ್ಲದಿರುವುದು
ವಿಪರೀತ–ವ್ಯತ್ಯಸ್ತವಾದ
ವೀರ್ಯ–ಸಾಹಸ (ಪರಾಕ್ರಮ)
ವದನ–ಮುಖ

ವಿಯೋಗ-ಅಗಲಿಕೆ
ವಸನ-ಬಟ್ಟೆ
ವೈವರ್ಣ್ಯ-ಬಣ್ಣಕೆಡು
ವಿರೋಧಿ-ಶತ್ರು
ವಿಕಟಪ್ರಹಾರ-ಹೆಚ್ಚಾದ ಹೊಡೆತ
ವ್ಯಾಜ-ನೆಪ
ವಿಜಯ ನಿನಾದ-ಜಯಧ್ವನಿ
ವಂಶ-ಕುಲ

ಶ

ಶಕ್ತಿವಲ್ಲರಿ-ಶಕ್ತಿಯೆಂಬ ಬಳ್ಳಿ
ಶಂಕೆ-ಸಂದೇಹ
ಶಾಪವಿಮೋಚನೆ-ಶಾಪವು ನಿವಾರಣೆಯಾಗುವುದು
ಶಾಸ್ತ್ರೋಕ್ತ-ಶಾಸ್ತ್ರದಲ್ಲಿ ಹೇಳಿರುವಂತೆ
ಶುಶ್ರೂಷೆ-ಸೇವೆ
ಶೋಷಿಸು-ಒಣಗುವುದು

ಷ

ಷಣ್ಮುಖ-ಆರು ತಲೆಗಳುಳ್ಳವನು ; ಕುಮಾರಸ್ವಾಮಿಯು
ಷಾಡ-ಆಹಾರ ದ್ರವ್ಯ

ಸ

ಸಂಕಲ್ಪ-ಪ್ರತಿಜ್ಞೆ
ಸದನ-ಮನೆ
ಸತ್ಯವಾದಿ-ನಿಜವನ್ನೇ ಹೇಳುವವನು
ಸದ್ಗತಿ-ದೇವಲೋಕವನ್ನು ಸೇರುವುದು
ಸ್ಮಾರಕ-ಗುರುತು
ಸರಸ್ಸು-ಸರೋವರ
ಸುವರ್ಣ-ಬಂಗಾರ
ಸಮರ-ಯುದ್ಧ
ಸಲ್ಲಿಸು-ಒಪ್ಪಿಸು
ಸ್ವಯಂವರ-ಕನ್ಯೆಯು ತಾನು ಪ್ರೀತಿಸಿದವರನ್ನು ಮದುವೆಯಾಗುವುದು
ಸೌಭಾಗ್ಯಸರಿತೆ-ಪುಣ್ಯವೆಂಬ ನದಿ
ಸೌಹಾರ್ದ-ಸ್ನೇಹ
ಸಂತುಷ್ಟಿ-ಸಮಾಧಾನ ; ತೃಪ್ತಿ
ಸರ್ವಜ್ಞ-ಎಲ್ಲವನ್ನೂ ತಿಳಿದವನು

ಹ

ಹರಣ-ಪ್ರಾಣ
ಹಂಗುದೊರೆದು-ಆಶೆಯನ್ನು ಬಿಟ್ಟು
ಹಿತವಚನ-ಒಳ್ಳೆಯ ಮಾತು
ಹೋಮಶೇಷ-ಅಗ್ನಿಗೆ ಆಹುತಿ ಕೊಟ್ಟು ಉಳಿದ ಭಾಗ
ಹೂಂಕರಿಸು-ಗರ್ಜಿಸು

ಶಬ್ದಾರ್ಥಕೋಶ

ಪದ್ಯ ಭಾಗ

ಭಾಗವತ_೧ನೆಯ ಸಂಧಿ

ಅವನಿ-ಭೂಮಿ
ಅಬುಜೋದ್ಭವ-ಬ್ರಹ್ಮ (ಅಬುಜ+ಉದ್ಭವ)
ಅವಲಂಬನ-ಆಶ್ರಯ
ಅಹೀಂದ್ರ-ಸರ್ಪರಾಜ
ಅನ್ವಯ-ವಂಶ
ಅಗ್ರದ-ಶ್ರೇಷ್ಠವಾದ
ಅಜ-ಬ್ರಹ್ಮ
ಅವತರಿಸು-ಹುಟ್ಟು
ಅಂಗ-ಶರೀರ
ಅಮಲ_ಪವಿತ್ರವಾದ
ಅಭೀಷ್ಟಪ್ರದ_ಬಯಸಿದುದನ್ನು ಕೊಡುವ
ಅಭಿನಮಿಸು_ವಂದಿಸು
ಅಮರಸ್ತೋಮ_ದೇವತೆಗಳ ಸಮೂಹ
ಅಶೇಷ-ಎಲ್ಲ (ಒಂದೂ ಉಳಿಯದಂತೆ)
ಆಸ್ವಾದಿಸು_ರುಚಿನೋಡು
ಆರ್ಜಿತ_ಸಂಪಾದಿಸಿದ
ಆಲಯ_ಮನೆ
ಆವಳಿ_ಸಮೂಹ
ಇಂಗಡಲು_ಕ್ಷೀರಸಮುದ್ರ
ಉಕ್ತಿ_ಮಾತು
ಉತ್ತರಿಸು_ಮೇಲಕ್ಕೆತ್ತು
ಉದಧಿ-ಸಮುದ್ರ
ಉರಗಾಧಿಪತಿ_ಆದಿಶೇಷ (ಉರಗ+ಅಧಿಪತಿ)
ಊಳಿಗ-ಸೇವೆ
ಓಲಗ_ಸಭೆ
ಐದಿದನು-ಹೋದನು
ಕರ್ಣಾಮೃತ-ಕಿವಿಗೆ ಅಮೃತದಂತೆ ಹಿತವಾಗಿರುವುದು
ಕೃಶಾನು-ಅಗ್ನಿ
ಗಭೀರೋಕ್ತಿ-ಗಂಭೀರವಾದ ಮಾತು
ದವಾನಲ_ಕಾಡ್ಗಿಚ್ಚು
ನಭ_ಆಕಾಶ
ನಿಮಗ್ನ-ಮುಳುಗಿದ
ನಿರ್ಣಯ_ನಿರ್ಧರಿಸುವುದು
ನಿಭೃತ-ಹೆಚ್ಚಾದ
ನಿವಾಸ-ವಾಸಸ್ಥಾನ
ನೀಲಲೋಹಿತ-ಶಿವ
ಪನ್ನಗ-ಸರ್ಪ
ಪವಿ-ವಜ್ರಾಯುಧ
ಪಂಕರುಹ-ಕಮಲ (ಪಂಕ+ರುಹ)
ಪೀಳಿಗೆ-ವಂಶ
ಮಹೋದಧಿ-ದೊಡ್ಡ ಸಮುದ್ರ
ನಗ-ಬೆಟ್ಟ
ತಿಮಿರ-ಕತ್ತಲೆ
ಪಂಚಾಸ್ಯ-ಸಿಂಹ
ಘಟೋದ್ಭವ_ಅಗಸ್ತ್ಯ ಋಷಿ; (ಘಟ+ಉದ್ಭವ)
ಬನ್ನಂಬಡಿಸು_ತೊಂದರೆಗೊಳಿಸು
ಮೌಳಿ-ತಲೆ
ರಸನೆ_ನಾಲಗೆ
ವಸುಧೆ-ಭೂಮಿ
ಲತಾಂಗಿ_ಕೋಮಲದ ಶರೀರ (ಬಳ್ಳಿಯಂತೆ ಮೃದುವಾದುದು)
ವಾರಿಧಿ-ಸಮುದ್ರ
ಖಗಪತಿ-ಗರುಡ (ಪಕ್ಷಿಗಳ ಒಡೆಯ)
ತೃಷ್ಣ_ಬಾಯಾರಿಕೆ
ಕಡುಗಡಲು-ದೊಡ್ಡ ಸಮುದ್ರ
ನಕ್ರಾವಳಿ-ಮೊಸಳೆಗಳ ಸಮೂಹ
ಮುಕುಂದ-ಶ್ರೀಕೃಷ್ಣ
ಸಂಕರುಷಣ_ಬಲರಾಮ
ಕಂಪಿಸು_ನಡುಗು
ಹೆಬ್ಬುಯ್ಯಲು-ದೊಡ್ಡ ದನಿ
ಅಳವಲ್ಲ-ಸಾಧ್ಯವಲ್ಲವು

ಹೇರಳ-ಹೆಚ್ಚಾದ
ತಾರಕ-ನಕ್ಷತ್ರ
ಜಗದಾತ್ಮಕ-ಜಗತ್ತಿನ ಪ್ರಾಣ ಸ್ವರೂಪನು
ಸದನ-ಮನೆ

ಎರಡನೆಯ ಸಂಧಿ

ಅನುರಾಗ-ಪ್ರೀತಿ
ಅಸು-ಪ್ರಾಣ
ಅಟ್ಟುಳಿ-ತೊಂದರೆ
ಅಭಿಜ್ಞರು-ಜ್ಞಾನಿಗಳು
ಅಳಲು-ಸಂಕಟ
ಅರುಹು-ತಿಳಿಸು
ಅಂಬರಗತಿ-ಆಕಾಶ ಮಾರ್ಗ
ಅಪ್ಪಳಿಸು-ಎತ್ತಿ ಹೊಡೆ
ಅಪಹರಿಸು-ಕಾಣದಂತೆ ತೆಗೆದು ಕೊಳ್ಳುವುದು
ಅಡಗು-ಮರೆಯಾಗು
ಉದಧಿಘೋಷ-ಸಮುದ್ರದ ಧ್ವನಿ
ಎಣ್ದೆಸೆ-ಎಂಟು ದಿಕ್ಕುಗಳು
ಉಮ್ಮಳಿಸು-ದುಃಖಪಡು
ಒರೆ-ಹೇಳು
ಕಾಯ-ಶರೀರ
ಕರಣ-ಇಂದ್ರಿಯಗಳು
ಎಡರು-ಕಷ್ಟ
ಕಿಡಿಗೆದರಿ-ಕೋಪಗೊಂಡು
ಕೀರ್ತಿವರ್ಮ-ಪ್ರಸಿದ್ಧಪುರುಷನು
ಕಂಜ-ಕಮಲ
ಕೂರಸಿ-ಹರಿತವಾದ ಕತ್ತಿ
ಕಡುನಿರೋಧ-ಹೆಚ್ಚಾಗಿ ಅಡ್ಡಿಪಡಿಸುವುದು ; ತಡೆಗಟ್ಟುವುದು
ಕಡುಕೃಪಣೆ-ಬಹಳ ಹೀನ ದೆಸೆಯಲ್ಲಿರುವವಳು
ಕಳಕಳ-ಗದ್ದಲ
ಕೆಂಗಳು-ಕಣ್ಣುಗಳು
ಕುಲದೈವ-ಮನೆದೇವರು
ಗಳದ-ಕುತ್ತಿಗೆಯ
ಜಂಗಮ-ಸಂಚರಿಸ

ಜಲದ-ಮೇಘ
ಜರೆ-ಮುಪ್ಪು
ಚಕಿತ-ಆಶ್ಚರ್ಯಕರವಾದ
ಕಾಲನ ದಂಡ-ಯಮದಂಡ
ಜನನಿವಹ-ಜನಸಮೂಹ
ತನು-ಶರೀರ
ತುರಗ-ಕುದುರೆ
ತಲ್ಲಣ-ಭಯ
ತಕ್ಕಿಲ್ಲದಿಹ-ಮೋಸವಿಲ್ಲದ
ಉರವಣಿಸಿ-ಉತ್ಸಾಹಗೊಂಡು
ದುರ್ಧರ-ಸಹಿಸುವುದಕ್ಕೆ ಕಷ್ಟವಾದ
ನನ್ನಿ-ನಿಜ
ನಿನದ-ಧ್ವನಿ
ನಿಬ್ಬಣಿಗರು-ಬಂಧುಗಳು ; ಬೀಗರು
ನಿಷ್ಕಂಟಕ-ತೊಂದರೆಯಿಲ್ಲದಿರುವುದು
ಪತಿಕರಿಸು-ಅಂಗೀಕರಿಸು
ಪದರಜ-ಕಾಲಿನ ಧೂಳು
ಪರಿವೇಷ-ಸುತ್ತುಗಟ್ಟುವುದು
ಪಾವಕ-ಅಗ್ನಿ
ಬರಿದೆ-ವ್ಯರ್ಥವಾಗಿ
ಬೆಂಬಲ-ಹಿಂಬಾಲಕರು (ಬೆನ್ನ + ಬಲ)
ಭಾರವಣೆ-ಹೊರೆ
ಮಡದಿ-ಹೆಂಡತಿ
ಮುರಜ-ಮದ್ದಲೆ
ಮೊಳಗು-ಧ್ವನಿಮಾಡು
ಮನ್ನಿಸು-ಮರ್ಯಾದಿಸು
ಮೋಹು-ಮುತ್ತುವುದು
ಮಸುಳು-ನಾಶವಾಗು
ಮಂದಿರ-ಮನೆ
ಮೃತ್ಯುಪಾಶ-ಜೀವಿಗಳನ್ನು ಸೆಳೆಯಲು ಯಮನು ಬೀಸುವ ಹಗ್ಗ
ರೋಷಾನುಬಂಧ-ಕೋಪದಿಂದ ಕೂಡಿರುವ
ವಂದಿಮಾಗಧರು-ಹೊಗಳುವ ಭಟ್ಟರು
ವಿಧಿ-ಬ್ರಹ್ಮ (ದ್ಭ-ಬಿದಿ)
ವಿಸ್ಮಿತ-ಆಶ್ಚರ್ಯ
ವಿತಾನ-ಸಮೂಹ
ಬವಣೆಗೆ-ದುಃಖ

ಪ್ರಭುಲಿಂಗಲೀಲೆ

ಅತಿಬಳರು-ಬಹಳ ಬಲಶಾಲಿಗಳು
ಅಮರಾದ್ರಿ-ಕೈಲಾಸ ಪರ್ವತ
ಅರ್ತಿ-ಪ್ರೀತಿ
ಉಲುಹು-ಧ್ವನಿ
ಕಳ-ಯುದ್ಧಭೂಮಿ
ಕಿಕ್ಕಿರಿದ-ಒತ್ತಾಗಿ ಸೇರಿದ
ಕವಲುವಟ್ಟೆ-ಬೇರೆಮಾರ್ಗ, ಅಡ್ಡದಾರಿ
ನಿರೂಪ-ಆಜ್ಞೆ
ನಿಖಿಳ-ಎಲ್ಲ
ಬುಧ-ವಿದ್ವಾಂಸ
ಪಲ್ಲಟಿಸು-ವ್ಯತ್ಯಾಸವಾಗು
ತರಹರ-ಮನಶ್ಶಾಂತಿ, ಮನಸ್ಥೈರ್ಯ, ಸಮಾಧಾನ
ತಲ್ಲಣ-ಭಯ
ನಲಿ-ಸಂತೋಷ
ತಮಂಧ-ಕತ್ತಲೆ, ಕಗ್ಗತ್ತಲೆ
ಚೂತ-ಮಾವಿನ ಮರ
ಕನ್ಯಾಮಾಡ-ಅಂತಃಪುರ
ವಸುಮತಿ-ಭೂಮಿ
ಹೂಣಿಸು-ಪ್ರತಿಜ್ಞೆಮಾಡು
ಗುಡಿ-ಮಂಟಪ, ಬಾವುಟ

ಸುಗ್ಗಿ ಬರುತಿದೆ

ಅಳಿ-ದುಂಬಿ
ಅಲರು-ಹೂ
ಉಲಿ-ಧ್ವನಿ
ಬಿನದ-ಸಂತೋಷ (ವಿನೋದ)
ಬಂಡು-ಮಕರಂದ (ಪುಷ್ಪರಸ)
ತೆಮರು-ದಿಣ್ಣೆ
ತಣಿ-ತೃಪ್ತಿಹೊಂದು
ಓವಿ-ಪ್ರೀತಿಯಿಟ್ಟು ರಕ್ಷಿಸು
ತೊರೆ-ನದಿ
ತಿರೆ-ಭೂಮಿ (ತ್ಸ-ಸ್ಥಿರಾ)
ನಿಸ್ವನ-ಶಬ್ದ
ವಿಹಂಗಮ-ಪಕ್ಷಿ
ವಿಧಾತ-ಬ್ರಹ್ಮ
ನನ್ನಿ-ನಿಜ

ನಾಡಿನ ಹಾಡು

ಅಧರ-ಕೆಳದುಟಿ
ಅಡಿ-ಪಾದ
ಒರೆ-ಹೇಳು
ತಾರೆ-ನಕ್ಷತ್ರ
ಚಮೂಪತಿ-ಸೇನಾಪತಿ
ಧವಲಗಿರಿ-ಹಿಮಾಲಯ
ಬಾಣಸಿಗ-ಅಡಿಗೆಮಾಡುವವನು
ಸಲಿಗೆ-ಸ್ನೇಹ
ಸುಲಿಗೆ-ದೋಚಿಕೊಳ್ಳುವುದು
ಮೇಳವಿಸು-ಗುಂಪುಸೇರು

ಓ! ಹಿಮಾಲಯ

ಅಮರರು-ದೇವತೆಗಳು
ಅತುಲ-ಹೆಚ್ಚಾದ
ಚುಂಬಿತ-ಮುಟ್ಟುವುದು
ನಿಚ್ಚಣಿಗೆ-ಏಣಿ
ಹಿರಿಮೆ-ಹೆಚ್ಚುಗಾರಿಕೆ

ಇಮ್ಮಡಿ ಪುಲಿಕೇಶಿ

ಅರುಹು-ತಿಳಿಸು
ಕಲಿತನ-ಪರಾಕ್ರಮ
ಕೇಸರಿ-ಸಿಂಹ
ಕೋವಿದ-ಜಾಣ
ತುಂಗಯಶ-ಉನ್ನತವಾದ ಕೀರ್ತಿ
ಭಂಗಿಸು-ತೊಂದರೆ ಪಡಿಸು
ಮುಕುರ-ಕನ್ನಡಿ

ಹೆಮ್ಮರ

ಅಡರ್ಪು-ಆಶ್ರಯ
ಎಡರು-ಕಷ್ಟ
ಅಳುಕು-ಹೆದರಿಕೆ, ಭಯ
ಎಳಸು-ಅಪೇಕ್ಷಿಸು
ಅಬ್ಬರ-ಆರ್ಭಟ
ಕಡಲಲೆ-ಸಮುದ್ರದ ತೆರೆ
ಕೆಣಕಿಸು-ಎದುರಿಸುವುದು, ರೇಗಿಸು
ತಿರುಳು-ಸಾರವಾದುದು
ನೆರವು-ಸಹಾಯ